॥ ಶ್ರೀಃ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

# ಋಗ್ವೇದಪರಿಚಯ

## (ಮಂಡಲ - ೧)



ಮುಕ್ತಾವಿದ್ರುಮಹೇಮನೀಲಧವಳಚ್ಛಾಯೈರ್ಮುಖೈಸ್ತ್ರೀಕ್ಷಣೈಃ
ಯುಕ್ತಾಮಿಂದುನಿಬದ್ಧರತ್ನಮುಕುಟಾಂತತ್ತ್ವಾರ್ಥವರ್ಣಾತ್ಮಿಕಾಂ ।
ಗಾಯತ್ರೀಂವರದಾಭಯಾಂಕುಶಕಶಾಂಶುಭ್ರಂಕಪಾಲಂಗದಾಂ
ಶಂಖಂಚಕ್ರಮಥಾರವಿಂದಯುಗಳಂಹಸ್ತೈರ್ವಹಂತೀಂಭಜೇ ॥

ಗ್ರಂಥಕರ್ತರು ಮತ್ತು ಪ್ರಕಾಶಕರು

**ಸೂರ್ಯನಾರಾಯಣ**

'ಇಂದ್ರ'

ಬಿ - 1/11, ಬೆಂ. ಅ. ಪ್ರಾ. ಕಟ್ಟಡಗಳು,

ಕಲ್ಲಹಳ್ಳಿ, ಬೆಂಗಳೂರು - 42.

॥ ಶ್ರೀಃ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

# ಋಗ್ವೇದ ಪರಿಚಯ

## (ಮಂಡಲ - ೧)

ಗ್ರಂಥಕರ್ತರು :

ಸೂರ್ಯನಾರಾಯಣ

ಯೋವೇದಾದೌಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ ।
ತಸ್ಯಪ್ರಕೃತಿಲೀನಸ್ಯ ಯಃ ಪರಸ್ಸಮಹೇಶ್ವರಃ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಪ್ರಕಾಶನ :

ಸೂರ್ಯನಾರಾಯಣ

'ಇಂದ್ರ'

ಬೆಂಗಳೂರು 42

RIGVEDA PARICHAYA - MANDALA - 1
IN KANNADA SCRIPT. WRITTEN AND PUBLISHED BY
SURYANARAYANA
B-1/11 B.D.A. FLATS,
KALLAHALLI, NEAR ULSOOR LAKE,
BANGALORE - 560 042.
PHONE: 080 - 554 22 97

ಪ್ರಥಮ ಮುದ್ರಣ – ಸಪ್ಟೆಂಬರ್ 1997
ಪ್ರತಿಗಳು – 750

ಪುಸ್ತಕದ ಹಕ್ಕುಗಳೆಲ್ಲಾ – ಲೇಖಕರದ್ದು.

ಬೆಲೆ : ರೂ.30–00

ಡಿ.ಟಿ.ಪಿ. : 'ಇಂದ್ರ' ಬಿ–1/11, ಬಿ.ಡಿ.ಎ. ನಿವಾಸಗಳು, ಕಲ್ಲಹಳ್ಳಿ, ಬೆಂಗಳೂರು – 42.
ಮುದ್ರಕರು : ಆರಿದ್ರಾ ಪ್ರಿಂಟರ್ಸ್, ಮಲ್ಲೇಶ್ವರಂ, ಬೆಂಗಳೂರು – 3.
ಓಮ್ ಕಾಪ್ಸ್ ಸೆಂಟರ್, ರಾಜಾಜಿನಗರ, ಬೆಂಗಳೂರು – 10.

ಕೃತಜ್ಞತೆ :
1) ಪ್ರಕಟಣೆಗೆ ಆರ್ಥಿಕನೆರವು ನೀಡಿದ್ದಕ್ಕಾಗಿ –
ಆಡಳಿತ ಮಂಡಲಿ ತಿರುಮಲ ತಿರುಪತಿ ದೇವಸ್ಥಾನ, ತಿರುಪತಿ.
2) ಗ್ರಂಥಪ್ರಯೋಜನ ಸೌಕರ್ಯಕ್ಕಾಗಿ –
ವಿವೇಕಾನಂದ ಆಶ್ರಮ, ಅಲಸೂರು, ಬೆಂಗಳೂರು.
3) ಮಾರ್ಗದರ್ಶನಕ್ಕಾಗಿ –
ರಾಷ್ಟ್ರಪ್ರಶಸ್ತಿ ರಾಜ್ಯಪ್ರಶಸ್ತಿ ಸನ್ಮಾನಿತ, ವಿದ್ವಾನ್ ಕೋಡೂರು ಕೃಷ್ಣಜೋಯಿಸರು, ಶಂಕರ ಮಠ, ಬೆಂಗಳೂರು.

ಗ್ರಂಥಋಣ : ಶ್ರೀಜಯಚಾಮರಾಜೇಂದ್ರ ವೇದರತ್ನ ಮಾಲ – ಮೈಸೂರು ಪ್ರಕಟಿಸಿದ – 'ಋಗ್ವೇದ ಸಂಹಿತಾ' – ಮಾಲಿಕೆ.

ಋಗ್ವೇದಪರಿಚಯ ಮಂಡಲ – 2,3,4 ಸದ್ಯದಲ್ಲೇ ಪ್ರಕಟಣೆಗೊಳ್ಳಲಿವೆ.

[ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮಿ ಉಪಹಾಸ್ಯತಾಂ]

ಶ್ರೀ

## ಮುನ್ನುಡಿ

ವೇದವೆಂಬುದು ಭಗವಂತನಿಂದ ಸೃಷ್ಟಿಯಾದುದು. ಇದನ್ನು 'ಶಾಸ್ತ್ರಯೋನಿತ್ವಾತ್' ಎಂದು ಬ್ರಹ್ಮಸೂತ್ರದಲ್ಲಿ ವೇದವ್ಯಾಸರು ಹೇಳಿರುವರು. ವರ್ಣಾಶ್ರಮಧರ್ಮವೆಲ್ಲವೂ ವೇದದಲ್ಲಿ ಹೇಳಲ್ಪಟ್ಟಿದೆ. 'ಮಂತ್ರ ಬ್ರಾಹ್ಮಣ ಸಮುದಾಯೋ ವೇದಃ' ಎಂದು ಸಾಯಣಭಾಷ್ಯದಂತೆ ಮಂತ್ರಗಳು ಬ್ರಾಹ್ಮಣಗಳು ಇವುಗಳ ಸಮುದಾಯವೇ ವೇದ. 'ವೇದೋಽಖಿಲೋ ಧರ್ಮಮೂಲ' ಎಂದು ಮನುವು ಹೇಳಿದಂತೆ, ಅನುಷ್ಠಾನ ಮಾಡತಕ್ಕ ಧರ್ಮಕ್ಕೆ ವೇದವೇ ಮೂಲ. ವೇದವೇ, ಧರ್ಮದ ಜ್ಞಾನವಾಗುವುದಕ್ಕೆ ಮೂಲ.

ಪ್ರತ್ಯಕ್ಷೇಣಾನುಮಿತ್ಯಾವಾಯಸ್ತೂಪಾಯೋ ನಬುಧ್ಯತೇ ।
ಏನಂವಿದಂತಿವೇದೇನ ತಸ್ಮಾನ್ ವೇದಸ್ಯ ವೇದತಾ ॥

ಎಂಬಂತೆ – ಪ್ರತ್ಯಕ್ಷ, ಅನುಮಿತಿ ಯಾವುದೂ ಪ್ರಮಾಣವಲ್ಲ, ನಮ್ಮ ಶ್ರೇಯಸ್ಸಿಗೆ ಕಾರಣಯಾವುದೆಂದು ತಿಳಿಯುವುದಕ್ಕೆ ಪ್ರತ್ಯಕ್ಷಾದಿಗಳು ಪ್ರಮಾಣವಾಗದೇ, ವೇದದಿಂದಲೇ ಅದು ಸಾಧನವು ತಿಳಿಯುವುದೊ, ಅದೇ ವೇದದ ಸ್ವರೂಪ.

**'ವೇದ'** ಯಾವ ಋಷಿಗಳೂ ರಚಿಸಿದ್ದಲ್ಲ. ಆದರೆ ಋಷಿಗಳು ತಮ ಪವಿತ್ರವಾದ ಅಂತಕರಣದಲ್ಲಿ ಕಂಡದ್ದು! ಮೊದಲು ಬ್ರಹ್ಮನಿಂದ!

ಅನಾದಿನಿಧನಾನಿತ್ಯಾವಾಗ್ ಉತ್ಸೃಷ್ಟಾ ಸ್ವಯಂಭುವಾ ।
ಅದೌವೇದವಾಯೀದಿವ್ಯಾಯತಃ ಸರ್ವಾಃಪ್ರವೃತ್ತಯಃ ॥

ವೇದಮಯವಾದ ವಾಕ್ಯ ಹೊರಗೆ ಬಂದದ್ದು, ಹುಟ್ಟದೇ ನಾಶವಾಗದೇ ಯಾವತ್ತೂ ಇರುವವೇದವು ಧರ್ಮಮೂಲ.

ಈ ವೇದವು ನಾಲ್ಕುಬಗೆ – ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಎಂದು. ಋಗ್ವೇದ ಛಂದೋಬದ್ಧವಾಗಿ, ಪಾದಗಳ ವ್ಯವಸ್ಥೆಯಿರುವ ಮಂತ್ರಗಳು. ಇದರಲ್ಲಿ ಶಾಕಲ, ಬಾಷ್ಕಲ ಎಂದು ಸಂಹಿತೆಗಳು. ಈಗ ಪ್ರಚಲಿತವಾಗಿರುವುದು ಶಾಕಲ ಸಂಹಿತೆಯು ಹತ್ತು ಮಂಡಲಗಳಾಗಿರುವವು. ಈ ಎಲ್ಲದಕ್ಕೂ ಸಾಯಣಭಾಷ್ಯವಿರುವದು. ಶಿಕ್ಷ ವ್ಯಾಕರಣ, ಛಂದಸ್ಸು, ನಿರುಕ್ತ ಜ್ಯೋತಿಷ, ಕಲ್ಪ– ಈ ಷಡಂಗಗಳನ್ನು ಉಪಯೋಗಿಸಿ ಮಂತ್ರಗಳಿಗೆ ಅರ್ಥವನ್ನು ವಿಸ್ತಾರವಾಗಿ ಸಾಯಣಾ ಭಾಷ್ಯಕಾರರು ಮಾಡಿರುವರು. ಅದರಲ್ಲಿ ಭಾವಾರ್ಥಮಾತ್ರ ಬರೆಯುವುದಕ್ಕೆ ಪ್ರಯತ್ನ ಮಾಡಿರುವರು – ಶ್ರೀ ಸೂರ್ಯನಾರಾಯಣ. ಇವರು ಪ್ರತಿಯೊಂದು ಸೂಕ್ತದಲ್ಲೂ ಋಷಿಗಳ, ದೇವತೆಗಳ ಗುಣಗಾನ ಮಾಡಿರುವರು, ಅಗ್ನಿ, ಇಂದ್ರ,

ವಾಯು, ವರುಣ ಇತ್ಯಾದಿ ದೇವತೆಗಳಲ್ಲಿ ಇಂದ್ರನ ಪ್ರಭಾವವನ್ನೇ ಹೆಚ್ಚಾಗಿ ವರ್ಣಿಸಿದಂತೆ ಕಾಣುತ್ತದೆ. ಇದನ್ನು ಮಾತ್ರ ಗ್ರಹಿಸತಕ್ಕವರಿಗಾಗಿ ಬರೆದಿರುವುದು. ಈಗ ಮೊದಲನೆ ಮಂಡಲವನ್ನು ಮಾತ್ರ ಮುದ್ರಿಸಲು ಶ್ರೀ ಸೂರ್ಯನಾರಾಯಣ ಸಂಕಲ್ಪಿಸಿದ್ದಾರೆ; ಉಳಿದ ಮಂಡಲಗಳೂ ಸಿದ್ಧವಾಗಿವೆ. ಇದರ ಶೋಧನೆಯನ್ನು ನಾನು ಸಾಧ್ಯವಾದಷ್ಟು ಮಾಡಿಕೊಟ್ಟಿದ್ದೇನೆ. ಗುರುದೇವತಾ ಅನುಗ್ರಹದಿಂದ ಪೂರ್ಣವಾಗುವುದೆಂದು ಭಾವಿಸಿದ್ದೇನೆ. ಈಗ ಪ್ರಥಮ ಮಂಡಲದ ಮುದ್ರಣಕ್ಕೆ ಆಶಿಸುವ ಇವರಿಗೆ ಶ್ರೀಶ್ರೀಗಳವರು ಪೂರ್ಣಾನುಗ್ರಹ ಆಶೀರ್ವಾದ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿರುತ್ತೇನೆ.

ಈಶ್ವರ ಸಂವತ್ಸರ,
ಶ್ರಾವಣ ಶುದ್ಧ ಪೂರ್ಣಿಮಾ,
ಸೋಮವಾರ
೧೮-೮-೧೯೯೭

ಕೆ.ಕೃಷ್ಣಜೋಯಿಸ್

[ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿ ಪಡೆದ ಶ್ರೀ ಶೃಂಗೇರಿ ಶಂಕರ ಮಠದ ಆಸ್ಥಾನ ವೇದಾಂತ ವಿದ್ವಾನ್ ಶ್ರೀ ಕೋಡೂರು ಕೃಷ್ಣಜೋಯಿಸರಿಂದ ಆಶೀರ್ವಾದಪೂರ್ವಕ ಮುನ್ನುಡಿದತ್ತವಾಗಿದೆ.]

# ಕೆಲವು ವಿವರಣೆಗಳು

ಋಷಿ :- ಇಂದ್ರಿಯ ಜ್ಞಾನದಿಂದ ತಿಳಿಯಲು ಅಸಾಧ್ಯವಾದ ವೇದವಿದ್ಯೆಯನ್ನು ಪರಮೇಶ್ವರನ ಅನುಗ್ರಹದಿಂದ ದರ್ಶನರೂಪದಲ್ಲಿ ಪಡೆದ 'ಮಂತ್ರ ದೃಷ್ಟರು'.

ದೇವತೆ :- ಮಂತ್ರದಿಂದ ಪ್ರಕಾಶಿಸಲ್ಪಡುವ, ಭಕ್ತರಿಂದ ಸ್ತುತಿಸಲ್ಪಡುವ ಪೂಜ್ಯವಸ್ತು.

ಛಂದಸ್ಸು :- ಮಂತ್ರಗಳು ಪಾದಸಂಭಂದಗೊಳ್ಳುವಂತೆ ನಿಭಂದಿತವಾದ ಕ್ರಮ.

ಯಜ್ಞ :- ದೇವತೆಗಳನ್ನು ಉದ್ದೇಶಿಸಿ ವಿಧಿವತ್ತಾಗಿ ಆಜ್ಯ ಮುಂತಾದವನ್ನು ಅಗ್ನಿಗೆ ಅರ್ಪಿಸುವುದು.

ಯಜಮಾನ :- ಯಜ್ಞಮಾಡುವವ - ಮಂತ್ರದೃಷ್ಟ ಋಷಿ.

ಬ್ರಹ್ಮ :- ಯಜ್ಞದಲ್ಲಿ ಸ್ವತಃ ಭಾಗವಹಿಸದೆ ಯಜ್ಞಕಾರ್ಯನಿರ್ದೇಶಿಸುವವ ನಾಲ್ಕು ವೇದಗಳನ್ನು ತಿಳಿದವ.

ಹೋತೃ :- ಋಗ್ವೇದಿ - ಗಾನವಿಲ್ಲದೇ ಮಂತ್ರಗಳನ್ನು (ಶಸ್ತ್ರ) ದೇವತಾಗುಣಗಳನ್ನು ಹೇಳುವವ.

ಅಧ್ವರ್ಯು :- ಯಜುರ್ವೇದಿ - ನೇರವಾಗಿ ಹೋಮ ಮಾಡುವವ.

ಉದ್ಗಾತೃ :- ಸಾಮವೇದಿ - ಸಾಮಗಾನದಿಂದ (ಸ್ತೋತ್ರ) ದೇವತೆಗಳಗುಣಗಾನ ಮಾಡುವವ.

ಸವನ :- ಸೋಮಲತೆಯನ್ನು ಕಲ್ಲಿನಿಂದ ಜಜ್ಜಿ ರಸತೆಗೆಯುವುದು ಮಧ್ಯರಾತ್ರಿಯಿಂದ ಉಷಃಕಾಲದವರೆಗೆ ಪ್ರಾತಃಸವನ.

ಧನ :- ಧಾನ್ಯ, ವೀರಪುತ್ರರು, ಪೌತ್ರರು, ಪಶುಗಳು, ಕೀರ್ತಿ, ಪತಿಷ್ಠೆ, ಗಣ್ಯತೆ, ಯಶಸ್ಸು, ಭೃತ್ಯರು - ಇವೆಲ್ಲಾ ಧನವೆ. ಮಣಿಮುಕ್ತಾದಿಗಳಿಗಿಂತ ಆಕಾಲದಲ್ಲಿ ಈ ಧನವೇ ಅವಶ್ಯಕವಾಗಿದ್ದವು.

ಬರ್ಹಿ :- ಯಜ್ಞದಲ್ಲಿ ದೇವತೆಗಳು ಕೂಡಲು ಕತ್ತರಿಸಿದ ದರ್ಭೆಯಿಂದ ಮಾಡಿದ ಆಸನ.

ಪರಿಧಿ :- ಅಗ್ನಿಯ ಸುತ್ತಲೂ ರಾಕ್ಷಸರನ್ನೂ ಅವರ ವಿಘ್ನಗಳನ್ನೂ ತಡೆಯಲು ಇರಿಸುವ ವಿಶೇಷ ಧರ್ಭೆ.

"THIS BOOK IS PUBLISHED WITH THE FINANCIAL ASSISTANCE OF TIRUMALA TIRUPATI DEVASTHANAMS UNDER THEIR SCHEME AID TO PUBLISH RELIGIOUS BOOKS".

THANKS TO T.T.D. AUTHORITIES

ಶ್ರೀಃ

## ಋಗ್ವೇದ ಪರಿಚಯ - ಪ್ರಥಮ ಮಂಡಲ

**ಪೀಠಿಕೆ :-**

ನಾವು ಇಪ್ಪತ್ತೊಂದನೆಯ ಶತಮಾನಕ್ಕೆ ಪ್ರವೇಶಿಸುತ್ತಿದ್ದೇವೆ. ಕ್ರಿಸ್ತಶಕ ಈ ಇಪ್ಪತ್ತು ಶತಮಾನಗಳ ಹಾಗೂ ಕ್ರಿಸ್ತಪೂರ್ವಶತಮಾನಗಳ ಸಂಚಿತ ಜ್ಞಾನವಿಜ್ಞಾನ ಭಂಡಾರ ಅಗಾಧವಾಗಿ ವಿಸ್ತಾರ – ವಿಕಾಸಗೊಳ್ಳುತ್ತಿದೆ.

ದಿನದಿನಕ್ಕೆ ಈಗಿನ ಜೀವನ ಸಂಕೀರ್ಣಗೊಳ್ಳುತ್ತಾ ಇದೆ. ಸಾಧಿತ ಜ್ಞಾನವನ್ನು ಉಪಯೋಗಿಸಿಕೊಳ್ಳು- ವುದು ಇರಲಿ; ಪರಿಚಯ ಮಾಡಿಕೊಳ್ಳಲೂ ಈಗ ಜನರಿಗೆ 'ಕಾಲಾವಕಾಶ' ಇಲ್ಲವಾಗಿದೆ.

ನಮ್ಮ ಪೂರ್ವಜರು – 'ಋಷಿಗಳು' – ನೇರವಾಗಿ ದೇವತೆಗಳೊಡನೆ ವ್ಯವಹರಿಸುತ್ತಿದ್ದರಂತೆ! ಇಂತಹ ನಮ್ಮ ಪೂರ್ವಜರ ಬಗ್ಗೆ ನಮಗೆ ಹೆಮ್ಮೆ ಇದೆ. ಆದರೆ ಅವರ ಪರಿಚಯ ನಮಗಿಲ್ಲ, ಅವರುಗಳ ಪರಿಚಯ ಮಾಡಿಕೊಳ್ಳಬಹುದಾದ 'ವೇದ'ಗಳು ಈಗ ಸರಸ್ವತೀ ಪೂಜೆಯ ಗ್ರಂಥಗಳಾಗಿವೆ. ಇದಕ್ಕೆಲ್ಲಾ ಕಾರಣ – ಕಠಿಣವೆನ್ನಲಾದ ವೇದಭಾಷೆ, ಪರಿಸರ, ಸನ್ನಿವೇಶ, ಪರಿಸ್ಥಿತಿಗಳು, ಜ್ಞಾನದಾಯಿಗಳ ಹಾಗೂ ಜ್ಞಾನ ದಾಹಿಗಳ ಅಭಾವ, ಕಾಲಾವಕಾಶ ಇಲ್ಲದಿರುವುದು, ಕಲಿಯುವವರಲ್ಲಿ ಕಲಿಯುವ ಆಸಕ್ತಿಕಡಿಮೆ ಆಗಿರುವುದು – ಹೀಗೆ ಅನೇಕವು.

ಲೋಕ ವ್ಯವಹಾರಕ್ಕೆ ಬೇಕಾದ ವಿಷಯವನ್ನು ಮನಸ್ಸಿಗೆ ನಾಟುವಂತೆ ತಿಳಿಸುವ ಗ್ರಂಥ – ಶಾಸ್ತ್ರ. ಹೊಸ ಹೊಸ ವಿಷಯಗಳ ಬಗ್ಗೆ ಹೊಸ ಹೊಸ ಶಾಸ್ತ್ರಗಳು ಇವೆ. ಪ್ರಾಚೀನ ವಿಷಯಗಳ ಬಗ್ಗೆ ಇರುವ ಶಾಸ್ತ್ರ ಗ್ರಂಥಗಳೇ 'ವೇದಗಳು'.

ನಮ್ಮಗಳಲ್ಲಿನ ಆಚಾರ ವ್ಯವಹಾರಗಳಲ್ಲೆಲ್ಲಾ ಭಿನ್ನತೆ ಇದ್ದರೂ, ವೇದಗಳ ಪ್ರಭಾವ ನಮ್ಮ ಜೀವನದ ಎಲ್ಲಾ ಅಂಶಗಳ ಮೇಲೂ ಬಿದ್ದಿದೆ.

ಇಂದ್ರಿಯಾದಿ ಜನ್ಯ ಜ್ಞಾನದಿಂದ ತಿಳಿಯಲು ಅಸಾಧ್ಯವಾದ ವೇದ ವಿದ್ಯೆಯನ್ನು, ಪರಮೇಶ್ವರನ ಅನುಗ್ರಹದಿಂದ, ಕಲ್ಪದ ಪ್ರಾರಂಭದಲ್ಲಿ, ದರ್ಶನರೂಪದಲ್ಲಿ ಪಡೆದವರು 'ಋಷಿಗಳು'. ಋಷಿಗಳು, ತಾವು ಕಂಡ ದರ್ಶನ ರೂಪಸ್ತುತಿಗಳಿಗೆ, ಪಾಪಕರ್ಮ ಸಂಭಂಧ ಬರದಂತೆ, 'ಛಂದಸ್ಸಿ'ನ ಕ್ರಮದಲ್ಲಿ ರಕ್ಷಣೆ ಕೊಟ್ಟರು.

ತ್ರೇತಾಯುಗದ 'ಅಶ್ವಮೇಧಯಾಗ' – ದ್ವಾಪರಯುಗದ 'ರಾಜಸೂಯಯಾಗ' ಇವುಗಳು ವೇದವನ್ನು ಮತ್ತು ವೇದಕಾಲವನ್ನೂ ದ್ವಾಪರ ತ್ರೇತಾಯುಗಕ್ಕೂ ಪೂರ್ವಕಾಲಕ್ಕೆ ಸೇರಿಸುತ್ತವೆ.

ಮಹಾಭಾರತದ – ಧರ್ಮರಾಜನು ಈ ಭೂಮಿಯನ್ನು ಬಿಟ್ಟನಂತರ ಕಲಿಯುಗ ಪ್ರಾರಂಭವಾಯಿತೆನ್ನಲಾಗಿದೆ. ಆ ಪ್ರಾರಂಭಿಕ ಕಾಲವನ್ನು ಕ್ರಿಸ್ತ ಪೂರ್ವ 3139 ಎಂದು ಗುರ್ತಿಸಲಾಗಿದೆ. ಲಭ್ಯವಿದ್ದ 'ಜ್ಞಾನಸಂಗ್ರಹ' ವೇದ ನಾಲ್ಕು ಭಾಗಗಳಾಗಿ ವ್ಯಾಸರಿಂದ ವಿಂಗಡಿತವಾಯಿತೆನ್ನಲಾಗಿದೆ. ವ್ಯಾಸರು ವೇದವ್ಯಾಸರಾದರು ವೇದ – ಋಗ್ವೇದ, ಸಾಮವೇದ, ಯಜುರ್ವೇದ, ಅಥರ್ವಣವೇದ – ಎಂದು ವಿಭಾಗಗೊಂಡಿತು.

ಈ ಜ್ಞಾನಸಂಗ್ರಹ –ವೇದಗಳು– ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ ಪರಂಪರೆಯಿಂದ ಹರಿದು ಬಂದಿದೆ. ಪರಂಪರೆಯ ಬಾಯಿಪಾಠದಿಂದ ಇಂದಿಗೂ ಸ್ವರ ವರ್ಣಗಳೇನೂ ವ್ಯತ್ಯಾಸವಾಗದಂತೆ ರಕ್ಷಿತಗೊಂಡು ಬಂದಿವೆ – 'ವೇದಗಳು'.

ಪರಂಪರೆಯಿಂದ ಬಾಯಿಪಾಠದ ಮೂಲಕ ವೇದ ವಿದ್ಯೆಯನ್ನು ಕಲಿತವರು ಈಗ ಕೆಲವೇ ಜನರಿದ್ದಾರೆ. ಈ ಕಲಿತವರಲ್ಲಿ ವೇದದ ಅರ್ಥ ತಿಳಿದವರು– ಬೆರಳೆಣಿಕೆಯಷ್ಟು ಮಾತ್ರ! ಹೀಗಾಗಿ ಜನ ಸಾಮಾನ್ಯರಿಗೆ ವೇದಗಳು ಪವಿತ್ರವಾದವು. ಆದ್ದರಿಂದ ಪೂಜಾಯೋಗ್ಯವಾದವು ಎಂಬ ಭಾವನೆ ಉಂಟಾಗುತ್ತಿದೆ.

ನಮ್ಮ ಪೂರ್ವಜ ಋಷಿಗಳು ಮಂತ್ರ ದೃಷ್ಟರು; ದೇವತೆಗಳೊಂದಿಗೆ ನೇರಸಂಪರ್ಕ ಇಟ್ಟುಕೊಂಡಿದ್ದವರು, ದೇವತೆಗಳಿಗೆ ಹವಿಸ್ಸು ಅರ್ಪಿಸಿ, ಅಗ್ನಿಯ ಹಾಗು ಇತರ ದೇವತೆಗಳ ಒಲುಮೆ ಗಳಿಸುತ್ತಿದ್ದರು. ಆ ದೇವತೆಗಳನ್ನು ಸ್ತುತಿಸಿ, ತಮ್ಮ ಅಭೀಷ್ಟಗಳನ್ನು ಆ ದೇವತೆಗಳಲ್ಲಿ ನಿವೇದಿಸಿಕೊಂಡು ತಮ್ಮ ಇಷ್ಟಾರ್ಥಗಳನ್ನು ಸಾಧಿಸಿಕೊಳ್ಳುತ್ತಿದ್ದರು – ಋಗ್ವೇದದ ಕಾಲದಲ್ಲಿ ! ಹವಿಸನ್ನು ದೇವತೆಗಳ ಪರವಾಗಿ ಸ್ವೀಕರಿಸುತ್ತಿದ್ದ ಅಗ್ನಿಯು, ಈಗಲೂ ನಮಗೆ ಪ್ರತ್ಯಕ್ಷ ದೇವತೆ!

ಋಷಿಗಳು ಕಂಡ ದೇವತೆಗಳು, ಅವರ ಗುಣ, ಕ್ರಿಯೆಗಳು, ಋಷಿಗಳ ಅಪೇಕ್ಷೆಗಳು – ಇತ್ಯಾದಿಗಳನ್ನು ವರ್ಣಿಸುವ ಮಂತ್ರಗಳೇ 'ಋಕ್'ಗಳು. ವಿಶ್ವಾಮಿತ್ರ ವಸಿಷ್ಠ ವಾಮದೇವ ಗೌತಮ ಭರದ್ವಾಜಾದಿ ಋಷಿಗಳೂ ಅವರ ವಂಶೀಯರೂ, ಅವರ ಶಿಷ್ಯರೂ–ಸ್ತುತಿಸಂಪಾದಕರುಗಳು.

ಇಂದ್ರ ಅಗ್ನಿ ವಾಯು ಮಿತ್ರಾವರುಣ ಮರುತ್ತುಗಳು ಉಷ ವಿಷ್ಣು ಸೋಮ ಅಶ್ವಿನೀ ದೇವತೆಗಳು ವಿಶ್ವೇದೇವತೆಗಳು, ಋಷಿಗಳಿಂದ ಪ್ರಾರ್ಥಿಸಲ್ಪಟ್ಟವರು.

ಗಾಯತ್ರೀ, ಅನುಷ್ಟುಪ್, ಬೃಹತೀ, ಪಂಕ್ತಿ, ಜಗತೀ, ತ್ರಿಷ್ಟುಪ್, ಉಷ್ಣಿಕ್– ಹೀಗೆ ಹಲವಾರು ಛಂದಸ್ಸುಗಳಲ್ಲಿ, ಋಷಿಗಳ ಸ್ತುತಿಗಳು ಉದಯಗೊಂಡು ರಕ್ಷಿತವಾಗಿವೆ.

ಪ್ರತ್ಯಕ್ಷ ಅನುಮಾನಗಳಿಂದ ತಿಳಿಯಲು ಸಾಧ್ಯವಿಲ್ಲದ ಧರ್ಮಸ್ವರೂಪವನ್ನು 'ವೇದ' ತಿಳಿಸುತ್ತದೆ. ವೇದದ ವಿಭಾಗಿತ ಭಾಗಗಳಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ – ಇವುಗಳ ಪ್ರಾಚೀನ ಕಾಲದ ವಿವರಣೆಯ ಭಾಗವೇ 'ಬ್ರಾಹ್ಮಣ'ಗಳು. ಆ ಬ್ರಾಹ್ಮಣಗಳ ಮುಂದುವರೆದ ಭಾಗವೇ 'ಅರಣ್ಯಕ' ಮತ್ತು 'ಉಪನಿಷತ್ತು'ಗಳು.

ಋಗ್ವೇದದಲ್ಲಿ ಇಪ್ಪತ್ತೊಂದು ಶಾಖೆಗಳಿದ್ದು, ಅವುಗಳು ಐದು ಗುಂಪುಗಳಲ್ಲಿ – ಆಶ್ವಲಾಯನ, ಸಾಂಖ್ಯಾಯನ, ಶಾಕಲ, ಬಾಷ್ಕಲ, ಮಾಂಡೂಕೇಯ ಎಂಬುವಾಗಿ ವಿಂಗಡಿತವಾಗಿವೆ. ಆಶ್ವಲಾಯನ ಶಾಖೆಯೇ 'ಋಗ್ವೇದಸಂಹಿತೆ.

ಋಗ್ವೇದದ 10552 ಋಙ್ಮಂತ್ರಗಳು, 10 ಮಂಡಲಗಳ, 85 ಅನುವಾಕಗಳಲ್ಲಿ, 1028 ಸೂಕ್ತಗಳಲ್ಲಿ ವಿಂಗಡಿತವಾಗಿವೆ. ಪಠನಾದಿ ಅನುಕೂಲಕ್ಕಾಗಿ ಇದೇ 10552 ಋಕ್‌ಗಳನ್ನು 8 ಅಷ್ಟಕಗಳ, 64 ಅಧ್ಯಾಯಗಳ, 2000 ಕ್ಕೂ ಹೆಚ್ಚಾದ ವರ್ಗಗಳಲ್ಲೂ ವಿಂಗಡಿತವಾಗಿವೆ.

ಒಬ್ಬೊಬ್ಬ ಋಷಿ, ಅವರ ವಂಶಸ್ಥರು, ಅವರ ಶಿಷ್ಯರು 'ಕಂಡ' ಮಂತ್ರ ಸಮೂಹವೇ 'ಮಂಡಲ'. ಆ ಋಷಿಗಳೇ 'ಮಂತ್ರದ್ರಷ್ಟರು'.

ಋಗ್ವೇದ ಸಂಹಿತೆಯ ಮೊದಲ 8 ಮಂಡಲಗಳು, ಋಷಿಗಳ ಕ್ರಮದಲ್ಲಿ ವಿಂಗಡಿತವಾಗಿದೆ. ಇಲ್ಲಿ ಅಗ್ನಿ ಇಂದ್ರ ಉಷಸ್ ಇತ್ಯಾದಿ ದೇವತೆಗಳ ಸ್ತುತಿಗಳಿವೆ.

ಒಂಬತ್ತನೆಯ ಮಂಡಲದಲ್ಲಿ ಬೇರೆಬೇರೆ ಋಷಿಗಳಿಂದ ಸ್ತುತಿತ ಪವಮಾನಸೋಮನ ಸ್ತುತಿಗಳಿವೆ.

ಹತ್ತನೆಯ ಮಂಡಲದಲ್ಲಿ ಬೇರೆಬೇರೆ ಋಷಿಗಳಿಂದ ಸ್ತುತಿಸಲ್ಪಟ್ಟ ಸ್ತೋತ್ರ ಸಮೂಹವಿದೆ.

ಸೂಕ್ತಪಠಣಕ್ಕೆ ಮುಂಚೆ, ಆ ಸೂಕ್ತದ ಮಂತ್ರದ್ರಷ್ಟಋಷಿ, ಸ್ತುತಿಸಲ್ಪಡುವ ದೇವತೆ, ಆ ಋಙ್ಮಂತ್ರಗಳು ನಿಭಂಧಿತವಾಗಿರುವ ಛಂದಸ್ಸು – ಇವುಗಳನ್ನು ಪಠಿಸುವ ಪದ್ಧತಿ ಇದೆ.

ಋಗ್ವೇದದಲ್ಲಿ ಗ್ರಹನಕ್ಷತ್ರಗಳ ವಿಚಾರವೂ ಪರೋಕ್ಷವಾಗಿದೆ. ನಮ್ಮ ಪೂರ್ವಜರ ಪೂಜಾವಿಧಾನಗಳು, ಯಜ್ಞ ಕ್ರಮಗಳು, ಯೋಜನೆಗಳು, ಕಷ್ಟಸುಖಗಳು, ಪೂರ್ವೇತಿಹಾಸ – ಇವೆಲ್ಲಾ ವೇದ ಮಂತ್ರಗಳಲ್ಲಿ ಚರ್ಚಿತವಾಗಿದೆ.

ಋಗ್ವೇದ – ಇದರಲ್ಲಿ ಏನಿದೆ? – ಎಂದು, ಪರಿಚಯಇಲ್ಲದವರಿಗೆ, ಕನ್ನಡಿಯಲ್ಲಿ ಆನೆ ತೋರಿಸುವ ಪರಿಚಯ ಪ್ರಯತ್ನ ಇದು. ಇದರಿಂದ ಋಗ್ವೇದ ಪರಿಚಯ ಸಾಧ್ಯವಾಗಿ, ಹೆಚ್ಚಿನ ಅಧ್ಯಯನಕ್ಕೆ ಓದುಗರಿಗೆ ಪ್ರಚೋದನೆ ಸಿಕ್ಕರೆ, ಈ ಕೃತಿರಚನೆಯ ಶ್ರಮ ಸಾರ್ಥಕ.

ಋಗ್ವೇದ ಸಂಹಿತೆಯ ಹತ್ತು ಮಂಡಲಗಳಲ್ಲಿ, ಮೊದಲ ಮಂಡಲದ, 191 ಸೂಕ್ತಗಳ ಪರಿಚಯ – ಇಲ್ಲಿದೆ. ಪ್ರತಿ ಸೂಕ್ತಗಳಲ್ಲಿರುವ ಋಙ್ಮಂತ್ರಗಳ ಸಮಗ್ರ ಸಾರಾಂಶವನ್ನು ಋಷಿ ದೇವತಾ ಛಂದಸ್ಸುಗಳ ಸಹಿತ ಸರಳ ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ.

ಈ ಕೃತಿಯು – ವೇದದ ಭಾಷ್ಯವಾಗಲೀ, ಟೀಕೆಯಾಗಲಿ ಅಲ್ಲ , ಕೇವಲ ವಸ್ತುನಿಷ್ಠ ಸಾರಾಂಶವಷ್ಟೆ– ಎಂಬುದನ್ನು ಓದುಗರು ಗಮನಿಸಬೇಕು.

ಈ ಕೃತಿಯಲ್ಲಿ ಕಂಡುಬರುವ ದೋಷಗಳು ಕೇವಲ ಈ ಲೇಖಕನದೇ.

ಓದುಗ ಸಹೃದಯರು ತಾವು ಕಂಡ ದೋಷಗಳನ್ನು ದಯಮಾಡಿ ತಿಳಿಸಿದರೆ ಲೇಖಕನು ಧನ್ಯ.

ಈ ಕೃತಿಯ ರಚನೆಗೆ ಮಾರ್ಗದರ್ಶನ ಮಾಡಿದ ರಾಷ್ಟ್ರಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಶ್ರೀ ಶೃಂಗೇರಿ ಶಂಕರಮಠದ ಆಸ್ಥಾನ ವಿದ್ವಾನ್ ಶ್ರೀ ಕೋಡೂರು ಕೃಷ್ಣ ಜೋಯಿಸರಿಗೆ ಕೃತಜ್ಞತಾ ಪೂರ್ವಕ ನಮಸ್ಕಾರಗಳು.

ಈ ಕೃತಿ ಪ್ರಕಟಣೆಗೆ ಆರ್ಥಿಕವಾಗಿ ನೆರವಾದ, ತಿರುಮಲ ತಿರುಪತಿ ದೇವಸ್ಥಾನದ ಅಧಿಕಾರ ವರ್ಗಕ್ಕೆ ಕೃತಜ್ಞತೆಗಳು.

ತಾ: 19-7-1997
ಬೆಂಗಳೂರು

ಸೂರ್ಯನಾರಾಯಣ
ಪಿ - ೧/೧೧,
ಪಿ.ಡಿ.ಪಿ. ನಿವಾಸಗಳು, ಕಲ್ಲಪಳ್ಳಿ,
ಕೆನ್ಸಿಂಗ್ಟನ್ ರಸ್ತೆ,
ಬೆಂಗಳೂರು - ೫೬೦ ೦೪೨.

ಶ್ರೀ

## ಋಗ್ವೇದ ಪರಿಚಯ - ಪ್ರಥಮ ಮಂಡಲ

**ಮಂಡಲ - 1** **ಅಷ್ಟಕ - 1, ಅಧ್ಯಾಯ - 1**

**ಸೂಕ್ತ 1 ( ಅಗ್ನಿಮೀಳೆ ಪುರೋಹಿತಂ..........**

ಮಧುಚ್ಛಂದ ವೈಶ್ವಾಮಿತ್ರ ಋಷಿಗಳು ಅಗ್ನಿದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಬ್ರಹ್ಮ ಹೋತೃ ಅಧ್ವರ್ಯು ಉದ್ಗಾತೃ- ಹೀಗೆ ನಾಲ್ಕುಜನ ಋತ್ವಿಜರು ಯಜ್ಞನಿರ್ವಹಿಸುತ್ತಾರೆ.

ಯಜ್ಞದ ಬಗ್ಗೆ ಚೆನ್ನಾಗಿ ಬಲ್ಲವ ಅಗ್ನಿದೇವ; ಅವನೇ ಪುರೋಹಿತ. ದೇವತೆಗಳನ್ನು ಯಜ್ಞಭೂಮಿಗೆ ಕರೆತರುವವ, ಸಂಪತಪ್ರದ ಸತ್ಯಸ್ವರೂಪಿ.

ಅಗ್ನಿಯು ಭೂತ ವರ್ತಮಾನಕಾಲದ, ಎಲ್ಲಾ ಋಷಿಗಳಿಂದಲೂ ಸ್ತೋತ್ರ ಮಾಡಲ್ಪಟ್ಟವ, ಸ್ತೋತ್ರ ಪಡೆಯುತ್ತಿರುವವ. ಹೋಮ ಕುಂಡದಲ್ಲಿ ಆಜ್ಯದಿಂದ ಪ್ರಜ್ವಲಿತನಾಗುವವ.

ಹೋತೃವಿನ ಸ್ತುತಿಯಿಂದ ಪ್ರೀತನಾಗಿ, ಐಶ್ವರ್ಯ, ಸಂತೋಷ, ಧನ, ಗೃಹ, ಪುತ್ರ, ಪಶುಗಳನ್ನು ಅಗ್ನಿಯು ಯಜಮಾನನಿಗೆ ಕರುಣಿಸುತ್ತಾನೆ.

ಆಹವನೀಯ, ಮಾರ್ಜಾಲೀಯ, ಗಾರ್ಹಪತ್ಯ, ಅಗ್ನಿದ್ರಯ – ಇವು ಅಗ್ನಿಯ ನಾಲ್ಕು ರೂಪಗಳು. ಆಹ್ವಾನಿತ ದೇವತೆಗಳೊಂದಿಗೆ, ಯಜ್ಞಭೂಮಿಗೆ ಅಗ್ನಿಯು ಬರಲೆಂದು ಯಜ್ಞಕರ್ತ ಯಜಮಾನನು, ಆಹ್ವಾನಪೂರ್ವಕವಾಗಿ ಪ್ರಾರ್ಥಿಸುತ್ತಾನೆ.

ಅಗ್ನಿಯು, ಯಜ್ಞಕರ್ತನನ್ನು, ವಾತ್ಸಲ್ಯದಿಂದ ಪ್ರಸನ್ನನಾಗಿ ಮಗನಂತೆ, ಮಂಗಳಕರವಾಗಿ ನೋಡಿಕೊಳ್ಳಲಿ. ಯಜ್ಞವನ್ನು ರಾಕ್ಷಸರಿಂದ ರಕ್ಷಿಸಲಿ – ಎಂದು ಯಜಮಾನನು ಪ್ರಾರ್ಥಿಸುತ್ತಾನೆ.

ಅಗ್ನಿಯು ಕೊಟ್ಟ ಯಜ್ಞಫಲವನ್ನು, ಅಗ್ನಿಗೇ ಅರ್ಪಿಸುವುದರಿಂದ, ಆ ಫಲದ ವಸ್ತುಗಳು ವೃದ್ಧಿಸುತ್ತವೆ.

**ಸೂಕ್ತ - 2 ( ವಾಯ ವಾಯಾಹಿ..............**

ಮಧುಚ್ಛಂದ ವೈಶ್ವಾಮಿತ್ರ ಋಷಿ ವಾಯು ಇಂದ್ರ ಮಿತ್ರಾವರುಣ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಯಾವ ಕೆಲಸಗಳನ್ನು ಯಾವ ಕಾಲದಲ್ಲಿ ಮಾಡಬೇಕು, ಎಂಬುದನ್ನು ಯಜಮಾನನು

ತಿಳಿದಿದ್ದಾನೆ. ಶಸ್ತ್ರ ಸ್ತೋತ್ರ ಮಂತ್ರ ಪಠಣಗಳಿಂದ ದೇವತೆಗಳಿಗಾಗಿ ಸೋಮರಸವನ್ನು ವಿಧ್ಯುಕ್ತವಾಗಿ ಸಂಸ್ಕರಿಸಿ ಪಾನಯೋಗ್ಯ ಮಾಡಿದ್ದಾನೆ. ಸೋಮರಸವೂ ದೇವತೆಗಳಿಗಾಗಿಯೇ ಕಾಯ್ದಿದೆ.

ವಾಯು ಇಂದ್ರ ಮಿತ್ರವರುಣರನ್ನು ಸೋಮಪಾನಕ್ಕಾಗಿ, ಯಜ್ಞಕ್ಕೆ ಬರಲೆಂದು ಯಜಮಾನನು ಆಹ್ವಾನಿಸುತ್ತಾನೆ. ಸೋಮಪಾನ ಹವಿಸ್ಸು ಸ್ವೀಕರಿಸಿ ಯಜ್ಞವನ್ನು ಯಥೋಕ್ತ ಸಮಾಪ್ತಿ ಮಾಡಿ, ಯಜ್ಞಫಲ ಅನುಗ್ರಹಿಸಲಿ. – ಎಂದು ಋಷಿ ಪ್ರಾರ್ಥಿಸುತ್ತಾನೆ.

**ಸೂಕ್ತ** - 3 **(ಅಶ್ವಿನಾಯ ಜ್ವರೀರಿಶೋ........**

ಮಧುಚ್ಛಂದ ವೈಶ್ವಾಮಿತ್ರ ಋಷಿ, ಅಶ್ವಿನೀ ದೇವತೆಗಳು, ಇಂದ್ರ ವಿಶ್ವೇದೇವತೆಗಳು ಹಾಗೂ ಸರಸ್ವತಿಯನ್ನು, ಗಾಯತ್ರೀ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳು ಅಜಾನುಬಾಹುಗಳು, ಅತಿಭೋಜನಾಪೇಕ್ಷಿಗಳು, ಯಜ್ಞರಕ್ಷಕರು, ವಿಘ್ನನಾಶಕರು, ಸಾಹಸಕಾರ್ಯಪ್ರವೃತ್ತರು, ಮಹಾಬುದ್ಧಿವಂತರು, ಮಾರ್ಗದರ್ಶಕರು, ಧೈರ್ಯಶಾಲಿಗಳು, ಶತ್ರುನಾಶಕರು, ದೇವವೈದ್ಯರು, ರೋಗನಾಶಕರು, ಸತ್ಯವಾದಿಗಳು.

ಇಂದ್ರನು ವಿಚಿತ್ರಕಾಂತಿಯ ಸುಂದರ, ಅಶ್ವರಥಾರೂಢ, ಸೋತ್ರಪ್ರಿಯ, ಭಕ್ತಪ್ರದ ವೇದರೂಪಿ.

ವಿಶ್ವೇದೇವತೆಗಳು, ಮನುಷ್ಯರನ್ನೂ ಯಜ್ಞವನ್ನೂ ಸಂರಕ್ಷಿಸಿ ಪೋಷಿಸುವವರು; ಮಳೆ ತರುವವರು, ನಾಶರಹಿತರು, ಸರ್ವವನ್ನು ಬಲ್ಲ ಐಶ್ವರ್ಯದಾತರು, ದ್ರೋಹಮಾಡದವರು.

ಸರಸ್ವತೀದೇವಿಯು ಜನರನ್ನು ಶುದ್ಧಿಗೊಳಿಸುವವಳು, ಯಜ್ಞಕರ್ತರಿಗೆ ಅನ್ನದಾತಳು, ಧನರೂಪಿ ಐಶ್ವರ್ಯದಾತಳು, ಮನುಜರು ಪ್ರಿಯಸತ್ಯವಾಡುವಂತೆ ಮಾಡುವವಳು, ಒಳ್ಳೆಯ ಕೆಲಸಕ್ಕೆ ಪ್ರವರ್ತಕಳು, ಸದ್ಬುದ್ಧಿಯ ಜನರನ್ನು ಸತ್ಕಾರ್ಯಕ್ಕೆ ನೆನಪಿಸುವವಳು. ನದಿಯ ರೂಪಿಂದ ಅಪಾರ ನೀರಿಗೆ ಆಶ್ರಯಳು; ಮನಸ್ಸನ್ನು ಪ್ರಕಾಶಗೊಳಿಸಿ ಬುದ್ಧಿಯನ್ನು ಚುರುಕುಗೊಳಿಸುವಳು.

ಅಶ್ವಿನೀ ದೇವತೆಗಳು, ಇಂದ್ರ, ವಿಶ್ವೇದೇವತೆಗಳು, ಸರಸ್ವತೀ–ಇವರುಗಳು, ಯಜ್ಞಯಜಮಾನನ ಆದರ ಆಹ್ವಾನ ಸ್ತೋತ್ರ ಸ್ವೀಕರಿಸಿ ಯಜ್ಞಕ್ಕೆ ಬರಲಿ. ಸೋಮರಸ ಹವಿಯುಕ್ತ ಅನ್ನ ಸ್ವೀಕರಿಸಿ ತೃಪ್ತಿಯಿಂದ ಯಜ್ಞವನ್ನು ಸಾಂಗಗೊಳಿಸಲಿ.

**ಸೂಕ್ತ** - 4 **(ಸುರೂಪ ಕೃತ್ನುಮೂತಯೇ..........**

ಮಧುಚ್ಛಂದ ವಿಶ್ವಾಮಿತ್ರಋಷಿ ಇಂದ್ರದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನು ವಿಚಿತ್ರ ಕೃತ್ಯಗಳನ್ನು ಎಸಗುವ ಸಾಹಸಿ, ಶತ್ರುಭಾಧೆಯಿಂದ ರಕ್ಷಿಸುವವ,

ಇಂದ್ರನ ಅನುಗ್ರಹದಿಂದಲೇ ಯಜಮಾನನ ಶತ್ರುಗಳೂ ಸಹಾ ಯಜಮಾನನ ಐಶ್ವರ್ಯವನ್ನು ಹೊಗಳುವರು.

ಇಂದ್ರನಿಗೆ ಪ್ರೀತಿಪಾತ್ರವಾದ ಹಾಗೂ ಯಜ್ಞಕ್ಕೆ ಸಂಭಂದಿಸಿದವರಿಗೆಲ್ಲಾ ಸಂತೋಷ ಕೊಡುವ ಯಜ್ಞ ಸಂಪತ್ತು – ಸೋಮರಸ. ಸೋಮರಸ ಸ್ವೀಕಾರಕ್ಕೆ – ಪ್ರಾತಃಸವನ, ಮಾಧ್ಯಂದಿನಸವನ, ತೃತೀಯಸವನಗಳಲ್ಲೂ ಸಹ ಬರಲು ಇಂದ್ರನಿಗೆ ಆಹ್ವಾನ. ನ್ಯೂನಾತಿರಿಕ್ತವಿಲ್ಲದಂತೆ ಯಜ್ಞನಡೆಯಲು ಹವಿಸ್ಸು ಸಾಮಗಾನ ಸೇವೆಯೂ ಸಹ.

ಇಂದ್ರನಿಂದೆ ಮಾಡುವವರು ಯಜ್ಞಭೂಮಿಯಿಂದ ಮತ್ತು ಎಲ್ಲೆಡೆಯಿಂದಲೂ ಎಲ್ಲಾದರೂ ಹೋಗಲಿ. ಇಂದ್ರನ ಸ್ವರೂಪ ತಿಳಿಯುವುದಾಗಲಿ, ಅವರಿಗೆ ಸಮೃದ್ಧಿ ಬರುವುದಾಗಲೀ ಬೇಡ.

ಇಂದ್ರನು ಯಜ್ಞರಕ್ಷಣೆ ಮಾಡಿ ಐಶ್ವರ್ಯ ಗೋಧನ ಸಂಪತ್ತುಗಳನ್ನು ಯಜಮಾನನಿಗೆ ಕೊಡಲಿ.

**ಸೂಕ್ತ - 5 (ಅತ್ವೇತಾ .........**

ಮಧುಚ್ಛಂದ ವೈಶ್ವಾಮಿತ್ರರು ಇಂದ್ರದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನು ಕಾಲೋಚಿತ ತಿಳಿವಳಿಕೆ, ಯುವಶಕ್ತಿ, ಐಶ್ವರ್ಯ- ಇವುಗಳದಾತ. ಇಂದ್ರನಿಗಾಗಿ ಸೋಮರಸವು, ಸ್ತೋತ್ರ ಗಾಯನ, ಶಸ್ತ್ರಮಂತ್ರಪಠಣ, ದಶಾಪವಿತ್ರ ಶೋಧನಗಳಿಂದಸಂಸ್ಕರಿಸಲ್ಪಟ್ಟು, ಮೊಸರಿನೊಂದಿಗೆ ಸೇರಿ ಸಿದ್ಧವಾಗಿದೆ. ಸೋಮರಸವು ಇಂದ್ರನಿಗೆ ಶಕ್ತಿವರ್ಧಕ. ಇಂತಹ ಇಂದ್ರನ ಬಳಿಗೆ, ಅವನ ರಥ ಕುದುರೆಗಳ ಬಳಿಗೂ ಸಹಾ ಶತ್ರುಗಳು ಬರಲು ಅಸಮರ್ಥರು.

ಇಂದ್ರನನ್ನು ಸ್ತೋತ್ರ ಮಾಡುವವರ ಶರೀರಕ್ಕೆ ವಿರೋಧಿಗಳು ಕೆಡಕು ಮಾಡದಂತೆ ರಕ್ಷಿಸಲಿ.

**ಸೂಕ್ತ -6 ( ಯುಂಜಂತಿ ಬ್ರಧ್ನಮರುಷಂ.........**

ಮಧುಚ್ಛಂದ ವೈಶ್ವಾಮಿತ್ರಋಷಿ ಇಂದ್ರ ಮರುತ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನು ಪರಮೈಶ್ವರ್ಯಯುಕ್ತ. ಆದಿತ್ಯ, ಅಗ್ನಿ, ವಾಯು ನಕ್ಷತ್ರ ರೂಪಗಳಲ್ಲಿ ಪ್ರಕಾಶಗೊಳ್ಳುವ ಸಾಮರ್ಥ್ಯವಂತ. ಇಂದ್ರೋದಯವಾದಾಗ, ಅಂದರೆ ಸೂರ್ಯೋದಯವಾದಾಗ, ರಾತ್ರಿಯಲ್ಲಿ ನಿದ್ರೆಯಲ್ಲಿ ಏನೂ ಗುರುತಿಸಲಾಗದ ಸ್ಥಿತಿಯಲ್ಲಿ ಇದ್ದವರು, ಎಚ್ಚೆತ್ತು ವಸ್ತುಗಳನ್ನು ನೋಡಲು ಶಕ್ತರಾಗುತ್ತಾರೆ. ಎಲ್ಲಾ ವ್ಯವಹಾರಗಳಲ್ಲೂ, ಎಲ್ಲಾ ಪ್ರಾಣಿಗಳೂ, ಇಂದ್ರನನ್ನು ದೇವರೆಂಬ ಗೌರವವನ್ನು ಇಟ್ಟುಕೊಂಡಿದ್ದಾರೆ.

ಮರುದ್ದೇವತೆಗಳು ಮಹಾಸಮರ್ಥರು. ಪರ್ವತಾದಿ ದುರ್ಗಮಸ್ಥಾನಗಳನ್ನೂ

ಭೇದಿಸಬಲ್ಲರು. ಜಲವು ಮೇಘ ಮಧ್ಯದಲ್ಲಿ ಗರ್ಭರೂಪದಲ್ಲಿ ಇರುವಂತೆ ಪರ್ಜನ್ಯನನ್ನು ಪ್ರೇರಿಸುವವರು; ವರ್ಚಸ್ಸು ಶಕ್ತಿ ಸಾಮರ್ಥ್ಯಗಳಲ್ಲಿ ಇಂದ್ರನಿಗೆ ಸಮಾನರು. ಫಣಿಯು ಬಚ್ಚಿಟ್ಟಿದ್ದ ಪಸುಗಳನ್ನು ಪಡುಕಲು ಇಂದ್ರನಿಗೆ ಸಹಾಯ ಮಾಡಿದವರು ಇವರೇ.

ಭೂಲೋಕ, ಸ್ವರ್ಗ, ಅಂತರಿಕ್ಷಗಳಲ್ಲಿ – ಎಲ್ಲಿದ್ದರೂ ಅಲ್ಲಿಂದ ಇಂದ್ರ ಮರುತ್ತುಗಳು ಯಜ್ಞಕ್ಕೆ ಬರಲಿ. ಧನವನ್ನು ತಂದು ಕೊಡಲಿ – ಎಂದು ಋಷಿಯ ಪ್ರಾರ್ಥನೆ.

**ಸೂಕ್ತ - 7 ( ಇಂದ್ರಮಿಂದ್ಗಾಥಿನೋ.........**

ಮಧುಚ್ಛಂದಋಷಿ ಇಂದ್ರದೇವನನ್ನು ಗಾಯತ್ರೀ ಛಂದಸ್ಸಿನ ಋಕಗಳಲ್ಲಿ ಪ್ರಾರ್ಥಿಸುತ್ತಾರೆ.

ಇಂದ್ರನು ಎಲ್ಲಾ ದೇವತೆಗಳಿಗಿಂತಲೂ ಶ್ರೇಷ್ಠ. ದೇವತೆಗಳನ್ನು ಸ್ತುತಿಸಲು ಉಪಯೋಗಿಸುವ ಉತ್ಕೃಷ್ಟಸ್ತೋತ್ರಗಳಿಗಿಂತಲೂ, ಉತ್ಕೃಷ್ಟ ಸ್ತೋತ್ರಗಳೇ ಇಂದ್ರನಿಗೆಬೇಕು.

ಜಗತ್ತಿಗೆ ಅಂಧಕಾರತಂದಿದ್ದ ವೃತ್ರಾಸುರನನ್ನು ಸಂಹರಿಸಿ, ಅಂತರಿಕ್ಷದಲ್ಲಿ ಸೂರ್ಯನನ್ನು ಪ್ರಕಾಶಿಸುವುದಕ್ಕಾಗಿ ಸ್ಥಾಪಿಸಿದನು. ಸೂರ್ಯನು ತನ್ನ ಪ್ರಕಾಶದಿಂದ ಪ್ರಾಣಿಗಳು ತಮ್ಮ ಕೆಲಸದಲ್ಲಿ ತೊಡಗುವಂತೆ, ಆಹಾರೋತ್ಪತ್ತಿಗಾಗಿ ಮಳೆಬೀಳುವಂತೆ, ಮೇಘವನ್ನು ಪ್ರೇರಿಸಿದನು.

ಇಂದ್ರನನ್ನು, ಸಾಮಗಾಯಕ ಉದ್ಗಾತೃ ಬೃಹತಸಾಮವನ್ನೂ, ಋಗ್ವೇದದ ಶಸ್ತ್ರರೂಪಿ ಋಕ್‌ಗಳಿಂದ ಹೋತೃಗಳೂ, ಯಜುರ್ವೇದವಾಕ್ಯಮಂತ್ರಗಳಿಂದ ಅಧ್ವರ್ಯುಗಳೂ ಸ್ತೋತ್ರ ಮಾಡುತ್ತಾರೆ. ಅನುಗ್ರಹಮಾಡುತ್ತಾ ತಮ್ಮೊಂದಿಗೇ ಇರಲು ಇಂದ್ರನನ್ನು ಯಜಮಾನರು ಪ್ರಾರ್ಥಿಸುತ್ತಾರೆ.

**ಸೂಕ್ತ - 8 ( ಐಂದ್ರಸಾನಸಿಂ........**

ಮಧುಚ್ಛಂದ ಋಷಿ ಇಂದ್ರನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ

ಧನದಿಂದ ಸುಖಾನುಭವ, ಸೈನ್ಯಸಂಗ್ರಹ, ಶತೃಜಯಸಾಧ್ಯ. ಯುದ್ಧಜಯಾಪೇಕ್ಷಿಗಳು, ಪುತ್ರಪೌತ್ರಾ– ಪೇಕ್ಷಿಗಳು, ಪ್ರಜ್ಞಾಪೇಕ್ಷಿಗಳು – ಧನದಿಂದ ಅವೆಲ್ಲವನ್ನೂಗಳಿಸಿ ಕೊಳ್ಳಬಹುದು. ಇದಕ್ಕೆ ಇಂದ್ರನ ರಕ್ಷಣೆ, ಕೃಪೆ ಅಗತ್ಯ.

ಇಂದ್ರನ ಕೃಪೆಗಳಿಸಲು ಯಜಮಾನನು ಹವಿಸ್ಸು ಸಾಮಗಾನ ಸ್ತೋತ್ರಗಳನ್ನು ಅರ್ಪಿಸುತ್ತಾನೆ. ಇಂದ್ರನ ಗೌರವಾರ್ಹವಾಕ್ಯ ಸುಳ್ಳಾಗದೆಂದು ನಂಬಿದ್ದಾನೆ.

ಇಂದ್ರನಿಂದ ವಜ್ರಾಯುಧದ ರಕ್ಷಣೆ, ಅಪಾರಧನ, ಇಷ್ಟಫಲ, ಗೋವುಗಳನ್ನು ಯಜಮಾನನು ಪ್ರಾರ್ಥಿಸುತ್ತಾನೆ.

**ಸೂಕ್ತ - 9 (ಇಂದ್ರೇ ಹಿ ಮತ್ಸ್ಯಂಧಸೋ......**

ಮಧಚ್ಛಂದರು ಇಂದ್ರದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನು ಧನೈಶ್ವರ್ಯ ಸ್ವಾಮಿ. ಶ್ರೇಷ್ಠ ಕರ್ಮಭೋಗಸಾಧನಗಾಗಿ ಎಲ್ಲರಿಗೂ

ಕೊಡುವುದಕ್ಕಿಂತಲೂ ಹೆಚ್ಚುಧನವಿದೆ. ಇಷ್ಟಾರ್ಥ ಪ್ರಾಪ್ತಿಗಾಗಿ ಯಜ್ಞಪ್ರವೃತ್ತರಾಗುವಂತೆ ಯಜಮಾನರಿಗೆ ಪ್ರೇರಣೆ ಆಗುತ್ತದೆ.

ಇಂದ್ರನು ಯಜ್ಞ ಭೂಮಿಗೆ ಆಗಮಿಸಲಿ. ಅತಿಶಯಬಲದ ಸೋಮಪಾನದಿಂದ ಸಂತೋಷಗೊಳ್ಳಲಿ. ಋಕ್‌ಸ್ತೋತ್ರಗಳಿಂದ ಪ್ರೀತನಾಗಲಿ.

ಯಜಮಾನನನ್ನು ಅತಿಶಯ ಕೀರ್ತಿಯಿಂದ ಕಾಪಾಡಲಿ.

**ಸೂಕ್ತ - 10 (ಗಾಯಂತಿತ್ವಾ ಗಾಯತ್ರಿಣೋ.......**

ಮಧುಚ್ಛಂದರು ಇಂದ್ರದೇವನ ಪ್ರಾರ್ಥನೆಯನ್ನು ಅನುಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಮಾಡುತ್ತಾರೆ.

ಸರ್ವಾರ್ಥಕವಿಗಳಿಂದ ಸಮಸ್ತವನ್ನೂ ಕೇಳುವ ಇಂದ್ರನಮಹಿಮೆ ಭೂಅಂತರಿಕ್ಷ ಹಿಡಿಯುವುದಕ್ಕಿಂತಲೂ ಹೆಚ್ಚು. ಇಂದ್ರನ ಹೊಗಳಿಕೆಯು ಅವನು ಕೀರ್ತಿ ಸಂತೋಷವನ್ನು ಹೆಚ್ಚಿಸುತ್ತದೆ. ಆಗ ಇಂದ್ರನು ತನ್ನ ಯುವ ಕುದುರೆಯ ರಥದಲ್ಲಿ ಯಜ್ಞಕ್ಕೆ ಬಂದು, ಪುತ್ರ ಮಿತ್ರ ಪಿತೃಷಿಗಳು ಮೆಚ್ಚುವಂತೆ ಮಾಡುತ್ತಾನೆ. ಅನ್ನ ಆಹಾರ ಧನ ಕೊಟ್ಟು ಶಕ್ತಿಸಾಮರ್ಥ್ಯದಿಂದ ರಕ್ಷಿಸುತ್ತಾನೆ.

ಇಂತಹ ಯಜ್ಞಕ್ಕಾಗಿ ಪರ್ವತದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ ಯಜ್ಞಕರ್ತರು ಸಮಿತ್ತು ಸೋಮಲತೆಗಳನ್ನು ಹುಡುಕಿ ತರುತ್ತಾರೆ.

ಇಂದ್ರನು ಋಷಿಗೆ ಅನ್ನವು ಸುಲಭವಾಗಿ ದೊರೆಯುವಂತೆ, ಮಳೆ ಸುರಿಯುವಂತೆ ಆಯಸ್ಸು ಶಕ್ತಿ ಹೆಚ್ಚುವಂತೆ, ಸಾಮಾನ್ಯ ಋಷಿ ಸಾವಿರಾರು ಪ್ರಯೋಜನ ಹೊಂದುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತಾನೆ.

**ಸೂಕ್ತ - 11 (ಇಂದ್ರವಿಶ್ವಾ.......**

ಜೇತಾ ಮಧುಚ್ಛಂದಋಷಿ ಇಂದ್ರದೇವನನ್ನು ಅನುಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನು ಸಮುದ್ರದಂತೆ ಸರ್ವವ್ಯಾಪಿ ಸೋಲರಿಯದ ಶ್ರೇಷ್ಠ, ಶಕ್ತಿಸಾಮರ್ಥ್ಯಾಧಿಪತಿ. ವಜ್ರಾಯುಧಿಯು ಮಿತ್ರನಾಗಿ ಬಳಿಇರುವಾಗ ಆಹಾರ ಅಭಾವ ಶತ್ರುಹೆದರಿಕೆ ಎಂಬುದಿಲ್ಲ.

ರಾಕ್ಷಸ ವಲನು ಅಪಹರಿಸಿದ ಗೋವುಗಳನ್ನು ಬಿಡಿಸಿದವ, ಬಾಲಾಸುರನಿಂದ ಭಕ್ತರನ್ನೂ ರಕ್ಷಿಸಿದವ, ಕಪಟಿ ರಾಕ್ಷಸ ಶುಷ್ಣನನ್ನೂ ಕಪಟದಿಂದಲೇ ಕೊಂದವ, ವಿಪ್ರು, ಕಯವ, ವೃತ್ರ ಮುಂತಾದ ರಾಕ್ಷಸರುಗಳನ್ನು ಕೊಂದವನು – ಇಂದ್ರನೇ !

ಇಂದ್ರನನ್ನು ಸ್ತೋತ್ರ ಮಾಡುವವರಿಗೆ, ಈ ಹಿಂದೆ ಎಷ್ಟೇ ಧನ ಧಾನ್ಯ ಕೊಟ್ಟಿದ್ದರೂ ಲೆಕ್ಕಿಸದೆ ಈಗಲೂ ಕೊಡುತ್ತಾನೆ. ಇಂತಹ ಇಂದ್ರನ ಸಾಮೀಪ್ಯ, ಸಾವಿರ ಪಟ್ಟು ಯಜ್ಞ ಪ್ರಯೋಜನ ಪಡೆಯಲು ಋಷಿ ಯಜ್ಞಪ್ರವೃತ್ತನಾಗುತ್ತಾನೆ.

**ಸೂಕ್ತ** - 12 **(ಅಗ್ನಿಂ ದೂತಂವೃಣೀಮಹೇ......**

ಋಷಿ ಮೇಧಾತಿಥಿಃ ಕಾಣ್ವರು ಅಗ್ನಿ ದೇವನನ್ನು ಗಾಯತ್ರೀ ಛಂದದ ಋಕ್‌ನಲ್ಲಿ ಸ್ತುತಿಸುತ್ತಾರೆ.

ಯಜ್ಞಪ್ರಾರಂಭದಲ್ಲಿ ಅರಣಿಯಲ್ಲಿ ಉತ್ಪನ್ನನಾಗಿ, ಅಹವನೀಯ ಗಾರ್ಹಪತ್ಯ ರೂಪದಲ್ಲಿ ಪ್ರಕಟಗೊಳ್ಳುವ ಅಗ್ನಿಯು, ಮೇಧಾವಿ ಸತ್ಯಧರ್ಮಸ್ವರೂಪಿ.

ತುಪ್ಪದಿಂದ ಪ್ರಕಾಶವಾಗಿ ಉರಿಯುತ್ತಾ, ಶತ್ರುಗಳನ್ನೂ ಯಜ್ಞವಿರೋಧಿಗಳನ್ನೂ ರೋಗಾದಿ ಉಪದ್ರವಗಳನ್ನೂ ನಾಶಮಾಡಿ, ಎಲ್ಲವನ್ನೂ ಶುದ್ಧಗೊಳಿಸುವವ ಅಗ್ನಿಯೇ.

ಅಗ್ನಿಯು ಹೋಮಸಾಧನ ಅಗ್ನಿ ಮುಖ 'ಜುಹು'ವಿಂದ ಹವಿಸ್ಸನ್ನು ಸ್ವೀಕರಿಸಿ, ಸ್ತೋತ್ರಗಳಿಂದ ಸಂತೋಷಗೊಳ್ಳಲಿ. ದೇವತೆಗಳನ್ನು ಯಜ್ಞಕ್ಕೆ ಕರೆತರಲಿ.

ಯಜ್ಞಭಾಗಿಗಳಿಗೆ ಅನ್ನ ಆಹಾರ ಧನ ಸುಖ ಶೂರ ಜನರನ್ನು ಕೊಡಲಿ.

**ಸೂಕ್ತ** - 13 **(ಆಪ್ರೀ ಸೂಕ್ತ) (ಸುಸಮಿಂಧ್ದೋನ......**

ಋಷಿ ಮೇಧಾತಿಥಿಃ ಕಾಣ್ವರು, ಅಗ್ನಿ ಮತ್ತಿತರ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಇಂದ್ರನ ಸಂತೋಷಾರ್ಥವಾಗಿ, ಯಾಗದಲ್ಲಿ ಹೋತೃವಾಗಿ ನೇಮಕವಾದವ. ಅಗ್ನಿಯು, ಸುಸಮಿದ್ಧ , ತನೂನಪಾತ್, ನರಾಶಂಶ, ಇಳಾ, ಬರ್ಹಿ, ದೇವ್ಯ, ಹೋತಾರ, ವನಸ್ಪತಿ, ಸ್ವಾಹಾ – ಎಂದೆಲ್ಲಾ ಕರೆಯಲ್ಪಡುತ್ತಾನೆ. ಇಂತಹ ಅಗ್ನಿಯು ಯಜ್ಞಕ್ಕೆ ಬರಲಿ.

ನಕ್ತೋಷಸರು, ರಾತ್ರಿ ಮತ್ತು ಪ್ರಾತಃಕಾಲದ ಅಭಿಮಾನ ದೇವತೆಗಳು, ಯಜ್ಞಕ್ಕೆ ಬರಲಿ.

ಮಹಿ – ಎಂದರೆ ಇಳಾ ಭಾರತಿ ಸರಸ್ವತಿ – ಇವರು, ಹಿಂಸೆ ಮಾಡದ, ಸುಖ ಉಂಟು ಮಾಡುವ ಅಗ್ನಿಮೂರ್ತಿ ಸ್ವರೂಪರು. ಇವರೂ ಯಜ್ಞಕ್ಕೆ ಬರಲಿ.

ತ್ವಷ್ಟದೇವನು, ಅನೇಕ ಆಕಾರವಸ್ತುಗಳ ನಿರ್ಮಾಪಕ. ಇವನೂ ಯಜ್ಞಕ್ಕೆ ಬರಲಿ.

ನೀರು ಮತ್ತು ತುಪ್ಪದಿಂದ ಮೆದು ಮಾಡಿದ ದರ್ಭಾಸನದಲ್ಲಿ ಅಗ್ನಿಯು ಕುಳಿತು ಯಜ್ಞಕರ್ಮ ನೆರವೇರಿಸಲಿ. ವನಸ್ಪತಿವಾಹಕ ಅಗ್ನಿಯು ಯಜಮಾನನಿಗೆ ಉತ್ತಮವಾದ ಜ್ಞಾನ ಕೊಡಲಿ.

**ಸೂಕ್ತ** -14 **( ಐಭಿರಗ್ನೇದುವೋ.........**

ಮೇಧಾತಿಥಿಃ ಕಾಣ್ವರು ವಿಶ್ವೇದೇವತೆಗಳನ್ನು ಗಾಯತ್ರೀ ಛದಂಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ವಿಶ್ವೇದೇವ, ಇಂದ್ರ, ಅಗ್ನಿ, ವಾಯು, ಬೃಹಸ್ಪತಿ, ಮಿತ್ರ, ಪೂಷ, ಭಗ, ಆದಿತ್ಯ, ಮರುದ್ದೇವತೆಗಳನ್ನು ಯಜ್ಞಕ್ಕೆ ಯಜಮಾನನು ಆಹ್ವಾನಿಸುತ್ತಾನೆ.

ಅಗ್ನಿಯ ಕುದುರೆ 'ರೋಹಿತ'ವು ಪುಷ್ಟ ಸಮರ್ಥಬಲಶಾಲಿ ಹಣ್ಣು, ದೇವತೆಗಳನ್ನು ಹೊತ್ತು ಓಡಬಲ್ಲದು.

ಇಂದ್ರ, ವಾಯು, ಬೃಹಸ್ಪತಿ, ಮಿತ್ರ, ಉಷ, ಅಗ್ನಿ, ಭಗ, ಅದಿತಿಯ ದ್ವಾದಶಾದಿತ್ಯ ಪುತ್ರರು. ಸಪ್ತ ಮರುತ್ತುಗಳು- ಸಪತ್ನೀಕರಾಗಿ ಉಷಃಕಾಲದಲ್ಲಿ ಅಗ್ನಿರಥದಲ್ಲಿ ಬರಲಿ. ಅಗ್ನಿಯು ಮೊದಲ ಸ್ತೋತ್ರ ಶುಶ್ರೂಷೆ ಪಡೆದು, ಯಜ್ಞ ನೆರವೇರಿಲಿ.

**ಸೂಕ್ತ** -15 ( **ಇಂದ್ರ ಸೋಮಂಪಿಬ**.............

ಮೇಧಾತಿಥಿಃಕಾಣ್ವರು ಋತವಃ, ಇಂದ್ರ, ಮರುತ, ತ್ವಷ್ಟಾ, ಅಗ್ನಿ, ಮಿತ್ರಾವರುಣ, ದ್ರವಿಣೋದಾ, ಅಶ್ವಿನೀ, ಅಗ್ನಿ – ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಋತು ದೇವತೆಗಳು, ಇತರ ದೇವತೆಗಳೊಂದಿಗೆ ತೃಪ್ತಿಯಾಗುವಷ್ಟು ಸೋಮಪಾನ ಮಾಡಲಿ.

'ಬ್ರಹ್ಮಣಾಚ್ಛಂಸಿ' ಎಂಬ ಚಮಸ ಪಾತ್ರೆಯಲ್ಲಿ, ಇಂದ್ರನು, ಋತುದೇವತೆಗಳೊಡನೆ ಉದರಪೂರ್ತಿ ಸೋಮಪಾನ ಮಾಡಲಿ.

ಇಷ್ಟಾರ್ಥಪ್ರದ ಮರುತ್ತುಗಳು 'ಪೋತ್ರ' ಎಂಬ ಋತ್ವಿಕರ ಪಾತ್ರೆಯಿಂದ ಋತುಗಳೊಡನೆ ಸೋಮಪಾನ ಮಾಡಿ, ಯಜ್ಞ ಪವಿತ್ರ ಮಾಡಲಿ.

ಪತ್ನೀಸಹಿತನಾಗಿ ತ್ವಷ್ಟದೇವನು, ಋತುಗಳೊಡನೆ ಸೋಮಸೇವಿಸಿ, ರತ್ನಾದಿ ಐಶ್ವರ್ಯ ಕೊಡಲಿ.

ಅಗ್ನಿಯು ಮೂರುಸವನಗಳಲ್ಲೂ, ಋತು ಹಾಗೂ ಇತರ ದೇವತೆಗಳೊಡನೆ, ಪ್ರತ್ಯೇಕವಾಗಿ ಸೋಮಪಾನ ಮಾಡಲಿ.

ಪ್ರಕೃತಿಯಾದ ಅಗ್ನಿಷ್ಟೋಮ ಯಾಗ, ವಿಕೃತಿಯಾದ ಉಕ್ಥಾದಿ ಯಾಗಗಳಲ್ಲಿ, ದ್ರವಿಣೋದಾ ಎಂಬ ಅಗ್ನಿಯು ಋತುಗಳೊಡನೆ, ಸೋಮ ಸೇವಿಸಲಿ.

ಅಹವನೀಯಾಗ್ನಿಯೊಂದಿಗೆ ಪ್ರಕಾಶಿಸುವ ಅಶ್ವಿನೀ ದೇವತೆಗಳು, ಋತುಗಳೊಡನೆ ಸೋಮ ಸ್ವೀಕರಿಸಲಿ.

ಇಷ್ಟಾರ್ಥದಾತ ಅಗ್ನಿಯು, ಗಾರ್ಹಪತ್ಯಾದಿ ರೂಪದಿಂದ, ಋತುದೇವತೆಗಳೊಂದಿಗೆ ದೇವಯಾಗವನ್ನು ನಿರ್ವಹಿಸಲಿ. ದೇವಾರ್ಪಣ ಯೋಗ್ಯ ಧನವನ್ನು ಅಗ್ನಿ ಕರುಣಿಸಲಿ.

ಮಿತ್ರಾವರುಣರು ಶತ್ರುಗಳ ಯಜ್ಞವನ್ನು ವಿಘ್ನಗೊಳಿಸಲಿ.

**ಸೂಕ್ತ** -16 (**ಆ ತ್ವಾವಹಂತು ಹರಯೋ**...........

ಮೇಧಾತಿಥಿಃ ಕಾಣ್ವಋಷಿ ಇಂದ್ರದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರನು, ಮಂತ್ರಪೂರ್ವಕವಾಗಿ ಯಜ್ಞದ ಅಂಗವಾಗಿ ಸಿದ್ಧ ಪಡಿಸಿದ

ಸೋಮಪಾನವನ್ನು ಮೂರು ಸವನಗಳಲ್ಲೂ ಮಾಡಲು ಸಿದ್ಧವಾಗಿದ್ದಾನೆ.

ಇವನಂತೆಯೇ, ಇವನನ್ನು ಸುಖವಾಗಿ ರಥದಲ್ಲಿ ಯಜ್ಞಭೂಮಿಗೆ ಕರೆತರುವ ಕುದುರೆಗಳು 'ಹರಿ'- ಯಜ್ಞಕುಂಡದ ಸುತ್ತಲೂ ಹರಡಿರುವ ತಂಡುಲೋಪಸ್ಕರ ಅಲಂಕಾರ ಧಾನ್ಯಗಳನ್ನು ತಿನ್ನಲು ಕಾತುರದಿಂದಿವೆ.

ಇಂದ್ರನು ಜಲಾಭಿವೃದ್ಧಿಗೊಳಿಸಿ, ಯಜ್ಞಕರ್ತರ ಇಷ್ಟಾರ್ಥ ನೆರವೇರಿಸಲಿ.

**ಸೂಕ್ತ** -17 ( **ಇಂದ್ರಾ ವರುಣಯೋರಹಂ.........**

ಮೇಧಾತಿಥಿಃ ಕಾಣ್ವಋಷಿ ಇಂದ್ರಾ ವರುಣದೇವತೆಗಳನ್ನು ಗಾಯತ್ರೀ ಹಾಗು ಪಾದ ನಿಚೃತ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರಾ ವರುಣರು ಉತ್ತಮ ಗುಣದ ತೇಜಸ್ವಿಗಳು. ಇಂದ್ರ ವರುಣರನ್ನು ಸದಾ ಸೇವಿಸುವ ಮನಸ್ಸುಳ್ಳ ಯಜಮಾನನು, ಸಾಂಗವಾಗಿ ಯಜ್ಞ ನೆರವೇರಿಸಲು ಇವರನ್ನು ಒಟ್ಟಾಗಿ ಹಾಗೂ ಪ್ರತ್ಯೇಕವಾಗಿ ಆಹ್ವಾನಿಸುತ್ತಾನೆ. ಪಯಸ್ಸತ್ವ ಹವಿಸ್ಸನ್ನು ಅರ್ಪಿಸುತ್ತಾನೆ.

ಇಂದ್ರವರುಣರು ತೃಪ್ತರಾಗಿ, ಪ್ರಸನ್ನರಾಗಿ, ಯಜ್ಞಕರ್ಮ ಉತ್ತಮ ಪಡಿಸಲಿ, ಶತ್ರುನಾಶ ಮಾಡಿ ಸುಖ ಉಂಟುಮಾಡಲಿ. ಅನ್ನವನ್ನು ಯಥೇಚ್ಛವಾಗಿ, ವಜ್ರವೈಡೂರ್‍ಯಾದಿ ಭಾಗ್ಯಗಳನ್ನು ಅನುಭವಿಸುವಂತೆಯೂ, ಅನುಭವಿಸಿದಂತೆಲ್ಲಾ ಧನ ಹೆಚ್ಚುವಂತೆಯೂ ಮಾಡಲಿ ಮತ್ತು ಯಜಮಾನನ ಸಮೀಪದಲ್ಲೇ ಇಂದ್ರವರುಣರು ಇರಲಿ.

**ಸೂಕ್ತ** -18 ( **ಸೋಮಾನಂ ಸ್ವರಣಂ..........**

ಮೇಧಾತಿಥಿಃ ಕಾಣ್ವರು, ಬ್ರಹ್ಮಣಸ್ಪತಿ ಇಂದ್ರ ಸೋಮ, ದಕ್ಷಿಣ ಸದಸತ್ಪತಿ, ನರಾಶಂಸ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಬ್ರಹ್ಮಣಸ್ಪತಿ, ಇಂದ್ರ, ಸೋಮ-ಈ ಮೂವರೂ ಅಭಿವೃದ್ಧಿಕಾರಕ ರಕ್ಷಕರು. ಇವರ ಕೃಪೆಯಿರುವ ಮನುಷ್ಯರು, ನಾಶವಾಗದೇ ವೀರರಾಗಿ ಬಾಳುವರು.

ಬ್ರಹ್ಮಣಸ್ಪತಿ, ಇಂದ್ರ, ಸೋಮ, ದಕ್ಷಿಣಾ- ಇವರುಗಳು ಯಜಮಾನನ್ನು ಪಾಪಕರ್ಮಮಾಡದಂತೆ ರಕ್ಷಿಸುವವರು.

ಸದಸತ್ಪತಿ ನರಾಶಂಸರು, ಅತಿಶಯ ಕಾಂತಿಯುತ ಅತಿಪರಾಕ್ರಮಿಗಳು.

ಬ್ರಹ್ಮಣಸ್ಪತಿಯು ಇಂದ್ರನಿಗೆ ಪ್ರೀತಿಪಾತ್ರ, ಮಹಾಧನಾಢ್ಯ, ಶೀಘ್ರಫಲಕಾರಕ, ಪುಷ್ಟಿದಾಯಕ, ಅಮೃತ ಸಾಹಸಿ, ಸುಂದರ. ಮನಸ್ಸಿನಲ್ಲಿರುವ ವಿಷಯಗಳಿಗೂ ಮಾಡಬೇಕಾದ ಕರ್ಮಗಳಿಗೂ ಸಂಭಂದ ಕಲ್ಪಿಸುವವ ಬ್ರಹ್ಮಣಸ್ಪತಿಯೇ.

ಬ್ರಹ್ಮಣಸ್ಪತಿಯು ನಿರ್ವಿಘ್ನವಾಗಿ ಯಜ್ಞನೆರವೇರಿಸಿ ಮೇಧಾಶಕ್ತಿ ಹಾಗೂ ಯಶಸ್ಸನ್ನು ಕೊಡಲಿ. ಕಕ್ಷಿವಾನನನ್ನು 'ಸೋಮಯಾಗಮಾಡಿದವ' ಎಂದು ದೇವತೆಗಳಲ್ಲಿ ಪ್ರಸಿದ್ಧ ಪಡಿಸಿದಂತೆ, ಈ ಋಷಿಯನ್ನೂ ಪ್ರಸಿದ್ಧಪಡಿಸಲಿ.

**ಸೂಕ್ತ** - 19 **(ಪ್ರತಿತ್ಯಂ ಚಾರುಮಧ್ವರಂ........**

ಮೇಧಾತಿಥಿ ಕಾಣ್ವರು ಅಗ್ನಿ ಮತ್ತು ಮರುದ್ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಮರುದ್ದೇವತೆಗಳು ಸ್ವಸಾಮರ್ಥ್ಯಗಳಿಂದ ಕೂಡಿದವರು; ಯಾರಿಗೂ ದ್ರೋಹಮಾಡದ ಉಪಕಾರಿಗಳು, ಉಗ್ರಶಕ್ತಿಯಿಂದ ಬೀಸಿ, ಮೇಘಕದಲಿಸಿ ಹೆಚ್ಚು ಮಳೆತರುವವರು, ಸಮುದ್ರವನ್ನು ಅಲ್ಲೋಲ ಕಲ್ಲೋಲ ಮಾಡುವವರು.

ಮರುದ್ದೇವತೆಗಳು ಸೂರ್ಯಮಂಡಲದ ಮೇಲೆ ದುಃಖರಹಿತರಾಗಿದ್ದು ಶತ್ರುಹಿಂಸೆ ಮಾಡುವ ಧನವಂತರು.

ಅಗ್ನಿ ಸಂಭಂದ ಮಹತ್ ಯಜ್ಞವನ್ನು ಅತಿಕ್ರಮಿಸಲು, ದೇವ ಮಾನವರಾರಿಂದಲೂ ಸಾಧ್ಯವಿಲ್ಲ. ನ್ಯೂನಾತಿರಿಕ್ತವಿಲ್ಲದ, ಲೋಪ ದೋಷಗಳಿಲ್ಲದ, ಉತ್ತಮ ಯಜ್ಞಕ್ಕೆ ಪ್ರಥಮ ರುಚಿಕರ ಸೋಮಪಾನಕ್ಕೆ ಅಗ್ನಿ ಮತ್ತು ಮರುದ್ದೇವತೆಗಳು ಬರಲಿ.

**(ಅಷ್ಟಕ** - 1 , **ಅಧ್ಯಾಯ** - 2 **ಸೂಕ್ತ** 20 **ರಿಂದ** 32 **ರವರೆಗೆ)**

**ಸೂಕ್ತ** - 20 **(ಅಯಂದೇವಾಯ ಜನ್ಮನೇ.......**

ಋಷಿ ಮೇಧಾತಿಥಿ ಕಾಣ್ವರು ಋಭುದೇವತೆಗಳನ್ನು ಗಾಯತ್ರೀ ಛಂದಸಿನ ಋಕ್‌ನಲ್ಲಿ ಪ್ರಾರ್ಥಿಸುತ್ತಾರೆ.

ಋಭುಗಳು ಮನುಷ್ಯರಾಗಿದ್ದವರು. ಸತತ ಸನ್ಮಾರ್ಗಕರ್ಮಗಳಿಂದ ದೇವತ್ವ ಪಡೆದವರು.

ಇಂದ್ರನಿಗೆ 'ಹರಿ' ಎಂಬ ಎರಡು ಕುದುರೆಗಳನ್ನೂ, ಅಶ್ವಿನೀದೇವತೆಗಳಿಗೆ ಸುಂದರವಾದ ರಥ ಮತ್ತು ಒಳ್ಳೆಯ ಹಸುಗಳನ್ನು, ವೃದ್ಧರಾದ ತಂದೆ ತಾಯಿಗಳಿಗೆ ತಾರುಣ್ಯವನು ತಂದವರು, ತ್ವಷ್ಟ ದೇವತೆಯು ತಯಾರಿಸಿದ ಚಮಸ ಪಾತ್ರೆಯನ್ನು ನಾಲ್ಕಾಗಿ ಮಾಡಿದವರು, ಯಜ್ಞಸಾಧಕಗಳ ನಿರ್ಮಾಣ ಮಾಡಿ ಸಹಾಯ ಮಾಡಿದವರು – ಋಭುದೇವತೆಗಳೇ.

ಯಜ್ಞಕ್ಕೆ ಬೇಕಾಗುವ ಗ್ರಹ ಚಮಸಾದಿಗಳು, ಉತ್ತಮ ಮಧ್ಯಮ ಅಧಮ – ವಿಧದ ಏಳೇಳು ಕರ್ಮಗಳು ರತ್ನಾದಿ ಅನುಗ್ರಹ – ಋಭುಗಳಿಂದಾಗುತ್ತದೆ.

ಋಭುಗಳ ಸ್ತೋತ್ರ ವ್ಯರ್ಥವಾಗದು, ಇಂತಹ ಋಭುಗಳು ಇಂದ್ರ ಮರುತ್ತು ಆದಿತ್ಯ ರೊಡನೆ ಅಮೃತತ್ವದ ಹವಿರ್ಭಾಗಸ್ವೀಕಾರಕ್ಕೆ ಬರಲೆಂದು ಋಷಿಗಳು ಅಪೇಕ್ಷಿಸುತ್ತಾರೆ.

ಸೂಕ್ತ - 21 (ಇಹೇಂದ್ರಾಗ್ನೀ ಉಪಹ್ವಯೇ.......

ಋಷಿ ಮೇಧಾತಿಥಿಃ ಕಾಣ್ವರು ಇಂದ್ರ ಅಗ್ನಿ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರ ಅಗ್ನಿಗಳು ಮಹಾತ್ಮರು, ಸಭಾರಕ್ಷಕರು. ಅಲಂಕಾರ ಸಾಮಗಾನ ಸ್ತುತಿಗಳಿಂದ ಋಷಿ ಇವರನ್ನು ಯಜ್ಞಕ್ಕೆ ಆಹ್ವಾನಿಸುತ್ತಾ, ಸೋಮ ಅರ್ಪಿಸುತ್ತಾನೆ. ಋಷಿಯು ಕರ್ಮಫಲ ಪ್ರಶಂಸೆ, ಸುಖವನ್ನು ಅಪೇಕ್ಷಿಸುತ್ತಾನೆ.

ಶತ್ರುಭಯಂಕರ ಇಂದ್ರಾಗ್ನಿಗಳು ನರಭಕ್ಷಕ ರಾಕ್ಷಸರನ್ನು ನಿರ್ವಂಶ ಮಾಡಲಿ. ರಾಕ್ಷಸರು ಕ್ರೌರ್ಯಬಿಟ್ಟು ಸನ್ಮಾರ್ಗದಲ್ಲಿ ಇರುವಂತೆ ಮಾಡಲಿ.

ಸೂಕ್ತ - 22 ( ಪ್ರಾತರ್ಯುಜಾವಿ........

ಋಷಿಮೇದಾತಿಥಿಃ ಕಾಣ್ವರು ಅಶ್ವಿನೀ ಸವಿತಾ ದೇವಸ್ತ್ರೀ ಇಂದ್ರಾಣೀ ವರುಣಾನೀ ಅಗ್ನಾಯೀ ದ್ಯಾವಾ ಪೃಥಿವೀ ವಿಷ್ಣು ಅಗ್ನಿ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳು ಉತ್ತಮ ರಥವುಳ್ಳ ಸಮರ್ಥರಥಿಕರು. ಪ್ರಿಯವಾದ ಸತ್ಯ ಮಾತಿನಿಂದ ವರಪ್ರದಾನ ಮಾಡುತ್ತಾರೆ.

ಸವಿತೃದೇವ ನೀರನ್ನು ಶೋಷಿಸುವ ಹಾಗೂ ಪ್ರಕಾಶಮಾನ ಯಜ್ಞಕರ್ತರ ಯೋಗ್ಯತಾನು- ಸಾರ ಕೈಯಲ್ಲಿ ಹಿಡಿದಿರುವ ಹಿರಣ್ಯ ಧನಾದಿಗಳನ್ನು ಹಂಚುವನು.

ದೇವತಾ ಸ್ತ್ರೀಯರು, ಮನುಷ್ಯರನ್ನು ರಕ್ಷಿಸುವ ಪಕ್ಷದವರು.

ದೇವಲೋಕ ಭೂಲೋಕ ದೇವತೆಗಳು, ಭೂಲೋಕ ಜಲವನ್ನು, ಸತ್ಕರ್ಮಫಲ ಪೋಷಕ ದ್ರವ್ಯವಾಗಿ ಸಂಯೋಜಿಸುವವರು.

ಪೃಥ್ವೀದೇವತೆಗಳು, ವಿಸ್ತಾರ ಆಶ್ರಯವನ್ನು ಕಂಟಕರಹಿತವಾಗಿ ಕೊಡುವವರು.

ವಿಷ್ಣುವು ಇಂದ್ರನ ಮಿತ್ರ. ವಿಷ್ಣುವನ್ನು ಹಿಂಸಿಸಲು ಯಾರಿಗೂ ಸಾಧ್ಯವಿಲ್ಲ. ಯಜಮಾನನಿಗೆ ಅಗ್ನಿಹೋತ್ರಾದಿ ಕರ್ಮ ಮಾಡಲು ಸಾಧ್ಯವಾಗಿರುವುದು, ವಿಷ್ಣುಮಹಿಮೆಯಿಂದಲೇ. ಪ್ರಶಂಸಿತ ಪರಮಪದ – ಉತ್ಕೃಷ್ಟವಾದ ಸ್ವರೂಪ – ನೋಡಲು ಸಾಧ್ಯವಾಗಿರುವುದೂ ಅವನ ಮಹಿಮೆಯಿಂದಲೇ. ಧರ್ಮಪಾಲನೆಗಾಗಿ ವಿಷ್ಣುವು ಜಗತ್ತನ್ನೇ ತನ್ನ ಪಾದದಿಂದ ಮುಚ್ಚಿದನು.

ಅಧ್ವರ್ಯುವು ಅಶ್ವಿನಿದೇವತೆಗಳನ್ನು ಯಜ್ಞಕ್ಕೆಕರೆತರಲಿ. ಋತ್ವಿಜಮಿತ್ರರು ಸವಿತೃವನ್ನು ಸ್ತುತಿಸಲಿ. ಭಾರತಿವಾಗ್ದೇವಿ ಆದಿ ದೇವಪತ್ನಿಯರುಗಳನ್ನೂ ಹಾಗೂ ತ್ವಷ್ಟನನ್ನು ಅಗ್ನಿಯು ಕರೆತರಲಿ. ದೇವತೆಗಳೆಲ್ಲಾ ಸೋಮಸ್ವೀಕರಿಸಿ ತೃಪ್ತಿಗೊಳ್ಳಲಿ.

ಆಗಮಿತ ದೇವತೆಗಳು ಯಜಮಾನನಿಗೆ ಕಂಟಕರಹಿತ ಆಶ್ರಯ, ರಕ್ಷಣೆ, ಪೋಷಕ ದ್ರವ್ಯಗಳು, ಹಿರಣ್ಯಾದಿ ದ್ರವ್ಯ, ಹೆಚ್ಚಾದ ಸುಖ, ವಿಶೇಷವಾಗಿ ಶುಭ ಉಂಟುಮಾಡಲಿ.

**ಸೂಕ್ತ - 23 (ತೀವ್ರಾಸೋಮಾಸ.......**

ಋಷಿಮೇಧಾತಿಥಿಃ ಕಾಣ್ವರು ವಾಯು ಮರುತ್ವಾನ್ ಇಂದ್ರ ಮಿತ್ರ ವರುಣ ವಿಶ್ವೇದೇವ ಪೂಷ ಆಪ ಅಗ್ನಿ - ದೇವತೆಗಳನ್ನು ಗಾಯತ್ರೀ ಪುರ ಉಷ್ಣಿಕ್ ಅನುಷ್ಟುಪ, ಪ್ರತಿಷ್ಠಾ ಛಂದಸ್ಸಿನ ಋಕ್‌ಗಳಲ್ಲಿ ಧ್ಯಾನಿಸುತ್ತಾರೆ.

ಇಂದ್ರ ವಾಯುಗಳು ಸಹಸ್ರನಯನಯುಕ್ತರು, ಬುದ್ಧಿವಂತ ಬುದ್ಧಿಪ್ರೇರಕರು. ಮನೋವೇಗ ಉಳ್ಳ ಕರ್ಮಪ್ರೇರಕರು.

ಮಿತ್ರಾವರುಣರು, ಶುದ್ಧ ಬಲಯುಕ್ತರು. ಅನುಗ್ರಹದಾತರು. ಕರ್ಮಫಲವೃದ್ಧಿಸುವ ಪ್ರಶಸ್ತಿ ಪ್ರಕಾಶದ ಒಡೆಯರು.

ಪೂಷದೇವ, ಸ್ವರ್ಗದಿಂದ ಸೋಮತರುವವ, ಅತಿರಹಸ್ಯ ಪ್ರದೇಶದಲ್ಲಿರುವವ, ಆರು ಋತುಗಳನ್ನು ಕ್ರಮವಾಗಿ ನಡೆಸುವವ, ವಿಚಿತ್ರ ದರ್ಭೆಯುಕ್ತ, ಗಮನಶೀಲ, ಧನದಾತ.

ವಿಶ್ವೇದೇವತೆಗಳು ಮಹಾಪರಾಕ್ರಮಿಗಳು. ವರ್ಣಯುಕ್ತ ಭೂಮಿ ಪುತ್ರರು. ಗಂಭೀರ ಧ್ವನಿಯುವರು ಮಿಂಚಿನ ಪ್ರಕಾಶದ ಮೇಲ್‌ಭಾಗದಲ್ಲಿರುವವರು.

ಉದಕ ದೇವತೆಗಳು, ಅಮೃತ ಔಷದ ಸಾಮರ್ಥ್ಯದ ಮಾತೃಸ್ವರೂಪರು. ಅಜ್ಞಾನದಿಂದ ಮಾಡಿದ ಪಾಪಗಳನ್ನೂ, ಆಡಿದ ಕೆಟ್ಟಮಾತಗಳನ್ನೂ, ಸುಳ್ಳುಮಾತುಗಳನ್ನೂ ಮಾಡಿದ ದ್ರೋಹಗಳನ್ನು - ಇಂತಹ ಎಲ್ಲಾ ದ್ರೋಹಗಳನ್ನೂ, ಪ್ರವಾಹದಂತೆ ಕೊಚ್ಚಿಕೊಂಡು ಹೋಗುವಂತೆ ಮಾಡುವರು. ಸ್ನಾನಕ್ಕಾಗಿ ನೀರಿಗೆ ಇಳಿದಾಗ ನೀರಿನ ಸಾರವನ್ನೆಲ್ಲಾ ಶರೀರಕ್ಕೆ ಸೇರಿಸುವವರು. ಸೂರ್ಯನ ಸಮೀಪದಲ್ಲಿರುವವರು.

ಸಾರಯುತ ಸೋಮರಸವನ್ನು, ಮೊಸರು ಮುಂತಾದ ಅಶಿರ ದ್ರವ್ಯಗಳೊಂದಿಗೆ ಉತ್ತಮ ಸ್ಥಳದಲ್ಲಿ ಸಿದ್ಧಪಡಿಸಿ ಇಡಲಾಗಿದೆ. ಸೋಮಪಾನಕ್ಕೆ ದೇವತೆಗಳೆಲ್ಲಾ ಆಗಮಿಸಲಿ. ಸೋಮಪಾನಾ ನಂತರ ಯಜಮಾನನ್ನು ಅನುಗ್ರಹಿಸಲಿ.

ಯಜಮಾನನ ಪಾಪನಾಶ ಮಾಡಲಿ, ಅವನನ್ನು ಜ್ಞಾನ ಯುಕ್ತನನ್ನಾಗಿ ಮಾಡಲಿ, ಅವನ ಶತ್ರುನಾಶಮಾಡಲಿ, ರಕ್ಷಣೆ ಕೊಟ್ಟು ಸುಖ ಉಂಟುಮಾಡಲೆಂದು ದೇವತೆಗಳನ್ನು ಪ್ರಾರ್ಥಿಸುತ್ತಾನೆ.

ಉದಕದಲ್ಲೇ ಅಡಗಿರುವ ಅಗ್ನಿದೇವ, ಅವಭೃತ ಸ್ನಾನಾನಂತರ ತೇಜಸ್ಸು ವರ್ಚಸ್ಸು ಧೀರ್ಘಾಯಸ್ಸು ಪುತ್ರಸಂತಾನವನ್ನು, ಯಜ್ಞವನ್ನು ತಿಳಿದ ಯಜಮಾನನಿಗೆ ಕೊಡಲಿ.

**ಸೂಕ್ತ - 24 (ಕಸ್ಯನೂನಂ ಕಥಮಸ್ಯಾಮೃತಾನಾಂ......**

(ಶುನಃಶೇಫನು ವಿಶ್ವಾಮಿತ್ರ ಋಷಿಯ ಕೃತ್ರಿಮಪುತ್ರ. ದೇವರಾತನೆಂದು ಪ್ರಸಿದ್ಧನಾದವ. ಹರಿಶ್ಚಂದ್ರರಾಜನ ಯಜ್ಞದಲ್ಲಿ, ಯಜ್ಞಪಶುವಾಗಿ, ಯೂಪಸ್ತಂಭಕ್ಕೆ ಕಟ್ಟಲ್ಪಟ್ಟು ದಿಕ್ಕುಕಾಣದ ಮರಣವನ್ನು ಎದುರುನೋಡುತ್ತಿರುವ ಸನ್ನಿವೇಶ)

ಶುನಃಶೇಫ ಆಂಗೀರಸ ಋಷಿ, ಪ್ರಜಾಪತಿ ಅಗ್ನಿ ಸವಿತಾ ಭಗ ವರುಣ ದೇವತೆಗಳನ್ನು, ತ್ರಿಷ್ಟುಪ್ ಮತ್ತು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಶುನಃಶೇಫನನ್ನು, ತಲೆ ಕಾಲು ಮತ್ತು ಮಧ್ಯ ಭಾಗಗಳಲ್ಲಿ, ಮೂರು ಪಾದಗಳ ಯೂಪಸ್ತಂಭಕ್ಕೆ ಬಂಧಿಸಲಾಗಿದೆ. ಯಾವದೇವತೆಯಿಂದ ತನ್ನ ಬಂಧವಿಮೋಚನೆ ಆಗಬಹುದೆಂದು, ಯಜ್ಞಾಹುತಿಯಾಗಲಿರುವ ಶುನಃಶೇಫನು, ತಂದೆ ತಾಯಿಯರನ್ನು ನೋಡಬೇಕೆಂದು ಚಿಂತಿಸುತ್ತಾನೆ.

'ಅಗ್ನಿದೇವನೇ ಪ್ರಮುಖ' ಎಂದು ಪ್ರಜಾಪತಿಯಿಂದ ತಿಳಿದು ಅಗ್ನಿಯನ್ನು ಶುನಃಶೇಫನು ಸ್ತುತಿಸುತ್ತಾನೆ. ಪುನಃ ಭೂಮಿಗೆ ಬಂದು, ತಂದೆತಾಯಿಯರನ್ನು ನೋಡಲಾಗುವಂತೆ ಅನುಗ್ರಹ ಬೇಡುತ್ತಾನೆ.

ಊರ್ದ್ವಮೂಲ ಅಧೋಮುಖ ತೇಜೋರಾಶಿ ಕಿರಣಗಳು, ಪ್ರಾಣಗಳನ್ನು ನಮ್ಮ ಶರೀರಗಳಲ್ಲಿ ಸ್ಥಾಪಿಸಿವೆ. ಶುನಃಶೇಫನು ಪ್ರಾಣದಾನ ಆಯಸ್ಸನ್ನು ಯಾಚಿಸುತ್ತಾನೆ.

ಯಜಮಾನನೂ ಆಯಸ್ಸು ಹೆಚ್ಚಲೆಂದು ಪ್ರಾರ್ಥಿಸುತ್ತಾನೆ.

ಅಪಹೃತವಾದ, ನಷ್ಟವಾದ ಧನ ನಿಂದಾರ್ಹ; ಆದರೆ ದ್ವೇಷಾರ್ಹವಲ್ಲ.! ಸವಿತ ಹಾಗೂ ಭಗರು, ಧನದ ಉತ್ಕರ್ಷಣೆ ಹಾಗೂ ರಕ್ಷಣೆ ಮಾಡುವವರು.

ವರುಣನು ಮಹಾಪರಾಕ್ರಮಿ, ಹಾರುವಹಕ್ಕಿ, ಬೀಸುವಗಾಳಿ, ಹರಿವನೀರು – ಯಾರೂ ವರುಣನಿಗೆ ಎದುರಲ್ಲ. ನಿರಾಧಾರ ಆಕಾಶದಲ್ಲಿ ತೇಜಸ್ವಿಸೂರ್ಯನ ಚಲನೆಗೆ ಉತ್ತರಾಯಣ – ದಕ್ಷಿಣಾಯಣ ಮಾರ್ಗ ಕಲ್ಪಿಸಿದವ ವರುಣನೇ. ಚಂದ್ರನನ್ನು ರಾತ್ರಿ ವಿಶೇಷಪ್ರಕಾಶದಿಂದ ಕಾಣುವಂತೆ ಹಾಗೂ ಹಗಲಿನಲ್ಲಿ ಮರೆಯಾಗುವಂತೆ ಮಾಡಿದ. ಸ್ಥಿರ ಅನುಗ್ರಹಬುದ್ಧಿಯಿಂದ ಮಾನವರ ಪಾಪನಾಶಮಾಡಿ, ಅನಿಷ್ಟಕಾರಕ ಪಾಪದೇವತೆಗಳನ್ನು ದೂರಮಾಡುತ್ತಾನೆ – ವರುಣದೇವ.

ಅದಿತಿಪುತ್ರ ವರುಣನ ಕ್ರೋಧಶಮನಕ್ಕೆ ಯಜ್ಞಹೋಮ ನಮಸ್ಕಾರ ಸ್ತೋತ್ರಗಳನ್ನು ಹಗಲು ರಾತ್ರಿಯೂ ಅರ್ಪಿಸೋಣ. ಧನದ ಉತ್ಕರ್ಷಣೆ, ರಕ್ಷಣೆ ಹಾಗೂ ಅನುಭವಿಸಲು ದೀರ್ಘಾಯಸ್ಸು ಪ್ರಾರ್ಥಿಸೋಣ – ಎಂದು ಯಜಮಾನರ ಅಪೇಕ್ಷೆ.

**ಸೂಕ್ತ** - 25 (**ಯಚ್ಚಿದ್ಧಿತೇ ವಿಶೋಯಥಾ......**

ಶುನಶೇಫ ಅಜೀಗರ್ತಿ ಋಷಿಗಳು ವರುಣದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ವರುಣ ದೇವನು ಆಕಾಶ ಮತ್ತು ಸಮುದ್ರದೊಳಗಿನ ಮಾರ್ಗಗಳನ್ನೆಲ್ಲಾ ಬಲ್ಲವ. ನವಸಂತತಿಗಳ ಪ್ರಭು, ದೇವತೆಗಳ ಹಾಗೂ ಜನಿಸಿದ ಪ್ರಜೆಗಳೆಲ್ಲರ ಸ್ವರೂಪ ಹಾಗೂ ಭವಿಷ್ಯ ತಿಳಿದವ. ಹಿಂದೆನಡೆದ ಮುಂದೆನಡೆವ ಆಶ್ಚರ್ಯಕರ ವ್ಯವಹಾರಗಳನ್ನು ಪ್ರಾಜ್ಞಮುನಿಗಳು ತಿಳಿಯುವುದು ವರುಣನಿಂದಲೇ. ಅಜ್ಞಾನಗಳಿಂದ ಕರ್ಮಗಳಲ್ಲಿ ಆಗಬಹುದಾದ ನ್ಯೂನತೆಗಳನ್ನು ಕರ್ಮಸಾಂಗತವಾಗುವಂತೆ ಮಾಡುತ್ತಾನೆ. ಜೀವನ

ಪ್ರಾಪ್ತಿಗಾಗಿಯೇ ಅಲೆದಾಡುತ್ತಿರುವ ಸಮಸ್ತ ಮಾನವರಿಗೂ ಅನ್ನವಿತರಿಸಿ ತೃಪ್ತಿತಂದು ಸನ್ಮಾರ್ಗದಲ್ಲಿ ನಡೆಸುತ್ತಾ ಆಯುಸ್ಸನ್ನು ವರ್ಧಿಸುವ ಮೇಧಾವಿ ಜಗತ್ಪ್ರಕಾಶಕ - ವರುಣನೇ.

ಯಜಮಾನನು ಜೀವಿಸುವ ಉದ್ದೇಶ್ಯಕ್ಕಾಗಿಯೇ ಅರ್ಪಿಸಿದ ಹವಿಸ್ಸನ್ನು ಮಿತ್ರಾವರುಣರು ತೃಪ್ತಿಯಿಂದ ಸ್ವೀಕರಿಸಿ ಸಂತೋಷ ಮತ್ತು ಒಳ್ಳೆಯದನ್ನೇ ಮಾಡುತ್ತಾರೆ.

ಪಾಪಿಗಳು, ಪ್ರಾಣಹಿಂಸಕರು, ಹಿಂಸಾತ್ಮಕಶತ್ರುಗಳೂ, ವರುಣನಿಗೆ ಹೆದರುತ್ತಾರೆ. ವರುಣನನ್ನು ಅನಾದರಿಸುವವರು ನಾಶಗೊಳ್ಳುತ್ತಾರೆ.

ವರುಣನು ಯಜಮಾನನಿಗೆ ಹಾಗೂ ಇತರರಿಗೆ ಸೌಭಾಗ್ಯ ರಕ್ಷಣೆ ಸುಖ ಭರವಸೆ ಕರುಣಿಸಲು ಪ್ರಾರ್ಥಿಸುತ್ತಾನೆ.

ಬಂಧನದಿಂದ ಬಿಡುಗಡೆ ಆಗಲೆಂದು ಶುನಃಶೇಫರ ಪ್ರಾರ್ಥನೆ.

**ಸೂಕ್ತ - 26 ( ವಸಿಷ್ವಾಹಿ ಮಿಯೇಧ್ಯ.....**

ಶುನಃಶ್ಯೇಫ ಅಜೀಗರ್ತಿ ಋಷಿಗಳು ಅಗ್ನಿದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಕಲ್ಯಾಣಕ್ಕಾಗಿ ಋತ್ವಿಜರು ಇಂದ್ರವರುಣರಿಗೆ ಅರ್ಪಿಸುವ ಹವಿಸ್ಸು ಅಗ್ನಿಯ ಮೂಲಕವೇ ಅರ್ಪಿತವಾಗುವುದು.

ಯಜ್ಞಸಂಪಾದಕನಾಗಿ ಯಜ್ಞವೃದ್ಧಿಗೊಳಿಸಲು ಸಮಸ್ತ ಅಗ್ನಿಗಳೊಡನೆ ಯಜ್ಞದಲ್ಲಿ ಆಸೀನನಾಗಲಿ ಹಾಗೂ ದೇವತೆಗಳ ಯಜಮಾನನ ಸ್ನೇಹ ಹೊಗಳಿಕೆಗೆ ಪಾತ್ರನಾಗಲಿ ಎಂದು ಅಗ್ನಿಯಲ್ಲಿ ಋಷಿಯು ಪ್ರಾರ್ಥಿಸುತ್ತಾನೆ.

ಅನ್ನ ಆಹಾರ ಅಭೀಷ್ಟ ಸೌಖ್ಯಗಳನ್ನು ಅಗ್ನಿಯು ಯಜಮಾನನಿಗೆ ಕೊಡಲಿ.

**ಸೂಕ್ತ - 27 ( ಅಶ್ವಂನತ್ವಾ ವಾರವಂತಂ.....**

ಶುನಃಶೇಫ ಅಜೀಗರ್ತಿ ಋಷಿಗಳು ಅಗ್ನಿ ಮತ್ತು ವಿಶ್ವೇದೇವತೆಗಳನ್ನು ಗಾಯತ್ರೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಗ್ನಿಯು ಅತಿಶ್ರೇಷ್ಠಗುಣಗಳಿಂದ ದೊಡ್ಡವ, ಪ್ರಕಾಶಮಾನ ಕಿರಣಗಳಿಂದ ಇರುವ ಅಗ್ನಿಯು, ಕೇಡು ಬಯಸುವವರನ್ನು ಹಿಂಸಿಸಿ, ಶತ್ರುಗಳಿಂದ ರಕ್ಷಿಸುತ್ತಾನೆ. ಅನ್ನಾದಿ ಆಹಾರ ಶಕ್ತಿ ಒದಗಿಸುವ ಅಗ್ನಿಯನ್ನು, ಸೋಲಿಸುವ ಶತ್ರುವೇ ಇಲ್ಲ.

ಇಂತಹ ಅಗ್ನಿಯನ್ನು ಯಜಮಾನನು, ದೇವಯಜ್ಞಕ್ಕೆ ಆಹ್ವಾನಿಸುತ್ತಾನೆ. ಅಗ್ನಿಯು ನೂತನ ಸ್ತೋತ್ರಗಳನ್ನು ಕೇಳಿ ಪ್ರಶಂಸಿಸಲಿ. ಸ್ವರ್ಗಲೋಕ ಹಾಗೂ ಮಧ್ಯಮಲೋಕದ ಅನ್ನವನ್ನೂ, ಭೂಲೋಕದ ಐಶ್ವರ್ಯವನ್ನೂ, ಯುದ್ಧದಲ್ಲಿ ಗೆಲುವನ್ನೂ, ಅತ್ಯಧಿಕ ಫಲವನ್ನೂ ಅಗ್ನಿಯು, ಯಜಮಾನರಿಗೆ ತರಲಿ.

ಈ ಪ್ರಾರ್ಥನೆಗೆ ಮೆಚ್ಚಿ ಅಗ್ನಿಯು, ವಿಶ್ವೇದೇವತೆಗಳನ್ನು ಪ್ರಾರ್ಥಿಸುವಂತೆ

ಶುನಃಶೇಫನಿಗೆ ಆದೇಶಿಸಿದನು. ಶುನಃಶೇಫನು ಅಖಂಡ ಓರಿಕಿರಿಯ ದೇವತೆಗಳನ್ನೆಲ್ಲಾ ಪ್ರಾರ್ಥಿಸಿ ವಂದಿಸಿದನು.

**ಸೂಕ್ತ** - 28 ( **ಯತ್ರಗ್ರಾವಾ ಪೃಥುಬುಧ್ನ** ........

ಶುನಶೇಫ ಅಜೀಗರ್ತಿ ಋಷಿ ಇಂದ್ರ, ಉಲೂ, ಖಲ, ಮುಸಲ, ಹರಿಶ್ಚಂದ್ರ, ಅಧಿಷವಣಚರ್ಮ, ಸೋಮ ದೇವತೆಗಳನ್ನು ಅನುಷ್ಟುಪ ಮತ್ತು ಗಾಯತ್ರೀ ಛಂದಸ್ಸಿನ ಋಕ್‌ಗಳ್ಲಿ ಸ್ತುತಿಸುತ್ತಾರೆ.

ಯಜ್ಞಶಾಲೆಯಲ್ಲಿ ಯಜಮಾನನ ಹೆಂಡತಿ ಸಡಗರದಿಂದ ಓಡಾಡುತ್ತಿರುವ, ಒರಳಿಗೆ ಕಡಗೋಲುಕಟ್ಟಿ ಸೋಮರಸ ಹಿಂಡಿ ಸಿದ್ಧಪಡಿಸಿರುವ ಅಗಲವಾದ ಕಲ್ಲು ಗುಂಡುಗಳು, ಒರಳು ವಿಸ್ತಾರವಾದ ತಟ್ಟೆಗಳು, ಸಿದ್ಧವಾಗಿರುವ ಸನ್ನಿವೇಶಗಳೆಲ್ಲಾ ಇಂದ್ರನಿಗಾಗಿಯೇ.

ಉಲೂಖಲ ಮುಸಲಗಳ ಸದ್ದು - ಮರದಒರಳು ಒನಕೆಗಳಿಂದಾದದ್ದು: ಪರಸ್ಪರ ವಿನೋದವಾಗಿ ಆಟವಾಡುವಂತಿದ್ದು, ಕುದುರೆಯು ಕಡಲೆತಿನ್ನುವಾಗಿನ ಸದ್ದಿನಂತಿರುತ್ತದೆ.

ಆಗ ಉಂಟಾದ ಸೋಮರಸವನ್ನು ಬಟ್ಟೆಯಲ್ಲಿ ಸೋಸಿ, ಎರಡು ಸೌಟುಗಳಲ್ಲಿ ತುಂಬಿ ಗೋಚರ್ಮದ ಮೇಲೆ ಇಡಲ್ಪಡಲಿ.

**ಸೂಕ್ತ** - 29 ( **ಯಚ್ಛಿದ್ಧಿ ಸತ್ಯಸೋಮಪಾ**.....

ಶುನಃಶೇಪ ಅಜೀಗರ್ತಿ ಋಷಿ ಇಂದ್ರದೇವನನ್ನು ಪಂಕ್ತಿ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನು, ಅನುಗ್ರಹ ಬುದ್ಧಿಯ ಪ್ರಭಾವಶಾಲಿ ಸತ್ಯವಾದಿ. ಇವನ ದಯೆ ಯಜಮಾನನಿಗಾಗಲಿ.

ಕೊಲ್ಲಲು ಬಂದ ಪ್ರತ್ಯಕ್ಷ ಶತ್ರುಗಳು, ಪರಸ್ಪರನೋಡಿಕೊಂಡು, ಸಿದ್ರೆ ಮಾಡಲಿ. ಪ್ರತ್ಯಕ್ಷ ಶತ್ರುಗಳು ಯಜಮಾನನನ್ನು ಗುರಿತಿಸದಂತಾಗಲಿ. ಮಿತ್ರರು ಗುರುತಿಸಲಿ. ಶತ್ರುವು ಆಪತ್ತುತಿಯ ಕತ್ತೆಯ ಸಮಾನರಿರಬಹುದು ಅಥವಾ ದೂಷಿಸಿ ದ್ವೇಷಿಸುವ ಓಂಸಕರಿರಬಹುದು - ಅವರು ನಾಶವಾಗಲಿ. ಪ್ರತಿಕೂಲಗಾಳಿಯೂ ಕಾಡಿನಿಂದಾಚೆಗೆ ಬೀಸಲಿ.

ಅನರ್ಹನಾಗಿದ್ದವನನ್ನೂ ಅರ್ಹನನ್ನಾಗಿ ಮಾಡಿ, ಧನ ಪಶು ಅಶ್ವ ಐಶ್ವರ್ಯಾದಿ ಮಂಗಳಗಳನ್ನು ಸಹಸ್ರ ಸಂಖ್ಯೆಯಲ್ಲಿ ಇಂದ್ರನು ಕೊಡಲಿ.

**ಸೂಕ್ತ - 30 ( ಆವ ಇಂದ್ರಂ.....**

ಋಷಿ ಶುನಃಶೇಪ ಆಜೀಗರ್ತಿಗಳು ಇಂದ್ರಾ ಉಷಾ ಮತ್ತು ಅಶ್ವಿನೀ ದೇವತೆಗಳನ್ನು ಗಾಯತ್ರೀ, ಪಾದನಿಚೃತ್, ಗಾಯತ್ರೀ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಎಲ್ಲರಿಂದಲೂ ಆಹ್ವಾನಿಸಲ್ಪಡುವ ಪ್ರೀತಿಯ ಇಂದ್ರನು, ಪ್ರತಿಯುದ್ಧ ಹಾಗೂ ಕರ್ಮಾರಂಭದಲ್ಲಿ, ಯಜಮಾನನ ಸಹಾಯ ರಕ್ಷಣೆಗೆ ಬರುತ್ತಾನೆ.

ಈ ಓಂದೆ ತನ್ನ ತಂದೆಯ ಯಜ್ಞಕ್ಕೆ ಬಂದಿದ್ದಂತೆ, ತಾನು ಮಾಡುವ ಯಜ್ಞಕ್ಕೂ ಬರಲು, ಋಷಿಯು ಇಂದ್ರಾದಿಗಳನ್ನು ಆಹ್ವಾನಿಸುತ್ತಾನೆ. ಸಮುದ್ರದಂತಹ ಇಂದ್ರನ ಹೊಟ್ಟೆಗೆ, ಸಾಕಾಗುವಷ್ಟು ಸೋಮದ ಭಾವಿಯನ್ನೇ ಸಿದ್ಧಮಾಡಿದ್ದಾನೆ. ಇಂದ್ರ ಹಾಗೂ ಅನುಗ್ರಹೀತ ದೇವತೆಗಳೂ ಪ್ರಾರ್ಥಿಸಿದವರಿಗೆ ಇಷ್ಟಾರ್ಥ ಸುವರ್ಣ ಹಾಲು ತುಪ್ಪ ಗೋಧನ ಕೊಡುತ್ತಾರೆ.

ಅಂತರಿಕ್ಷಗಾಮಿಗಳಾದ ಅಶ್ವಿನೀ ದೇವತೆಗಳ ರಥದ ಒಂದು ಚಕ್ರ ಪರ್ವತದ ಮೇಲೆ ಸ್ಥಿರವಾಗಿದ್ದು ಮತ್ತೊಂದು ದ್ಯುಲ್ಲೋಕದ ಸುತ್ತಲೂ ಭ್ರಮಿಸುತ್ತದೆ. ಈ ದೇವತೆಗಳ ಅನುಗ್ರಹದಿಂದ ಸುವರ್ಣ ಗೋವು ವೃಷ್ಟಾನ್ನ ಉಂಟಾಗುತ್ತದೆ.

ದ್ಯುಲ್ಲೋಕಾದಿ ದೇವತೆಯ ಪುತ್ರಿ ಮರಣರಹಿತಳಾದ ಉಷೆಯು ಸ್ತುತಿಪ್ರಿಯಳು. ಉಷೆಯ ಮಹಿಮೆಯನ್ನು, ಹತ್ತಿರದಿಂದಾಗಲೀ, ದೂರದಿಂದಾಗಲೀ, ಸ್ವಪ್ರಕಾಶದಿಂದಾಗಲೀ, ತಿಳಿಯಲು ಸಾಧ್ಯವಿಲ್ಲ.

ಇಂದ್ರ ಉಷಾ ಅಶ್ವಿನೀದೇವತೆಗಳು ಯಜ್ಞಕ್ಕೆ ಆಗಮಿಸಿ ಸೋಮವನ್ನು ಸ್ವೀಕರಿಸಲಿ. ವೃಷ್ಟಾನ್ನ ಧನೈಶ್ವರ್ಯ ರಕ್ಷಣೆಗಳನ್ನು ಕೊಡಲಿ – ಎಂದು ಋಷಿಯ ಪ್ರಾರ್ಥನೆ.

**ಸೂಕ್ತ - 31 ( ತ್ವಮಗ್ನೇ ಪ್ರಥಮೋ.........**

ಹಿರಣ್ಯಸ್ತೂಪ ಅಂಗೀರಸ ಋಷಿ ಅಗ್ನಿದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ದೇವಾತ್ಮ ಅಗ್ನಿಯು, ಅಂಗೀರೋನಾಮ ಋಷಿಗಳಲ್ಲಿ ಮೊದಲಿಗ. ವೇಗರೂಪ ಕಡೆಯುವಿಕೆಯಿಂದ ಹುಟ್ಟಿದ ಅಗ್ನಿಗೆ, ಅರಣೀದೇವತೆಗಳಿಬ್ಬರೂ ತಾಯಂದಿರು. ಅಗ್ನಿಯಿಂದ ಮರುದ್ದೇವತೆಗಳು ಹುಟ್ಟಿದರು.ವಾಯುವಿಗೆ ಅಗ್ನಿಯೇ ಪ್ರಧಾನ. ಅಗ್ನಿಯ ಮಹಿಮೆಯಿಂದ ದ್ಯಾವಾಪೃಥಿವಿಗಳು ಕಂಪಿಸುತ್ತವೆ.

ಅಗ್ನಿಯು, ಯಜ್ಞಭೂಮಿಯ ಪೂರ್ವದಲ್ಲಿ ಆಹವನೀಯರೂಪದಲ್ಲಿ, ಪಶ್ಚಿಮದಲ್ಲಿ ಗಾರ್ಹಪತ್ಯರೂಪದಲ್ಲಿದ್ದು, ಮಾನವನಾದ ನಹುಷನಿಗೆ, ಸೇನಾಧಿಪತಿಯಾಗಿದ್ದಾನೆ. ಇಳಾದೇವಿಯೂ ನಹುಷನಿಗೆ ಧರ್ಮೋಪದೇಶಕರ್ತೆಯಾಗಿದ್ದಾಳೆ.

ವಷಟ್ಕಾರ ಸಹಿತ ಆಹುತಿ ಅರ್ಪಿಸುವ ಯಜಮಾನನ ಮನಸ್ಥಿತಿಗೆ, ಅಗ್ನಿಯೇಕಾರಣ.

ಅಗ್ನಿಯು, ಅಸನ್ಮಾರ್ಗಿಗಳನ್ನು ಸನ್ಮಾರ್ಗಕ್ಕೆ ಸೇರಿಸುತ್ತಾನೆ. ಶೌರ್ಯರಹಿತ ಅಲ್ಪರಿಂದಲೂ ಶೂರರನ್ನು ಸೋಲಿಸುತ್ತಾನೆ, ಅಧ್ವರ್ಯುವಿಗೆ ಮಾರ್ಗದರ್ಶನ ಶಿಕ್ಷಣ

ಕೊಡುತ್ತಾನೆ. ಶೂರರಿಗೆ ಧನಪ್ರಾಪ್ತಿಯಾಗುವಂತೆ ಮಾಡುತ್ತಾನೆ, ಯಜಮಾನ ಹಾಗೂ ಅವನ ಸಹಾಯಕರಿಗೆ ವೃದ್ಧಿಉಂಟುಮಾಡುತ್ತಾನೆ.

ಯಜಮಾನನಿಗೆ ಅಗ್ನಿಯು ಯುದ್ಧಕವಚದಂತೆ ಇದ್ದು, ಅನ್ನದಿಂದ ಅತಿಥಿಗಳಿಗೆ ಜೀವ, ಯಜಮಾನನಿಗೆ ಶ್ರೇಷ್ಠಧನ, ಸ್ವರ್ಗಸುಖ, ಯಶೋಯುಕ್ತ ಮಕ್ಕಳು, ಪಶುಗಳನ್ನೂ ಕೊಡುತ್ತಾನೆ.

ಯಜಮಾನರನ್ನು ಮರಣರಹಿತರನ್ನಾಗಿ ಮಾಡುವ ಅಗ್ನಿಯು, ಅವರುಗಳ ಮಕ್ಕಳಿಂದ ಯಜ್ಞಕರ್ಮ ಬೆಳಸುವಂತೆ ಮಾಡುತ್ತಾನೆ.

ಅಗ್ನಿಯು ಋಷಿಯ ಪೂರ್ವಜರಾದ ಅಂಗೀರಸ, ಯಯಾತಿಗಳ ಯಜ್ಞಕ್ಕೆ ಹೋಗಿ ಅನುಗ್ರಹಿಸಿದಂತೆ ಈ ಋಷಿಯನ್ನೂ ಅವನ ಮಂತ್ರ ಸ್ತೋತ್ರ ಹವಿಸ್ಸುಗಳ ಬಗ್ಗೆ ಮೆಚ್ಚಿ ಅನುಗ್ರಹಿಸಲಿ. ವ್ರತಲೋಪ, ಅಸನ್ಮಾರ್ಗಗಳನ್ನು ಕ್ಷಮಿಸಲಿ. ಸ್ತೋತ್ರಮಾಡುವವರಿಗೆ, ಶಕ್ತಿ ಹಾಗೂ ಜ್ಞಾನಕ್ಕೆ ತಕ್ಕಂತೆ ಶ್ರೇಯಸ್ಸನ್ನು ಅನುಗ್ರಹಿಸಲಿ. ಯಜ್ಞಾನುಷ್ಠಾನಕ್ಕೆ ಸದ್ಬುದ್ಧಿ ಕೊಡಲಿ.

**ಸೂಕ್ತ- 32 ( ಇಂದ್ರಸ್ಯನುವೀರ್ಯಾಣಿ'..........**

ಹಿರಣ್ಯಸ್ತೂಪ ಅಂಗೀರಸರು ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕಗಳಿಂದ ಹೊಗಳುತ್ತಾರೆ.

ಜ್ಯೋತಿ, ಗೌಮ ಮತ್ತು ಆಯುರ್ಯಜ್ಞಗಳಲ್ಲಿ ಸೋಮರಸವನ್ನು ಇಂದ್ರನು ಅವಸರದಲ್ಲಿ ಸೇವಿಸಿದನು. ತ್ವಷ್ಟ ಪ್ರಜಾಪತಿಯಿಂದ ನಿರ್ಮಿತ, ವಜ್ರಾಯುಧದಿಂದ ಮೇಘವನ್ನು ಸೀಳಿ ಮಳೆ ತಂದನು. ಗಂಗಾದಿ ಸಪ್ತನದಿಗಳಲ್ಲಿ ಹರಿವ ನೀರಿಗೆ ದಡ ನಿರ್ಮಿಸಿ ಸುಗಮವಾಗಿ ಹರಿದು ಸಮುದ್ರ ಸೇರುವಂತೆ ಮಾಡಿದನು. ಸೂರ್ಯ, ಉಷ, ಗಗನಗಳನ್ನು ನಿರ್ಮಿಸಿ ಕತ್ತಲೇ ಇಲ್ಲದಂತೆ ಮಾಡಿದನು. ಶ್ಯೇನಪಕ್ಷಿಯಂತೆ ತೊಂಬತ್ತೊಂಬತ್ತು ನದೀ ಪ್ರವಾಹಗಳನ್ನು ದಾಟಿಬಂದು, ವೃತ್ರಾಸುರನ ಕೈಕಾಲು ಕತ್ತರಿಸಿದ. ವೃತ್ರನ ಸಹಾಯಕ್ಕೆ ಬಂದ ಅವನ ತಾಯಿ 'ದಾನವಿ' ಯನ್ನು ಕೊಂದನು.

ಮೋಡಗಳನ್ನು ಮಳೆಯನ್ನೂ ತಡೆ ಹಿಡಿದಿದ್ದ ವೃತಾಸುರನು, ನದೀನೀರಿನ ಅಡಿಯಲ್ಲಿ ಸತ್ತು ಬಿದ್ದಿದ್ದಾನೆ. ಪಣಿಯಿಂದ ಅಪಹೃತ ಹಸುಗಳು ಬಿಡುಗಡೆಗೊಂಡಿವೆ.

ಶತೃಗಳ ನಾಶದ ನಂತರ, ಸಾಧುಪ್ರಾಣಿಗಳ ಸಕಲ ಲೋಕಕ್ಕೂ ಅಧಿಪತಿಯಾಗಿ, ಸಕಲ ಜಗತ್ತಿಗೂ ದೊರೆಯಾಗಿದ್ದಾನೆ – ವಜ್ರಬಾಹು ಇಂದ್ರದೇವ.

( ಅಷ್ಟಕ 1 ಅಧ್ಯಾಯ 3 - ಸೂಕ್ತಗಳು 33 ರಿಂದ 46 ರವರೆಗೆ )

**ಸೂಕ್ತ - 33 ( ಏತಾಯಾಮೋಪ.............**

ಹಿರಣ್ಯಸ್ತೂಪ ಅಂಗೀರಸ ಋಷಿ ಇಂದ್ರದೇವನ ಪರಾಕ್ರಮವನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಪರಿಚಯಿಸುತ್ತಾರೆ.

ಇಂದ್ರನು ಅತಿ ಶಕ್ತಿವಂತ, ಶತ್ರು ಭಯಂಕರ, ರಾಕ್ಷಸ ಪಣಿಗಳು ಕದ್ದಿದ್ದ ಗೋಸಮೂಹವನ್ನು ಹಿಡಿಸಿ ತಂದನು. ಶತ್ರು ಭಯದಿಂದ ನೀರಿನಲ್ಲಿ ಮುಳುಗಿದ್ದ ಶ್ವಿತ್ರಿಯಮಗನನ್ನು ರಕ್ಷಿಸಿದನು.

ಆಕಾಶವೆಲ್ಲಾ ಕಪ್ಪು ಮೋಡದಿಂದ ಆವೃತವಾಗಿ ಭೂಮಿಯನ್ನು ಕತ್ತಲು ಆವರಿಸಿದಾಗ, ಮಳೆ ಬೀಳದೆ ಪ್ರಾಣಿಗಳಿಗೆ ನೀರು ಆಹಾರ ಅಭಾವವಾಗಿದ್ದಾಗ, ಇಂದ್ರನು ಮೇಘವನ್ನು ಸೀಳಿ ಮಳೆ ತಂದ.

ಯಜ್ಞವಿರೋಧಿ ರಾಕ್ಷಸ ವೃತ್ರನು ಐಶ್ವರ್ಯ ಮದದಿಂದ ನೀರಿನ ಪ್ರವಾಹಕ್ಕೆ ಅಡ್ಡ ಮಲಗಿದಾಗ, ಏಕಾಕಿಯಾಗಿಯೋರಾಡಿ ವೃತ್ರನನ್ನು ಕೊಂದನು. ವೃತ್ರನು ಪ್ರೀಹ್ಯಾದಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ್ದರೂ, ತೊಂದರೆ ಕೊಟ್ಟದ್ದರಿಂದ, ಆತತ್ವಪ್ತಿಗಾಗಿ ವೃತ್ರನನ್ನು ವಧೆ ಮಾಡಿದನು. ಅವನ ಸಹಚರರನ್ನೂ ಸಹ ಇಂದ್ರನು ಕೊಂದನು.

ಯಜ್ಞಕರ್ತರ ಹಿಂಸಕರನ್ನು ಇಂದ್ರನು ತನ್ನ ಮುಖವಾಯುವಿನಿಂದಲೇ ಓಡಿಸುವನು. ಅಂಗೀರಸರ ಶ್ಲಾಘ್ಯ ಮಂತ್ರ ಪ್ರೋತ್ಸಾಹದಿಂದ ಹಾಗೂ ಸೂರ್ಯನ ಸಹಾಯದಿಂದ ಶತ್ರುಗಳನ್ನು ನಾಶಮಾಡಿದ, ಕುತ್ಸನ ಸ್ತೋತ್ರಕ್ಕೆ ಸಂತೋಷಗೊಂಡ.

ಅರ್ಥ ತಿಳಿಯದೇ ಮಂತ್ರ ಪಠಿಸುವವರನ್ನೂ ಸಹ 'ಇವರು ನಮ್ಮವರು' ಎಂದು ಇಂದ್ರನು ಕಾಪಾಡುತ್ತಾನೆ. ಶತ್ರುತ್ವಗಳಿಸುವವರಿಗೆ, ಸಹಿಸಲಾಗದಷ್ಟು ಹಿಂಸೆ ಕೊಡುತ್ತಾನೆ.

ಇಂದ್ರನ ಬಗ್ಗೆ ಶ್ರೇಷ್ಠ ತಿಳುವಳಿಕೆಯಿಂದ, ಇಂದ್ರನನ್ನೇ ಆಶ್ರಯಿಸುವವರಿಗೆ, ಐಶ್ವರ್ಯಾದಿಗಳನ್ನು ಕೊಡಲಿ. ಆದರೆ ವ್ಯಾಪಾರಿಯಂತೆ ಮೌಲ್ಯ ಅಪೇಕ್ಷಿಸುವುದು ಬೇಡ.

**ಸೂಕ್ತ -34 ( ತ್ರಿಶ್ಚಿನ್ನೋ ಅದ್ಯಾ.........**

ಋಷಿ ಹಿರಣ್ಯಸ್ತೂಪ ಅಂಗೀರಸರು ಅಶ್ವಿನೀ ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಹೊಗಳುತ್ತಾರೆ.

ಅಶ್ವಿನೀದೇವತೆಗಳು ದೊಡ್ಡಮನಸ್ಸಿನ ಸರ್ವವ್ಯಾಪಿ ಔದಾರ್ಯವಂತರು. ಮೂರು ಚಕ್ರಗಳ, ಮೂರು ಕಂಭಗಳ ವಿಶಾಲ ರಥದಲ್ಲಿ, ಆನಂದದಿಂದ ಕ್ರೀಡಾರ್ಥವಾಗಿ ಹಗಲು ರಾತ್ರಿಗಳಲ್ಲಿ, ಸೂರ್ಯಪುತ್ರಿಯೊಡನೆ ಮೂರು ಸಲ ಪ್ರಯಾಣ ಮಾಡುತ್ತಾರೆ.

ಮೂರು ಪ್ರಕಾರಗಳಲ್ಲಿ ಜ್ಞಾನ ರಕ್ಷಣೆ ಮಾಡುತ್ತಾ, ಒಳ್ಳೆಯದನ್ನು ಮಾಡುವವರ

ಮನೆಗೆ ಮೂರು ಮೂರು ಸಲ ಭೇಟಿ ನೀಡುತ್ತಾ, ಭಕ್ತರಿಗೆ ಮೂರು ಸಲ ಐಶ್ವರ್ಯ, ಅನ್ನ, ಬುದ್ಧಿಕೊಡುತ್ತಾ, ದೇವಲೋಕ ಪೃಥ್ವೀಲೋಕ ಅಂತರಿಕ್ಷಲೋಕದಲ್ಲಿ ಉತ್ಪನ್ನವಾದ ಔಷಧಿಗಳನ್ನು ಅನುಗ್ರಹಿಸುತ್ತಾ, ಮಾನವ ಮಾಡಿದ ತಪ್ಪುಗಳನ್ನು ದಿನಕ್ಕೆ ಮೂರು ಸಲ ಕ್ಷಮಿಸುತ್ತಾ ಇರುವ ಮಹಾತ್ಮರು- ಅಶ್ವಿನೀದೇವತೆಗಳು.

ದ್ರೋಣ, ದಮನೀಯ, ಪೂತಭೃತ - ಈ ಮೂರು ಕಳಶಗಳಲ್ಲಿ ಗಂಗಾದಿ ಸಪ್ತನದೀ ತೀರ್ಥಗಳಿಂದ, ಸೋಮರಸ ತಯಾರಾಗಿ, ಶೇಖರವಾಗಿದೆ. ಮೂವತ್ತಮೂರು ದೇವತೆಗಳು - ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ದ್ಯಾವಾಪೃಥವಿಗಳೊಡನೆ ಅಶ್ವಿನೀ ದೇವತೆಗಳು ಬರಲಿ.

ಸೂರ್ಯನನ್ನು ಕಾಪಾಡುವವರು, ಚಂದ್ರನ ಮನೆಯಲ್ಲಿ ಮಧುರ ಭಕ್ಷ್ಯಗಳನ್ನು ತಂದವರು, ಸಮರ್ಥಗಾರ್ಧಭ ರಥವಂತರೂ, ಆದ ಅಶ್ವಿನೀ ದೇವತೆಗಳು ಯಜ್ಞಕ್ಕೆ ಬರಲಿ. ಉಷಃಕಾಲಕ್ಕೆ ಮುಂಚೆಯೇ ಧರ್ಭಾಸೀನರಾಗಿ ಯಜ್ಞಕ್ಕೆ ಆತ್ಮಭೂತರಾಗಿ- ಐಶ್ಮಿಕ ಪಾಶುಕ ಮತ್ತು ಸೌಮಿಕ ರೂಪಗಳಲ್ಲಿರಲಿ.

ಯಜ್ಞಕರ್ತರ ಪಾಪ ಕಳೆದು, ಶುದ್ಧರಾಗಿಸಿ ಐಶ್ವರ್ಯ ಆಯಸ್ಸು ವೃದ್ಧಿಸಲಿ. ಯುದ್ಧದಲ್ಲಿ ಜಯ ತರಲಿ. ಪುಷ್ಟಿ ಅನ್ನ ಕೊಡಲಿ.

ಬೃಹಸ್ಪತಿಯ ಮಗ ಶಂಯುವಿಗೆ ಕೊಟ್ಟ ಸುಖ ಸೌಭಾಗ್ಯಗಳನ್ನು, ತಮ್ಮ ಮಗನಿಗೂ ಕೊಡಲಿ. ಜ್ಞಾನೋಪದೇಶ ಮಾಡಲಿ. ವಾತ ಪಿತ್ಥ ಶ್ಲೇಷ್ಮ - ಧಾತುತ್ರಯಗಳು ನಿಯಮದಂತೆ ಇದ್ದು ದೇಹ ಸುಖ, ಅಶ್ವಿನೀ ದೇವತೆಗಳಿಂದ ಕೊಡುವಂತಾಗಲಿ.

**ಸೂಕ್ತ -35 ( ಹ್ವಯಾಮ್ಯಗ್ನಿಂಪ್ರಥಮಂಸ್ವಸ್ತಯೇ..............**

ಋಷಿ ಹಿರಣ್ಯಸ್ತೂಪ ಅಂಗೀರಸರು ಅಗ್ನಿ, ಮಿತ್ರಾ ವರುಣ ರಾತ್ರಿ ಸವಿತಾ ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಹಿರಣ್ಯಸ್ತೂಪ ಅಂಗೀರಸ ಋಷಿಗಳಲ್ಲಿ ಕ್ಷೇಮಪಾಲಕ ಅಗ್ನಿಯನ್ನು, ರಕ್ಷಕ ಮಿತ್ರಾ ವರುಣರನ್ನು, ಸಕಲ ಜಗತ್ತಿಗೂ ಸಕಲಚರಾಚರಕ್ಕೂ ಶಾಂತಿ ವಿಶ್ರಾಂತಿದಾಯಕ ರಾತ್ರಿ ದೇವತೆಯನ್ನೂ, ಜಗದ್ರಕ್ಷಕ ಸೂರ್ಯನನ್ನೂ ಯಜ್ಞಕ್ಕೆ ಆಹ್ವಾನಿಸುತ್ತಾ ಸವಿತೃವನ್ನು ಪ್ರಶಂಸಿಸುತ್ತಾರೆ.

'ಶ್ಯಾವ' ಎಂಬ ಶ್ವೇತಾಶ್ವ ಕಟ್ಟಿದ ಸುವರ್ಣರಥದಲ್ಲಿ ಸವಿತೃವು ಲೋಕಾಂಧಕಾರ ಕಳೆಯಲು ಹಾಗೂ ದೇವತೆಗಳು ಮಾನವರನ್ನು ಗಂಗಾದಿ ಸಪ್ತನದಿಗಳನ್ನೂ, ಸಪ್ತಸಮುದ್ರಗಳನ್ನೂ ಬೆಳಗುತ್ತಾ, ಮಧ್ಯಾಂತರಿಕ್ಷದಿಂದ, ಪ್ರೇತಗಳನ್ನು ಯಮಲೋಕಕ್ಕೆ ಓಡಿಸುತ್ತಾ, ಬರುತ್ತಾನೆ.

ಭೂತ ಭವಿಷ್ಯತ್ ವರ್ತಮಾನಗಳನ್ನೂ ನೋಡಬಲ್ಲ, ಸವಿತೃವಿನ ಸ್ವರೂಪ ಯಾರಿಗೂ ತಿಳಿಯದು. ನಾಶರಹಿತ ಚಂದ್ರ ನಕ್ಷತ್ರರ ಪ್ರಕಾಶಕ್ಕೆ ಸವಿತೃವೇ ಕಾರಣ.

ಸುವರ್ಣ ನಿರ್ಮಿತ ಕಣ್ಣು ಕೈಗಳಿಂದ ದೈವಯಜ್ಞ ಮಾಡುವವರಿಗೆ ಐಶ್ವರ್ಯ ಕೊಡುವ ಸವಿತೃ, ಯಜ್ಞಕ್ಕೆ ಬರಲಿ, ಇಲ್ಲಿಯೇ ನಿಲ್ಲಲಿ, ಶತ್ರುಭಾದೆ ನಿವಾರಿಸಲಿ, ಯಜ್ಞಕರ್ತರನ್ನೂ ಶುದ್ಧರಿಂದುಸಾರಲಿ.

**ಸೂಕ್ತ - 36. ( ಪ್ರವೋಯಹ್ವಂ ಪುರೂಣಾಂ ವಿಶಾಂ.........**

ಕಣ್ವೋಘೌರ ಋಷಿಗಳು ಅಗ್ನಿ ಮತ್ತು ಯೂಪದೇವತೆಗಳನ್ನು ಕುರಿತು ಬೃಹತೀ ಸತೋಬೃಹತೀ ಛಂಧಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಯೂಪಸ್ತಂಭದಲ್ಲಿ ಅಡಗಿದ್ದಾನೆ. ಮೊದಲು ಯೂಪಸ್ತಂಭವನ್ನು ಪೂಜಿಸಿ ಅಲ್ಲಿಂದ ಹೊರಬರುವಂತೆ ಅಗ್ನಿಯನ್ನು ಋಷಿ ಪ್ರಾರ್ಥಿಸುತ್ತಾನೆ.

ಅಗ್ನಿಯು ದೇವಮಾನವರ ಸಮಾನ ಹರ್ಷದಾಯಕ ಬಂಧು. ರಾಕ್ಷಸ ಲೋಕವಾಗಿದ್ದುದು ವೃತ್ರವಧೆಯ ನಂತರ ದೇವತೆಗಳ ಮತ್ತು ಮಾನವರ ಲೋಕವನ್ನಾಗಿ ಮಾಡಿದ್ದು ಅಗ್ನಿಯ ಸಹಾಯದಿಂದಲೇ.

ಯಜ್ಞಯಾಗಗಳಲ್ಲಿ ಅಗ್ನಿಯು ತನ್ನ ಹವಿರ್ಭಾಗಗಳನ್ನು ಪಡೆದು, ದೇವತೆಗಳಿಗೆ ಅವರವರ ಭಾಗಗಳನ್ನು ತಲುಪಿಸುತ್ತಾನೆ.

ಮನು ಪ್ರಜಾಪತಿಯು, ಪ್ರಜೆಗಳಿಗೆ ಬೆಳಕು ಶಕ್ತಿ ಕೊಟ್ಟು ಉಪಕಾರ ಮಾಡಲು ಅಗ್ನಿಯನ್ನು ಯಜ್ಞಭೂಮಿಯಲ್ಲಿ ನಿಲ್ಲಿಸಿದನು. ವರುಣ ಮಿತ್ರ ಆರ್ಯಮರು ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಿದರು. ಇದರಿಂದ ಅಗ್ನಿಯು ಸೂರ್ಯ ಪ್ರಕಾಶಕ್ಕೆ ದೇವತೆಗಳ ಸ್ಥಿರತೆಗೆ ಪೃಥ್ವಿಯಲ್ಲಿ ವೃಷ್ಟಿಗೆ ಇರುವ ಕರ್ಮಗಳು ಸಮಾಗಮವಾಗಿ ಸುಗಮವಾಗಿ ನಡೆವಂತೆ ಮಾಡುತ್ತಾನೆ.

ಅಗ್ನಿಯ ಅಗೋಚರಲೋಕಕ್ಕೆಲ್ಲಾ ಜ್ವಾಲೆಯನ್ನು ಹರಡಿದ್ದಾನೆ. ಆ ಜ್ವಾಲೆಯು ಪಾಪಮಾಡುವವರಿಗೆ ಭಯವನ್ನೂ, ಶತ್ರುಗಳಿಗೆ ಕ್ರೌರ್ಯವನ್ನೂ, ಕೇಡುಬಯಸುವವರಿಗೆ, ಕೊಲ್ಲುವವರಿಗೆ, ವಂಚಿಸುವವರಿಗೆ – ಶಿಕ್ಷೆಯನ್ನೂ ಕೊಡುತ್ತಾನೆ. ವ್ಯಾಘ್ರಾದಿ ಹಿಂಸಕ ಜಂತುಗಳಿಂದ, ಮಾನವರೂಪಿ ಹಿಂಸಕರಿಂದ ರಾಕ್ಷಸರಿಂದ – ಅಗ್ನಿಯು ರಕ್ಷಿಸುತ್ತಾನೆ.

'ಅಗ್ನಿಯ ಸಾಮರ್ಥ್ಯ ಇಷ್ಟೇ' – ಎಂದು ಹೇಳಲಾಗದು. ಅವನ ಅನುಗ್ರಹವೇ ಮೊದಲು ಆಗಬೇಕು. ಇದಕ್ಕಾಗಿಯೇ ಅಗ್ನಿಯು ಕಣ್ವರಿಂದ ಆಹ್ವಾನಿತನಾಗಿ ಯಜ್ಞಕ್ಕೆ ಬರಲಿ. ಶ್ರೇಯಸ್ಕರ ದೇವತೆಗಳನ್ನೂ, ರಾಜರ್ಷಿಗಳಾದ – ತುರ್ವಶ, ಯದು, ಉಗ್ರದೇವ, ನವವಾಸ್ತು ಬೃಹದ್ರಥ ಮತ್ತು ತುರ್ವೀತಿಗಳನ್ನು – ಯಜ್ಞಕ್ಕೆ ಕರೆತರಲಿ.

ಅಗ್ನಿಯು ಅನುಕೂಲಮನಸ್ಕನಾಗಿ ಕಣ್ವಾದಿ ಋಷಿಗಳನ್ನು ದೇವತೆಗಳೊಂದಿಗೆ ಸೇರಿಸಲಿ. ಶಕ್ತಿ, ಮಂಗಳ, ಇಷ್ಟದಾಯಕ ಅನ್ನಧನಾದಿಗಳನ್ನು ಯಜಮಾನನಿಗೆ ದಾನಮಾಡಲಿ.

**ಸೂಕ್ತ - 37 ( ಕ್ರೀಳಂ ವಃಶರ್ಧೋ......**

ಕಣ್ವೋಘೌರ ಋಷಿಗಳು ಮರುದ್ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮರುದ್ದೇವತೆಗಳು, ಸ್ವರ್ಗದ ಗೋವು 'ಪೃಶ್ನಿ'ಯ ಹಾಲಿನಿಂದ ಉತ್ಪನ್ನರಾದವರು. ಜಿಂಕೆಯ ರಥದಲ್ಲಿನ ಅವರ, ಚಾವಟಿಯ ಧ್ವನಿಯೋ, ಇತರರಿಗೆ ಶೌರ್ಯ ಪ್ರೋತ್ಸಾಹ ತರುತ್ತದೆ. ಸ್ವಭಾವತಃ ಅಲುಗಾಡುವ ಪ್ರವೃತ್ತಿಯ ಮಾರುತರು, ಭೂಮಿಪರ್ವತವನ್ನೂ ಅಲುಗಾಡಿಸಲುಶಕ್ತರು. ಊರುಗಂಬಕೊಟ್ಟಿರುವ ಭಕ್ತನ ಮನೆಯು ರಕ್ಷಿತವಾಗಿರುತ್ತದೆ.

ಜಲಸರಹಿತ ಆಕಾಶದಲ್ಲಿ ಜನಸ್ತಾಳಿದರೂ ಇವರ ಚಲನಕ್ಕೆ ಆಕಾಶವೇ ಆಧಾರ. ನೀರು ತುಂಬಿದ ಮೇಘಗಳನ್ನು ಚಲಿಸುವಂತೆ ಮಾಡಿ, ಮಳೆ ಸುರಿಸಿ, ಅನ್ನ ಅನುಗ್ರಹಿಸುವರು. ಸಕಲ ಪ್ರಾಣಗಳಿಗೂ ಅನ್ನಾಧಾರವಾಗಿರುವಂತೆ, ಹಸಿವು ಬಾಯಾರಿಕೆಯಂತಹ ಅನುಭವ ತಿಳಿಸಲು, ಮಾಡುವ ಶಬ್ದಕ್ಕಾಗಿ, ಮರುತ್ತುಗಳೇ ಆಧಾರ.

ಸಕಲಪ್ರಾಣ, ವಸ್ತುಗಳನ್ನು ಚೇತನಗೊಳಿಸುವುದು, ಅವುಗಳ ಸ್ವರೂಪಕ್ಕೆತಕ್ಕ ವ್ಯವಹಾರ ಮಾಡಿಸುವುದು, ಮೇಘಮಳೆಸುರಿಸುವುದು – ಮರುತ್ತುಗಳಿಂದಲೇ.

ಲೋಕವ್ಯವಹಾರ ಪ್ರೇರಕರನ್ನು ತೃಪ್ತಿಯಿಂದ ಇಡುವುದಕ್ಕಾಗಿಯೇ ಮರುತ್ತುಗಳಿಗೆ ಋಷಿಯು ಪೂಜೆ ಹವಿಸ್ಸು ಅರ್ಪಿಸುತ್ತಾರೆ. ಸಂಪೂರ್ಣ ಆಯಸ್ಸನ್ನು ಪ್ರಾರ್ಥಿಸುತ್ತಾರೆ.

**ಸೂಕ್ತ - 38 ( ಕದ್ಧನೂನಂ......**

ಕಣ್ವೋಘೌರ ಋಷಿ ಮರುದ್ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ರುದ್ರಪುತ್ರರಾದ ಮರುದ್ದೇವತೆಗಳು, ಮಿಂಚುಮೇಘ ಘರ್ಜನೆಯಿಂದ ಮರುಭೂಮಿಯಲ್ಲೂ ಮಳೆತರುವವರು. ಮರ ಗಿಡ ಲತೆ ನದಿ – ಇವುಗಳ ಉದ್ದಕ್ಕೂ ಯಾವಪ್ರತಿಬಂಧವೂ ಇಲ್ಲದೆ ಚಲಿಸುತ್ತಾರೆ.

ಮರುತ್ತುಗಳು ಎಲ್ಲಿದ್ದಾರೆಂದುತಿಳಿಯದು. ತಂದೆಯಂತೆ ಅಭಿಮಾನ ತೋರುವ ಮರುತ್ತುಗಳನ್ನು ಅನಾದರಿಸದೆ, ಅಮರತ್ವಗಳಿಸಲು, ಸ್ತೋತ್ರಪ್ರಿಯರಾದ ಇವರ ಗುಣಗಾನ ಮಾಡಬೇಕು.

ನಿರ್ಋತಿ ರಾಕ್ಷಾಧಿದೇವತೆಯ ಹತ್ಯೆ ಅಸಾಧ್ಯ. ಆ ರಾಕ್ಷಸ ನಮ್ಮ ಹತ್ಯೆಮಾಡದಿರಲಿ, ಬದಲಿಗೆ ದುರಾಶೆಗಳೊಡನೇ ಅವನೇ ಕೆಳಗೆ ಬಿದ್ದು ಸಾಯುವಂತಾಗಲಿ.ಮರುತ್ತುಗಳನ್ನು ಯಜ್ಞ ಕರ್ಮವೃದ್ಧಿಗಾಗಿ, ವಜ್ರವೈಡೂರ್‍ಯ ಗಜಾಶ್ವ ಪ್ರಜಾಪಶು – ದಾನಕ್ಕೆ ಋಷಿಗಳು ಪ್ರಾಥಿಸುತ್ತಾರೆ.

**ಸೂಕ್ತ - 39 ( ಪ್ರಯದಿತ್ಥಾ.....**

ಕಣ್ವೋ‌ಘೌರಃ ಋಷಿಗಳು ಮರುತ್ತುಗಳನ್ನು ಪ್ರಗಾಥಲ, ಬಾರ್ಹತಲ, ಬೃಹತೀ, ಸತೋಬೃಹತಿ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ನಲವತ್ತೊಂಬತ್ತು ಮಂದಿಯ ಮರುದ್ಗಣಕ್ಕೆ ಎದುರಾಗುವ ಶತ್ರುಗಳೇ ಇಲ್ಲ. ಸ್ವಚ್ಛಂದವಾಗಿ ಮೇರುಹಿಮಗಿರಿಗಳನ್ನು ಕಂಪಿಸುತ್ತಾ, ಬಂಡೆ ವನ ವೃಕ್ಷಗಳನ್ನು ಉರುಳಿಸುತ್ತಾ, ಸಂಚರಿಸುತ್ತಾರೆ.

ಮಚ್ಚೆಗಳಿಂದ ಕೂಡಿದ ಕೆಂಪುಬಣ್ಣದ ಜಿಂಕೆ ಎಳೆಯುವ ರಥದ ರಭಸಕ್ಕೆ ಮಾನವರು ಬೆದರುತ್ತಾರೆ.

ಪ್ರಜ್ಞಾವಂತ ಪೂಜ್ಯ ಮರುತ್ತುಗಳ ಶಕ್ತಿ, ಅಂತರಿಕ್ಷ ಹಾಗೂ ಸಕಲ ಲೋಕಕ್ಕೂ ಹರಡುವುದು.

ಋಷಿಗಳ ಯಜ್ಞರಕ್ಷಣಾರ್ಥ, ಯಜ್ಞಕರ್ತರ ರಕ್ಷಣಾರ್ಥ, ಅವರ ಪುತ್ರರಕ್ಷಣಾರ್ಥ, ಅನುಗ್ರಹಿಸಲು, ನಾಶಮಾಡುವ ಪ್ರಬಲ ಶತ್ರುಗಳ ಬಲ ನಾಶಮಾಡಿ, ವಿರೋಧಿ ಓಡಿಸಲು, ಮರುದ್ದೇವತೆಗಳು ಯಜ್ಞಕ್ಕೆ ಬರಲಿ. ಜೊತೆಯಲ್ಲಿ ಇರಲಿ, ಋಷಿಗಳಿಗೆ ದಾನ ಕೊಡುವ ಮರುತ್ತುಗಳ ಹಿಂಸಕ ಶತ್ರುಗಳ ಮೇಲೆ ಕೋಪಪ್ರಕಟಿಸಲಿ. – ಎಂದು ಯಜ್ಞಕರ್ತರ ಪ್ರಾರ್ಥನೆ.

**ಸೂಕ್ತ - 40 ( ಉತ್ತಿಷ್ಠ ಬ್ರಹ್ಮಣಸ್ಪತೇ......**

ಕಣ್ವೋಘೌರ ಋಷಿ ಬ್ರಹ್ಮಣಸ್ಪತಿದೇವನನ್ನು ಬೃಹತೀ ಸತೋಬೃಹತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಬ್ರಹ್ಮಣಸ್ಪತಿಯು ಋತ್ವಿಜರ ಮುಖದಲ್ಲೇ ಇರುವ ಶಕ್ತಿಪಾಲಕ. ರಾಜ ಮಿತ್ರಾವರುಣರ ಜೊತೆ ಸೇರಿ, ಅಪಾಯಕರ ಯುದ್ಧದಲ್ಲಿ ತೊಡಗುತ್ತಾನೆ. ವಾಗ್ದೇವಿಯು ವಿಘ್ನಕಾರಕರನ್ನು, ಬಲಶಾಲಿ ಶತ್ರುಗಳನ್ನೂ ದೂರಮಾಡುತ್ತಾನೆ. ಇಳಾದೇವಿಯು ವೀರಪಡೆಯ ಭಯದಿಂದಲೇ ಶತ್ರುಗಳು ಪಲಾಯನ ಮಾಡುತ್ತಾರೆ. ಹೀಗೆ ಯಜಮಾನ ಸುರಕ್ಷಿತ.

ಯಜಮಾನನ ಪುತ್ರಪೌತ್ರಾದಿಗಳಿಂದ ತುಂಬಿದ ಯಜ್ಞಗೃಹ, ದೇವತೆಗಳನ್ನು ಬಯಸುತ್ತದೆ. ಶತ್ರುಧನದಿಂದ ಸಹಾಯ ಮಾಡಲು ಯಜಮಾನನ ಬಳಿಗೆ ಬ್ರಹ್ಮಣಸ್ಪತಿಯು ಬರುತ್ತಾನೆ. ನಾಶರಹಿತ ಅನ್ನವನ್ನು ಅನುಗ್ರಹಿಸುತ್ತಾನೆ.

**ಸೂಕ್ತ - 41 ( ಯಂರಕ್ಷಂತಿ.....**

ಕಣ್ವೋಘೌರಃ ಋಷಿಗಳು ಆದಿತ್ಯ ಮಿತ್ರಾವರುಣ ಅರ್ಯಮ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಆದಿತ್ಯ ದೇವನು ಸುಗಮ ಮಾರ್ಗದಲ್ಲಿ ಯಜ್ಞಕ್ಕೆ ಆಗಮಿಸಿ, ತೃಪ್ತಿಯಾಗುವಷ್ಟು

ಪವಿಸ್ಸು ಸೋಮಪಾನಗಳನ್ನು ಜಗುಪ್ಸೆ ಇಲ್ಲದಂತೆ ಸ್ವೀಕರಿಸಲಿ. ಓಂಸಾರಹಿತನಾಗಿ ಸಕಲ ಧನವನ್ನೂ ತನ್ನಂತಹ ಸಂತತಿಯನ್ನೂ, ಯಜ್ಞಕರ್ತರಿಗೆ ಅನುಗ್ರಹಿಸಲಿ.

ಮಿತ್ರಾವರುಣರು ಆರ್ಯಮರು ಶ್ರೇಷ್ಠ ಜ್ಞಾನಿಗಳು. ಬಾಹ್ಯಶತ್ರುಗಳನ್ನೂ ಅವರ ಕೋಟೆಕೊತ್ತಲು ಪಟ್ಟಣಗಳನ್ನೂ, ಭಕ್ತರ ಎದುರಿನಲ್ಲೇ ನಾಶಮಾಡಿ, ಅಂತರಶತ್ರುಗಳಾದ ಸಕಲ ಪಾಪಗಳನ್ನೂ ನಾಶಮಾಡುತ್ತಾರೆ. ಭಕ್ತರ ಅಭೀಷ್ಟೆ ಪೂರೈಸಿ, ದ್ರವ್ಯಾದಿ ಅಭಿವೃದ್ಧಿ ಉಂಟುಮಾಡುತ್ತಾರೆ.

ಯಾರವಿಷಯದಲ್ಲೂ ದುರ್ಭಾಷೆ ಆಡಬಾರದು. ಆಡಲು ಆಸೆಪಡಲೂಬಾರದು. ದುಷ್ಟರ ವಿಷಯದಲ್ಲಿ ಭಯದಿಂದ ಇರಬೇಕು. ಏಕೆಂದರೆ ಆಟದದಾಳಗಳು ಕೆಳಗೆ ಬಿಲಳುವವರೆಗೆ ಗರವು ಅನುಕೂಲವೋ ಪ್ರತಿಕೂಲವೋ ತಿಳಿಯದು – ಎಂಬ ತಿಳುವಳಿಕೆಯನ್ನು ಹೊಂದಿರುವ ಯಜಮಾನನು ಇತರರನ್ನು ದೂರುವ ಬದಲು ಮಿತ್ರವರುಣ ಆರ್ಯಮರನ್ನು ಸೇವಿಸುತ್ತಾನೆ.

**ಸೂಕ್ತ - 42 ( ಸಂಪೂಷನ್ನ ದ್ವನಸ್ತಿರ.....**

ಕಣ್ವೋಘೌರಃ ಋಷಿಗಳು ಪೂಷದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಪೂಷದೇವನು ಮೇಘರಾಜನ ಪುತ್ರ. ಮಳೆಸುರಿಸಿ ಯಾಗಭೂಮಿಯನ್ನು ತಾಪರಹಿತವಾಗಿ
ಮಾಡುವವ. ಹಿಂಸಕ ಪಾಪಿಷ್ಠ ಶತ್ರುಗಳನ್ನು ದಾರಿತಪ್ಪಿಸಿ ನಾಶಗೊಳಿಸುತ್ತಾನೆ.

ನೇರಮಾರ್ಗತಪ್ಪಿಸುವವರನ್ನು, ಅಪಾಯಮಾರ್ಗದಲ್ಲಿ ಹೋಗುವಂತೆ ಪ್ರತಿಭಂಧಿಸುವವರನ್ನು, ಕೆಟ್ಟಕೆಲಸಗಳಲ್ಲಿ ಸಂತೋಷ ಪಡುವವರನ್ನು, ಪ್ರತ್ಯಕ್ಷ ಪರೋಕ್ಷ ಚೋರರನ್ನು, ಮೋಸಗಾರರನ್ನೂ, ಕೇಡುಬಯಸುವವರನ್ನೂ ದೂರಕ್ಕೆ ಅಟ್ಟಲಿ. ಯಜ್ಞಭೂಮಿಗೆ ಸಂಚಾರಮಾರ್ಗ ನಿರ್ವಿಘ್ನವಾಗಲಿ. ಯಜ್ಞಕರ್ತರಿಂದ ಯಾರೂ ದೂಷಿತರಾಗದಿರಲಿ.

ಆಂಗೀರಸ ಪ್ರಭೂತಿಗಳಿಗೆ ಪ್ರೋತ್ಸಾಹ ಕೊಟ್ಟಂತೆ, ಈ ಯಜ್ಞಕರ್ತನೂ, ಸುವರ್ಣ ವಜ್ರಾದಿಸಂಪತ್ತು ಧನ ಧಾನ್ಯ ವಸ್ತು, ಮೃಷ್ಟಾನ್ನಭೋಜನ, ತೃಪ್ತಿಯನ್ನು ಪೂಷನಿಂದ ಪಡೆಯಲಿ. ಎಲ್ಲರ ಮಧ್ಯೆ ಯಜ್ಞಕರ್ತರು ತೇಜಸ್ವಿಗಳಾಗಿ ರಕ್ಷಿತರಾಗಿರಲಿ.

**ಸೂಕ್ತ - 43 ( ಕದ್ರುದ್ರಾಯ....**

ಕಣ್ವೋಘೌರಃ ಋಷಿಗಳು ರುದ್ರ ಮಿತ್ರಾ ವರುಣ ಸೋಮದೇವತೆಗಳನ್ನು ಗಾಯತ್ರಿ ಮತ್ತು ಅನುಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ರುದ್ರದೇವ ದೇವತೆಗಳಲ್ಲೆಲ್ಲಾ ಶ್ರೇಷ್ಟ ಸ್ಥಾನ ಪಡೆದವ, ಯಜ್ಞಪಾಲಕ, ಜ್ಞಾನಯುಕ್ತ ಬಲಶಾಲಿ, ಇಷ್ಟಾರ್ಥದಾಯಿ, ಸುಖದಾಯಕ, ಉದಕರೂಪ ಔಷಧದಾತ. ಬೃಹಸ್ಪತಿಯ

ಮಗ ಶಂಯುವು ಅನುಭವಿಸಿದ ಸುಖ, ಸ್ತ್ರೀಪುರುಷ ಗೋಅಶ್ವ ಅಜಗಳನ್ನೆಲ್ಲಾ, ರುದ್ರನು ಯಜ್ಞಕರ್ತರಿಗೆ ದಯಪಾಲಿಸಲಿ.

ಸೋಮದೇವ ಭಕ್ತರಿಂದಾವೃತವಾದವನು. ಸೋಮನ ವೈರಿಗಳಿಂದ ತೊಂದರ ಹಿಂಸೆಗಳಾಗದಿರಲಿ. ಅಧಿಕ ಅನ್ನ ಐಶ್ವರ್ಯ ಶಕ್ತಿಯನ್ನು ಸೋಮನು ದಯಪಾಲಿಸಲಿ.

**ಸೂಕ್ತ - 44 ( ಅಗ್ನೇವಿವಸ್ವ.....**

ಪ್ರಸ್ಕಣ್ವಃ ಕಾಣ್ವಃ ಋಷಿಗಳು, ಅಗ್ನಿ ಅಶ್ವಿನೀ ಉಷಾ ದೇವತೆಗಳನ್ನು, ಪ್ರಾಗಾಥಂಬಾರ್ಹತಂ, ಬೃಹತೀ, ಸತೋಬೃಹತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿದೇವನು ಉಷಾ, ಅಶ್ವಿನೀ ದೇವತೆಗಳು ಹಾಗೂ ಉಷಃಕಾಲದಲ್ಲಿ ಎದ್ದಿರುವ ಎಲ್ಲಾ ದೇವತೆಗಳೊಡನೆ, ಯಜಮಾನನ ಯಜ್ಞಭೂಮಿಗೆ ಬರಲು ಆಹ್ವಾನ.

ಅಗ್ನಿಯು, ದೇವಮಾನವರಿಗೆಲ್ಲಾ ಹವಿಸ್ಸು ಹಂಚುವ ದೇವದೂತ. ಸ್ವಕರ್ಮಗಳನ್ನು ಅನುಭವಿಸುವಂತೆ ಮಾಡುವವ, ಯಜ್ಞದ ಉದ್ದೇಶ್ಯ ಅರ್ಥಮಾಡಿಕೊಂಡು ಫಲ ಕೊಡುವವ, ಎಲ್ಲರಹೋಮಗಳನ್ನೂ ಸ್ವೀಕರಿಸಿ, ಆಕರ್ಷಕ ಜ್ವಾಲೆಯಿಂದ ಸಂತೋಷ ತರುವವ. ದೇವತೆಗಳಿಗೂ ಮಾನವರಿಗೂ ಸಮಾನರೀತಿಉಪಕಾರಿ.

ಮನುವು ಅಗ್ನಿಯನ್ನು ಯಜ್ಞಭೂಮಿಯಲ್ಲಿ ಸ್ಥಾಪಿಸಿದನು. ಯಜ್ಞಕರ್ತರು ಅಗ್ನಿಗೆ ಪುರೋಹಿತಸ್ಥಾನ ಕೊಟ್ಟರು. ಇಂತಹ ಅಹವನೀಯರೂಪದಲ್ಲಿ ಸಂಚರಿಸುವ ಅಗ್ನಿ ಯಜಮಾನನ ಆಯುರ್ವರ್ಧಕ, ಮಿತ್ರಪೋಷಕ, ಶತ್ರುನಾಶಕನಾಗಿ ಅಗ್ನಿಯು ದೇವತೆಗಳಲ್ಲಿ ಗೌರವತರಲಿ.

ಸುರೂಪಿವರುಣ, ಸತ್ಯರೂಪಿ ಯಜ್ಞವರ್ಧಕ ಮರುತ್ತುಗಳು, ಅಶ್ವಿನೀದೇವತೆಗಳೂ ಸೋಮಪಾನಕ್ಕೆ ಬರಲಿ.

**ಸೂಕ್ತ - 45 ( ತ್ವಮಗ್ನೇ ವಸೂರಿಹ.....**

ಪ್ರಸ್ಕಣ್ವ ಕಾಣ್ವ ಋಷಿ ಅಗ್ನಿದೇವನನ್ನು, ಅನುಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಘರ್ಷಣೆಯಿಂದ ಉತ್ಪನ್ನನಾದ ಅಗ್ನಿ, ಜ್ವಾಲಾರೂಪ ಕೂದಲಿಂದ ಬೆಳಗುತ್ತಾನೆ. ಮಹತ್ತಾದಆಕಾರ ಹಾಗೂ ಸೂಕ್ಷ್ಮವಾದ ಕಿವಿಯುಳ್ಳವ, 'ರೋಹಿತ್ತು' ಕುದುರೆಗಳ ಒಡೆಯ ಅಗ್ನಿಯು ಯಜಮಾನನಿಗಾಗಿ, ವಸುರುದ್ರ ಆದಿತ್ಯರನ್ನೂ ಮನು ಉತ್ಪನ್ನರನ್ನೂ ಪೂಜಿಸಲಿ.

ಪ್ರಿಯಮೇಧ, ಅತ್ರಿ, ವಿರೂಪ ಅಂಗೀರಸ್ಸು – ಇವರುಗಳ ಆಹ್ವಾನ ಮನ್ನಿಸಿದಂತೆ, ಕಣ್ವಪುತ್ರ ಪ್ರಸ್ಕಣ್ವನ ಆಹ್ವಾನವನ್ನೂ ಮನ್ನಿಸಲಿ. ಯಜ್ಞದಲ್ಲಿ ಪ್ರತಿಷ್ಠಿತನಾಗಲಿ.

ಹಿಂದಿನ ದಿನವೇ ಸಿದ್ಧಪಡಿಸಿ ಇಟ್ಟಿರುವ ಸೋಮವನ್ನು ದೇವತೆಗಳೊಂದಿಗೆ ಅಗ್ನಿಯು ಸೇವಿಸಲಿ. ಮೂವತ್ತಮೂರು ದೇವತೆಗಳೂ ಯಜಮಾನನಿಗೆ ಉಪಕಾರಮಾಡಲಿ.

**ಸೂಕ್ತ - 46 ( ಏಷ್ಯೋಉಷಾ ಅಪೂರ್ವ್ಯಾ.....**

ಪ್ರಸ್ಕಣ್ವ ಕಾಣ್ವ ಋಷಿ ಅಶ್ವಿನೀ ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳು ಸಮುದ್ರಪುತ್ರರು, ವಿವೇಚನೆಯಿಂದ ಕರ್ಮಾನುಸಾರ ಔದಾರ್ಯ ಪ್ರಕಟಿಸುವವರು. ಸಂಚಾರ ಸ್ವಭಾವದ ಇವರ ಆಗಮನದಿಂದಾದ ಕಾಂತಿಯೇ ಮುಂದುವರೆದು, ಉಷಃಕಾಂತಿಯಾಗುತ್ತದೆ, ಮುಂದೆ ಸೂರ್ಯತೇಜಸ್ಸಾಗುತ್ತದೆ.

ಇವರು, ಇಷ್ಟಸ್ತೋತ್ರಗಳು, ವೀರ್ಯಯುತ ಸೋಮ ಸಿದ್ಧವಿರುವ ಯಜ್ಞಭೂಮಿಗೆ ಇಳಿದುಬರಲು, ಇದೇ ಸಕಾಲ.

ಯಜಮಾನನು ಅಶ್ವಿನೀದೇವತೆಗಳಿಂದ ಅನೇಕ ಕುತೂಹಲ ಅಂಶತಿಳಿಯಲು ಇಚ್ಛಿಸುತ್ತಾನೆ ಸೂರ್ಯರಶ್ಮಿ ಸ್ವರ್ಗದಿಂದ ಹೇಗೆ ಬಂತು? ಉಷಃಕಾಲದಲ್ಲಿ ಸಮುದ್ರದ ಆಚೆ ಹೇಗೆ ಗೋಚರಿಸುತ್ತದೆ? ಅಶ್ವಿನೀದೇವತೆಗಳು ಎಲ್ಲಿ ಸ್ಥಾಪಿತರಾಗಿದ್ದಾರೆ? – ಹೀಗೆ ಯಜಮಾನನಿಗೆ ತಿಳಿಸಲು, ದೋಷರಹಿತನಾದ ಯಜ್ಞಕರ್ತನ ಜೊತೆಯಲ್ಲಿ ಇದ್ದು, ಅನುಗ್ರಹಿಸಲಿ.

ರಸವತ್ತಾದ, ವೀರ್ಯವತ್ತಾದ, ಪುಷ್ಟಿದಾಯಕ, ದಾರಿದ್ರ್ಯನಾಶಕ, ಶಕ್ತಿದಾಯಕ ಅನ್ನವನ್ನು ಯಜಮಾನನಿಗೆ ದಯಪಾಲಿಸಲಿ.

## ( ಅಷ್ಟಕ - 1, ಅಧ್ಯಾಯ - 4, ಸೂಕ್ತ - 47 ರಿಂದ 61 )

**ಸೂಕ್ತ - 47 ( ಅಯಂವಾಂ ಮಧು ಮತ್ತಮಃ.....**

ಪ್ರಸ್ಕಣ್ವ ಕಾಣ್ವ ಋಷಿಗಳು ಅಶ್ವಿನೀ ದೇವತೆಗಳನ್ನು ಪ್ರಾಗಾಥಂಬಾರ್ಹತಂ ಬೃಹತೀ ಮತ್ತು ಸತೋಬೃಹತಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳು ಮೂರು ಮುಖಗಳ ಸುವರ್ಣ ನಿರ್ಮಿತ ಮನೋಹರ ರಥದಲ್ಲಿ ಪ್ರತಿಭಂಧವಿಲ್ಲದೇ ಸಂಚರಿಸುತ್ತಾರೆ.

ಕಣ್ವರನ್ನು, ದೂರೆ ಸುದಾಸನನ್ನೂ ಕಾಪಾಡಿ, ಮನಃಸಂತೋಷಕರ ಉಪಯುಕ್ತ ಧನಕೊಟ್ಟವರು – ಅಶ್ವಿನೀ ದೇವತೆಗಳು.

ಋತ್ವಿಜರೂ ಯಜಮಾನರೂ, ಸ್ತೋತ್ರ ಹವಿಸ್ಸು ಸೋಮರಸಪಾನಕ್ಕೆ ಹಾಜರಾಗಲು ಸೂರ್ಯೋದಯದ ಕಿರಣಗಳೊಂದಿಗೆ ರಥವೇರಿಬರಲು ಅಶ್ವಿನೀ ದೇವತೆಗಳಿಗೆ ಋಷಿ ಆವ್ಹಾನಿಸುತ್ತಾರೆ.

**ಸೂಕ್ತ - 48 (ಸಹವಾಮೇನ ...............**

ಪ್ರಸ್ಕಣ್ವ! ಕಣ್ವ! ಋಷಿಗಳು ಉಷಾ: ದೇವತೆಯನ್ನು ಪ್ರಾಗಾಥಂಬಾರ್ಹತಂ ಬೃಹತೀ ಸತೋಽಬೃಹತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಉಷೆಯು ತನ್ನ ವಿಶಿಷ್ಟ ಪ್ರಭೆಯಿಂದ ಕಾರ್ಯವಿಘ್ನಕಾರಿ ಕತ್ತಲನ್ನು ನಾಶಮಾಡಿ, ಲೋಕಕ್ಕೆ ಸಂತೋಷದಾಯಿ ಮಂಗಳ ಮಾರ್ಗದರ್ಶನ ಮಾಡುತ್ತಾಳೆ.

ಉಷೆಯ ಕಿರಣಗಳು ಕೇಡುಬಯಸುವ ಶತ್ರುಗಳಿಗೆ ಹಿಂಸಕ.

ಉಷಃಕಾಲದಲ್ಲಿ ಮಾನವಾದಿ ಸಕಲ ಪ್ರಾಣಿ ಪಕ್ಷಿಗಳು ತಮ್ಮ ತಮ್ಮ ದೈನಂದಿನ ಕರ್ತವ್ಯಗಳಲ್ಲಿ ತೊಡಗಿ, ಮುಪ್ಪುಕಾಣುತ್ತವೆ.

ಉಷೆಯು ಉದಯಿಸಿ ಪ್ರಭಾತ ಉಂಟುಮಾಡುವಾಗ, ಉದಾರಿಗಳು ದಾನ, ದಾತೃಗಳಿಂದ ಪ್ರಶಂಸೆ, ಯಾಚಕರಿಂದ ದಾತೃಗೃಹಗಮನ ನಡೆದಿರುತ್ತದೆ.

ಪೂರ್ವಾಪರ ಎಂಬ ಅಂತರಿಕ್ಷಬಾಗಿಲುಗಳನ್ನು ತೆರೆದುಕೊಂಡು ಸೂರ್ಯನಿಗಿಂತ ಎತ್ತರದ ಸ್ಥಾನದಿಂದ ಮೂರು ರಥಗಳಲ್ಲಿ, ಸಕಲದೇವತೆಗಳೊಡನೆ, ಉಷೆ ಯಜ್ಞಭೂಮಿಗೆ ಬರಲಿ. ಸೋಮಪಾನ ಮತ್ತು ಹವಿಸ್ಸು ಸ್ವೀಕರಿಸಲಿ.

ಧನೈಶ್ವರ್ಯಯುಕ್ತ ಉಷೆಯು, ಹಿಂಸಾಚಾರರಹಿತ ಯಜ್ಞದಲ್ಲಿ ಸ್ತುತಿಸುವವರೆಲ್ಲರಿಗೂ,
ಧನೈಶ್ವರ್ಯ ಗೋ ಅಶ್ವಾದಿ ವೀರ್ಯವತ್ತಾದ ಪುಷ್ಟಿಯುತ ಅನ್ನ - ಇವನ್ನೆಲ್ಲಾ ಶಾಶ್ವತವಾಗಿ ಕರುಣಿಸಲಿ.

ದಿವ್ಯ ದೃಷ್ಟಿಯ ಋಷಿಗಳಿಗೆ, ಈ ಹಿಂದೆ ಅನುಗ್ರಹಿಸಿದ್ದಂತೆ, ಈ ಋಷಿಗೂ ಅನುಗ್ರಹಿಸಲಿ. ಶತ್ರುಗಳನ್ನು ಜಯಿಸುವ ಯಶಸ್ಸುಕೊಡಲಿ.

**ಸೂಕ್ತ - 49 ( ಉಷೋಭದ್ರೇಭಿರಾಗಹಿ......**

ಪ್ರಸ್ಕಣ್ವ! ಕಾಣ್ವ! ಋಷಿಗಳು ಉಷಾದೇವತೆಯನ್ನು ಅನುಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಉಷೆಯು, ದ್ಯುಲೋಕೋತ್ಪನ್ನ ಶುಭ್ರವರ್ಣ ದೇವತೆ. ಉಷೆಯ ಉದಯದೊಂದಿಗೆ ಮಾನವರು ಪಶುಗಳು ಪಕ್ಷಿಗಳು ಉತ್ಸಾಹದಿಂದ ಸಂಚರಿಸುತ್ತವೆ. ಸಮಸ್ತ ಲೋಕವೂ ತೇಜಸ್ಸಿಂದ ಬೆಳಗುತ್ತದೆ.

ಉಷೆಯು, ಅಂತರಿಕ್ಷದಿಂದ ಸುವರ್ಣ ರಥದಲ್ಲಿ ಸಂಭ್ರಮದಿಂದ ಬರಲಿ - ಎಂದು ಸೋಮ ಯಜ್ಞಮಾಡುತ್ತಿರುವ ಋಷಿಯ ಪ್ರಾರ್ಥನೆ.

**ಸೂಕ್ತ - 50 ( ಉದುತ್ಯಂ ಜಾತವೇದಸಂ.....**

ಪ್ರಸ್ಕಣ್ವ! ಕಾಣ್ವರು ಸೂರ್ಯದೇವನನ್ನು ಗಾಯತ್ರೀ ಮತ್ತು ಅನುಷ್ಟುಪ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತಾರೆ.

ಉದಯದಿಂದಲೂ ಎಲ್ಲರಿಗೂ ಕಾಣಸಿಕೊಳ್ಳುವ ಸೂರ್ಯನು, ಎಲ್ಲವನ್ನೂ ಪ್ರಕಾಶಗೊಳಿಸುತ್ತಾ, ಎಲ್ಲರನ್ನೂ ತಮ್ಮ ತಮ್ಮ ವ್ಯವಹಾರದಲ್ಲಿ ತೊಡಗಿಸುತ್ತಾನೆ.

ಸೂರ್ಯನ ತಲೆಕೂದಲಿನಂತಿರುವ ಕಿರಣಗಳು, ಯಾರೂ ಹೋಗಲಾಗದ ಮಾರ್ಗದಲ್ಲಿ ಸಂಚರಿಸುತ್ತಾ, ಸೂರ್ಯನ ಆಗಮನವನ್ನು ಸೂಚಿಸುತ್ತವೆ.

ಹಗಲು ರಾತ್ರಿಗಳು ಸೂರ್ಯನ ಅಧೀನ. ಸೂರ್ಯನ ಆಗಮನದಿಂದ, ಗ್ರಹನಕ್ಷತ್ರಾದಿಗಳು ಮರೆಯಾಗುತ್ತವೆ.

ಸೂರ್ಯನ ರಥದ ಏಳು ಹೆಣ್ಣು ಕುದುರೆಗಳು 'ಹರಿತ್ತು'- ಕಿರಣರೂಪದಿಂದ ರಸಹೀರುತ್ತಾ, ಸೂರ್ಯನನ್ನು ಸುರಕ್ಷಿತವಾಗಿ ಕರೆದೊಯ್ಯುತ್ತವೆ.

ತೊನ್ನು ಕಾಮಾಲೆಗಳಂತಹ ಬಾಹ್ಯರೋಗಗಳನ್ನೂ, ಹಾಗೂ ಹೃದಯರೋಗದಂತಹ ಒಳರೋಗಗಳನ್ನೂ, ಸೂರ್ಯನು ನಾಶಮಾಡುತ್ತಾನೆ. ಶರೀರದ ಮೇಲಿನ ಪಚ್ಚೆ ಅಥವಾ ಹಳದೀ ಬಣ್ಣವನ್ನು ಗಿಣಿಗಳಿಗೂ, ಹರಿತಾಳವೃಕ್ಷಕ್ಕೂ ಮೈನಾಗಳಿಗೂ ಹರಿಸುತ್ತಾನೆ.

ರೋಗರೂಪದ ಶತ್ರುಗಳನ್ನು ಸೂರ್ಯನು ನಾಶಮಾಡಲಿ.

**ಸೂಕ್ತ - 51 ( ಅಭಿತ್ಯಂಮೇಷಂ.....**

ಸವ್ಯ ಆಂಗಿರಸರು ಇಂದ್ರದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನು, ಟಗರಿನರೂಪದಲ್ಲಿರುವ ಸಾರ್ಥಕ ಸತ್ವಶಾಲಿ. ಮಾನವ ಹಿತಾಭ್ಯುದಯ ಕರ್ಮಕರ್ತ. ಇಂದ್ರನ ಒಲವನ್ನು, ಉಶನಸ್ಸು ತೀಕ್ಷ್ಣಮಾಡಿದನು; ಮರುತ್ತುಗಳು ಉತ್ತೇಜಿಸಿದರು. ಇದರಿಂದ ಇಂದ್ರನು ವೃತ್ರನನ್ನುವಧಿಸಿ, ಸೂರ್ಯನನ್ನು ಬಿಡಿಸಿ ಮೂರು ಲೋಕಕ್ಕೂ ಒದಗಿಸಿದ.

ಇಂದ್ರನು ಅಂಗೀರಸ ಋಷಿಗಾಗಿ ಮಳೆತರಿಸಿದನು, ಅತ್ರಿ ಮಹರ್ಷಿಗೆ ಮಾರ್ಗದರ್ಶನ ಮಾಡಿಸಿದ, ವಿಮದ ಋಷಿಗೆ ಅನ್ನದಾನ ಮಾಡಿದ, ರಾಜಕಕ್ಷಿವಂತನಿಗೆ ವೃಚಯಾ ಎಂಬ ಯುವತಿಯೊಡನೆ ವಿವಾಹಮಾಡಿದ, ವೃಷಣಶ್ವರಾಜನಿಗೆ ಮೇನಾಎಂಬ ಕನ್ಯೆಯಾಗಿ ಹುಟ್ಟಿದ - ಹೀಗೆ ಶ್ರೇಷ್ಠ ಕರ್ಮಗಳಲ್ಲಿ ಉತ್ಕೃಷ್ಟನಾಗಿ ಪ್ರಶಂಸಿತನಾಗಿದ್ದಾನೆ.

ಇಂದ್ರನು, ಘೋರ ರಾಕ್ಷಸ ನಾಶಕ್ಕಾಗಿಯೇ ಉತ್ಪನ್ನನಾದವ. ಯಜ್ಞದಲ್ಲಿ ತಾವೇ ಹವಿಸ್ಸನ್ನೂ ಪಡೆಯುತ್ತಿದ್ದ ರಾಕ್ಷಸರನ್ನು ಜಯಿಸಿ, ಅವರ ಐಶ್ವರ್ಯಗಳನ್ನೂ ಪರ್ವತ ಪ್ರದೇಶದಲ್ಲಿ ಮುಚ್ಚಿಟ್ಟನು. ಪಿಪ್ರುವೆಂಬ ರಾಕ್ಷಸನ ಪಟ್ಟಣ ನಾಶಮಾಡಿದ, ಋಷ್ಣರಾಕ್ಷಸನನ್ನು ಕೊಂದ, ಶಂಬರರಾಕ್ಷಸನನ್ನು ದಿವೋದಾಸನಿಗಾಗಿಕೊಂದ, ಅರ್ಬುದರಾಕ್ಷಸನನ್ನು ಕಾಲಿನಿಂದಲೇ ಒದ್ದು ಕೊಂದ. ಸರ್ವಶೋಷಕನಾದ ತುಷ್ಣನ ಪಟ್ಟಣನಾಶಮಾಡಿದ.

ಇಂದ್ರನು ಜಶುತ್ಸನೆಂಬ ಭಕ್ತನನ್ನು ಘೋರ ರಾಕ್ಷಸ ಯುದ್ಧದಲ್ಲಿರಕ್ಷಿಸಿದ. ಕುತ್ಸಋಷಿಯನ್ನು ಕಾಪಾಡಿದ. ಇಂದ್ರನಿಗಾಗಿಯೆ ವವ್ರಋಷಿಸಂಗ್ರಹಿಸಿದ ಯಜ್ಞವಸ್ತುಗಳನ್ನು ಪಡೆದನು. ನಿರ್ಧನಿಯಾಗಿದ್ದ ಅಂಗೀರಸ ಋಷಿಗೆ ಅಶ್ವಗೋಧನ ಒದಗಿಸಿದ.

ಇಂದ್ರನು ಶರ್ಯಾತ ರಾಜರ್ಷಿಯ ಯಜ್ಞಕ್ಕೆ ಆಗಮಿಸಲಿ. ತೃಪ್ತಿಯಿಂದ ಸೋಮ ಸ್ವೀಕರಿಸಿ, ಯಶಸ್ಸನ್ನು ಹೊಂದಲಿ, ಋಷಿಗೂ ಯಶಸ್ಸು ತರಲಿ.

ಯಜ್ಞಕರ್ಮ ಭ್ರಷ್ಟರನ್ನು ಪೂಜಾರಹಿತರಾದವರನ್ನೂ, ಹಿಂಸಕಾರಕ ಶತ್ರುಗಳನ್ನೂ, ದಸ್ಯುಗಳನ್ನೂ ನಾಶಮಾಡಲಿ. ಯಜಮಾನನನ್ನೂ ಯಜ್ಞಕ್ಕೆ ಪ್ರೇರಿಸಿ, ಶ್ರೇಷ್ಠಗೃಹ ವಿದ್ಯಾವಂತಪುತ್ರರನ್ನು ಅನುಗ್ರಹಿಸಲಿ.

**ಸೂಕ್ತ - 52 ( ತ್ಯಂಸುಮೇಷಂ ಮಹಯಾ.....**

ಸವ್ಯಆಂಗಿರಸ ಋಷಿ, ಇಂದ್ರದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನ ಸದೃಶ ಇಂದ್ರನೇ. ಸಕಲ ಭೂತಗಳೂ ಅಧೀನವಾದವೇ, ಪೃಥ್ವಿಯು ಇನ್ನೂ ಹತ್ತುಪಟ್ಟು ಬೆಳೆದರೂ, ಮಾನವರ ಸಂಖ್ಯೆ ಹೆಚ್ಚಿದರೂ, ಇಂದ್ರನಿಗಿಂತಲೂ ಕಡಿಮೆಯೇ. ಇಂದ್ರನು ಸ್ವಶಕ್ತಿಯಿಂದ ಅಂತರಿಕ್ಷ ದ್ಯುಲೋಕವನ್ನೆಲ್ಲಾ ವ್ಯಾಪಿಸಿ ದ್ಯಾವಾಪೃಥಿವಿಗಳ ಅಂತರವನ್ನೆಲ್ಲಾ ತುಂಬಿದ್ದಾನೆ.

ಇಂದ್ರನು ತ್ರಿತನನ್ನು ಭಾವಿಯಲ್ಲಿ ಮುಚ್ಚಿದ. ವಲನನ್ನು ಸೀಳಿ ಕೊಂದ. ನೂರಾರು ಯಜ್ಞಕರ್ತರಿಂದ ಬೃಹತಸಾಮದಿಂದ ಪ್ರಾರ್ಥಿತನಾಗಿ, ಮರುತ್ತುಗಳಿಂದ ಉತ್ತೇಜಿತನಾಗಿ, ತೃಷ್ಣೆಯಿಂದ ಬಲವರ್ಧನಗೊಂಡು, ವೃತ್ರನಾಶಮಾಡಿ, ಸ್ವರ್ಗದ ಕಂಪನ ನಿಲ್ಲಿಸಿದ.

ಶುದ್ಧ ಬುದ್ಧಿಯಿಂದ ಪ್ರಾರ್ಥಿಸಿದವರ ಯಜ್ಞಕ್ಕೆ ಇಂದ್ರನು ಬರಲಿ, ರಕ್ಷಣೆ ಕೊಡಲಿ, ಸಂಮೃದ್ಧವಾದ ಅನ್ನ ಅನುಗ್ರಹಿಸಲಿ.

**ಸೂಕ್ತ - 53 ( ನ್ಯೂ(ಉ) ಇಷುವಾಚಂ.....**

ಸವ್ಯಆಂಗೀರಸ ಋಷಿ ಇಂದ್ರದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನು, ಚರಸ್ಸು ಹವಿಸ್ಸು ಸೋಮರಸಗಳು ಯೋಗ್ಯಸ್ತೋತ್ರಗಳಿಂದ ತೃಪ್ತನಾಗಿ, ಯಜ್ಞಕರ್ತನ ಶ್ರೇಷ್ಟ ಬುದ್ಧಿಯನ್ನು ವೃದ್ಧಿಸುತ್ತಾನೆ, ರಾಕ್ಷಸರಿಂದ ಅಪಹರಿಸಿದ ಎಲ್ಲಾ ಧನಗಳನ್ನೂ, ಇಂದ್ರನು ತನ್ನ ಭಕ್ತರೆಲ್ಲಾ ಒಟ್ಟಾಗಿ ಅನುಭವಿಸುವಂತೆ ಮಾಡುತ್ತಾನೆ.

ನಿಸ್ಸಹಾಯಕ ಯುವಕರಾಜ, ಸುಶ್ರವಸ್ಸು ಮೇಲೆ ಯುದ್ಧಕ್ಕೆ ಬಂದ, ಇಪ್ಪತ್ತು ದೇಶದ ದೊರೆಗಳನ್ನು, ಚಕ್ರದಿಂದಲೇ ಉರುಳಿಸಿದವನು ಇಂದ್ರ. ಕುತ್ಸ ಅತಿಥಿಗ್ವ ಮತ್ತು ಆಯು – ಈ ರಾಜರುಗಳನ್ನು ಸುಶ್ರವಸ್ಸಿನ ಅಧೀನ ಮಾಡಿದ, ವೃತ್ರವಧೆಯಿಂದ ದೇವತೆಗಳಿಗೆ ಸಂತೋಷತಂದ. ದೂರದೇಶದ ಸಮಾಜಿ ರಾಕ್ಷಸ ಹಾಗೂ ಅವನ ಪಟ್ಟಣ ನಾಶಮಾಡಿ, ಶತ್ರುಗಳನ್ನು ನಮ್ರರನ್ನಾಗಿಸಿದ, ರಾಜ ಅತಿಥಿಗ್ವನ ಹಿತಕ್ಕಾಗಿ ಕರಂಜ ಮತ್ತು ಪರ್ಣಯರನ್ನು ಕೊಂದ. ಋಜಿಶ್ವನನ್ನು ಮುತ್ತಿದ ರಾಕ್ಷಸ, ವೃಂದನ

ನೂರು ಪಟ್ಟಣಗಳನ್ನೂ ಧ್ವಂಸ ಮಾಡಿದ.

ಯಜ್ಞಾಂತ್ಯದಲ್ಲಿ ಯಜ್ಞಕರ್ತರು ಅದೃಷ್ಟಶಾಲಿಗಳಾಗಿ ಇಂದ್ರನ ಸ್ನೇಹಿತರಾಗಿದ್ದಾರೆ. ಶ್ರೇಷ್ಠ ಸಂತತಿ ದೀರ್ಘಉಜ್ಜ್ವಾಯ ಆಯುಸ್ಸು ಹೊಂದುವುದಕ್ಕಾಗಿ ಇಂದ್ರನನ್ನು ಸ್ತೋತ್ರಮಾಡುತ್ತಾರೆ.

**ಸೂಕ್ತ - 54 ( ಮಾನೋ ಅಸ್ಮಿನ್ಮಘ......**

ಸವ್ಯ ಆಂಗೀರಸ ಋಷಿಗಳು ಇಂದ್ರದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನಿಗಿಂತ ಬಲಶಾಲಿಗಳು ಯಾರೂ ಇಲ್ಲ. ರಾಜರುಗಳಾದ ನರ್ಯ, ತುರ್ವಶ, ಯದು, ತುರ್ವೀತಿಗಳನ್ನು ಅವರ ರಥಾಶ್ವಗಳನ್ನೂ ರಕ್ಷಿಸಿದ. ವೃತ್ರನ ಉದರಪ್ರದೇಶದಲ್ಲಿ ನಿಂತುಹೋಗಿದ್ದ ನೀರನ್ನು ಭೂಮಿಯ ತಗ್ಗು ಪ್ರದೇಶಕ್ಕೆ ಹರಿಸಿದ. ಅಂತರಿಕ್ಷದಲ್ಲಿದ್ದುಕೊಂಡೇ ನದಿಗಳನ್ನೂ, ತನ್ನಂತೆಯೇ ಘರ್ಜಿಸುವಂತೆ ಮಾಡುತ್ತಾನೆ. ವಾಯು ಹಾಗೂ ಸೂರ್ಯನ ತಲೆಯಮೇಲೆ ಮಳೆ ಸುರಿಸುತ್ತಾನೆ. ಮಳೆ ಸುರಿಸುವಿಕೆಯಿಂದ ಇಷ್ಟಪ್ರದನಾಗಿದ್ದಾನೆ – ಇಂದ್ರ.

ಇಂದ್ರನು ಶಂಬರನೆಂಬ ರಾಕ್ಷಸನನ್ನೂ ಅವನ ತೊಂಭತ್ತೊಂಭತ್ತು ನಗರಗಳನ್ನೂ ನಾಶಮಾಡಿದ. ಶತ್ರುಗಳೆಲ್ಲಾ ಒಟ್ಟಾದರೂ, ಆ ಮಾಯಾವಿಗಳನ್ನು ವಜ್ರಾಯುಧದಿಂದ ಕೊಂದು, ದ್ಯುಲೋಕಶಿಖರವನ್ನೇ ಅಲುಗಾಡಿಸಿದ.

ಯಜ್ಞಕರ್ತರನ್ನು, ಪಾಪಾತ್ಮಕಯುದ್ಧದಲ್ಲಿ ತೊಡಗಿಸದಿರಲಿ. ಶಸ್ತ್ರಮಂತ್ರದಿಂದ ಹವಿಸ್ಸನ್ನು ಅರ್ಪಿಸುವವರನ್ನೂ ಇಂದ್ರನು ವೃದ್ಧಿಗೊಳಿಸಲಿ – ಎಂದು ಯಜಮಾನನು ಪ್ರಾರ್ಥಿಸುತ್ತಾನೆ.

**ಸೂಕ್ತ - 55 ( ದಿವಶ್ಚಿದಸ್ಯವರಿಮಾ.....**

ಸವ್ಯ ಆಂಗೀರಸ ಋಷಿಗಳು ಇಂದ್ರದೇವನನ್ನು ಜಗತೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ. ದೇವತಾಸ್ವರೂಪಿ ಇಂದ್ರನು, ಧನಪತಿ ಕುಬೇರನಿಗೇ ಅಧಿಪತಿ. ಸಕಲವೀರಕೃತ್ಯಗಳಲ್ಲೂ ಮುಂದಾಳಾದ ಇಂದ್ರನು ಮಾನವರಲ್ಲಿ ತನ್ನ ವೀರ್ಯಪ್ರಕಟಿಸುತ್ತಾನೆ. ವೃಷಭದ ಕೊಂಬಿನಂತೆ ಹರಿತ ಮಾಡಿದ ವಜ್ರಾಯುಧದಿಂದ ಭದ್ರ ಶತ್ರುಗಳನ್ನು ಛಿದ್ರಮಾಡುತ್ತಾನೆ.

ಮೇಘವನ್ನು ಹೊಡೆದು ಮಳೆತರಿಸಿದ್ದೂ, ಸೂರ್ಯಮಂಡಲವು ವೃತ್ರನಿಂದ ಮರೆಯಾಗುವುದನ್ನು ತಪ್ಪಿಸಿದ್ದೂ – ಇಂದ್ರನ ಲೋಕಹಿತ ಕಾರ್ಯವೇ.

ಅರಣ್ಯದಲ್ಲಿ ಋಷಿಗಳು ಮಾಡುವ, ಪ್ರಾರ್ಥನೆ ಸ್ತುತಿ ಹವಿಸ್ಸುಗಳಿಂದ ತೃಪ್ತನಾಗಿ, ಸೋಮಪಾನದಿಂದ ಹುರುಪುಗೊಂಡು ಯಜಮಾನನಿಗೂ ತೃಪ್ತಿ ಮತ್ತು ರಕ್ಷಣೆ ತರುತ್ತಾನೆ.

ಯಶೋಪೇಕ್ಷಿ ಇಂದ್ರನ ವಜ್ರಾಯುಧದ ಬಗ್ಗೆ ಭಕ್ತರಿಗೆ ಗೌರವವಿದೆ. ನಿಪುಣ ಸಾರಥಿಯ ರಥದಲ್ಲಿರುವ ಇಂದ್ರನನ್ನು ಪ್ರತಿಭಟಿಸುವ ಕ್ರೂರಿಗಳಾಗಲೀ ಶತ್ರುಗಳಾಗಲೀ ಯಾರೂ ಇಲ್ಲ.

ಇಂದ್ರನು ಯಜ್ಞಕ್ಕೆ ಆಗಮಿಸಿ ತೃಪ್ತಿಗೊಂಡು ಅಕ್ಷಯಧನವನ್ನು ಯಜ್ಞಕರ್ತರಿಗೆ ಕೊಡಲಿ.

**ಸೂಕ್ತ - 56 ( ಏಷ ಪ್ರಪೂರ್ವೀರವ.....**

ಋಷಿ ಸವ್ಯಆಂಗೀರಸರು ಇಂದ್ರದೇವನನ್ನು ಜಗತೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನು ಉತ್ಸಾಹಿ ಸಾಹಸ ಶಕ್ತಿವಂತ. ಸೋಮಪಾನವೇ ಇಂದ್ರನ ಹರ್ಷಕ್ಕೆ ದೃಷ್ಟಶಕ್ತಿಯಾದವಾಸಕ್ಕೆ, ಶತ್ರುಹಿಂಸೆಗೆ ಉತ್ತೇಜಕ. ತಮೋರೂಪ ಶತ್ರುಗಳು ಹಿಂಸೆಯಿಂದ ಕೂಗಿಕೊಳ್ಳುವುದು, ವೃತ್ರನ ವಧೆ, ಮಳೆಗರೆದು ಸಮುದ್ರವಾಗುವಂತೆ ಇಂದ್ರನು ಮಾಡಿದ್ದು – ಸೋಮದ ಶಕ್ತಿಯಿಂದಲೇ.

ಇಂತಹ ಇಂದ್ರನು ಸುವರ್ಣರಥದಲ್ಲಿ ಬಂದು, ಯಜ್ಞಕರ್ತರ ಗುಂಪಿನಿಂದ ಸಂತೋಷಗೊಂಡು, ಭೂಮಿಯ ನಾನಾಪ್ರದೇಶಗಳ ಸಕಲ ಜೀವಾತುಗಳಿಗೂ ಬೇಕಾದ ಮಳೆಗರೆಯಲಿ.

**ಸೂಕ್ತ - 57 ( ಪ್ರಮಂಹಿಷ್ಠಾಯ.....**

ಸವ್ಯಆಂಗೀರಸ ಋಷಿಗಳು ಇಂದ್ರದೇವನನ್ನು ಜಗತೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಸುವರ್ಣನಿರ್ಮಿತ ವಜ್ರಾಯುಧದಿಂದ ವೃತ್ರವಧೆ ಆದ ಕೂಡಲೇ ಸಕಲ ಜಗತ್ತೂ ಇಂದ್ರನನ್ನು ಉದ್ದೇಶಿಸಿ ಯಾಗ ಮಾಡಲು ಪ್ರಾರಂಭಿಸಿದವು. ಹವಿಸ್ಸು ರೂಪದ ಅನ್ನವು ಹಿಂಸಾರಹಿತ ಯಾಗಕ್ಕಾಗಿ, ಪಾವನೆಯಾದ ಉಷೆಯಿಂದ ಸಂಪಾದಿತವಾದದ್ದು. ಇದರಿಂದ ಇಂದ್ರನು, ಯಾರಿಂದಲೂ ಪ್ರತಿಭಟಿಸಲು ಅಸಾಧ್ಯವಾದಷ್ಟುಬಲ, ಇಷ್ಟಬಂದಂತೆ ಸಂಚರಿಸಬಲ್ಲಬಲ, ಅವನಭಕ್ತರಿಗೂ ಧನಾದಿಬಲಗಳಿಸಲು ಸಾಧ್ಯವಾದದ್ದು.

ಇಂದ್ರನನ್ನು ಸ್ತುತಿಸುತ್ತಾ ಅವನ ಬಳಿಇರುವವರೆಲ್ಲರೂ, ಇಂದ್ರನ ಸಂಭಂಧಿಜನರೇ. ಪೃಥ್ವಿಯು ತನ್ನಲ್ಲಿ ಉತ್ಪತ್ತಿಯಾದ ಸಕಲ ಭೂತಗಳನ್ನೂ ಪ್ರೀತಿಸುವಂತೆ ಯಜ್ಞಕರ್ತರ ಸಕಲ ಸ್ತುತಿರೂಪದ ವಾಕ್ಯನ್ನೂ ಇಂದ್ರನು ಪ್ರೀತಿಸಲಿ. ಯಾಗಕರ್ತನ ಅಭಿಲಾಷೆ ಪೂರೈಸಲಿ.

**ಸೂಕ್ತ - 58 ( ನೂಚಿತ್ಸಹೋಜಾ......**

ಋಷಿನೋಧಾಗೌತಮರು ಅಗ್ನಿದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಅಗ್ನಿದೇವನು, ರುದ್ರಹಾಗೂ ವಸುಗಳಿಂದ ಪೂಜಿತ, ಅಗ್ರಾಸನ, ಶಕ್ತಿಪುತ್ರ, ತೃಣಗುಲ್ಮಾದಿ ಭಕ್ಷಣಗಳಿಂದ ಒಣಗಿದ ಕಟ್ಟಿಗೆಯಲ್ಲಿ ಜ್ವಲಿಸಿ, ಗಂಭೀರ ಶಬ್ದದಿಂದ ಚಲಿಸುವ ಸ್ವಭಾವದವನು.
ಮಾನವರಿಂದ ಸ್ತುತಿತನಾಗಿ ಅಧಿಕ ಹವಿಸ್ಸು ಪಡೆಯುತ್ತಾ, ಸಂಚರಿಸಿದ ಮಾರ್ಗವನ್ನೆಲ್ಲಾ ಕಪ್ಪಾಗಿಸುತ್ತಾನೆ. ಸ್ಥಾವರ ಜಂಗಮರು ಮುನ್ನುಗ್ಗುವ ಅಗ್ನಿಗೆ ಭಯಪಡುತ್ತಾರೆ. ದೇವತಾತ್ಮ ಪಡೆಯಲು, ಅಗ್ನಿಯನ್ನು ಭೃಗುಋಷಿ ಪೋಷಿಸಿದರು.

ಯಜ್ಞದ ಏಳು ಹೋತೃಗಳ ಆಹ್ವಾನ ಮನ್ನಿಸಿ, ಅಗ್ನಿಯು ಅನ್ನ ಪೂಜೆ ಹವಿಸ್ಸು ಪಡೆಯಲಿ. ಅಗ್ನಿಯು ತೃಪ್ತನಾಗಿ ಅವಿಚ್ಛಿನ್ನ ಸುಖ, ಕರ್ಮರೂಪ ಧನೈಶ್ವರ್ಯ, ದೃಢರಕ್ಷಣೆ, ಪಾಪಕಾರಿಶತ್ರುಗಳು ಹಾಗೂ ಪಾಪದಿಂದ ರಕ್ಷಣೆ ಕೊಡಲಿ.

**ಸೂಕ್ತ - 59 ( ವಯಾ ಇದಗ್ನೇ.....**

ನೋಧಾಗೌತಮಋಷಿ ಅಗ್ನಿವೈಶ್ವಾನರ ದೇವತೆಯನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ದ್ಯಾವಾಪೃಥಿವಿಗಳ ಪುತ್ರ, ಸಕಲ ಪ್ರಜೆಗಳಿಗೂ ಅದಿಪತಿ. ವಿಶ್ವದಲ್ಲಿರುವ ಅಗ್ನಿಗಳೆಲ್ಲಾ ಅಗ್ನಿದೇವನ ಶಾಖೆಗಳೇ.

ಅಗ್ನಿಯು ಮಾನವರ ನಾಭಿಯಲ್ಲಿ ಜಾಠರ ರೂಪದಿಂದ ಇದ್ದು ಮಾನವರಿಗೆ ದೃಢ ಅವಲಂಬನ ಕೊಟ್ಟಿದ್ದಾನೆ. ದ್ಯುಲೋಕಕ್ಕೆ ಶಿಖರದಂತೆ, ಭೂಲೋಕಕ್ಕೆ ನಾಭಿಯಂತೆ, ದ್ಯಾವಾಪೃಥಿವಿಗಳಿಗೆ ಅಧಿಪತಿಯಂತೆ ಇದ್ದಾನೆ. ಯಜ್ಞಕರ್ತರಿಗಾಗಿ ಜ್ಯೋತಿರೂಪದಲ್ಲಿ ಸೃಷ್ಟಿಯಾಗಿದ್ದಾನೆ.

ಪರ್ವತ, ಮೂಲಿಕೆ, ನೀರು, ಮಾನವರಲ್ಲಿನ ಧನಕ್ಕೆಲ್ಲಾ ವೈಶ್ವಾನರಾಗ್ನಿಯೇ ಒಡೆಯ. ಅಸುರರಿಂದ ಅಪಹೃತಧನವನ್ನು ದೇವತೆಗಳಿಗೆ ತಂದುಕೊಟ್ಟವನು – ಅಗ್ನಿ. ಎಲ್ಲಾ ಮಾನವರಲ್ಲೂ ತನ್ನ ಮಹತ್ವದಿಂದ ಐಕ್ಯಹೊಂದಿ ವೈಶ್ವಾನರಾಗ್ನಿಯು ಇದ್ದಾನೆ.

ಪುರನೀತ ರಾಜನಿಂದ ಹಾಗೂ ಶಾತವನೀಯನ ಮಗನಿಂದ ಸ್ತುತಿಸಲ್ಪಟ್ಟ ಅಗ್ನಿ ದೇವನು, ಯಜ್ಞಕರ್ತರ ಪ್ರಾರ್ಥನೆ ಮನ್ನಿಸಲಿ.

**ಸೂಕ್ತ - 60 ( ವಹ್ನಿಂಯಶಸಂವಿದಥಸ್ಯ.....**

ನೋಧಾಗೌತಮಋಷಿ ಅಗ್ನಿದೇವನನ್ನು ತ್ರಿಷ್ಟುಪ್‌ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಗ್ನಿಯು ಮನುಪುತ್ರ ಸೇವಿತ, ಹೃದಯದ ಪ್ರಾಣದಿಂದ ಉತ್ಪನ್ನನಾಗುವವ.

ಹರ್ಷದಾಯಕ ಜ್ವಾಲೆಯವ. ದೇವಮಾನವರಿಬ್ಬರಿಂದಲೂ ಸೇವಿತನಾದ ಅಗ್ನಿಯನ್ನು, ವಾಯುವು ಭೃಗುಮಹರ್ಷಿಯ ಸ್ನೇಹಿತನನ್ನಾಗಿ ಮಾಡಿದ.

ಅಗ್ನಿಯು, ಸೂರ್ಯ ಉದಯಕ್ಕೆ ಮೊದಲೇ ವೇದಿಕೆಯ ಮೇಲೆ ಪ್ರತಿಷ್ಠಿತನಾಗಿ, ಗುಣಗಾನ ಸ್ತೊತ್ರ ಹವಿಸ್ಸಿನಿಂದ ಸೇವಿತನಾಗುತ್ತಾನೆ. ಉತ್ತಮ ವಂಶೋತ್ಪನ್ನ ಯಜ್ಞಕರ್ತನು, ಅಗ್ನಿಯನ್ನು ಯಜ್ಞಭೂಮಿಗೆ ಆಹ್ವಾನಿಸುತ್ತಾನೆ.

**ಸೂಕ್ತ - 61 ( ಅಸ್ಮಾ ಇದುಪ್ರತವಸೇ.....**

ನೋಧಾಗೌತಮಋಷಿ ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾನೆ.

ಇಂದ್ರನು, ತನ್ನ ಶಕ್ತಿಗೆ ಅನುಗುಣವಾದ ಶತ್ರು ಉಳ್ಳವನು. ಅವರ ಮೇಲೆ ಬಿದ್ದು ಅವರ ಧನ ಅಪಹರಿಸುತ್ತಾನೆ. ಶತ್ರುನಾಶದಿಂದ ಪ್ರಭುತ್ವಸಾರುವ ಇಂದ್ರನನ್ನು, ಗಾಯತ್ರ್ಯಾದಿ ದೇವತೆಗಳು ಸ್ತುತಿಸುತ್ತಾರೆ.

ಇಂದ್ರನ ಸ್ತೋತ್ರದಿಂದ ಋಷಿ ತುರ್ವೀತಿ ನಿವಾಸದ ನೆಲೆ ಪಡೆದ, ಋಷಿನೋದ್ದು ವೀರ್ಯವಂತನಾದ, ಸೂರ್ಯನೊಡನೆ ಹೆಣಗುತ್ತಿದ್ದ ಏತಶ ಋಷಿ ಕಾಪಾಡಲ್ಪಟ್ಟ.

ಜಗತ್ತಿನ ನಿರ್ಮಾಣ ಮಹತ್ತಾದ ಸೋಮರಸವನ್ನು, ಇಂದ್ರನು ಗಟಗಟಿ ಕುಡಿದುಬಿಟ್ಟನು. ಭೂಮ್ಯಂತರಿಕ್ಷವನ್ನು ಮೀರಿಬೆಳೆದನು. ಯುದ್ಧದಲ್ಲಿ ನಿಪುಣತೆಯಿಂದ ಸಂಚರಿಸಿದನು.

ಗಂಗಾದಿನದಿಗಳು ಹರಿಯುವುದಕ್ಕೆ ಇಂದ್ರನ ಹೆದರಿಕೆಯೇ ಕಾರಣ.

ಪ್ರೀತ್ಯಾದರಗಳಿಂದ, ಉತ್ಕೃಷ್ಟಸ್ತೋತ್ರಗಳಿಂದ, ಹೃದಯಮನಸ್ಸುಗಳಿಂದ, ಯಜ್ಞದಿಂದ, ಸಮರ್ಥಶುದ್ಧ ವಾಕ್ಯಗಳಿಂದ, ಮಂತ್ರವಾಗ್ಯುಕ್ತಿಗಳಿಂದ, ಇಂದ್ರನನ್ನು ಋಷಿ ಸ್ತುತಿಸುತ್ತಾನೆ. ಶತ್ರುಗಳನ್ನು ಹಿಂಸಿಸುವುದರಲ್ಲಿ ಈ ಸ್ತೋತ್ರಗಳು ಕಾರ್ಯಕಾರಿ. ಸಾರ್ಥಕ ಋಕ್ ಹಾಗೂ ಸರ್ವಶ್ರೇಷ್ಠ ಹವಿಸ್ಸು ಅರ್ಪಿಸುವ ಯಜಮಾನನಿಗೆ ಇಂದ್ರನು ಏಕಮನಸ್ಕನಾಗಿ, ಕರ್ಮಫಲಕ್ಕನುಗುಣವಾಗಿ ಅನುಗ್ರಹಿಸುತ್ತಾನೆ.

ಗೋತಮವಂಶೋತ್ಪನ್ನ ಋಷಿಗಳಿಗೆ, ಪಶು ಧನ ರಕ್ಷಣೆ ಅನುಗ್ರಹ ಮಾಡಲು ಇಂದ್ರನು ಯಜ್ಞಭೂಮಿಗೆ ಬರಲು - ಋಷಿಯು ಆಹ್ವಾನಿಸುತ್ತಾನೆ.

**ಸೂಕ್ತ** - 62 ( **ಪ್ರಮನ್ಮಹೇ....**

ನೋಧಾಗೌತಮಋಷಿ ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಪಣಿಗಳಿಂದ ಅಪಹೃತ ಗೋವುಗಳನ್ನು ಹುಡುಕಿದ ಫಲವಾಗಿ, ದೇವತೆಗಳ ನಾಯಿ - ಸುರಮೆಯು, ತನ್ನ ಮಗುವಿಗೆ ಗೋಕ್ಷೀರ ಪಡೆಯಿತು. ಗೋತಮ ಪೂರ್ವಜರಾದ ಆಂಗಿರಸರು ಗೋವುಗಳನ್ನು ಪಡೆದು ಸಂತುಷ್ಟರಾದರು. ಇವು ಇಂದ್ರನಿಂದಾದ ಕಾರ್ಯವೇ.

ಇಂದ್ರನು ಉಷ ಮತ್ತು ಸೂರ್ಯಯುಕ್ತನಾಗಿ ಅಂಧಕಾರ ನಾಶಮಾಡಿದ, ಭೂಮಿಯ ಎತ್ತರಪ್ರದೇಶವನ್ನು ಸಮಮಾಡಿದ, ಅಂತರಿಕ್ಷದ ಮೂಲವನ್ನು ದೃಢಪಡಿಸಿದ, ಗಂಗಾದಿ ನಾಲ್ಕು ನದಿಗಳಿಗೂ ನೀರೊದಗುವಂತೆ ಮಾಡಿದ, ಒಂದಾಗಿದ್ದ ಸ್ತ್ರೀರೂಪದ ಭೂಮಿ ಆಕಾಶಗಳನ್ನು ಪ್ರತ್ಯೇಕಿಸಿದ. ಸರದಿಯಮೇಲೆ ನಿತ್ಯತಾರುಣ್ಯದಿಂದ ಹಗಲು ರಾತ್ರಿಗಳು, ಭೂಮಿ ಆಕಾಶಗಳನ್ನು ಆವರಿಸುವಂತೆ ಮಾಡಿದ, ಅಪರಿಪಕ್ವಗೋವುಗಳಲ್ಲೂ ಕ್ಷೀರಉಂಟುಮಾಡಿದ, ವಿವಿಧ ಬಣ್ಣದ ಗೋವುಗಳ ಕ್ಷೀರವೆಲ್ಲಾ ಶುಭ್ರ ಬಿಳುಪಾಗಿರುವಂತೆ ಮಾಡಿದ.

ಲೋಕರಕ್ಷಣಾರ್ಥ ಕರ್ಮಮಾಡುವ, ಇಂದ್ರನ ಶಬ್ದಕ್ಕೇ ಮೇಘಪರ್ವತ ವಲಾಸುರರೆಲ್ಲಾ ಭಯಗೊಳ್ಳುತ್ತಾರೆ. ಇಂದ್ರನನ್ನು ಯುದ್ಧಮಾಡಿ ಒಲಿಸಿಕೊಳ್ಳಲು ಸಾಧ್ಯವಿಲ್ಲ. ಸ್ತುತಿ ಸತ್ರಯಾಗದಿಂದ ಆಂಗೀರಸರು ಇಂದ್ರನನ್ನು ಪಡೆದರು. ಸ್ತುತಿವಾಕ್ಯ ನಮಸ್ಕಾರಗಳು ಮಂಗಳಕರ ಪವಿತ್ರಕರ್ಮ ಮಹಾಬಲಿಷ್ಠ ಸೋಮ - ಇವುಗಳಿಂದ ಒಲಿಸಿಕೊಳ್ಳಬಹುದು.

ಗೌತಮ ಪುತ್ರಗೋದಸರು ಅನಾದಿಕಾಲದಿಂದ ಇಂದ್ರಕರ್ಮ ಮಾಡುತ್ತಿದ್ದಾರೆ. ಪ್ರಾತಃಕಾಲದಲ್ಲಿ ಇಂದ್ರನು ಶೀಘ್ರವಾಗಿ ಬರಲಿ, ಯಾಗದಲ್ಲಿ ಸುಪ್ರೀತನಾಗಲಿ ನಾಶರಹಿತಧನ ದಾನಮಾಡಲಿ.

**ಸೂಕ್ತ** - 63 ( **ತ್ವಂಮಹಾ.....**

ನೋಧಾಗೌತಮಋಷಿ ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಯಾವಮನುಷ್ಯನೂ ದೃಢಚಿತ್ತನಾಗಿದ್ದರೆ - ಅಪ್ರೀತನಾಗಿದ್ದರೂ ಸಹಾ - ಅವನನ್ನು ಹಿಂಸೆ ಮಾಡದಿರುವುದು ಇಂದ್ರನ ಸ್ವಭಾವ. ಇಂದ್ರನನ್ನು ಸ್ತೋತ್ರಾಹ್ವಾನ ಮಾಡಿದೊಡನೆಯೇ ವಜ್ರಾಯುಧದೊಡನೆ ಬಂದು ಶತ್ರುಗಳನ್ನೂ ಶತ್ರುಪಟ್ಟಣಗಳನ್ನೂ ನಾಶಮಾಡಿ, ಶತ್ರುಗಳಿಗೆ ಅಪಮಾನ ಅಪಜಯ ಉಂಟುಮಾಡುತ್ತಾನೆ.

ಇಂದ್ರನ ಭಯದಿಂದಲೇ ವ್ಯಾಪಿತ ಭೂತಗಳೂ, ದೃಢಪರ್ವತಗಳೂ, ಕಂಪಿಸುತ್ತವೆ. ಭೂವ್ಯಾಕಾಶಗಳಿಗೆ ಒದಗಿದ ಅಸುರ ಸಂಭಂಧಿಭಯ ನಾಶವಾಗುತ್ತದೆ.

ಇಂದ್ರನು ತೇಜಸ್ವೀ ಯುವಕ ಕತ್ಸನಿಗೆ ಸಹಾಯ ಮಾಡಿ. ರಾಕ್ಷಸ ಶಿಷ್ಣನನ್ನು ಕೊಂದನು, ಕುತ್ಸಕ ಋಷಿಯ ಶತ್ರುಗಳ ಪಟ್ಟಣಗಳನ್ನೂ ನಾಶಮಾಡಿದ. ಅಸುರ ಅಂಪಸ್ಯನ್ನು ಕೊಂದು ರಾಜ ಸುದಾಸನಿಗೆ ಧನವಿತ್ತ.

ನಾನಾವಿಧ ಆಹಾರಗಳು ಭೂಮಿಯಲ್ಲಿ ವರ್ಧಿಸುವಂತೆ ಮಾಡಿ, ಅವುಗಳಿಗೆ ಧಾರಾಕಾರ ನೀರನ್ನು ಒದಗಿಸಿದವ ಇಂದ್ರನೇ.

ಯಾವುದೇ ಲಾಭಕ್ಕೂ ಇಂದ್ರನ ರಕ್ಷಣೆ ಅವಶ್ಯಕ, ಇದಕ್ಕಾಗಿ ಗೋತಮಪುತ್ರರು ಮಂತ್ರಪೂರ್ವಕ ಹವಿಸ್ಸನ್ನು ಶಾಸ್ತ್ರಪೂರ್ವಕವಾಗಿ ಅರ್ಪಿಸಿ, ಇಂದ್ರನ ಬುದ್ಧಿಕರ್ಮಗಳಿಂದ ಆರ್ಜಿತವಾದ ಧನ ಅನ್ನ ದಯಪಾಲಿಸಲು ಶೀಘ್ರವಾಗಿ ಯಜ್ಞಕ್ಕೆ ಬರಲು ಪ್ರಾರ್ಥಿಸುತ್ತಾರೆ.

**ಸೂಕ್ತ - 64 ( ವೃಷ್ಣೇಶರ್ಧಾಯ.....**

ಋಷಿ ನೋಧಾಗೌತಮರು ಮರುದ್ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಸ್ವತಃ ಶುದ್ಧರಾದ, ಇತರರನ್ನು ಶುದ್ಧ ಗೊಳಿಸುವ ಮರುದ್ದೇವತೆಗಳು ಸರ್ವಜ್ಞರು. ಚಿತ್ರವಿಚಿತ್ರ ಆಭರಣ, ಆಯುಧಧಾರಿಗಳು. ಇಂದ್ರನನ್ನೇ ಆಯುಧಸ್ಥಾನದಲ್ಲಿ ಹೊಂದಿರುವವರು. ಸೋಮವನ್ನೇ ಪಾನೀಯವಾಗಿ ಉಳ್ಳವರು. 'ಋಜೀಷ' ಎಂಬ ಪಾತ್ರೆಯಲ್ಲಿ ಹವಿಸ್ಸನ್ನು ಸ್ವೀಕರಿಸುವವರು. ಜಿಂಕೆಗಳನ್ನು ಹೂಡಿದರಥದಲ್ಲಿ ಶೀಘ್ರವಾಗಿ ಚಲಿಸುವವರು, ದೃಢಪದಾರ್ಥಗಳನ್ನೂ ಛಲಿಸುವಂತೆ ಕಂಪಿಸುವಂತೆ ಮಾಡುವವರು – ಮರುದ್ದೇವತೆಗಳೇ.

ಮರುದ್ದೇವತೆಗಳು ಸ್ತುತಿವಾಕ್ಯ ಉಚ್ಛರಿಸುವವರಿಗೆ ಪ್ರಸನ್ನರಾಗಿ, ಪೂಜಿಸದೇ ಇರುವವರನ್ನು ವಧಿಸುತ್ತಾರೆ. ಸ್ತೋತ್ರಮಾಡುವವರನ್ನು ಧನಿಕರನ್ನಾಗಿಯೂ, ಹಿಂಸಕರನ್ನು ವಧಿಸುವವರೂ ಆಗಿದ್ದಾರೆ. ಹಿತರಾದವರನ್ನು ಶೀಘ್ರವಾಗಿ ಬಂದು ರಕ್ಷಿಸುವವರೂ, ಅಹಿತರನ್ನು ಹನನಮಾಡುವ ಕೋಪಿಷ್ಠರೂ ಆಗಿದ್ದಾರೆ. ಮೇಘಕಂಪಿಸಿ ಮಿಂಚು ಉಂಟುಮಾಡಿ ಸಾರಯುತಮಳೆ ತರುವವರೂ, ಕಾಡುಗಳನ್ನು ನಾಶಮಾಡುವವರೂ ಆಗಿದ್ದಾರೆ.

ಮರುತ್ತುಗಳನ್ನು ಸ್ತುತಿಸಿದವರು, ಐಶ್ವರ್ಯಲಾಭ ಅನ್ನ ಅಶ್ವ ಧನ ಎಲ್ಲಾ ಪಡೆದು ಅಗ್ನಿಷ್ಟೋಮಾದಿಗಳನ್ನು ನೆರವೇರಿಸುತ್ತಾರೆ.

ನೋಧಾಗೌತಮರು ತಮ್ಮ ಯಜ್ಞಕ್ಕೆ ಆಹ್ವಾನಿಸಿ ಮರುದ್ದೇವತೆಗಳನ್ನು ಉಪಚರಿಸುತ್ತಾರೆ. ಕರ್ಮಕುಶಲ, ಸ್ತೋತ್ರಾರ್ಹಧನ ಸಂಪಾದಿಸುವ ಪುತ್ರ ಪೌತ್ರರನ್ನೂ, ಆ ಮಕ್ಕಳು ಮೊಮ್ಮಕ್ಕಳ ನೂರಾರುವರ್ಷಕಾಲ ಪೋಷಣೆಯನ್ನೂ, ಸಹಸ್ರಸಂಖ್ಯಾತ

ದ್ರವ್ಯವನ್ನು ತಾವು ಹೊಂದಿ ರಕ್ಷಣೆ ಪಡೆಯುವಂತಾಗಲೆಂದೂ ಮರುದ್ದೇವತೆಗಳನ್ನು ಸ್ತುತಿಸುತ್ತಾರೆ.

**ಸೂಕ್ತ - 65 ( ಪಶ್ವಾನ ತಾಯುಂ....**

ಪರಾಶರ ಶಾಕ್ತ ಋಷಿಗಳು ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಗ್ನಿಯು ಉದಕದಂತೆ ಸುಖದಾಯಕ, ಎಲ್ಲರ ಜಠರದಲ್ಲೂ ಇದ್ದುಕೊಂಡು ಆಹಾರ ಪಚನ ಮಾಡುತ್ತಾನೆ, ಅಂಧಕಾರ ಆವರಿಸಿರುವ ಕಾಲದಲ್ಲಿ ಅಗ್ನಿಯು ಪದಾರ್ಥಜ್ಞಾನ ಉಂಟುಮಾಡುತ್ತಾನೆ. ತನಗಾಗಿ ಹಾಗೂ ಇತರ ದೇವತೆಗಳಿಗಾಗಿ ಹವಿಸ್ಸನ್ನು ಯಜ್ಞದಲ್ಲಿ ಸ್ವೀಕರಿಸುತ್ತಾನೆ, ಅಗ್ನಿಯನ್ನು ಹುಡುಕುತ್ತಾ ಭೂಮಿಗೆ ದೇವತೆಗಳು ಬಂದು ಭೂಮಿಯು ಸ್ವರ್ಗವಾಗುತ್ತದೆ.

ಅಗ್ನಿಯು ಅನ್ನಕ್ಕೆ ಕಾರಣ. ಜಲಮಧ್ಯದಲ್ಲಿ ಅಡಗಿರುವ ಅಗ್ನಿ, ಸಂಕುಚಿತನಾಗಿದ್ದು ಎಚ್ಚೆತ್ತಾಗ ಪ್ರಬುದ್ಧನಾಗಿ ಕಾಣುತ್ತಾನೆ. ಜಲಪ್ರವಾಹವನ್ನು ಹೇಗೆ ತಡೆಯಲಾಗುವುದಿಲ್ಲವೋ ಹಾಗೇ, ಸುಡುವ ಅಗ್ನಿಯ ಶಕ್ತಿಯನ್ನೂ ನಿವಾರಿಸಲು ಅಸಾಧ್ಯ.

ಉದಕದೊಂದಿಗೆ ಉತ್ಪನ್ನನಾದ ಅಗ್ನಿಯು ಉದಕಕ್ಕೆ ಸಹೋದರ. ವಾಯುಪ್ರೇರಿತನಾಗಿ ವನಸ್ಪತಿ ಔಷಧಿಸಮೇತ ಕಾಡನ್ನೂ ಸುಟ್ಟುಬಿಡುತ್ತಾನೆ.

**ಸೂಕ್ತ - 66 ( ರಯಿರ್ನಚಿತ್ರಾ.....**

ಪಾರಾಶರಶಾಕ್ತ ಋಷಿ ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ನಿಂದ ಅರ್ಚಿಸುತ್ತಾರೆ.

ಅಗ್ನಿದೇವನು ಗೃಹಕ್ಕೆ ಅಲಂಕಾರಭೂತ, ಕನ್ನಿಕೆಯರ ಕನ್ಯತ್ವ ಹೋಗಲಾಡಿಸುವವ, ಸ್ತ್ರೀಯರಿಗೆ ಪತಿದಾತ, ಯಜ್ಞಘಾತಕರನ್ನು ನಾಶಮಾಡುತ್ತಾನೆ. ಹವಿರ್ವಹನ ಕಾರ್ಯದಲ್ಲಿ ಸಂತೋಷಿಸುತ್ತಾನೆ.

ತುಪ್ಪ ಹಾಗೂ ಸೋಮದ್ರವ್ಯದಿಂದ ಪ್ರಕಾಶಗೊಳ್ಳುವ ಅಗ್ನಿಯು ಇಂದ್ರನೊಂದಿಗೆ ಉತ್ಪನ್ನ ನಾಗುತ್ತಾನೆ. ತನ್ನನ್ನು ಸ್ತುತಿಸುವವರನ್ನು ಅನ್ನ ಕೊಟ್ಟು ಶತ್ರುಭಯದಿಂದ ನಿವಾರಿಸುತ್ತಾನೆ.

**ಸೂಕ್ತ - 67 ( ವನೇಷ್ವಜಾಯುರ್ಮರ್ತೇಷು.....**

ಪಾರಾಶರಶಾಕ್ತ ಋಷಿ ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ನಲ್ಲಿ ಅರ್ಚಿಸುತ್ತಾರೆ.

ಅಗ್ನಿಯು ದೇವತೆಗಳ ಹವಿಸ್ಸಿನೊಂದಿಗೆ ಉದಕದಲ್ಲಿ ಅಡಗಿಕೊಂಡಿದ್ದರಿಂದ, ಭಯಗೊಂಡ ದೇವತೆಗಳು, ಅಗ್ನಿಪರಮಂತ್ರದಿಂದ, ಅವನು ಇರುವ ಸ್ಥಳವನ್ನು ತಿಳಿದರು.

ಯಾಗದಲ್ಲಿ ಮೊದಲ ಪೂಜೆ ಅಗ್ನಿಗೆ. ನಂತರವೇ ಯಾಗಪ್ರಾರಂಭ. ವನಸ್ಪತಿ ಔಷಧಿ ಫಲಪುಷ್ಪಗಳಿಗೆ ಮಹಿಮೆ ಉಂಟುಮಾಡುವವ ಅಗ್ನಿಯೇ, ತನ್ನನ್ನು ಸ್ತುತಿಸುವವರಿಗೆ ಧನಾದಿಗಳನ್ನು ಕೊಡುತ್ತಾನೆ.

ಭೂಮಿಯ ಮೇಲಿರುವುದೆಲ್ಲಾ ಅಗ್ನಿಗೆ ಆಹಾರವೇ. ಪಶುಗಳಿಗೆ ಬೇಕಾದ ಹುಲ್ಲು ನೀರು ಇರುವಪ್ರದೇಶವನ್ನು ಕಾಪಾಡುವ ಸಲುವಾಗಿ, ಅಗ್ನಿಯು, ಪಶುಗಳಿಗೆ ಸಂಚಾರಕ್ಕೆ ಅಸಾಧ್ಯವಾದ ಗುಹೆಗಳಲ್ಲಿ ವಾಸಿಸಲಿ. ಯಜ್ಞಕಾರ್ಯಗಳನ್ನು ಅಗ್ನಿ ಮಂಗಳಕರಮಾಡಲಿ.

**ಸೂಕ್ತ - 68 ( ಶ್ರೀಣನ್ನುಪ.....**

ಪಾರಾಶರಶಾಕ್ತ ಋಷಿ ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅರಣಿಯ ಮಥನದಿಂದ ಯಜ್ಞಶಾಲೆಯಲ್ಲಿ ಅಗ್ನಿಯು ಉತ್ಪನ್ನನಾಗುತ್ತಾನೆ. ಯಜಮಾನನ ದೂತನಾಗಿ ಅಗ್ನಿಯು ದೇವಾದಿಗಳನ್ನು ಯಜ್ಞಕ್ಕೆ ಆಹ್ವಾನಿಸುತ್ತಾನೆ. ಇವರುಗಳಿಗೆ ಹವಿಸ್ಸನ್ನು ತಲುಪಿಸುವಾಗ ಪ್ರಪಂಚವನ್ನೆಲ್ಲಾ ಪ್ರಕಾಶದಿಂದ ಬೆಳಗುತ್ತಾನೆ.

ಇಂದ್ರಾದಿದೇವತೆಗಳು ಪ್ರಪಂಚದ ಚರಾಚರಾತ್ಮಕ ಮಹಿಮೆಯನ್ನು ಹಿಡಿದಿಟ್ಟುಕೊಂಡಿದ್ದಾರೆ. ಅಗ್ನಿಯನ್ನು ಉದ್ದೇಶಿಸಿ ಮಾಡಿದ ಕರ್ಮ ಮತ್ತು ಅವನ ಪ್ರಸಾದದಿಂದ ದೇವತ್ವವನ್ನು ಪಡೆಯಬಹುದು. ಸಂತಾನಪ್ರದವಾದ ವೀರ್ಯ, ಸಮರ್ಥಪುತ್ರರನ್ನೂ ಪಡೆಯಬಹುದು.

ಅಗ್ನಿಯಲ್ಲಿ ಯಾಗಮಾಡುವವರು, ಯಾಗಸಾಧನ ಧನಾದಿಗಳನ್ನು ಪಡೆಯುತ್ತಾರೆ. ವಿಶ್ವಾಯು ಅಗ್ನಿಯು ಕರ್ಮಮಾಡುವವರಿಗೆ, ಕರ್ಮಮಾಡಲು ಅಪೇಕ್ಷಿಸುವವರಿಗೂ, ಧನಾದಿಗಳನ್ನು ಕೊಡಲಿ.

**ಸೂಕ್ತ - 69 ( ಶುಕ್ರಃ ಶುಶುಕ್ವಾ.....**

ಪಾರಾಶರಶಾಕ್ತ ಋಷಿ ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ನಿಗರ್ವಿಯಾದ ಅಗ್ನಿಯು ದೇವತೆಗಳಿಗ ಪುತ್ರನಂತ, ತನ್ನಾಶ್ರಿಗಳಿಂದಲೇ ದೇವತೆಗಳಿಗೆ ಹವಿಸ್ಸನ್ನು ಒಯ್ಯುತ್ತಾನೆ. ಅನ್ನವನ್ನು ಪಚನಮಾಡಿ ರುಚಿಕರವಾಗಿಸುತ್ತಾನೆ. ಆಹ್ವಾನಿಸಿದ ದೇವತ್ವವನ್ನು, ಯಜ್ಞದಲ್ಲಿ ತಾನೇ ವಹಿಸಿಕೊಂಡು ಯಜ್ಞಗೃಹವನ್ನು ಸುಖವಾಗಿಡುತ್ತಾನೆ.

ಯಜ್ಞಕ್ಕೆ ರಾಕ್ಷಸಬಾಧೆಯಾದಾಗ ಅಗ್ನಿಯು ತನ್ನ ಸಮಾನಾದ ಶಕ್ತಿವಂತ ಮರುತ್ತುಗಳೊಂದಿಗೆ ಸೇರಿ ರಾಕ್ಷಸರೊಡನೆ ಹೋರಾಡುತ್ತಾನೆ.

ಅಗ್ನಿಯು ಯಜಮಾನನಿಗೆ ಅಭಿಮತಫಲವನ್ನು ಅನುಗ್ರಹಿಸಲಿ.

**ಸೂಕ್ತ - 70 ( ವನೇಮ ಪೂರ್ವೀರರ್ಯೋ.....**

ಪಾರಾಶರಶಾಕ್ತ ಋಷಿ ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಸ್ಥಾವರ ದಾಷ್ಯವಸ್ತು ವೃಕ್ಷಗಳಿಂದ, ಚರರಾದ ಮನುಷ್ಯಾದಿಗಳಿಂದ ಪೂಜಿತನಾಗಿ, ಅಭಿವೃದ್ಧಿಹೊಂದಿ, ಕೈಗೊಂಡ ಕೆಲಸಗಳನ್ನು ಸಹನ ಶಕ್ತಿಯಿಂದ ಸಾಧಿಸುತ್ತಾನೆ.

ಮನುಷ್ಯರ ಹಾಗೂ ದೇವತೆಗಳ ಜನನಾದಿಸಂಭಂದ ವಿಷಯಗಳನ್ನೆಲ್ಲಾ ತಿಳಿದಸರ್ವಜ್ಞ.

ಇಂತಹ ಅಗ್ನಿಯು ಪ್ರಸಾದರೂಪವಾಗಿ ಸತ್ಯಫಲಗಳನ್ನು ಕೊಡಲಿ. ಭೂಮಿಯಲ್ಲಿನ ಭೂತಜಾತಗಳಿಂದ ರಕ್ಷಣೆ ಒದಗಿಸಿ ಹಿತತರಲಿ. ಸಂಗ್ರಾಮದಲ್ಲಿ ಶತ್ರುಭಯಂಕರನಾಗಿ ಯಜಮಾನನಿಗೆ ದೀಪ್ತನಾಗಿರಲಿ. ಯಥೇಚ್ಛಅನ್ನ ಉಪಾಯನರೂಪದ ಅನ್ನ ಧನಗಳನ್ನು ಕೊಡಲಿ.

**ಸೂಕ್ತ - 71 ( ಉಪಪ್ರಜಿನ್ವನ್ನು ಶತೀ.....**

ಪಾರಾಶರಶಾಕ್ತ ಋಷಿ ಅಗ್ನಿದೇವನನ್ನು ದ್ವಿಪದಾವಿರಾಟ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಯಜ್ಞಕರ್ತರ ಅಗ್ನಿಯೊಳಗಿನ ಸ್ನೇಹವಿಶ್ವಾಸಗಳು ವಸಿಷ್ಠರ ಕಾಲದಿಂದ ಬಂದು, ಅಂಗೀರಸರಿಂದಲೂ ಮುಂದುವರೆದಿದೆ.

ಬಲಿಷ್ಠ ಅಗ್ನಿಯಿಂದ ಪಣಿನಾಶವಾಗಿ, ಗೋರಕ್ಷಣೆಯಾದನಂತರ ಸೂರ್ಯ ದಿನದ ಸುಖದೊರಕಿಸದನು. ಅಂಗೀರಸರು ಅಗ್ನಿಸ್ಥಾಪನೆಮಾಡಿದರು. ಧನಿಕ ಯಜ್ಞಕರ್ತರು - ವಿಷಯಾಸಕ್ತಿರಹಿತರಾಗಿ - ದೇವತೆಗಳ ಹಾಗೂ ಮಾನವರ ಪೋಷಣೆಗಾಗಿ ಅಗ್ನಿಹೋತ್ರಾದಿ ಕರ್ಮ ಮಾಡತೊಡಗಿದರು.

ವಾಯುವಿನಿಂದ ಅಗ್ನಿಯು ಶುಭ್ರವರ್ಣನಾಗಿ ದೌತ್ಯಕರ್ಮ ಮಾಡುತ್ತಿದ್ದಾಗ ರಾಕ್ಷಸಾದಿಗಳು ಹವಿಸ್ಸುಪಡೆಯಲು ಬಂದು, ಹೆದರಿ ಹಿಂದೆ ಓಡಿಹೋಗುತ್ತಾರೆ.

ವಿಶ್ವಾಸದಿಂದ ಹವಿಸ್ಸನ್ನು ಅರ್ಪಿಸುವವರಿಗೆ ಅಭಿವೃದ್ಧಿ ಕೊಟ್ಟು ಅವರ ಅಭಿಲಾಷೆಗಳನ್ನು ದೇವತೆಗಳಿಗೆ ತಿಳಿಸುತ್ತಾನೆ.

ಜಠರಾಗ್ನಿ ರೂಪದ ತೇಜಸ್ಸು ಯಾಜ್ಞಕರಿಗೆ ತೇಜೋರೂಪವಾಗಿರಲಿ. ಅದರಿಂದ ಬಲಿಷ್ಠ ಜರಾರಹಿತ ಜ್ಞಾನಿಪುತ್ರರು ಜನಿಸಿ, ಸತ್ಕರ್ಮನಿರತರಾಗಲಿ. ಮಿತ್ರ ವರುಣರು ಗೋಕ್ಷೀರವನ್ನು ಅಮೃತದಂತೆ ಮಾಡಲಿ. ನಮಗೆ ತೊಂದರೆ ಕೊಡುವ ಮುಂಚೆಯೇ ನಿವಾರಿಸಿ ಅಮೃತತ್ವವನ್ನು ಕೊಡಲಿ.

**ಸೂಕ್ತ - 72 ( ನಿಕಾವ್ಯಾ ವೇದಸಃ ..........**

ಪಾರಾಶರಶಾಕ್ತ ಋಷಿ ಅಗ್ನಿ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಸಪತ್ನೀಕರಾಗಿ ಎಲ್ಲಾ ದೇವತೆಗಳೂ ಅಗ್ನಿಯಿಂದ ಸ್ವೀಕೃತ ಆಹುತಿಗಾಗಿ ಅಗ್ನಿಯನ್ನು ಹುಡುಕುತ್ತಾರೆ. ಭೂಮಿ ಆಕಾಶಗಳಲ್ಲಿ ರುದ್ರನಾಮದ ಅಗ್ನಿಯಿಂದ ಅರ್ಧಭಾಗ ಹವಿಸ್ಸನ್ನು ಇಂದ್ರ ಮರುದಾದಿ ದೇವತೆಗಳುಪಡೆದರು. ಮರುತ್ತುಗಳು ಮೂರು ಸಂವತ್ಸರಕಾಲ ಆಜ್ಯಹೋಮ ಮಾಡಿ ನಂತರವೇ ಯಜ್ಞಾರ್ಹರೂ ಅಮರರೂ ಆದದ್ದು.

ಅಗ್ನಿಯು ನಿತ್ಯನಾದ ಬ್ರಹ್ಮನನ್ನುದ್ದೇಶಿಸಿದ ಸ್ತೋತ್ರವನ್ನು ಸ್ವೀಕರಿಸುತ್ತಾನೆ. ಸ್ಥಾನಭದ್ರತೆಗಾಗಿ ಅಗ್ನಿಗೆ ಆದಿತ್ಯರು ಪುರೋಡಾಶಾದಿ ಅರ್ಪಿಸಿದರು. ಅಗ್ನಿಯ ಜ್ವಾಲೆಗಳು ಶುಭ್ರವರ್ಣದಿಂದ ನಾನಾದಿಕ್ಕುಗಳಿಗೆ ಪ್ರಸರಿಸಿ, ಹೋಮಕಾಲವೆಂದು ಆಪ್ತಾಸಿಸುತ್ತದೆ.

ಅಗ್ನ್ಯಾದೇಯಾದಿ ಇಪ್ಪತ್ತೊಂದು ಯಾಗಗಳನ್ನು ಅರ್ಹರು ಮಾಡಿದಾಗ ಅವರಿಗೆ ಅಕ್ಷಯಧನ ಗೋವು ವ್ರಿಹ್ಯಾದಿ ಯಜ್ಞಸಾಧನವನ್ನು ಅನುಗ್ರಹಿಸುತ್ತಾನೆ.

ಇಂತಹ ಅಗ್ನಿಯು ಯಾಜ್ಞಿಕರಹಸಿವು ನಿವಾರಣೆ ಮಾಡಿಸಿ ದೇವತೆಗಳಿಗೆ ಹವಿಸ್ಸನ್ನು ಒದಗಿಸಲಿ.

**ಸೂಕ್ತ - 73 ( ರಯಿರ್ನಯಃ ಪಿತ್ರವಿತ್ತೋ........**

ಪಾರಾಶರಶಾಕ್ತ ಋಷಿ ಅಗ್ನಿ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಗಾರ್ಹಪತ್ಯಾಹನದಲ್ಲಿ ಶಯನನಾದ ಅಗ್ನಿಯು ಸ್ತೋತ್ರ ಮಾಡುವವರ ಅಭಿವೃದ್ಧಿಕಾರಕ. ಎಲ್ಲರ ಮನೆಯಲ್ಲೂ ಇದ್ದು ಯಜ್ಞಶಾಲೆಯ ಸಮೀಪ ಇರುವವರನ್ನೆಲ್ಲಾ ರಕ್ಷಿಸುತ್ತಾನೆ.

ಪಶುಗಳು ಕ್ಷೀರಒದಗಿಸುವುದು, ನದೀನೀರು ಹರಿದುಬರುವುದು, ಹಗಲು ರಾತ್ರಿಗಳು ಬೆಳಕು ಕತ್ತಲೆಗಳನ್ನುಂಟುಮಾಡುವುದು, ಹವಿರಾದಿಗಳನ್ನು ಅನ್ನವನ್ನೂ ಯಜ್ಞದಲ್ಲಿ ಒಪ್ಪಿಸುವುದು – ಎಲ್ಲವೂ ಅಗ್ನಿಯ ಮೇಲಿನ ಪ್ರೀತಿಯಿಂದ.

ನಿರುಪದ್ರವ ಪ್ರದೇಶದಲ್ಲಿನ ಆಶ್ರಮದಲ್ಲಿ ಅಗ್ನಿ ಆರಾಧಕರಾದ ಯಜ್ಞಕರ್ತರು ಮನಸ್ಸು ಹೃದಯದಿಂದ ಯಜ್ಞ ಆಚರಿಸುತ್ತಾರೆ.

ದೇವತೆಗಳೂ ಸಂಗ್ರಾಮದಲ್ಲಿ ಲಬ್ಧಧನ ಭಾಗ ಪಡೆಯಲಿ. ಮರ್ತ್ಯರಾದ ಯಜ್ಞಕರ್ತರು ಬಹುಕಾಲ ಬಾಳುವಂತೆ, ಅವರ ಪುತ್ರರು ಐಶ್ವರ್ಯವಂತರಾಗಿ ವಿದ್ವಾಂಸರಾಗಿ ನೂರುಕಾಲ ಬಾಳುವಂತಾಗಲಿ. ಶತ್ರುಗಳೂ ಅವರ ಪುತ್ರರೂ, ಭಟರೂ, ನಾಶವಾಗಲಿ.

ಯಜ್ಞಕರ್ತರ ಅಗ್ನಿಸ್ತೋತ್ರ ಹವಿರರ್ಜನೆಗಳಿಂದ ಮನಸ್ಸು ಹೃದಯ ತೃಪ್ತಿಯಾಗಿ ಐಶ್ವರ್ಯ ಅನುಭವಿಸುವ ಯೋಗ್ಯತೆ ಪಡೆಯುವಂತಾಗಲಿ.

**ಸೂಕ್ತ - 74 ( ಉಪಪ್ರಯಂತೋ ಅಧ್ವರಂ...........**

ಗೋತಮೋ ರಾಹೂಗಣಃ ಋಷಿ ಅಗ್ನಿ ದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಆಂಗೀರಸಾಗ್ನಿಯು ಬಲದ ಪುತ್ರ ಹವಿರ್ದಾನ ದೇವತೆ. ಯಜ್ಞಗಳಿಗೆಲ್ಲಾ ಅದೃಷ್ಟಶಾಲಿ. ಅಗ್ನಿಯ ಅರ್ಚನೆಯಿಂದ ಸಿಕೃಷ್ಟ ಮನುಷ್ಯನೂ ಸಹಾ ಪ್ರತಿಷ್ಠಿತ ರಕ್ಷಿತನಾಗುತ್ತಾನೆ.

ಬಹುದೂರದಲ್ಲಿದ್ದರೂ ಅಗ್ನಿಯುಕೇಳಬಲ್ಲ, ಆದರೆ ಅವನ ರಥಾಶ್ವಚಲನೆಯ ಶಬ್ದ ಕೇಳದು.

ಅಗ್ನಿಯು ಸ್ತುತಿ ಮತ್ತು ಹವಿಸ್ಸಿನ ಸ್ವೀಕಾರಕ್ಕೆ ಯಜ್ಞಕ್ಕೆ ಬರಲಿ, ಯಜಮಾನನಿಗೆ ವೀರ್ಯದಾಯಕ ಧನ ಅನುಗ್ರಹಿಸಲಿ.

**ಸೂಕ್ತ - 75 ( ಜುಷಸ್ವ ಸ್ರಥಸ್ತಮಂ........**

ಗೋತಮೋ ರಾಹೂಗಣಃ ಋಷಿ ಅಗ್ನಿ ದೇವನನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಅಚಿಂತರೂಪಿ. ಅಗ್ನಿಯು ನಿಜವಾಗಿ ಯಾರು? ಅವನ ಅನುರೂಪ ಬಂಧು ಯಾರು? ಅಗ್ನಿಯನ್ನು ಕುರಿತು ಯಜ್ಞ ಮಾಡುವವರು ಯಾರು? ಇವನ್ನೆಲ್ಲಾ ತಿಳಿಯಲು ಋಷಿಗಳು ಅಸಮರ್ಥರಾಗಿದ್ದಾರೆ.

ಅಂತಹ ಅಗ್ನಿಯು ಯಜ್ಞವನ್ನು ಪುಷ್ಟೀಕರಿಸಲು, ಯಾಗಶಾಲೆಯನ್ನು ಪೂಜಾರ್ಹಗೊಳಿಸಲು, ಇಂದ್ರ ಮಿತ್ರ ವರುಣಾದಿಗಳನ್ನು ಪೂಜಿಸಲೆಂದು ಯಜ್ಞಕರ್ತರ ಪ್ರಾರ್ಥನೆ.

**ಸೂಕ್ತ - 76 ( ಕಾತಉಪೇತಿ...........**

ಗೋತಮೋ ರಾಹೂಗಣಃ ಋಷಿ ಅಗ್ನಿ ದೇವನ ಪ್ರಾರ್ಥನೆಯನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಮಾಡುತ್ತಾರೆ.

ಮನು, ಯಜ್ಞದಲ್ಲಿ ದೇವತೆಗಳನ್ನು ತೃಪ್ತಿಪಡಿಸಿದಂತೆ, ಈಗಲೂ ಸತ್ರಫಲ ಸೋಮಪತಿ ಇಂದ್ರನನ್ನು ಯಜ್ಞಕ್ಕೆ ಅಗ್ನಿಯು ಕರೆತರಲಿ –ಎಂದು ಯಜಮಾನನು ಅಪೇಕ್ಷಿಸುತ್ತಾನೆ, ಇದಕ್ಕಾಗಿ ಅಗ್ನಿಯನ್ನು ಪ್ರಸನ್ನೀಕರಿಸಿಕೊಳ್ಳುವುದು ಹೇಗೆ? ಯಾವಮನೋಭಾವದಿಂದ? ಯಾವಸ್ತುತಿಗಳಿಂದ? ಯಾವಪ್ರಯತ್ನಬಲದಿಂದ? – ಎಂದು ಯಜಮಾನನು ಚಿಂತಿಸುತ್ತಾನೆ.

ಭೂಮ್ಯಾಕಾಶಗಳು ಅಗ್ನಿಯನ್ನು ರಕ್ಷಿಸಲೆಂದು ಪ್ರಾರ್ಥಿಸುತ್ತಾನೆ.

**ಸೂಕ್ತ - 77 ( ಕಥಾದಾಶೇ ಮಾಗ್ನಯೇ..........**

ಗೋತಮೋ ರಾಹೂಗಣಃ ಋಷಿ ಅಗ್ನಿ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಪ್ರಾರ್ಥಿಸುತ್ತಾರೆ.

ಅಗ್ನಿಯು ಯಾಗನಡೆಸುವವರಲ್ಲಿ ಉತ್ತಮ, ಸಮಸ್ತ ಪದಾರ್ಥಗಳ ಸಂಪರ್ತ, ಸ್ನೇಹಿತನಂತೆ ಅಲಬ್ಧಧನವನ್ನು ಒದಗಿಸುವನು. ಯಜಮಾನನ ಪರವಾಗಿ ಯಾರು ಯಾರನ್ನು ಪೂಜಿಸಬೇಕೆಂದು ತಿಳಿದು ಆಯಾ ದೇವತೆಗಳನ್ನು ತಕ್ಕ ಸ್ತುತಿಗಳಿಂದ ತೃಪ್ತಿಪಡಿಸುತ್ತಾನೆ.

ಇಂತಹ ಅಗ್ನಿಯನ್ನು ಪ್ರಥಮ ಪೂಜೆಯಲ್ಲಿ ಅಭಿಮುಖಗೊಳಿಸಿಕೊಳ್ಳಬೇಕು, ಗೋತಮರು ಅರ್ಚಿಸಿದಂತೆಯೇ ಯಜಮಾನನೂ ಅರ್ಚಿಸುತ್ತಾನೆ.

ಅಗ್ನಿಯು ಹವಿರಾದಿಗಳನ್ನು ಅಂಗೀಕರಿಸಿ, ಯಜ್ಞಕರ್ತರಿಗೆ ಧನಾದಿಪುಷ್ಟಿ ಅನುಗ್ರಹಿಸಲಿ.

**ಸೂಕ್ತ - 78 ( ಅಭಿತ್ವಾಗೋತಮಾಗಿರಾ........**

ಗೋತಮೋ ರಾಹೂಗಣಃ ಋಷಿಗಳು, ಅಗ್ನಿ ದೇವನನ್ನು, ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಗೌತಮ ವಂಶಸ್ಥರು ಅಗ್ನಿದ್ಯೋತಕವಾದ ಮಂತ್ರಗಳಿಂದ ಅಗ್ನಿಯನ್ನು ಅಭಿಮುಖ ಮಾಡಿಕೊಳ್ಳಲು ಪ್ರಾರ್ಥನೆಯನ್ನು ಆಂಗೀರಸರಂತೆ ಗುಣದ್ಯೋತಕವಾದ ಮಧುರ ಮಂತ್ರವಾಕ್ಯಗಳಿಂದ ಸ್ತುತಿಸುತ್ತಾರೆ.

ಅಗ್ನಿಯು ಯಜ್ಞಹಿಂಸಕ ರಾಕ್ಷಸರನ್ನು ನಾಶಗೊಳಿಸಲು ಪ್ರಾರ್ಥನೆಸಲ್ಲಿಸುತ್ತಾನೆ.

**ಸೂಕ್ತ - 79 ( ಹಿರಣ್ಯಕೇಶೋ..........**

ಗೋತಮೋ ರಾಹೂಗಣಃ ಋಷಿ ಅಗ್ನಿ ದೇವನನ್ನು ತ್ರಿಷ್ಟುಪ್, ಉಷ್ಣಿಕ್, ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಗುಣದ್ಯೋತಕ ಸ್ತುತಿವಾಕ್ಯಗಳಿಂದ ಗೌತಮರು ಅಗ್ನಿಯನ್ನು ಸ್ತುತಿಸುತ್ತಾರೆ.

ಬಲಪ್ರಯೋಗದಿಂದ ಜನಿಸಿದ ಬಲದ ಪುತ್ರಅಗ್ನಿ, ತಾನಾಗಲೀ ತನ್ನಕಡೆಯವರಿಂದಾಗಲೀ ಹಗಲಿನಲ್ಲಾಗಲೀ ರಾತ್ರಿಯಲ್ಲಾಗಲಿ ಶತ್ರುಗಳನ್ನು ದಹಿಸಿ ನಾಶಮಾಡುವವ. ದೂರದ ಹಾಗೂ ಹತ್ತಿರದ ಶತ್ರುಗಳನ್ನು ಓಡಿಸಿ ನಾಶಮಾಡಿ ದೇವತೆಗಳನ್ನು ಯಜ್ಞಕರ್ತರಿಗಾಗಿ ಆಹ್ವಾನಿಸುವವ - ಅಗ್ನಿ.

ಚಲಿಸುವ ವಾಯು, ಪ್ರಕಾಶಕಿರಣಗಳು - ಕಪ್ಪು ಮೋಡವನ್ನು ಗುಡುಗಿನ ಬೆಳ್ಳನೆಯ ಮಳೆಹನಿತರುತ್ತವೆ. ಆರ್ಯಮ ಮಿತ್ರಾವರುಣ ಮರುದ್ಗಣಗಳು ಮಳೆಬೀಳುವಂತೆ ಮಾಡುತ್ತಾರೆ. ಅಗ್ನಿಯು ಆ ಸಾರಯುತ ಮಳೆನೀರಿನಿಂದ, ಸಾನಪಾನಾದಿಗಳು ಮಾಡುವಂತೆಮಾಡಿ ಮಾನವರಿಗೆ ತೃಪ್ತಿತರುತ್ತಾನೆ.

ಅಗ್ನಿಯು ಯಜ್ಞಕರ್ತರಿಗೆ, ಶತ್ರುಅಪಹರಿಸಲಾಗದ ದ್ರವ್ಯ, ಅಪಾರವಾದ ಅನ್ನಾದ್ಯಾಹಾರ, ಸುಜ್ಞಾನಸಹಿತ ಸುಖ ಜೀವನ, ಅಭಿವೃದ್ಧಿಧನ ದಯಪಾಲಿಸಲಿ.

**ಸೂಕ್ತ - 80 ( ಇತ್ಥಾಹಿ ಸೋಮಇನ್ಮದೇ...........**

ಗೋತಮೋ ರಾಹೂಗಣಃ ಋಷಿ ಇಂದ್ರ ದೇವನನ್ನು ಪಂಕ್ತಿಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಇಂದ್ರನು ಬಲಿಷ್ಠ ವಜ್ರಾಯುಧಧಾರಿ, ಇವನ ಬಲದ ವ್ಯಾಪ್ತಿ ತಿಳಿಯಲು ಯಾರಿಗೂ ಕಷ್ಟವೇ.

ಬ್ರಹ್ಮನೆಂಬ ಋತ್ವಿಜನ ಸ್ತೋತ್ರದಿಂದಾಗಿ, ಶ್ಯೇನರೂಪದ ಗಾಯತ್ರಿಯಿಂದ ಬಲರೂಪವಾದ ಸೋಮತರಲ್ಪಟ್ಟಿತ್ತು. ಸೋಮಪಾನ ಮಾಡಿದ ಇಂದ್ರನು ವಜ್ರಾಯುಧದಿಂದ ವೃತ್ರನ ಗಲ್ಲಕ್ಕೆ ಹೊಡೆದನು. ಈ ಹೊಡೆತದಿಂದ ಮೇಘ ಭೇದವಾಗಿ ಇಂದ್ರನ ಸ್ವಾಮಿತ್ವ ಪ್ರಕಟವಾಯಿತು. ವಾಯುವಿನಿಂದ ಯುಕ್ತಜೀವಿಗಳಿಗಾಗಿ ಮಳೆಬಂತು. ತೊಂಭತ್ತುನದಿಗಳನ್ನೂ ದಾಟಿಓಡುತ್ತಿದ್ದ ವೃತ್ರನನ್ನು ವಜ್ರಾಯುಧವು ಕೊಂದಿತು. ಇಂದ್ರನಕೋಪಕ್ಕೆ ಭೂ ಆಕಾಶಗಳು ನಡುಗಿದವು.

ವಸಿಷ್ಠರಂತೆ, ಮಾನವ ವರ್ಗದಪಿತೃ – ಅಥರ್ವಋಷಿ, ಮನುದಧೀಚಿಗಳು ಅರ್ಪಿಸಿದ ಹವಿಸ್ಸುಸಹಾ ಇಂದ್ರನನ್ನು ಸೇರಿದವು. ನೂರಾರು ಋಷಿಗಳು ಪುನಃ ಪುನಃ ಹವಿಸ್ಸನ್ನು ಅರ್ಪಿಸಿ, ಇಂದ್ರನನ್ನು ಸ್ತುತಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಇಂದ್ರನು ಋಷಿಗಳಿಗೆ ಆಹಾರ ಪಡೆಯುವ ಮಾರ್ಗವನ್ನು ಸೂಚಿಸಿದ್ದಾನೆ.

## ( ಅಷ್ಟಕ - 1, ಅಧ್ಯಾಯ - 6, ಸೂಕ್ತ - 81 ರಿಂದ 94 ರವರೆಗೆ)

**ಸೂಕ್ತ - 81 ( ಇಂದ್ರೋಮದಾಯ ವಾವೃದೇ.....**

ಗೋತಮೋ ರಾಹೂಗಣಃ ಋಷಿ ಇಂದ್ರದೇವನನ್ನು ಪಂಕ್ತಿಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರನ ಶಕ್ತಿವರ್ಧನೆಗಾಗಿ ಸಂತೃಪ್ತಿಗಾಗಿ ಅವನ ಮಹಿಮೆಯನ್ನು ಹೊಗಳುತ್ತಾರೆ. ಇವನಂತಹ ಮಹಾಮಹಿಮ ಹಿಂದೆ ಹುಟ್ಟಿಲ್ಲ ಮುಂದೆ ಹುಟ್ಟುವುದೂ ಇಲ್ಲ. ದೊಡ್ಡ ಸೈನ್ಯಬಲದ ಒಬ್ಬನೇ ಯೋಧ – ಇಂದ್ರ. ದ್ಯುಲೋಕದಲ್ಲಿ ಪ್ರಕಾಶಯುತ ನಕ್ಷತ್ರಗಳನ್ನು ನೆಲೆಗೊಳಿಸಿದವ, ಜಗತ್ತನ್ನೇ ಭದ್ರತೆಯ ಮೇಲೆ ಎತ್ತಿಹಿಡಿದವ.

ಇಂದ್ರನ ಭಕ್ತನು ಅಲ್ಪನಾದರೂ, ಪೂಜಿಸಿ ಅರ್ಪಿಸಿದ ಸೋಮದಿಂದ ಇಂದ್ರನು

ಸಂತೃಪ್ತನಾಗುತ್ತಾನೆ. ಯಜ್ಞಕರ್ತನನ್ನು ಅಭಿವೃದ್ಧಿಗೆ ತರುತ್ತಾನೆ. ಶತ್ರುಗಳಿಂದ ಗೆದ್ದ ಹಾಗೂ ಯಾಗಮಾಡದ ಧನ ಶೇಖರಿಸುವವರಿಂದ ತಂದ, ಐಶ್ವರ್ಯವನ್ನು ಕೊಡುತ್ತಾನೆ. ಶತ್ರುಗಳನ್ನು ನಾಶಮಾಡುತ್ತಾನೆ.

ಇಂದ್ರನು ಯಜ್ಞಕರ್ತನ ಬುದ್ಧಿಯನ್ನು ಚುರುಕುಗೊಳಿಸಲಿ; ಶಕ್ತಿವೃದ್ಧಿಸಲಿ, ಸಣ್ಣಹಾಗೂ ದೊಡ್ಡಯುದ್ಧಗಳಲ್ಲಿ ಸಹಾಯ ರಕ್ಷಣೆಕೊಡಲಿ. ತನ್ನಲ್ಲಿರುವ ಸಂವೃದ್ಧ ಧನ ಅನ್ನ ಗೋವುಗಳಲ್ಲಿ ಒಂದು ಭಾಗ ಹಂಚಲಿ – ಎಂದು ಯಜಮಾನನು ಪ್ರಾರ್ಥಿಸುತ್ತಾನೆ.

**ಸೂಕ್ತ - 82 ( ಉಪೋ ಷುಶೃಣುಹೀ.....**

ಗೋತಮೋ ರಾಹೂಗಣಃ ಋಷಿಗಳು ಇಂದ್ರದೇವನನ್ನು ಪಂಕ್ತಿ ಮತ್ತು ಜಗತೀ ಛಂದಸ್ಸಿನ ಋಕ್‌ನಲ್ಲಿ ಪ್ರಾರ್ಥಿಸುವರು.

ಇಂದ್ರನ ಅನುಗ್ರಹದಿಂದ ಪಡೆದ ಅನ್ನದಿಂದ ತೃಪ್ತರಾದ ಮೇಧಾವಿ ಯಾಜ್ಞಿಕರು ಹೊಸದಾಗಿ ಶ್ರೇಷ್ಠ ಸ್ತೋತ್ರಗಳನ್ನು ರಚಿಸಿದ್ದಾರೆ.

ಭಕ್ತರ ಇಷ್ಟಾರ್ಥಗಳನ್ನು ಕೇಸರಯುಕ್ತ ಕುದುರೆಗಳರಥದಲ್ಲಿ ಇಂದ್ರನು ಹೊತ್ತುತರುತ್ತಾನೆ. ಯಾಜ್ಞಿಕರನ್ನು ಪ್ರಿಯ ಹಾಗೂ ಸತ್ಯಾತ್ಕರನ್ನಾಗಿ ಮಾಡುತ್ತಾನೆ.

ಇಂದ್ರನು ಒಂದಿನ ಅಭಿಮಾನದಿಂದಲೇ ಸ್ತೋತ್ರ ವಾಕ್ಯಗಳನ್ನು ಕೇಳಲಿ. ಸೋಮಸ್ವೀಕರಿಸಲಿ. ಧನಾದಿಗಳನ್ನು ಹಂಚಲಿ. ನಂತರತನ್ನ ಪ್ರಣಯಿಯನ್ನು ಸೇರಲಿ.

**ಸೂಕ್ತ - 83( ಅಶ್ವಾವತಿ ಪ್ರಥಮೋ.................**

ಗೋತಮೋ ರಾಹೂಗಣಃ ಋಷಿ ಇಂದ್ರ ದೇವನನ್ನು ಜಗತೀ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಇಂದ್ರನಿಂದ ರಕ್ಷಿತರಾದವರು ಚೇತನಾರಹಿತರಾದರೂ, ಬಹುಧನ ಸಂಪದ್ಯುಕ್ತರಾಗಿರುತ್ತಾರೆ. ಯಜ್ಞದಲ್ಲಿ ಅರ್ಪಿಸುವ ಹವಿಸ್ಸು ಧ್ಯಾನಗಳಲ್ಲಿ ಇಂದ್ರನು ಮಂತ್ರಗಳಿಂದ ಸೇರಿಸಲ್ಪಟ್ಟಿದ್ದಾನೆ. ಯಜ್ಞದಯಾವಕಾರ್ಯ ಭಾಗಮಾಡುವಾಗಲೂ ಸಂತೋಷಿಸುತ್ತಾನೆ.

ದೇವತೆಗಳು ಉತ್ತರವೇದಿಕೆಯ ಚಮಸಪಾತ್ರೆಯಲ್ಲಿರುವ ಸೋಮತೀರ್ಥದ ಮೇಲೆ ಕಣ್ಣು ಇಟ್ಟಿದ್ದಾರೆ. ಇಂದ್ರನೂ ಸಹಾ.

ತೊಂದರೆಗೊಳಗಾಗಿದ್ದ ಅಂಗೀರಸರು ಪಣಿಗಳಿಂದ ಪಶು ಹಾಗೂ ಧನ ಸಂಪತ್ತು ಪಡೆದದ್ದು, ಅಥರ್ವಋಷಿ ಪಶುಗಳ ಅಪಹೃತಮಾರ್ಗ ತಿಳಿದದ್ದು, ಇಂದ್ರನಿಂದಲೇ. ಕವಿಪುತ್ರ ಭೃಗುವಿಗೆ ಇಂದ್ರನು ಸಹಾಯಮಾಡಿದ.

ಇಂದ್ರನಿಗಾಗಿ ಹವಿಸ್ಸನ್ನು ಹೊಂದಿರುವವರಿಗೆ ಶತ್ರು ಭಯವಿಲ್ಲ. ಉದ್ದೇಶಿತ ಕರ್ಮನಿರತರಾಗಿ ಪುತ್ರಾದಿಸಂಪತ್ತು ಮಂಗಳಕರ ಬಲ ಹೊಂದುತ್ತಾರೆ. ಅಂತಹ ಇಂದ್ರನನ್ನು ಯಜ್ಞಮಾಡಿ ಪೂಜಿಸೋಣ.

**ಸೂಕ್ತ - 84 ( ಅಸಾವಿ ಸೋಮ ಇಂದ್ರತೇ..........**

ಗೋತಮೋ ರಾಹೂಗಣಃ ಋಷಿ ಇಂದ್ರ ದೇವನನ್ನು ಅನುಷ್ಟುಪ್, ಉಷ್ಣಿಕ್, ಪಂಕ್ತಿ, ಗಾಯತ್ರೀ, ತ್ರಿಷ್ಟುಪ್ ಬೃಹತೀ ಸತೋಬೃಹತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನ ದೇಹವನ್ನೆಲ್ಲಾ ಪ್ರಭಲ ಬಲಶಾಲಿಯುತವಾಗಿಸಲು ಸೋಮರಸ ಪ್ರವಾಹವೇ ಅವನ ಕಡೆಹರಿಯುತ್ತದೆ. ಇಂದ್ರನು ಕುಡಿದು ಉಳಿಸಿದ ಸೋಮರಸಪಾನ ಮಾಡಿ, ಶ್ವೇತವರ್ಣದ ಹಸುಗಳು ಕಾಂತಿಯುತವಾಗಿ, ತಮ್ಮ ಹಾಲಿನೊಂದಿಗೆ ಸೋಮರಸವನ್ನು ಸೇರಿಸುತ್ತವೆ ಮತ್ತು ಇಂದ್ರನ ವೀರ್ಯಕರ್ಮವನ್ನು ಪ್ರಶಂಸಿಸುತ್ತವೆ.

ಇಂದ್ರನು ದಧೀಚಿಯ ಮೂಳೆಗಳನ್ನು (810) ಎಂಟುನೂರ ಹತ್ತು ವಿಧವಾಗಿ ಹರಡಿ ಶತ್ರುನಾಶ ಮಾಡಿದನು. 'ಒರಣ್ಯವತ್' ಎಂಬ ಸರಸ್ಸಿನಲ್ಲಿ ಅಡಗಿದ್ದ ದಧೀಚಿಯ ಕುದುರೆಯ ಸಂಭಂಧಿಯತಲೆ ತೆಗೆದು ವೃತ್ರ ವಧೆಮಾಡಿದನು.

ಬೆಳಗಿನ ಆದಿತ್ಯನ ತೇಜಸ್ಸನ್ನು ರಾತ್ರಿಯ ಚಂದ್ರನಲ್ಲಿ ಇರಿಸಿದವ - ಇಂದ್ರನೇ.

ಮಂತ್ರಪೂರ್ವಕವಾಗಿ ಕಟ್ಟಿದ ಇಂದ್ರನ ಕುದುರೆಗಳು, ವಸಿಷ್ಠಋಷಿ ಹಾಗೂ ಇತರ ಮಾನವರು ಮಾಡುವ ಯಜ್ಞಕ್ಕೆ ಇಂದ್ರನನ್ನು ಕರೆತರುತ್ತವೆ. ಇಂದ್ರನ ಸಾಮೀಪ್ಯವು ಶತ್ರುಭಯ ಶತ್ರುಹಿಂಸೆ ನಿವಾರಿಸಿ, ಶತ್ರುಧನ ಪುತ್ರಸಂತಾನ ಆತ್ಮರಕ್ಷಣೆ ಪರಿಜನಪ್ರಾಪ್ತವಾಗುತ್ತದೆ.

ಯಜ್ಞಮಾಡದವರು ಇಂದ್ರನಿಂದ ಅನಾಯಾಸವಾಗಿ ಹತರಾಗಬಹುದಾದವರು. ಇಂದ್ರನ ಕುದುರೆಯನ್ನು ಅದರಕ್ರಿಯೆಯನ್ನು ಹೊಗಳುವವರು ಧೀರ್ಘಾಯುಗಳಾಗುತ್ತಾರೆ.

ಸಕಲ್ಲ ದೇವತೆಗಳಿಗೂ ಶ್ರೇಷ್ಠನಾದ ಇಂದ್ರನ ಸಾಕ್ಷಾತ್ಕಾರಕ್ಕೆ ಅತ್ಯುತ್ತಮ ಉಪಾಸನೆಬೇಕು.

ಇಂದ್ರನ ಮನಸ್ಸು ಯಜ್ಞಕರ್ತರಕಡೆ ತಿರುಗಲಿ. ಇಂದ್ರನು ಧನ ಒದಗಿಸಲಿ, ಆ ಸಂಪತ್ತು ರಕ್ಷಣಾದಿ ಉಪಕರಣಗಳು ನಾಶವಾಗದೇ ಇರಲಿ - ಎಂದು ಋಷಿಯ ಪ್ರಾರ್ಥನೆ.

**ಸೂಕ್ತ - 85 ( ಪ್ರಯೋಶುಭಂತೇ....**

ಋಷಿಗೋತಮೋ ರಾಹೂಗಣರು ಮರುದ್ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮರುದ್ದೇವತೆಗಳು ಸ್ವಬಲದಿಂದಲೇ ಸ್ವರ್ಗವನ್ನು ವ್ಯಾಪಿಸಿದವರು, ಮಳೆಯನ್ನು ಸುರಿಸುವ ಕರ್ತವ್ಯ ಉಳ್ಳವರು. ಸಕಲ ಭೂಪ್ರದೇಶವನ್ನೂ ನೀರಿನಿಂದ ವದ್ಧಮಾಡುವವರು.

ನೀರಿನ ಪ್ರವಾಹವು ಮರುತ್ತುಗಳ ಮಾರ್ಗವನ್ನೇ ಅನುಸರಿಸುತ್ತವೆ. ಸಕಲಪ್ರಾಣಿಗಳೂ, ಪರ್ವತಗಳೂಸಹಾ - ಭಯದಿಂದ ನಡಗುತ್ತವೆ.

ಕುಟಿಲಭಾವಿ ನಿರ್ಮಿಸಿ, ನೀರು ಮೇಲೆ ಬರುವಂತೆ ಮಾಡಿ, ಭಾವಿಯನ್ನೇ

ಚಲಿಸಿ, ಗೌತಮರ ಬಳಿಗೆ ತಂದು ತೃಪ್ತಿಯುಂಟುಮಾಡಿದವರು, ಸಹಸ್ರತಂತಿಯ ವೀಣೆ ನುಡಿಸುವವರು, ಇವರೇ ಮರುತ್ತುಗಳು; ಇಷ್ಟಾರ್ಥಪ್ರದರೂ ಹರ್ಷದಾಯಕರೂ ಆಗಿದ್ದಾರೆ.

ಮರುತ್ತುಗಳು ಧರ್ಭಾಸನದಲ್ಲಿ ಕುಳಿತು, ಸೋಮದಿಂದ ತೃಪ್ತರಾಗಲಿ. ಯಜಮಾನನಿಗೆ ಸುಖ ಧನ ಗೃಹ ವೀರಪುತ್ರರನ್ನು ಕರುಣಿಸಲಿ.

**ಸೂಕ್ತ - 86 ( ಮಾರುತೋ ಯಸ್ಯಹಿ....**

ಋಷಿಗೋತಮೋ ರಾಹೂಗಣರು ಮರುದ್ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಮರುತ್ತುಗಳು ಶ್ರೇಷ್ಠವಾದ ಯಜ್ಞಗಳಿಗೆ ಅರ್ಹರು. ಮಾನವರಲ್ಲಿ ಶತ್ರುರೂಪದವರನ್ನು ಸೋಲಿಸಿ ದಮನ ಮಾಡುತ್ತಾರೆ.

ಮರುತ್ತುಗಳು ಹವಿಸ್ಸಿನಿಂದ ಚುರುಕುಗೊಳ್ಳುತ್ತಾರೆ. ಸ್ತೋತ್ರಗಳಿಂದ ಸಂತೋಷಗೊಳ್ಳುತ್ತಾರೆ. ಆ ಯಾಜ್ಞಕನಿಗೆ ಶ್ರೇಷ್ಠರಕ್ಷಣೆಯನ್ನು ಕೊಡುತ್ತಾರೆ, ಶ್ರೇಷ್ಠಸಂಪತ್ತನ್ನು ಕೊಡುತ್ತಾರೆ.

ಅನೇಕ ವರ್ಷಗಳಿಂದ ಹವಿಸನ್ನು ಪಡೆಯುತ್ತಿರುವ ಮರುತ್ತುಗಳು, ಈಗಲೂ ಬರಲಿ ಪೂಜಾದಿಕರ್ಮಗಳನ್ನು ಸ್ವೀಕರಿಸಿ ಸ್ತೋತ್ರಗಳನ್ನು ಕೇಳಲಿ. ಭಕ್ತರ ಇಷ್ಟಾರ್ಥ ತಿಳಿದು ಅನುಗ್ರಹಿಸಲಿ. ಹಿಂಸಕ ರಾಕ್ಷಸರನ್ನೂ, ಕತ್ತಲನ್ನೂ ನಾಶಮಾಡಿ, ಸೂರ್ಯತೇಜಸ್ಸು ತರಲಿ.

**ಸೂಕ್ತ - 87( ಪ್ರತ್ವಕ್ಷಸಃ ಪ್ರತವಸೋ........**

ಋಷಿಗೋತಮೋ ರಾಹೂಗಣರು ಇಂದ್ರದೇವನನ್ನು ಜಗತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮರುದ್ಗಣವು, ಮೃಗವಾಹನರಾಗಿ ಲೋಕ ಪ್ರಭುಗಳಾಗಿ ಅದೂಷಿತ ಯಜ್ಞರಕ್ಷಕರಾಗುತ್ತಾರೆ. ಪ್ರಾಣಿಗಳ ಸಂಚಾರಕ್ಕೆ ಮರುತ್ತುಗಳ ಸಹಾಯ ಬೇಕು; ಆದರೆ ಮರುತ್ತುಗಳಿಗೆ ಯಾರಸಹಾಯವೂ ಬೇಡ ಅಂತರಿಕ್ಷ ಸಂಚಾರದಲ್ಲಿ ಮೇಘಗಳಿಗೆ ಡಿಕ್ಕಿಹೊಡೆದು, ಯಜ್ಞಯಜಮಾನರಿಗಾಗಿ ಜೇನುತುಪ್ಪದ ಮಳೆ ಸುರಿಸುತ್ತಾರೆ.

ಕ್ರೀಡಾಸಕ್ತ ಸಂಚಾರಿಗಳು ಪ್ರಕಾಶಯುತ ಆಯುಧಗಳಿಂದ ತಮ್ಮ ಪ್ರಭಾವ ಪ್ರಕಟಿಸುತ್ತಾರೆ.

ಸೋಮ ಮತ್ತು ಸ್ತುತಿಗಳಿಂದ ತೃಪ್ತರಾಗಿ ಮರುತ್ತುಗಳು ಭಕ್ತರಿಗೆ ಧನಧಾನ್ಯಾದಿಗಳನ್ನು ಕೊಟ್ಟು ಸಾಲದಿಂದ ಬಿಡಿಸುತ್ತಾರೆ. ಇಂದ್ರನನ್ನೂ ಕಾರ್ಯಕ್ಕೆ ಉತ್ತೇಜಿಸುತ್ತಾರೆ.

**ಸೂಕ್ತ - 88 ( ಆ ವಿದ್ಯುನ್ಮದ್ಭಿರ್ಮರುತಃ.....**

ಗೋತಮೋರಾಹೂಗಣಃ ಋಷಿ ಮರುದ್ದೇವತೆಗಳನ್ನು ಪ್ರಸ್ತಾರಪಂಕ್ತಿ ತ್ರಿಷ್ಟುಪ್ ವಿರಾಡ್ರೂಪಾ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮರುತ್ತುಗಳ ವೇಗರಥಕ್ಕೆ ಭೂಮಿಯೇ ಆದರುತ್ತದೆ. ಶ್ರೇಷ್ಠಕರ್ಮಕ್ಕಾಗಿ ದೂರದೇಶದಿಂದ ಗೋತಮ ಪುತ್ರರಿಗಾಗಿ ಯಜ್ಞಕ್ಕೆ ಬಂದರು. ಮೇಲೇ ಸೀರಿರುವ ಭಾವಿಯನ್ನೂ ತಂದರು, ಯಜ್ಞಾಭಿವೃದ್ಧಿಮಾಡಿದರು.

ಶ್ರಮವಿಲ್ಲದ ಸೋತ್ರಪಠಣ, ಸೋಮಗಳಿಂದ ಇಂದ್ರ ಮರುತರು ತೃಪ್ತರಾಗಲಿ, ಒಳ್ಳೆಯದನ್ನು ಮಾಡಲು ಬರಲಿ. ಪ್ರಭೂತ ಅನ್ನ ತರಲಿ.

**ಸೂಕ್ತ - 89 ( ಆನೋಭದ್ರಃ ಕ್ರತವೋಯಂತು ವಿಶ್ವತೋ.....**

ಗೋತಮೋ ರಾಹೂಗಣ ಋಷಿ ವಿಶ್ವೇದೇವತೆಗಳನ್ನು ಜಗತೀ, ವಿರಾಟಸ್ಥಾನಾ, ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಯಾಗಕರ್ತನು, ದೇವತೆಗಳ ಗುಂಪಿಗೆ ಸೇರಿದ ಭಗ, ಮಿತ್ರ, ಅದಿತಿ, ದಕ್ಷ, ಅಸ್ರಿದ ಅಂದರೆ ಮರುತ್ತುಗಳು, ಆರ್ಯಮ, ವರುಣ, ಸೋಮ, ಅಶ್ವಿನೀದೇವತೆಗಳು, ಸರಸ್ವತೀ – ಇವರುಗಳೆಲ್ಲರ ದೇವಾತ್ಮಕವಾದ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

ಅಭಿವೃದ್ಧಿಕಾರಕ ದೇವತೆಗಳ ಸ್ನೇಹ, ಅಗ್ನಿಷ್ಟೋಮಾದಿ ಯಜ್ಞಗಳಿಂದ ಯಜ್ಞಕರ್ತರಿಗೆ ಲಭಿಸಲಿ. ದೇವತೆಗಳ ಶ್ರೇಷ್ಠಪೂಜ್ಯ ಬುದ್ಧಿಯು, ಪ್ರಾಮಾಣಿಕ ಯಜ್ಞಕರ್ತರಿಗೂ ದೊರಕಲಿ. ದೇವತೆಗಳು ಉದಾರ ದಾನ ಆಯಸ್ಸನ್ನು ಬೆಳೆಸಲಿ.

ಸರಸ್ವತಿಯು ಸುಖವನ್ನೂ, ವಾಯುವು ಸುಖದಾಯಿ ಸೋಮರಸೌಷಧಿಯನ್ನೂ, ಭೂಮಿಯು ರಕ್ಷಣೆಯನ್ನೂ, ಅಶ್ವಿನೀದೇವತೆಗಳು ದಾನ ಯೋಗ್ಯತೆಯನ್ನೂ, ಇಂದ್ರನು ರಕ್ಷಣೆಗಳನ್ನೂ, ಪೂಷನು ಸಕಲವನ್ನೂ ತಿಳಿಯುವ ಶಕ್ತಿಯನ್ನೂ, ಗುರುತ್ಮಂತ ಮತ್ತು ಬೃಹಸ್ಪತಿಯರು ನಾಶರಹಿತವಾದ ಮಂಗಳವನ್ನೂ ಕೊಡಲಿ. ಜಗಜ್ಜನನಿಯಾದ ಮತ್ತು ವಿಶ್ವನಿಯಾಮಕಳಾದ ಅದಿತಿಯು ಧನಾಭಿವೃದ್ಧಿ, ಮಂಗಳ ರಕ್ಷಣೆಯನ್ನೂ ಕೊಡಲಿ.

ಮರುದ್ದೇವತೆಗಳು ಪ್ರಶ್ನಿಪುತ್ರರು, ಜಿಂಕೆಯವಾಹನ ಉಳ್ಳವರು; ಯಜ್ಞಸಂಚಾರಿಗಳು, ನಾಲಗೆಯಲ್ಲಿ ಅಗ್ನಿಯನ್ನು ಹೊಂದಿರುವವರು, ಎಲ್ಲವನ್ನೂ ಗಮನಿಸುವ ಸೂರ್ಯಕಾಂತಿಯುತರು. ಸಕಲದೇವತೆಗಳಿಗೂ ಯಜ್ಞಕರ್ತರಿಗೂ ಯಜ್ಞಭೂಮಿಯಲ್ಲಿ ರಕ್ಷಣೆ ಕೊಡಲಿ.

ಮಾನವರ ನೂರುವರ್ಷದ ಜೀವಿತದಲ್ಲಿ, ಮುಪ್ಪಿನಂತಹ ದೌರ್ಬಲ್ಯ, ಶರೀರ ಸ್ವಾಧೀನ ಇಲ್ಲದಿರುವುದು, ನಮ್ಮ ಶರೀರದ ರಕ್ಷಣೆಯನ್ನು ಮಕ್ಕಳಿಂದಾಗುವಂತೆ ಮಾಡುವುದು, ಆಯುಸ್ಸಿನ ಮಧ್ಯದಲ್ಲಿ ಬೆಳವಣಿಗೆಗೆ ತಡೆಯಾಗುವುದು – ನಮಗೆ ಬೇಡ.

ಬದಲಿಗೆ, ಪ್ರಜಾಪತಿ ಅನುಗ್ರಹೀತ ಪೂರ್ಣಾಯುಸ್ಸು ಅನುಭವಿಸುವ, ಮಂಗಳವಾದ್ದನ್ನು ಕೇಳುವ, ನೋಡುವ, ದೃಡಕಾಯ ಅವಯವ ಶರೀರವನ್ನು ಅನುಗ್ರಹಿಸಲಿ.

**ಸೂಕ್ತ - 90 ( ಋಜುನೀತೀನೋ ವರುಣೋ....**

ಋಷಿಗೋತಮರ ರಾಹೂಗಣರು ವಿಶ್ವೇದೇವತೆಗಳನ್ನು ಗಾಯತ್ರೀ ಮತ್ತು ಅನುಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮಿತ್ರನು ಅಹರಭಿಮಾನ ದೇವತೆ, ವರುಣನು ರಾತ್ರಾಭಿಮಾನ ದೇವತೆ, ಅರ್ಯಮನು ಇಂದ್ರಾದಿಗಳೊಡನೆ ಸಮಾನ ಪ್ರೀತಿಯುಳ್ಳ ಅಹೋರಾತ್ರಿವಿಭಾಗಕರ್ತ. ಮಿತ್ರಾವರುಣಾದಿಗಳು ಲೋಪವಿಲ್ಲದೇ ಶ್ರದ್ಧೆಯಿಂದ ಜಗತ್ತಿನ ನಿರ್ವಹಣಾರೂಪ ಕರ್ತವ್ಯವನ್ನು, ಪ್ರಪಂಚಕ್ಕೆ ಧನಹಂಚುವ ಕಾರ್ಯವನ್ನು ನಿರ್ವಹಿಸುತ್ತಾರೆ. ಇವರುಗಳು ಮರಣರಾಹಿತ್ಯ ಸೌಖ್ಯವನ್ನೂ ಯಜಮಾನನಿಗೆ ಕೊಟ್ಟು ಪ್ರಾಮಾಣಿಕ ಮಾರ್ಗದಲ್ಲಿ ಅಭೀಷ್ಟವಾದ ಗಮ್ಯಸ್ಥಾನಸೇರಿಸಲಿ.

ಇಂದ್ರ ಮರುತ್ ಪೂಷ ಭಗ - ಇವರುಗಳು, ಸ್ವರ್ಗ ಸಾಧನೆಗೆ ಸನ್ಮಾರ್ಗ ದರ್ಶಕರಾಗಲಿ.

ಪೂಷ ವಿಷ್ಣು ಮರುದ್ದೇವತೆಗಳ ಅನುಗ್ರಹದಿಂದ ಅಪ್ತೋರ್ಯಾಮ ಕರ್ಮಸಾರ್ಥಕವಾಗಲಿ. ನಷ್ಟಧನಲಭಿಸಿ ಸೌಭಾಗ್ಯವಂತರನ್ನಾಗಿ ಮಾಡಲಿ.

ವಾಯುವು ಮಧುರ ಫಲಗಳನ್ನೀಯಲಿ, ನದೀಪ್ರವಾಹ ಸಸ್ಯಾದಿ ಮೂಲಿಕೆಗಳು ಮಧುರವಾಗಿರಲಿ. ಹಗಲು-ರಾತ್ರಿ, ಪಾರ್ಥಿವಲೋಕ-ದ್ಯುಲ್ಲೋಕ, ಎಲ್ಲಾ ಮಧುರವಾಗಿರಲಿ. ವನಸ್ಪತಿ ಸೂರ್ಯ ಗೋವು ಮಧುರಪ್ರದರಾಗಿರಲಿ. ಬೃಹಸ್ಪತಿ ಇಂದ್ರ ವಿಷ್ಣು ಮಿತ್ರಾವರುಣರು - ಯಾಜ್ಞಕರಿಗೆ ಸುಖತರಲಿ.

**ಸೂಕ್ತ - 91 ( ತ್ವಂ ಸೋಮ ಪ್ರಚಿಕಿತೋ....**

ಗೋತಮರ ರಾಹೂಗಣ ಋಷಿ ಸೋಮದೇವನನ್ನು ತ್ರಿಷ್ಟುಪ್ ಗಾಯತ್ರೀ ಉಷ್ಣಿಕ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಸೋಮದೇವನು ಯಜ್ಞಗಳ ನಡುವೆ ಉತ್ಪನ್ನನಾದವನು; ಎಲ್ಲವನ್ನೂ ಶುದ್ಧಮಾಡುವ ಔಷಧಿಗಳಪತಿ, ತನ್ನ ಪ್ರಭು ವರುಣನಂತೆ ಲೋಕಹಿತಕರ, ಅರ್ಯಮನಂತೆ ವೃದ್ಧಿಕರ.

ಸೋಮನು ಅಗ್ನಿಷ್ಟೋಮಾದಿ ಯಾಗವೇ ಆಗಿದ್ದು, ಯಜ್ಞಮಾಡುವ ಸಜ್ಜನರ ಒಡೆಯನಾಗಿದ್ದಾನೆ. ಸೋಮನ ಮಾರ್ಗದರ್ಶನದಿಂದಲೇ ಇಂದ್ರಾದಿಗಳು ದೇವತೆಗಳ ನಡುವೆ ಇರಲು ಸಾಧ್ಯವಾಯಿತು. ಸೋಮನ ಹಾಗೂ ಅವನ ಸಮಾನ ದೇವತೆಗಳ್ಯಾರೂ ನಾಶವಾಗರು. ಸೋಮನು ಸಂಪೂರ್ಣ ವೃದ್ಧಿಹೊಂದಿ, ವೀರ್ಯವೃದ್ಧಿಗೊಂಡು, ಯಾಜ್ಞಿಕರಿಗಾಗಿ ಅನ್ನ ಸಂಗ್ರಹ ಮಾಡುತ್ತಾನೆ.

ಸೋಮನನ್ನು ಸೂಕ್ತವಾಗಿ ಸ್ತೋತ್ರ ಮಾಡಿದವರು, ಹವಿಸ್ಸನ್ನು ಅರ್ಪಿಸಿದವರು, ತಂದೆಗೆ ಗೌರವಯುತರಾಗಿರುವ ಯೋಗ್ಯಪುತ್ರರನ್ನು ಪಡೆಯುತ್ತಾರೆ. ಪ್ರಾಣಾಧಾರಕ ಸತ್ಯ ಅನುಗ್ರಹೀತರಿಗೆ, ಮರಣವೇ ಇರದು.

ಸೋಮನನ್ನು ಸ್ತುತಿಸುವ ಕ್ರಮ ಯಜ್ಞಕರ್ತರಿಗೆ ಚೆನ್ನಾಗಿ ತಿಳಿದಿದೆ ಹಾಗೇ ಸ್ತುತಿಸುತ್ತಾರೆ. ಸೋಮದೇವನು ತೃಪ್ತಿಗೊಂಡು, ಯಜ್ಞಗೃಹವನ್ನು ತೇಜಸ್ಸಿಂದ ತುಂಬಲಿ, ಯಾಜ್ಞಿಕರಿಗೆ ಶಕ್ತಿ ಧನಸುಖ, ಸುಖಸಾಧಕ ಸಾಧನಗಳು, ಬೆಳವಣಿಗೆಗಳನ್ನು - ಅವರಪಿತೃಗಳಿಗೆ ಕೊಟ್ಟಂತೆಯೇ ಕೊಡಲಿ, ಓಂಸಿಸುವ ಶತ್ರುಗಳನ್ನು ನಾಶಮಾಡಿ ಅಪರಾಧರೂಪದ ಕಳಂಕಗಳಿಂದ ಪಾರುಮಾಡಿ, ಮಾಡಿದ ಹಾಗೂ ಮಾಡಬಹುದಾದ ಪಾಪಗಳಿಂದ ಯಜಮಾನನನ್ನು ರಕ್ಷಿಸಲಿ.

**ಸೂಕ್ತ** - 92 ( **ಏತಾಉತ್ಯಾಉಷಸಃ.....**

ಗೋತಮೋ ರಾಹೂಗಣಋಷಿ ಉಷಾ ಮತ್ತು ಅಶ್ವಿನೀ ದೇವತೆಗಳನ್ನು ಜಗತೀ, ತ್ರಿಷ್ಟುಪ್ ಉಷ್ಣಿಕ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಉಷೋದೇವತೆಯು ಪೂರ್ವಾರ್ಧದಿಕ್ಕಿನಲ್ಲಿ, ಸಂಧ್ಯಾರಾಗದಿಂದ ಜಗತ್ತನ್ನು ಪ್ರಸಿದ್ಧಗೊಳಿಸುತ್ತಾಳೆ. ಏಕಕಾಲಕ್ಕೆ ಅಂತರಿಕ್ಷದ ಎಲ್ಲಾ ದೂರ ಪ್ರದೇಶಕ್ಕೂ ವ್ಯಾಪಿಸಿ, ಶುಭ್ರವರ್ಣ ಸೂರ್ಯನೊಡನೆ ಒಂದಾಗುತ್ತಾಳೆ. ಸೂರ್ಯಕಿರಣಗಳೊಂದಿಗೇ ಕಾಣಿಸಿಕೊಳ್ಳುತ್ತಾಳೆ.

ಮರಣ ಧರ್ಮವುಳ್ಳಪ್ರಾಣಿಗಳಿಗೆ ಮುಪ್ಪನ್ನು ಕೊಟ್ಟು, ಆಯಸ್ಸು ಕ್ಷೀಣಸುವಂತೆ ಮಾಡಿ, ಕೃತಯುಗ, ತ್ರೇತಾಯುಗಗಳೂ ರಾತ್ರಿಗಳೂ ಸವೆಯುವಂತೆ ಮಾಡುತ್ತಾಳೆ.

ಯಜ್ಞಕರ್ತರ ಪವಿತ್ರ ಕರ್ಮ ಸ್ತೋತ್ರಗಳಿಂದ ತೃಪ್ತಳಾಗಿ, ವಿಶಿಷ್ಟವಾದ ಕುದುರೆ ಗೋವು ಸಂತಾನ ಭೃತ್ಯರು ಅನ್ನ, ಅನುಗ್ರಹಿಸಲಿ. ಮಕ್ಕಳು ಮೊಮ್ಮಕ್ಕಳನ್ನು ಸಲಹುವ ಧನವನ್ನು ಒದಗಿಸಿ, ಕತ್ತಲೆ ಕಳೆಯಲಿ.

ಅಶ್ವಿನೀ ದೇವತೆಗಳು ಉದಾರ ಸ್ವಭಾವದವರು. ಯಾಜ್ಞಿಕರ ಗೃಹದ ಸುತ್ತಲೂ ಗೋವು ಧನ ತುಂಬಿಸುವ ಅನುಗ್ರಹ ಬುದ್ಧಿಯಿಂದ ಯಜ್ಞಕ್ಕೆ ಬರಲಿ. ಯಾಜ್ಞಿಕರು ತೇಜಸ್ಸು ಸುಖ ಅನ್ನ ಅನುಭವಿಸುವಂತೆ ಮಾಡಲಿ.

**ಸೂಕ್ತ** - 93 ( **ಅಗ್ನೀ ಷೋಮಾವಿಮಂಸುಮೇ....**

ಗೋತಮೋ ರಾಹೂಗಣಃ ಋಷಿಗಳು ಅಗ್ನಿಷೋಮೌ ದೇವತೆಗಳನ್ನು ಅನುಷ್ಟುಪ್, ತ್ರಿಷ್ಟುಪ್, ಜಗತೀತ್ರಿಷ್ಟುಪ್, ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಅಗ್ನಿ ಮತ್ತು ಸೋಮ - ಇಬ್ಬರೂ ದೇವತೆಗಳಲ್ಲೆಲ್ಲಾ ಅತ್ಯಂತ ಪೂಜ್ಯರು. ಸಮಾನಕ್ರಿಯೆಯುಳ್ಳ ಇಷ್ಟಾರ್ಥಪ್ರದರು. ಯಾಗಕರ್ತನು ಇಬ್ಬರಿಗೂ ಒಂದೇವಿಧವಾದ ಪೂಜೆ ಆಜ್ಯಾಹುತಿ ಅರ್ಪಿಸುತ್ತಾರೆ ಇಬ್ಬರನ್ನೂ ಒಟ್ಟಾಗಿ ಯಜ್ಞಕ್ಕೆ ಆಹ್ವಾನಿಸುತ್ತಾರೆ.

ನಕ್ಷತ್ರ ಮಂಡಲಗಳನ್ನು ದ್ಯುಲೋಕದಲ್ಲಿ ಎತ್ತಿಹಿಡಿದವರು ಸೂರ್ಯನನ್ನು ಮಾನವಕಲ್ಯಾಣಕ್ಕೆ ಅಂತರಿಕ್ಷದಲ್ಲಿ ಸಂಚರಿಸುವಂತೆ ಮಾಡಿದವರು, ಬೃಸಯನ ಮಗ ವೃತ್ರನ ವಧೆಮಾಡಿದವರು, ಫಣಿಗಳಿಂದ ಗೋರೂಪ ಧನತಂದವರೂ - ಈ ಅಗ್ನಿ ಸೋಮರುಗಳೇ.

ಕಲ್ಮಷಗಳಿಂದ, ವೃತ್ರವಧಾದೋಷದಿಂದ ಕಲುಷಿತಗೊಂಡ ನದಿಗಳನ್ನು ಆದೋಷದಿಂದ ಬಿಡುಗಡೆ ಮಾಡಿ ಶುದ್ದಗೊಳಿಸಿದವರು – ಇವರೇ.

ವಾಯುವು ದ್ಯುಲ್ಲೋಕದಿಂದ ಅಗ್ನಿಯನ್ನೂ, ಶ್ಯೇನರೂಪ ಗಾಯತ್ರಿಯು ಸ್ವರ್ಗದಿಂದ ಸೋಮವನ್ನೂ, ಯಜ್ಞಕರ್ತರಿಗಾಗಿ ಭೂಮಿಗೆ ತಂದರು. ಯಾಜ್ಞಿಕರ ಮಂತ್ರ ಸ್ತೋತ್ರಗಳಿಂದ ಯಜ್ಞಪ್ರದೇಶ ವಿಸ್ತರಿಸಿದರು.

ಯಾಜ್ಞಿಕರಿಗೆ ಅಗ್ನಿಸೋಮರುಗಳು ಸುಖದಾಯಕರಾಗಲಿ, ಪುತ್ರಪೌತ್ರಾದಿಗಳೊಡಗೂಡಿ ಉತ್ತಮಶಕ್ತಿ ಪೂರ್ಣಆಯಸ್ಸು ಕೊಡಲಿ. ಸಮರ್ಥಕುದುರೆ, ಪುಷ್ಟಿಯುಹಸು, ರೋಗರಹಿತ ಭಯರಹಿತ ಪ್ರಭೂತಧನಗಳು ದೊರೆಯಲಿ. ಯಜ್ಞಕರ್ತರಿಗೆಪಾಪದಿಂದ ಬಿಡುಗಡೆ, ಕರ್ಮದ ರಕ್ಷಣೆ, ವಿವಿಧಶಕ್ತಿಗಳೂ ಉಂಟಾಗಲಿ.

**ಸೂಕ್ತ - 94 ( ಇಮಂ ಸ್ತೋಮಮರ್ಹತೇ....**

ಕುತ್ಸ ಆಂಗಿರಸ ಋಷಿಗಳು ಅಗ್ನಿ, ದೇವಾಃ, ಮಿತ್ರಾವರುಣ, ಅದಿತಿ, ಸಿಂಧು, ಪೃಥಿವಿ, ದ್ಯೌ, – ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್‌ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಪೂಜ್ಯ ಜ್ಞಾನಿ, ಶಾಸ್ತ್ರವಿಹಿತ ಸ್ಥಳಗಳಲ್ಲಿ ಪ್ರಜ್ವಲಿಸುವವ. ಯಾಜ್ಞಿಕರ ಸ್ತುತಿಗಳಿಂದ ಪ್ರೀತನಾದ ಅಗ್ನಿಯು ಪಾಪಬುದ್ಧಿಯ ಶತ್ರುಗಳಿಂದ ಯಾಜ್ಞಿಕರು ಹಿಂಸಿತರಾಗದಂತೆ, ತಾವೇ ಹಿಂಸಿತರಾಗಿ ಸಾಯುವಂತೆ ಮಾಡುತ್ತಾನೆ.

ಯಾಜ್ಞಿಕರು ನಿಶ್ಚಿಂತೆಯಿಂದ ಇರುವಂತೆ, ಪಾಪರಹಿತ ಕರ್ಮರಾಗುವಂತೆ, ಪುತ್ರಪೌತ್ರಾಭಿವೃದ್ಧಿ ಹೊಂದುವಂತೆ, ಇಷ್ಟಾರ್ಥಧನ ಹಾಗೂ ಚಿರಕಾಲದ ಆಯಸ್ಸು ಹೊಂದುವಂತ ಮಾಡುತ್ತಾ, ಅಗ್ನಿಯು ದೇವತೆಗಳನ್ನು ಯಜ್ಞಕ್ಕೆ ಕರೆತರಲಿ.

ಮರುತ್ತುಗಳು ಯಾಜ್ಞಿಕರಿಗೆ ಪ್ರಸನ್ನತೆ, ಮಿತ್ರಾವರುಣರು ಆಯುಸ್ಸು ಕೊಡಲಿ. ಅದಿತಿ ಸಾಗರಾದಿದೇವತೆ, ಭೂಮಾತ ದ್ಯುಲ್ಲೋಕಾದಿದೇವತೆ – ಇವರೆಲ್ಲಾ ಯಾಜ್ಞಕರಿಗೆ ವೃದ್ಧಿ ಮತ್ತು ರಕ್ಷಣೆ ಉಂಟುಮಾಡಲಿ.

## ( ಅಷ್ಟಕ - 1, ಅಧ್ಯಾಯ - 7, ಸೂಕ್ತ - 95 ರಿಂದ 112 ರವರೆಗೆ)

**ಸೂಕ್ತ - 95 ( ದ್ವೇವಿರೂಪೇ ಚರತಃ ಸರ್ಥೇ....**

ಕುತ್ಸ ಆಂಗಿರಸಃ ಋಷಿಗಳು ಅಗ್ನಿ ದೇವನನ್ನೂ, ಅಗ್ನಿ ತೇಜಸ್ಸನ್ನೂ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಹೊಗಳುತ್ತಾರೆ.

ಅಗ್ನಿಗೆ ಮೂರು ಜನ್ಮಗಳು; ಸಮುದ್ರದಲ್ಲಿ ಬಡವಾನಲನಾಗಿ, ದ್ಯುಲ್ಲೋಕದಲ್ಲಿ

ಆದಿತ್ಯನಾಗಿ, ಅಂತರಿಕ್ಷದಲ್ಲಿ ವಿದ್ಯುತ್‌ರೂಪನಾಗಿ.

ಆದಿತ್ಯರೂಪಿ ಅಗ್ನಿಯು ವಸಂತಾದಿ ಆರು ಕಾಲಗಳು ಹಾಗು ಪೂರ್ವಾದಿ ಹತ್ತು ದಿಕ್ಕುಗಳಿಗೂ ಸೃಷ್ಟಿಕರ್ತ. ವಾಯುವು ಅಗ್ನಿಗೆ ಸೃಷ್ಟಿಕರ್ತ.

ಅಪಸ್ಸಿನ ಪುತ್ರ ಅಗ್ನಿಯು, ರಾತ್ರಿಯಿಂದ ಹವಿಸ್ಸಿನ ತೇಜೋ ರೂಪಿ ಆಹಾರ ಪಡೆದು ಪ್ರಕಾಶಿಸುತ್ತಾನೆ. ರಾತ್ರಿ ಪುತ್ರನಾದ ಸೂರ್ಯನು, ಅಪಸ್ಸಿಂದ ರಸವನ್ನೂ ಓರಿಪ್ರಕಾಶ ಪಡೆಯುತ್ತಾನೆ. ಅಹೋರಾತ್ರಿಗಳೆರಡೂ, ಅಗ್ನಿಯನ್ನೂ ಎರಡು ಪಾರ್ಶ್ವಗಳಲ್ಲಿ ಸೇವಿಸುತ್ತಿದ್ದಾರೆ.

ಸಕಲವಸ್ತುಗಳಲ್ಲಿಯೂ, ಅಗ್ನಿಯು ಯಾವುದಾದರೊಂದು ರೂಪದಲ್ಲಿ ಅಡಗಿರುತ್ತಾನೆ. ಮೇಘದನೀರಿನಲ್ಲಿ ಮಿಂಚಿನಂತೆ, ಹವಿಸ್ಸಿನ ರೂಪದ ಅನ್ನದಂತೆ, ಸಮುದ್ರದ ಮಧ್ಯ ಔಷಸಾಗ್ನಿ (ಆದಿತ್ಯ)ನಾಗಿ, ಸರ್ವವ್ಯಾಪಿ ಆಗಿದ್ದಾನೆ. ಅಗ್ನಿಯು ಸಕಲ ಶಕ್ತಿಗಳಿಗೂ, ಶಕ್ತರಿಗೂ ಸಹಾ ಸಮರ್ಥ ಕರ್ತವ್ಯನಿರತ ಅಧಿಪತಿ.

ಅಗ್ನಿಯು ಸಕಲ ಭೂತಗಳಿಂದಲೂ ಸಾರಭೂತ ರಸಹೀರಿ ಅಂತರಿಕ್ಷದಲ್ಲಿ ಜಗತ್ತಿಗೆ ಹೊದಿಕೆಯಾಗುವಂತೆ ಮಾಡುತ್ತಾನೆ. ತೇಜಸ್ಸಿಂದ ತುಂಬಿದ ನೀರು ಯಜ್ಞಾರ್ಹವಾಯಿತು, ಭೂಮಿಯನ್ನು ಸಂಪೂರ್ಣ ತೋಯಿಸಿ ನಂತರ ಅನ್ನಾದಿಗಳನ್ನು ಸಸ್ಯದಲ್ಲಿ ಇರಿಸಿ, ಅವನ್ನು ಮಳೆಯಿಂದ ಪಕ್ವವಾಗಿಸಿ ಅಗ್ನಿ ಅಂತರ್ಗತನಾಗಿರುತ್ತಾನೆ.

ಅಗ್ನಿಯು ಸಕಲ ಹೋಮದ್ರವ್ಯಗಳಿಂದ ವೃದ್ಧಿಗೊಳ್ಳಲಿ, ಎಲ್ಲರನ್ನೂ ಶುದ್ಧಿಮಾಡಲಿ, ಸಮರ್ಥತೇಜಸ್ಸಿಂದ ರಾಕ್ಷಸರ ವಿರುದ್ಧ ರಕ್ಷಣೆ ಕೊಡಲಿ. ಧನಯುಕ್ತ ಅನ್ನ ಕೊಡಲಿ ಪ್ರಕಾಶಿಸಲಿ.

ಯಾಜ್ಞಿಕರ ಅನ್ನವನ್ನು ಮಿತ್ರಾವರುಣ ಅದಿತಿ ಸಾಗರ ಪೃಥಿವ್ಯುಲ್ಲೋಕಗಳು ಸಂರಕ್ಷಿಸಲಿ.

**ಸೂಕ್ತ - 96 (ಸಪ್ರತ್ನಥಾ ಸಹಸಾ......**

ಕುತ್ಸ ಆಂಗೀರಸ ಋಷಿ ಅಗ್ನಿ ರಗ್ನಿರ್ದವಿಣೋ ದೇವತೆಯನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಹುಟ್ಟಿದ್ದು ಅರಣಿಯಲ್ಲಿ. ಹುಟ್ಟಿದ ಕೂಡಲೇ ಅಹೋರಾತ್ರಿಗಳು, ಅಗ್ನಿರೂಪದ ಪುತ್ರನಿಗೆ ಹವಿಸ್ಸನು ಕೊಡಿಸುತ್ತಾರೆ. ದ್ಯಾವಾಪೃಥವಿಗಳು, ಅಗ್ನಿಯನ್ನು ಪ್ರಕಾಶಿಸುತ್ತಾರೆ.

ಅಗ್ನಿಯು ಹುಟ್ಟಿದೊಡನೆಯೇ, ಹಳಬನಂತೆ ಯಜಮಾನನ ಕರ್ಮಗಳನ್ನೆಲ್ಲಾ ತನ್ನ ಅಧೀನ ಮಾಡಿಕೊಳ್ಳುತ್ತಾನೆ. ಯಾಗಕ್ಕೆ ಬೇಕಾದ ಧನವನ್ನು ಹೊಂದಿಸುತ್ತಾನೆ, ತನ್ನನು ಪೂಜಿಸುವವರಿಗೆ ಇಷ್ಟಾರ್ಥಕೊಡುತ್ತಾ ದೇವತೆಗಳಿಗೆ ಹವಿಸ್ಸನ್ನು ಹಂಚುತ್ತಾನೆ – ಮಿಂಚಿನಂತೆ.

ಮನುವಿನ ಮಂತ್ರದಿಂದ ಸ್ತುತನಾಗಿ, ಅಗ್ನಿಯು ಸಕಲ ಮಾನವ ಪ್ರಜೆಗಳನ್ನೂ

ಸೃಷ್ಟಿಸಿದನು. ಭೂತ ಭವಿಷ್ಯತ ವರ್ತಮಾನಗಳ, ಸಕಲ ಧನ, ಸಕಲ ಭೂತಜಾತಗಳಲ್ಲೂ ನಿವಾಸನಾಗಿದ್ದಾನೆ. ಅಸಂಖ್ಯಾತ ಭೂತರಕ್ಷಕನಾಗಿದ್ದು ಯಜ್ಞರಕ್ಷಣ ಮಾಡಿ ಶುದ್ಧ ಮಾಡಿ ಪಾಪನಾಶಮಾಡುತ್ತಾನೆ.

ಯಜಮಾನನಿಗೆ ಅಗ್ನಿಯು ವ್ಯವಹಾರಕ್ಕಾಗಿ, ಗೃಹಾದಿ ಸ್ಥಿರಧನಗಳನ್ನೂ, ಸಂಚರಿಸತಕ್ಕ ಧನಗಳನ್ನೂ ಪುತ್ರಪೌತ್ರಾದಿಗಳನ್ನೂ ದೀರ್ಘಾಯಸ್ಸನ್ನೂ ಅನುಗ್ರಹಿಸಲಿ.

ಮಿತ್ರಾವರುಣ ಅದಿತಿ ಸಾಗರ ಪೃಥ್ವಿ ದ್ಯುಲ್ಲೋಕಗಳು ಅಗ್ನಿದತ್ತಧನವನ್ನು ರಕ್ಷಿಸಲಿ.

**ಸೂಕ್ತ - 97 ( ಅಪನಃ ಶೋಶುಚದಘಮಗ್ನೇ.....**

ಕುತ್ಸ ಆಂಗಿರಸಋಷಿ ಅಗ್ನಿರಗ್ನಿ ಶುಚಿರ್ವಾದೇವತೆಯನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ದ್ಯಾನಿಸುತ್ತಾರೆ.

ಯಜ್ಞಕರ್ತ ಕುತ್ಸನ ಗುಂಪಿನ ಕೀರ್ತನಕಾರರೆಲ್ಲಾ ಅವನಷ್ಟೇ ಉತ್ತಮವರ್ಗದವರು.

ಅಗ್ನಿಯ ಜ್ವಾಲೆ ಶತ್ರುಗಳನ್ನು ಸೋಲಿಸುವ ಸಾಮರ್ಥ್ಯದ್ದು. ಜ್ವಾಲೆ ಸರ್ವತೋಮುಖವಾಗಿ ಹಬ್ಬುವುದು, ವ್ಯವಸಾಯಕ್ಷೇತ್ರ ಯಜ್ಞಾನುಷ್ಠಾನ ಧನಗಳಿಕೆ, ವಂಶವೃದ್ಧಿ – ಈ ಕಾರಣಗಳಿಗಾಗಿ ಯಾಜ್ಞಕರು ಅಗ್ನಿಯನ್ನು ಸ್ತುತಿಸುತ್ತಾರೆ.

ಅಗ್ನಿಯು ಎಲ್ಲಾದಿಕ್ಕುಗಳಿಂದಲೂ ಯಾಜ್ಞಕರನ್ನು ರಕ್ಷಿಸಲಿ, ಶತ್ರುಗಳ ಉಪದ್ರವದಿಂದ ಕಾಪಾಡಿ ಶತ್ರುರಹಿತ ಪ್ರದೇಶಕ್ಕೆ ತಂದುಬಿಡಲಿ. ಪುತ್ರಪೌತ್ರಾದಿ ಭಾಗ್ಯಉಂಟಾಗಿ, ಸಕಲಪಾಪಗಳೂ ಸಕಲದುಃಖಗಳೂ ನಾಶವಾಗಲಿ, ಸುತ್ತಲೂ ಧನ ಪ್ರಕಾಶಗೊಳ್ಳಲಿ.

**ಸೂಕ್ತ - 98 ( ವೈಶ್ವಾನರ ಸ್ಯಸುಮತೌ.....**

ಕುತ್ಸ ಆಂಗಿರಸಃ ಋಷಿಗಳು ಅಗ್ನಿ ವೈಶ್ವಾನರ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಅರಣಿಯಿಂದ ಅಗ್ನಿಯು ಉತ್ಪನ್ನನಾದ ಕೂಡಲೇ ಸಕಲ ಜಗತ್ತನ್ನೂ ವಿಶೇಷ ದೃಷ್ಟಿಯಿಂದ ನೋಡುತ್ತಾನೆ, ಸಕಲ ಮಾನವರಿಗೂ ಒಡೆಯನಾಗಿ ಭೂತಜಾತಗಳ ಪ್ರಭುವಾಗಿರುತ್ತಾನೆ.

ಜಗದ್ವ್ಯಾಪಿಯಾದ ಅಗ್ನಿಯು ದ್ಯುಲ್ಲೋಕದಲ್ಲಿ ಆದಿತ್ಯರೂಪಿಯಾಗಿ, ಭೂಮಿಯ ಮೇಲೆ ಗಾರ್ಹಪತ್ಯ ರೂಪಿಯಾಗಿ ಇದ್ದಾನೆ. ಜ್ವಾಲೆಯ ಪ್ರಸರಣದಿಂದ ಸೂರ್ಯಕಿರಣ ಸೇರಿ, ಸಸ್ಯಮೂಲಿಕೆಗಳಲ್ಲಿ, ಪಾಕಾರ್ಥ ಪ್ರವೇಶಿಸಿ, ಅಗ್ನಿಯು ಅನುಗ್ರಹಿಸಿದ್ದಾನೆ.

ಅಗ್ನಿಯ ಬುದ್ಧಿಯು ಅನುಗ್ರಹಾತ್ಮಕವಾಗಿರುವಂತೆ ಹಾಗೂ ಆ ಅನುಗ್ರಹಕ್ಕೆ ನಾವು ಪಾತ್ರರಾಗಲು ಯೋಗ್ಯರಾಗುವಂತೆ ವರ್ತಿಸೋಣ. ನಮ್ಮ ಸಕಲ ಕರ್ಮಗಳಿಗೂ ನಮ್ಮ ಇಷ್ಟವಾದ ಅರ್ಥಕೊಡುವ ಶಕ್ತಿ ಉಂಟಾಗಲಿ, ನಮಗೆ ಶತ್ರುಗಳಿಂದ ರಕ್ಷೆ ಸಂಪತ್ತು ಮತ್ತು ಸಂಪದ್ಯುಕ್ತ ಪುತ್ರರೂ ಉಂಟಾಗಲಿ – ಎಂದು ಋಷಿಯ ಪ್ರಾರ್ಥನೆ.

**ಸೂಕ್ತ - 99 ( ಜಾತವೇದಸೇ ಸುನವಾಮ.....**

ಋಷಿ ಕಶ್ಯಪರು ಮಾರೀಚರು ಅಗ್ನಿಜಾತವೇದ ದೇವನನ್ನು ತ್ರಿಷ್ಟುಪ್ ಛಂದದ ಋಕ್‌ನಲ್ಲಿ ಸ್ತುತಿಸುತ್ತಾರೆ.

ಮೊಸಳೆಯೇ ಮುಂತಾದ ದುಷ್ಟಪ್ರಾಣಿಗಳಿಂದ ತುಂಬಿದ ನದಿಯನ್ನು ಅಂಬಿಗನು ದೋಣಿಯ ಮೂಲಕ ಸುಲಭವಾಗಿ ದಾಟಿಸುವಂತೆ, ನಮಗೆ ಕಷ್ಟದುಃಖ ಪಾಪಕೃತ್ಯಗಳು ತಟ್ಟದಿರುವಂತೆ ಕೊಂಡೊಯ್ಯಲಿ.

ನಮಗೆ ಕೇಡುಬಯಸುವ ಶತ್ರುವಿನ ಧನವನ್ನು ಅಗ್ನಿಯು ಭಸ್ಮಮಾಡಲಿ.

ಸರ್ವಜ್ಞನಾದ ಅಗ್ನಿಗೆ ಯಜ್ಞದಲ್ಲಿ ನಾವು ಸೋಮರಸವನ್ನು ಹಿಂಡೋಣ - ಎಂದು ಋಷಿ ಅಪೇಕ್ಷಿಸುತ್ತಾನೆ.

**ಸೂಕ್ತ - 100 ( ಸಯೋವೃಷಾ ವೃಷ್ಣೇಬಿಃ.....**

ಋಜ್ರಾಶ್ವ ಅಂಬರೀಷ, ಸಹದೇವ, ಭಯಮಾನ, ಸುರಾದ - ಋಷಿಗಳು ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಬಿಳಿಯ ಅಲಂಕಾರಗಳಿಂದ ಶೋಭಿತ ಇಂದ್ರನು, ತೀವ್ರಕ್ರೋಧದ ಶತ್ರುಹಿಂಸಕನೂ, ಭಕ್ತಮಾನವರಕ್ಷಕನೂ ಆಗಿದ್ದಾನೆ.

ಚಿತ್ತಭ್ರಾಂತಿ ಕತ್ತಲು ಉಂಟುಮಾಡುವ ಯುದ್ಧದಲಿ ಪ್ರಕಾಶಮಾನನಾಗಿ, ದಸ್ಯುರಾಕ್ಷಸರನ್ನು ಕೊಂದು, ಗಂಧರ್ವ ಸುರಾಸುರ ಬ್ರಾಹ್ಮಣಾದಿ ಪಂಚಜಾತಿಯವರನ್ನೂ ರಕ್ಷಿಸುವವ - ಇಂದ್ರನೇ.

ಇಂದ್ರನು ಪ್ರಭಲ ಅಯೋಗ್ಯಶತ್ರುಗಳನ್ನು ಎಡಗೈಲಿ ತಡೆಯುತ್ತಾ ಬಲಗೈಲಿ ಹವಿಸ್ಸನ್ನು ಯಾಜ್ಞಿಕರಿಂದ ಸ್ವೀಕರಿಸುತ್ತಾನೆ. ಯಜ್ಞಕರ್ತ ಛಂದುಗಳಿಗೂ, ಛಂದುಗಳಲ್ಲದವರಿಗೂ ಪುತ್ರಪೌತ್ರಾದಿ ಯಶಸ್ಸು ಕೊಡುತ್ತಾನೆ.

ಮರುತ್ತುಗಳೊಡನೆ ಇಂದ್ರನು ಯಜ್ಞಕ್ಕೆ ಬರಲಿ. ಯಾಜ್ಞಿಕರನ್ನು ಪಾಪಮುಕ್ತರನ್ನಾಗಿ ಮಾಡಿ, ಋಜುಮಾರ್ಗದಲ್ಲಿರುವಂತೆ ಮಾಡಲಿ, ಅಭಿಮಾನವಚನಗಳಿಂದ ಭಕ್ತರಿಗೆ ಧನವೀಯಲಿ.

**ಸೂಕ್ತ - 101 ( ಪ್ರಮಂದಿನೇ ಪಿತುಮದರ್ಚತಾ.....**

ಕುತ್ಸ ಆಂಗೀರಸ ಋಷಿ ಇಂದ್ರದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನು ಅಶ್ವಗೋವುಗಳ ಅದಿಪತಿ. ದ್ಯಾವಾಪೃಥ್ವಿಗಳ ವ್ಯಾಪಿ. ಯಜ್ಞಕರ್ಮಪ್ರಿಯ. ಯಜ್ಞರಹಿತರಶತ್ರು. ಸೂರ್ಯ ರೂಪದಿಂದ ಇಂದ್ರನು ಜಂಗಮಾತ್ಮಕ ಸಕಲ ಭೂತ ಜಾತಗಳಿಗೂ ಪ್ರಭುವಾಗಿದ್ದಾನೆ. ಸಕಲ ಪ್ರಾಣಿಗಳಿಗೂ ಪ್ರಾಣರೂಪಿ - ಮರುತ್ತುಗಳನ್ನು - ಒದಗಿಸುತ್ತಾನೆ. ಸೂರ್ಯ ವರುಣ ನದಿಗಳೆಲ್ಲಾ ಇಂದ್ರನ ಆಜ್ಞಾವರ್ತಿಗಳು.

ಇಂದ್ರನು ಭೂಜಪೀನವೃತ್ರನನ್ನು, ಯಾಗವಿರೋಧಿ ರಿಪುವನ್ನು, ಶಂಭರ, ಶುಷ್ಣ ಎಂಬ ರಾಕ್ಷಸರನ್ನೂ ಸಂಹರಿಸಿದನು. ಋಜಿಷ್ವನಂಬರಾಜನೊಂದಿಗೆ ಕೂಡಿ, ಕೃಷ್ಣ ಎಂಬ ಅಸುರನನ್ನು ಅವನ ಗರ್ಭಿಣಿ ಪತ್ನಿಯನ್ನು ಕೊಂದು ಅಸುರನಾಶಮಾಡಿದ. ಪಣಿಗಳೊಂದಿಗೆ ಯುದ್ಧಮಾಡಿ ಅಪಹೃತ ಪಶುಗಳನ್ನು ಅವರಿಂದ ತಂದು ವಸ್ತ್ರರೂಪ ಅಸುರರ ಕೊಬ್ಬನ್ನು ಅಡಗಿಸಿದ.

ಇಂತಹ ಇಂದ್ರನು, ಹವಿಸ್ಸು ಸ್ತೋತ್ರಗಳಿಂದ ಹರ್ಷಗೊಂಡು ರಕ್ಷೆ, ಇಷ್ಟಾರ್ಥಗಳನ್ನು ಕೊಡುತ್ತಾನೆ. ಯಜ್ಞಕರ್ತನು ಉತ್ಕೃಷ್ಟನಾಗಿರಲಿ ಅಥವಾ ಇಲ್ಲದಿರಲಿ – ತೃಪ್ತಿ ಸಂತೋಷಗಳಿಂದ ಸಹಾಯಕನಾಗಿ ಧನದಾತನಾಗಿರುತ್ತಾನೆ.

ಇಂದ್ರನನ್ನು ಬಲಶಾಲಿಗಳೂ – ಭಯಸ್ಥರು, ಅಪಜಯಸ್ಥರೂ, ಸಹಾಯಕ್ಕಾಗಿ ಕರೆಯುತ್ತಾರೆ.

ಅನುಗ್ರಹ ಬುದ್ಧಿಯಿಂದ, ಅಗಲವಾದ ಬಾಯಿಯಲ್ಲಿ ಇಂದ್ರನು ಸೋಮಪಾನಮಾಡುತ್ತಾನೆ. ಮರುತ್ತುಗಳೊಡಗೂಡಿದ ಇಂದ್ರನ ಸ್ನೇಹವನ್ನು ಬೆಳಸೋಣ.

ಇಂದ್ರನು ಧನ, ಅನ್ನ ದಾನಮಾಡಲಿ ಹಾಗೂ ಶತ್ರು ನಾಶಮಾಡಲಿ ಎಂದು ಋಷಿಪ್ರಾರ್ಥನೆ.

**ಸೂಕ್ತ** - 102 ( **ಇಮಾಂತೇಧಿಯಂಪ್ರಭರೆ ಮಹೋ.....**

ಕುತ್ಸ ಆಂಗಿರಸ ಋಷಿಗಳು ಇಂದ್ರ ದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನು ಯಾರನ್ನಿಯಮಕ್ಕೂ ಒಳಪಡದ ಸ್ಥಿಮಿತ ಮನಸ್ಸಿನವ. ಹುಟ್ಟಿನಿಂದ ಶತ್ರುರಹಿತ ಅಳತೆಮೀರಿದ ಮಾನವ ಪಾಲಕ.

ಇಂದ್ರನಲ್ಲಿ ಇರುವ ಶಾಶ್ವತ ಶ್ರದ್ಧೆಯಿಂದಾಗಿ ಸೂರ್ಯ ಚಂದ್ರರು ಶಾಶ್ವತಗಮನ ಹೊಂದಿದ್ದಾರೆ. ಗಂಗಾದಿನದಿಗಳೂ ದ್ಯಾವಾಪೃಥ್ವಿಗಳೂ ಕರ್ತವ್ಯನಿರತವಾಗಿವೆ.

ಇಂದ್ರನು ಉದಕರೂಪಧನ ಗೋಹಿರಣ್ಯರೂಪಧನ, ಶತ್ರುಧನ, ಪುತ್ರಧನಗಳನ್ನೂ ಭಕ್ತರಿಗೆ ಕೊಡುತ್ತಾನೆ.

ಇಂತಹ ಇಂದ್ರನು ಗೋಹಿರಣ್ಯಧನ, ಸುಖ, ಯುದ್ಧದಲ್ಲಿ ರಕ್ಷೆ, ಶತ್ರುನಾಶ ಪುತ್ರಲಾಭ ಋಜುಮಾರ್ಗ ಇಷ್ಟಾರ್ಥಗಳನ್ನು ಕರುಣಿಸಲೆಂದು ಋಷಿ ಪ್ರಾರ್ಥನೆ.

**ಸೂಕ್ತ** - 103 ( **ತತ್ತ ಇಂದ್ರಿಯಂ ಪರಮಂ..........**

ಕುತ್ಸ ಆಂಗಿರಸ ಋಷಿ ಇಂದ್ರ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರನಿಗೆ ತನ್ನ ಬಲದಲ್ಲೇ ದೃಢ ವಿಶ್ವಾಸ. ಇಂದ್ರನ ಸಾಹಸ ವೀರಕಾರ್ಯಗಳಿಂದ

ದೇವಪತ್ನಿಯರೂ ಮರುತ್ತುಗಳೂ ಹರ್ಷಗೊಂಡಿದ್ದಾರೆ.

ಇಂದ್ರನ ಅಗ್ನ್ಯಾಖ್ಯ ತೇಜಸ್ಸು ಭೂಮಿಯ ಮೇಲೆ, ಸೂರ್ಯಾಖ್ಯತೇಜಸ್ಸು ಅಂತರಿಕ್ಷದಲ್ಲಿ ಹರಡಿವೆ. ಅಹಸ್ಸಿನಲ್ಲಿ ಅಗ್ನಿಯು ಸೂರ್ಯನೊಂದಿಗೂ, ರಾತ್ರಿಯಲ್ಲಿ ಸೂರ್ಯನು ಅಗ್ನಿಯೊಂದಿಗೂ ಸೇರಿಕೊಳ್ಳುತ್ತಾರೆ.

ವೃತ್ರ, ಶಿಷ್ಣ, ಕುಯವ, ಕೌಓಣ ಅಸುರರನ್ನು ಕೊಂದು, ಶರಭಾಸುರ ನಗರವನ್ನು ನಾಶಮಾಡಿ, ಅಪಹೃತ ಗೋವುಗಳನ್ನು ಬಿಡಿಸಿ ತಂದವ – ಇಂದ್ರನೇ. ವಜ್ರಾಯುಧದಿಂದ ಮೇಘಸೀಳಿ ವೃಷ್ಟಿ ಸುರಿಸುವ ಇಂದ್ರನೇ, ಕೃತ ತ್ರೇತಾಯುಗಗಳ ಸೃಷ್ಟಿಕರ್ತ. ಪೃಥ್ವಿಯನ್ನು ಅಸುರ ಪೀಡೆಯಿಂದ ನಿವಾರಿಸಿ, ಹರಡಿದ ಇಂದ್ರನಿಗಾಗಿ ಸೋಮರಸ ಸಿದ್ಧವಾಗಿದೆ.

ಯಾಜ್ಞಿಕರು ಆರ್ಯರಿಗೆ ಸೇರಿದ ಬಲಕೀರ್ತಿಗಳನ್ನೂ ವೃದ್ಧಿಯನ್ನೂ ಅಪೇಕ್ಷಿಸುತ್ತಾರೆ.

**ಸೂಕ್ತ** - 104 ( **ಯೋನಿಷ್ಟ ಇಂದ್ರವ್ರಾ ನಿಷದೇ.....**

ಕುತ್ಸ ಆಂಗಿರಸ ಋಷಿ ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಕುಲಶೀನದಿ, ಅಂಜಸೀನದಿ, ವೀರಪತ್ನೀನದಿ – ಇವುಗಳು ಅಸುರಕುಯುವಿನ ಹರ್ಷದಾಯಕ ಸ್ಥಾನಗಳು. ನೀತಿರಹಿತ ವಿಷಯ ಲಂಪಟ ಕುಯವು ಇತರ ರಥವನ್ನು ಅಪಹರಿಸಿ ನದೀ ಮಧ್ಯದಲ್ಲಿ ಅಡುಗುವವ. ಶಿಷ್ಟಾನದಿಯಲ್ಲಿ ಸ್ನಾನ ಮಾಡುವಾಗಲೇ ಕುಯುವಿನ ಹೆಂಡರೀರ್ವರನ್ನೂ ಇಂದ್ರನು ನೀರಿನಲ್ಲೇ ಮುಳಗಿಸಿಬಿಟ್ಟನು.

ಇಂತಹ ಇಂದ್ರನ ಹರ್ಷಾರ್ಥವಾಗಿ ಯಥೇಚ್ಛವಾಗಿ ಸೋಮರಸವನ್ನು ಯಾಜ್ಞಿಕರು ಅರ್ಪಿಸುತ್ತಾರೆ. ಯಜ್ಞಕ್ಕೆ ಆಹ್ವಾನಿಸುತ್ತಾರೆ.

ಇಂದ್ರನು, ಮರೆಹೊಕ್ಕ ಯಜಮಾನನನ್ನು ಕಾಪಾಡಲಿ, ರಾಕ್ಷಸಕ್ರೋಧ ಅಡಗಿಸಲಿ. ಸೂರ್ಯ ಮತ್ತು ಅಗ್ನಿದೇವತೆಗಳಲ್ಲಿ ಭಕ್ತಿ ಇಡುವಂತೆ ಮಾಡಲಿ. ಪಾಪರಹಿತ ಕರ್ಮ ಮಾಡಿಸಲಿ.

ಯಾಜ್ಞಿಕರ ಸ್ತೋತ್ರಗಳಿಂದ ಇಂದ್ರನು ಪ್ರೀತನಾಗಿ – ಯಾಜ್ಞಿಕರ ಗರ್ಭಸ್ಥ, ತೆವಳುವ, ನಡೆಯುತ್ತಿರುವಂತಹ ಸಂತತಿಗಳಿಗೆ ಸ್ವಲ್ಪವೂ ಹಿಂಸೆಯಾಗದಂತೆ ಕಾಪಾಡಲಿ. ಹಸಿವು ಧನರಾಹಿತ್ಯದಿಂದ ಕಾಪಾಡಿ, ಅನ್ನಕ್ಷೀರ ಸುಖಭೋಗ ಸಾಮಗ್ರಿಗಳನ್ನು ಕೊಡಲಿ. ಕೊಟ್ಟ ಸುಖಭೋಗಗಳನ್ನು ಕಸಿದುಕೊಳ್ಳದೇ – ಯಾಜ್ಞಿಕರನ್ನು ಸಲಹಲು ಪ್ರಾರ್ಥನೆ.

**ಸೂಕ್ತ** - 105 ( **ಚಂದ್ರಮಾ ಅಪ್ಸ್ವ(ಅ)ನ್ತರಾ ಸುಪರ್ಣೋ.....**

ಅಪ್ತ್ಯತ್ರಿತ ಕುತ್ಸ ಋಷಿ ವಿಶ್ವೇ ದೇವತೆಗಳನ್ನು ಪಂಕ್ತಿ, ಮಹಾಬೃಹತೀಯವಮಧ್ಯಾ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಋಷಿ ಕುತ್ಸರು ಭಾವಿಯಲ್ಲಿ ಬಿದ್ದು ಬಿಟ್ಟಿದ್ದಾರೆ; ನೀರಿನಿಂದಾವೃತರಾಗಿದ್ದಾರೆ, ಮಾನಸಿಕ ವ್ಯಥೆಗೊಳಗಾಗಿದ್ದಾರೆ, ದುಃಖ ಪಡುತ್ತಿದ್ದಾರೆ, ದುಃಖದಿಂದ ಪಾರುಮಾಡುವ ಬಲವು ಸ್ತೋತ್ರದಲ್ಲಿದೆ ಎಂದು ತಿಳಿದಿದ್ದಾರೆ, ದೇವತೆಗಳನ್ನು ಪಾರ್ಥಿಸುತ್ತಿದ್ದಾರೆ.

ಬಾವಿಯಲ್ಲಿ ಬಿದ್ದಿರುವುದರಿಂದ ಋಷಿಗೆ – ಧನಾರ್ಜನೆಗೆ ಅವಕಾಶವಿಲ್ಲ, ಪುತ್ರರನ್ನು ಪಡೆಯಲಾಗದು, ಪಿತೃಪಿತಾಮಹರುಗಳು ಸೋಮಪಾನ ಹಾಗೂ ಸ್ವರ್ಗಭ್ರಷ್ಟರಾಗುವ ಪರಿಸ್ಥಿತಿ ಒದಗಿದೆ. ಈ ಪರಿಸ್ಥಿತಿಯನ್ನು ತಪ್ಪಿಸಲು, ಋಷಿ ದ್ಯಾವಾಪೃಥ್ವಿಗಳನ್ನು ಪ್ರಾರ್ಥಿಸುತ್ತಾರೆ. ಇತರ ದೇವತೆಗಳ ಶಕ್ತಿ ಸಾಮರ್ಥ್ಯಗಳನ್ನೂ ಕೊಂಡಾಡುತ್ತಾರೆ.

ಚಂದ್ರನು ದ್ಯುಲ್ಲೋಕಸಂಚಾರಿ. ಈ ಚಂದ್ರನ ಕಿರಣಗಳ ಮೂಲಸ್ಥಾನ ತಿಳಿಯದು.

ಅಗ್ನಿಯು ಪ್ರಾಜ್ಞದೇವದೂತ, ಉಪಕಾರ ಬುದ್ಧಿಯವ, ದೇವತೆಗಳನ್ನು ಯಜ್ಞಕ್ಕೆ ಆಹ್ವಾನಿಸಿ ಅವರಿಗೆ ಹವಿಸ್ಸನ್ನು ತಲುಪಿಸುವವ. ಆರ್ಯಮನು ಅಭೀಷ್ಟಗಳನ್ನು ಪೊಂದಿಸುವವ, ವರುಣನು ಉಪಕಾರ ಬುದ್ಧಿಯ ಮಾರ್ಗದರ್ಶಕ, ಸತ್ಯಾತ್ಮಕ, ಅನಿಷ್ಟನಿವಾರಕ, ದುಃಖನಿವಾರಕ. ಆದಿತ್ಯನು ಬ್ರಹ್ಮಲೋಕ ಮಾರ್ಗದರ್ಶಕ ಹಾಗೂ ಯುಗಾದಿಗಳಲ್ಲಿ ಅಗತ್ಯ ಆದರಣೀಯ. ಬೃಹಸ್ಪತಿಯು ಭಾವಿಗೆ ಬಿದ್ದ ಕುತ್ಸನನ್ನು ರಕ್ಷಿಸಿದವ, ಸೂರ್ಯನು ಮನೋಹರ ಕಿರಣಗಳಿಂದ ಸರ್ವವ್ಯಾಪಿ.

ಮೂರುಲೋಕವ್ಯಾಪಿ ಇಷ್ಟಾರ್ಥಪ್ರದ ದೇವತೆಗಳು, ದ್ಯುಲ್ಲೋಕ ಮಧ್ಯದ ಐದು ದೇವತೆಗಳೂ – ದೇವಲೋಕದ ಸಕಲ ದೇವತೆಗಳಿಗೂ ಪ್ರಾರ್ಥನೆ ತಲುಪಿಸುತ್ತಾರೆ.

ಇಂದ್ರನು ಮಾನಸಿಕವ್ಯಥೆಯಿಂದ ಪಾರು ಮಾಡುವವ, ಸ್ತೋತ್ರಪ್ರಿಯ. ಸ್ತೋತ್ರದಿಂದಲೇ ನದೀಪ್ರವಹಿಸುವುದು, ಸೂರ್ಯ ತೇಜಸ್ಸು ಬೆಳಗುವುದು.

ನೀರುಗಳ ಪುತ್ರ – ತ್ರಿತನು ಈ ಋಷಿಯ ಚರಿತ್ರೆಯನ್ನು ತಿಳಿದಿದ್ದಾನೆ, ಸಪ್ತ ಪ್ರಾಣರೂಪದ ಸೂರ್ಯಕಿರಣಗಳಿಂದ ಬೆಳೆದ ಋಷಿಯನ್ನು ದ್ಯಾವಾಪೃಥ್ವಿಗಳು ದುಃಖದಿಂದ ಕಾಪಾಡಿ, ಭಾವಿಯಿಂದ ಮೇಲಕ್ಕೆತ್ತಲು ಪ್ರಾರ್ಥಿಸುತ್ತಾರೆ.

**ಸೂಕ್ತ - 106 ( ಇಂದ್ರಂಮಿತ್ರಂ ವರುಣಮಗ್ನಿಮೂತಯೇ.....**

ಕುತ್ಸ ಆಂಗಿರಸಋಷಿಗಳು ವಿಶ್ವೇದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಕುತ್ಸರು ಭಾವಿಯಲ್ಲಿ ತಳ್ಳಲ್ಪಟ್ಟಾಗ ರಕ್ಷಣಾರ್ಥವಾಗಿ ದೇವತೆಗಳನ್ನು ಪ್ರಾರ್ಥಿಸುತ್ತಿದ್ದಾರೆ. ಇಂದ್ರನು ವಾಸಸ್ಥಾನ ದಯಪಾಲಿಸುವ ಉದಾರಿ. ಸಮಸ್ತ ಪಾಪಗಳನ್ನು ಕಳೆಯುವವ, ಅದಿತಿಯ ಪುತ್ರರಾದ ಸಕಲ ದೇವತೆಗಳೂ ವೀರರೊಂದಿಗೆ ಸಹಾಯಕ್ಕೆ ಬರುವವರು, ದ್ಯಾವಾಪೃಥವಿಗಳು ಸಹಾಯ ಮಾಡುವ ದೇವತಾತ್ಮರು. ಅಗ್ನಿಯು ಸುಖದಾಯಕ ನರರಿಂದ ಪೂಜಿತ, ಇಷ್ಟಾರ್ಥಪ್ರದ, ಅನ್ನದಾತ. ಬೃಹಸ್ಪತಿಯು ಸುಖದಾತ, ಸವಿತೃವು ಜಾಗ್ರತೆಯಿಂದ ರಕ್ಷಿಸುವವ.

ಋಷಿಯು ಈ ದೇವತೆಗಳ ಅನುಗ್ರಹಕ್ಕಾಗಿ ಪ್ರಾರ್ಥಿಸುತ್ತಾನೆ. ರೋಗನಾಶಕ ಭಯನಿವಾರಕ ಶಕ್ತಿ ಕರುಣಿಸಲು ಮನುವನ್ನೂ ಪ್ರಾರ್ಥಿಸುತ್ತಾನೆ. ಇಂದ್ರ ಮಿತ್ರ ವರುಣ ಅದಿತಿ ಸಾಗರದೇವತೆ ಪೃಥ್ವಿ ದ್ಯುಲ್ಲೋಕ ದೇವತೆಗಳು – ಋಷಿಯ ಪ್ರಾರ್ಥನೆ ಕೇಳಲಿ.

**ಸೂಕ್ತ** - 107 ( **ಯಜ್ಞೋದೇವಾನಾಂ ಪ್ರತ್ಯೇತಿ.....**

ಋಷಿ ಕುತ್ಸ ಆಂಗೀರಸರು ವಿಶ್ವೇದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಆದಿತ್ಯರು ದಾರಿದ್ರ್ಯನಾಶನ ಸಮರ್ಥರು. ಮರುತ್ತುಗಳು ಪ್ರಾಣಾಪಾನಾದಿ ರೂಪದಿಂದ ಅವಯವಗಳಲ್ಲಿರುವವರು, ಇಂದ್ರಾದಿಗಳು ಯಜ್ಞದಿಂದ ಧನಾದಿ ಸುಖದಾತರು. ವರುಣ ಅಗ್ನಿ ಮನು ಸವಿತೃಗಳು ಅನುಗ್ರಾಹಕರು.

ಆಂಗಿರಸಋಷಿಗಳ ಗಾನ ಮಂತ್ರಸ್ತುತಿಗಳಿಂದ ಸಕಲ ದೇವತೆಗಳೂ – ಋಷಿಯಲ್ಲಿಗೆ ಬಂದು ರಕ್ಷಣಾ ಸುಖ ಅನುಗ್ರಹ ಉಂಟುಮಾಡಲಿ.

**ಸೂಕ್ತ** - 108 ( **ಯ ಇಂದ್ರಾಗ್ನೀ ಚಿತ್ರತಮೋ ರಥೋ ವಾಮಭಿ.....**

ಋಷಿಕುತ್ಸ ಅಂಗೀರಸರು ಇಂದ್ರಾಗ್ನಿ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಪ್ರಾರ್ಥಿಸುತ್ತಾರೆ.

ಇಂದ್ರಾಗ್ನಿಗಳು ಕಲ್ಯಾಣಾತ್ಮಕ ಹೆಸರಿಂದ ಒಂದುಗೂಡಿರುವವರು ಅನೇಕ ರೂಪದಾರಿಗಳು, ಯಜ್ಞಾರ್ಹರು ಇಷ್ಟಾರ್ಥಪ್ರದರು. ಆಶ್ಚರ್ಯಕರ ರೀತಿಯಲ್ಲಿ ಬೆಳಗುವವರು.

ಇಂದ್ರಾಗ್ನಿಗಳು – ಸ್ವಗೃಹದಲ್ಲಿರಲಿ, ಬ್ರಾಹ್ಮಣರ ಯಜ್ಞಭೂಮಿಯಲ್ಲಿರಲಿ ಅಥವಾ ಕ್ಷತ್ರಿಯ ಯುದ್ಧಭೂಮಿಯಲ್ಲಿರಲಿ – ಅಹಿಂಸಕ ಮಾನವರ ಗುಂಪಿನಲ್ಲಿರಲಿ, ಹಿಂಸಕರ ಗುಂಪಿನಲ್ಲಿರಲಿ, ಕೇಡುಬಯಸುವವರ ಜೊತೆ ಇರಲಿ, ಯಜ್ಞಫಲಿಗಳ ಜೊತೆಗಿರಲಿ, ತಮ್ಮ ಕರ್ಮಾರ್ಥ ಯಜ್ಞ ಕರ್ಮಫಲ ಪಡೆಯುವವರ ಜೊತೆ ಇರಲಿ – ಹತ್ತಿರದ ಪೃಥ್ವೀಲೋಕದಲ್ಲಿರಲಿ ದೂರದ ದ್ಯುಲ್ಲೋಕದಲ್ಲಿರಲಿ, ಅಥವಾ ಅಂತರಿಕ್ಷ ಮಧದಲ್ಲಿರಲಿ, ಆಮದ್ಯೆ ಎಲ್ಲೇ ಇರಲಿ, ಭೂಮಿ, ದ್ಯುಲ್ಲೋಕ, ಪರ್ವತ ಮೂಲಿಕೆ ನೀರು – ಇವುಗಳಲಿಲ್ಲಾದರೂ ಇರಲಿ, –ಆದಿತ್ಯ ಸಂಬಂದಿತ ಪ್ರಕಾಶಕ ಅಂತರಿಕ್ಷ ಮಧ್ಯತೇಜಸ್ಸಿಂದ ಹರ್ಷಿತರಾಗಿ ಅಂತರಿಕ್ಷದಲ್ಲೇ ಇರಲಿ.

ಯಾಜ್ಞಿಕರನ್ನು ಅನುಗ್ರಹಿಸಲು ಇಂದ್ರಾಗ್ನಿಗಳು ಯಜ್ಞಕ್ಕೆಬರಲಿ ಸೋಮಸ್ವೀಕರಿಸಿ ಯಾಜ್ಞಿಕರ ಪ್ರಾರ್ಥನೆ ಅಂಗೀಕರಿಸಲಿ, ಸಮಸ್ತಧನಗಳನ್ನೂ ಯಾಜ್ಞಕರಿಗೆ ಇಂದ್ರಾಗ್ನಿಗಳು ಅನುಗ್ರಹಿಸಲಿ.

**ಸೂಕ್ತ - 109 ( ವಿಹ್ಯಖ್ಯಂ ಮನಸಾವಸ್ಯ ಇಚ್ಛನ್ನಿಂದ್ರಾಗ್ನೀ.....**

ಕುತ್ಸ ಆಂಗೀರಸಋಷಿ ಇಂದ್ರಾಗ್ನಿ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ಇಂದ್ರಾಗ್ನಿಗಳು ಎಲ್ಲರನ್ನೂ ನೋಡಲು ಶಕ್ತರು. ಶ್ರೇಷ್ಠವಾದ ತೋಳ್ಬಲ ಮನೋಹರ ಕೈಗಳ ಪ್ರಭಾವಿಗಳು, ಶತ್ರುದಮನಕಾರರು.

ಪಿತೃಪಿತಾಮಹರು ಬ್ರಹ್ಮಲೋಕವನ್ನು ಇಂದ್ರಸಕಿರಣ ಮೂಲಕವೇ ಸೇರಿದರು.

ಯಜ್ಞಯಜಮಾನನು ಇಂದ್ರಾಗ್ನಿಗಳನ್ನು -ಜ್ಞಾತಿಗಳು, ಛಂದುಗಳು ಎಂದು ಮನಃ ಪೂರ್ವಕವಾಗಿ ತಿಳಿದಿದ್ದಾರೆ. ಯಜಮಾನನ ಶ್ರೇಷ್ಠಬುದ್ಧಿಯೂ ಇಂದ್ರಾಗ್ನಿಗಳ ಕೊಡುಗೆಯೇ.

ಪ್ರಾರ್ಥನೆ ಮತ್ತು ಧ್ಯಾನಯುಕ್ತ ಸ್ತೋತ್ರಗಳಿಂದ ಮಧುರ ಸೋಮದಿಂದ, ಸ್ವಾಗತಿಸಲು ಯಜಮಾನನು ಇಂದ್ರಾಗ್ನಿಗಳಿಗಾಗಿ ಕಾದಿದ್ದಾನೆ. ಇಂದ್ರಾಗ್ನಿಗಳು ಇವುಗಳಿಂದ ತೃಪ್ತರಾಗಲಿ. ಯಜಮಾನನ ಜೊತೆಯಲ್ಲೇ ಇರಲಿ, ಶತ್ರುದಮನ ಯುದ್ಧದಲ್ಲಿ ರಕ್ಷಿಸೆ ಅನುಗ್ರಹಿಸಲಿ.

ಕಣ್ಣಿಗೆಕಾಣದ ಇಂದ್ರಕಿರಣಗಳು ಯಾಜ್ಞಿಕರನ್ನು ಶಕ್ತಿಉತ್ಪಾದಕ ಪುತ್ರಪೌತ್ರಾದಿ ಸಂತತಿ ಬೆಳೆದು ಬರುವಂತೆ ಅನುಗ್ರಹಿಸಲಿ.

**ಸೂಕ್ತ - 110 ( ತತಂ ಮೇ ಅಪಸ್ತದುತಾಯತೇ.....**

ಕುತ್ಸ ಆಂಗೀರಸಋಷಿ ಋಭು ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಸುಧನ್ವಪುತ್ರ ಋಭುಗಳು ಮಾನವರಾಗಿದ್ದವರು. ಅರಣ್ಯದಲ್ಲಿ ತಪಸ್ಸುಮಾಡಿ ಸವಿತೃವಿನಿಂದ ಸೋಮವನ್ನು ಪಡೆದರು. ಮರಣರಾಹಿತ್ಯ ದೇವತೆಯಸ್ಥಿತಿ ಪಡೆದರು; ಸೂರ್ಯ ಸಮಾನ ಪ್ರಕಾಶ, ಪರಿಪಕ್ವಜ್ಞಾನ ಪಡೆದು ಅಂತರಿಕ್ಷ ಸೇರಿದರು.

ಹವಿಸ್ಸಿಗೆ ಅರ್ಹರಾದ ಋಭುಗಳು, ವಸಂತಾದಿ ಋತುಗಳೊಂದಿಗೆ ಸೂರ್ಯರಶ್ಮಿರೂಪದಲ್ಲಿ ಸೇರಿಕೊಂಡು, ಸೂರ್ಯನ ವೇಗ ಸಾಮರ್ಥ್ಯಗಳಿಸಿದರು.

ಋಭುಗಳು ಪ್ರಶಸ್ತ ಸೋಮರೂಪ ಅನ್ನದ ಅಪೇಕ್ಷೆಯಿಂದ, ತ್ವಷ್ಟೃವಿನಿಂದ ಸಿದ್ಧವಾದ ಚಮಸ ಎಂಬ ಅಳೆಯುವ ಪಾತ್ರೆಯನ್ನು ನಾಲಕ್ಕು ಮಾಡಿದರು. ಮೃತಹಸುವಿನ ಬದಲಿಗೆ ಹೊಸ ಹಸುವನ್ನು ನಿರ್ಮಿಸಿ, ಮೃತಹಸುವಿನ ಚರ್ಮವನ್ನೇ ಅದಕ್ಕೆ ಹೊದಿಸಿ ಕರುವಿಗೆ ಸಮಾಧಾನ ತಂದರು, ತಮ್ಮ ತಂದೆ ತಾಯಿಗಳ ವೃದ್ಧಾಪ್ಯ ತಪ್ಪಿಸಿ ಯೌವನತಂದರು.

ದೇವತೆಗಳಿಗೆಲ್ಲಾ ಪರ್ಯಾಪ್ತವಾಗುವಷ್ಟು ಸೋಮರಸವನ್ನು ಇವರೂ ಪಡೆದು ಜ್ಞಾನಶಾಸ್ತ್ರೋಕ್ತಸ್ತುತಿಗಳಿಂದ ತೃಪ್ತಿಹೊಂದಲಿ. ಯಜ್ಞಶತ್ರುಗಳನ್ನು ನಾಶಮಾಡಿ ಯಜ್ಞರಕ್ಷಕರಾಗಿರಲಿ.

ಈ ಓಂದೆ ನೆರವೇರಿಸಿದಂತೆಯೇ ಈಗಲೂ ನೆರವೇರಿಸುತ್ತಿರುವ ಅಗ್ನಿಷ್ಟೋಮ ಕರ್ಮ ಕರ್ತಯಜಮಾನರಿಗೆ ಋಭುಗಳು ಅಣ್ಣತಮ್ಮದಿರು, ಇಂದ್ರರೊಡಗೂಡಿ, ಅಗತ್ಯವಾದಾಗ ಅನ್ನ ಮತ್ತು ಧನ ಕೊಡುವ ಮನಸ್ಸು ಮಾಡಲಿ. ಮಿತ್ರ ವರುಣ ಅದಿತಿ ಸಾಗರದೇವತೆ ಪೃಥ್ವಿ ದ್ಯುಲ್ಲೋಕಾದಿ ದೇವತೆಗಳು ಆ ಧನಗಳನ್ನೂ ರಕ್ಷಿಸಲಿ.

**ಸೂಕ್ತ** - 111 ( **ತಕ್ಷನ್ರಥಂ ಸುವೃತಂ ವಿದ್ಮನಾಪಸಸ್ತಕ್ಷನ್.....**

ಕುತ್ಸ ಆಂಗೀರಸಋಷಿ ಋಭುದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ.

ಪ್ರಭಾವಶಾಲಿ ಇಂದ್ರನನ್ನೂ ಸುಧನ್ವ ಪುತ್ರರಾದ ಋಭು, ವಿಭ, ವಾಜ ಇವರುಗಳನ್ನೂ ಅಶ್ವಿನೀ ದೇವತೆಗಳು ಮರುತ್ತುಗಳನ್ನೂ ಸೋಮಪಾನಕ್ಕೆ ಋಷಿಗಳು ಆಹ್ವಾನಿಸುತ್ತಾರೆ.

ದೇವತೆಗಳ ಉತ್ತಮರಥ, ಇಂದ್ರನ ಕುದುರೆಗಳ ಸೃಷ್ಟಿಕರ್ತರು ಋಭುಗಳು, ವೃದ್ಧ ಮಾತಾಪಿತೃಗಳಿಗೆ ಯೌವನ ತಂದುಕೊಟ್ಟ ಹಾಗೂ ಕರುವಿಗೆ ಹೊಸ ಗೋತಾಯಿ ಒದಗಿಸಿದವರು.

ಋಭುಗಳು ಜೀವನ ಸಾರ್ಥಕ್ಯ ಹಾಗೂ ರಥಾಶ್ವ ಪೋಷಣೆಗೆ ಧನ ಒದಗಿಸುತ್ತಾರೆ. ಮೇಲೆ ಬೀಳುವ ಶತ್ರು, ಬಂದುವಾಗಲೀ ಅಥವ ಇಲ್ಲದಿರಲಿ – ಅವನ ಮೇಲೆ ಜಯಸಾಧಿಸಲು ವಾಜನು ರಕ್ಷಿಸುತ್ತಾನೆ. ಕರ್ಮಾನುಷ್ಠಾನ ಹಾಗೂ ಜಯಸಂಪಾದನೆಗಾಗಿ ಯಾಜ್ಞಿಕರಲ್ಲಿ ಗೌರವ ಉಂಟಾಗುವಂತೆ ಋಭುವು ಮಾಡುತ್ತಾನೆ.

ಕರ್ಮಾರ್ಥವಾಗಿ, ಬಲಕ್ಕಾಗಿ, ಶ್ರೇಷ್ಠ ವೀರಪುತ್ರ ಸಂತಾನಕ್ಕಾಗಿ ಸುಖವಾಸಕ್ಕಾಗಿ ಶಕ್ತಿಗಾಗಿ ಹವಿರೂಪದ ಅನ್ನವನ್ನು ಋಭುಗಳು ಯಜಮಾನನಿಗೆ ದಯಪಾಲಿಸಲಿ.

**ಸೂಕ್ತ** - 112 ( **ಈಳೇ ದ್ಯಾವಾಪೃಥಿವೀ ಪೂರ್ವಚಿತ್ತಯೇಗ್ನಿಂ.....**

ಕುತ್ಸಆಂಗಿರಸ ಋಷಿಗಳು ದ್ಯಾವಾಪೃಥವೀ, ಅಗ್ನಿ, ಅಶ್ವಿನೀದೇವತೆಗಳು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ದ್ಯಾವಾಪೃಥವಿ ಹಾಗೂ ಅಗ್ನಿ ದೇವತೆಗಳನ್ನು ಮೊದಲು ಸ್ತುತಿಸಿ ನಂತರ ಅಶ್ವಿನೀದೇವತೆಗಳ ಪರಾಕ್ರಮವನ್ನು ಹೊಗಳುತ್ತಾ ಋಷಿಗಳು ಪ್ರಾರ್ಥಿಸುತ್ತಾರೆ.

ಅಶ್ವಿನೀ ದೇವತೆಗಳು, ಅಮೃತಪಾನದಿಂದ ಮಹಾಸಾಹಸಿ ಪ್ರಭುವಾಗಲು ಸಮರ್ಥರಾಗಿದ್ದಾರೆ. ಅಶ್ವಿನೀದೇವತೆಗಳನ್ನು ಯಜ್ಞಕ್ಕೆ ಆಹ್ವಾನಿಸಿ ಯಜಮಾನರು ಅವರ ಅನುಗ್ರಹಕ್ಕೆ ವಿನಂತಿಸುತ್ತಾರೆ.

ಅಶ್ವಿನೀ ದೇವತೆಗಳು, ಶಂಯು ಋಷಿಯ ಬಂಜೆಹಸು ಹಾಲು ಕರೆವಂತೆ ಮಾಡಿದರು, ರಾಕ್ಷಸರಿಂದ ಭಾವಿಗೆ ತಳ್ಳಲ್ಪಟ್ಟ ವಂದನ ಋಷಿಯನ್ನು ರಕ್ಷಿಸಿ ಸೂರ್ಯದರ್ಶನ ಮಾಡಿಸಿದರು. ಅಂದಕಾರಕ್ಕೆ ತಳ್ಳಲ್ಪಟ್ಟ ಕಣ್ವ ಋಷಿಯನ್ನು ರಕ್ಷಿಸಿ ಬೆಳಕಿಗೆ ತಂದರು.

ಅಂತಕನೆಂಬ ರಾಜರ್ಷಿ ಭಾವಿಯಲ್ಲಿ ಬಿದ್ದಾಗ, ಭುಜ್ಯುನೆಂಬ ರಾಜರ್ಷಿ ತೊಂದರೆಯಲ್ಲಿದ್ದಾಗ ರಕ್ಷಿಸಿದರು.

ಕುಂಟನಾಗಿದ್ದ ಪರಾವೃಜ ನಡೆದದ್ದು, ಕುರುಡ ಋಜ್ರಾಶ್ವ ನೋಡಿದ್ದು, ಮಂಡಿಮುರಿದ ಶ್ರೋಣ ಚೆನ್ನಾಗಿ ನಡೆದದ್ದು, ವರ್ತಿತಾಪಕ್ಷಿ ಉಳಿದದ್ದು, ಕಾಲುಮುರಿದಿದ್ದ ಖೇಲನ ಪತ್ನಿ ವಿಶ್ಪಲೆಗೆ ನಡೆವಕಾಲು ಹಾಗೂ ಧನ ಒದಗಿಸಿದ್ದು, ಅಶ್ವನ ಪುತ್ರ ವಶನೆಂಬ ಋಷಿಯನ್ನು ರಕ್ಷಿಸಿದ್ದು ಅಶ್ವಿನೀಗಳೇ.

ಅಶ್ವಿನೀ ದೇವತೆಗಳು, ಉಶಿಕ ಪುತ್ರ ವ್ಯಾಪಾರಿ ಧೀರ್ಘಶ್ರವಸ್ಸಿಗಾಗಿ ವೃಷ್ಟಿತರಿಸಿದರು, ತ್ರಿಜೋತ ಋಷಿಯ ಅಪಹೃತ ಗೋವು ತಂದುಕೊಟ್ಟರು. ಮಾಂಧಾತೃ ಋಷಿಯ ಕರ್ತವ್ಯಕ್ಕೆ ಸಹಾಯ ಮಾಡಿದರು, ಭರದ್ವಾಜ ಋಷಿಗೆ ಅನ್ನ ಒದಗಿಸಿದರು.

ಶಂಭರಾಸುರನ ವಧಾಕಾಲದಲ್ಲಿ ರಾಜರ್ಷಿ ದಿವೋದಾಸನು ಅಸುರ ಭೀತಿಯಿಂದ ಜಲಪ್ರವೇಶ ಮಾಡಿದಾಗ ಅವನನ್ನು ರಕ್ಷಿಸಿದ್ದು, ಯುದ್ಧಕಾಲದಲ್ಲಿ ಋಷಿತ್ರಸದಸ್ಯನ್ನು ರಕ್ಷಿಸಿದ್ದು, ನೆಲದಮೇಲೆ ಮಂಜುನೀರು ಕುಡಿಯುತ್ತಿದ್ದ ವಮ್ರಋಷಿಗೆ, ಕುದುರೆಯನ್ನು ಕಳಕೊಂಡ ಪೃಥ್ವಿ ಋಷಿಗೆ ಸಹಾಯ ಮಾಡಿದ್ದು, ದುಃಖತಪ್ಪಿಸುವ ಮಾರ್ಗವನ್ನು ಶಂಯುಋಷಿಗೆ ತಿಳಿಸಿದ್ದು – ಅಶ್ವಿನೀದೇವತೆಗಳೇ.

ರಾಕ್ಷಸರ ಯಂತ್ರಗೃಹದಲ್ಲಿ ಅಗ್ನಿತಪ್ತನಾಗಿದ್ದ ಅತ್ರಿಗೆ ಶೀತೋದಕ ಒದಗಿಸಿದ, ಮನು ಋಷಿಗೆ ದಾನದಿಂದ ದುಃಖ ದಾರಿದ್ರ್ಯನಾಶ ಮಾಡಿದ, ಸ್ಯೋಮರಶ್ಮಿ ಋಷಿಯ ಶತ್ರುವಿನ ಮೇಲೆ ಬಾಣಪ್ರಯೋಗಿಸಿದ, ಪಠರ್ವನೆಂಬ ರಾಜರ್ಷಿಯನ್ನು ಪ್ರಕಾಶಿಸುವಂತೆ ಮಾಡಿದ, ಶರ್ಯಾಕನನ್ನು ಯುದ್ಧದಲ್ಲಿ ರಕ್ಷಿಸಿದ, ಘಣಗಳಿಂದ ಗೋರಕ್ಷಣೆ ಮಾಡಿದ, ಪರಾಕ್ರಮಿ ಮನುವನ್ನು ಅನ್ನದಾನದಿಂದ ರಕ್ಷಿಸಿದ, ವಿಮದ ಋಷಿಗೆ ಹೆಂಡತಿ ಒದಗಿಸಿದ, ಸುದಾಸರಾಜನಿಗೆ ಧನಪ್ರಶಸ್ತಿ ಹೊಂದಿಸಿದ, ಬಜ್ರುವನ್ನು ರಕ್ಷಿಸಿದ, ಅದ್ರಿಗು ಮತ್ತು ಋತಸ್ಧಭ ಋಷಿಗಳಿಗೆ ಅನ್ನ ಒದಗಿಸಿದ ಕೀರ್ತಿ ಅಶ್ವಿನೀದೇವತೆಗಳದ್ದು.

ಪುರುಕುತ್ಸನ ಕುದುರರಕ್ಷಿಸಿ ಜೇನುನೊಣಗಳಿಗೆ ಮಧುಒದಗಿಸಿ, ಅರ್ಜುನಪುತ್ರ ಕುತ್ಸ, ಕುರ್ವೀತಿ, ದಭೀತಿ, ದ್ವಸಂತಿ, ಪುರುಶಂತಿ –ಗಳನ್ನು ಕಾಪಾಡಿದವರು ಅಶ್ವಿನಿದೇವತೆಗಳೇ.

ವಾಯುಪುತ್ರ ವೇಗಗಾಮಿಯಾಗುವುದಕ್ಕೆ ರುಜಂತಿ ಧನವಂತನಾಗುವುದಕ್ಕೆ ಅತ್ರಿಗೆ ಅಗ್ನಿಸುಖವಾಗುವುದಕ್ಕೆ ಪ್ರಶ್ನಿಗು ಪುರುಕತ್ಸನನ್ನು ರಕ್ಷಿಸುವುದಕ್ಕೆ ಕಾರಣರು – ಅಶ್ವಿನೀದೇವತೆಗಳು.

ನದಿಗಳು ಹರಿವಂತೆಮಾಡಿ, ವಸಿಷ್ಠರನ್ನು ತೃಪ್ತಿಗೊಳಿಸಿ, ಕುತ್ಸ, ಶುತರ್ಯ, ನರ್ಯ– ಇವರನ್ನು ರಕ್ಷಿಸಿ, ಜಲರಹಿತ ನದಿಯನ್ನು ನೀರಿನಿಂದ ತುಂಬಿ, ಕುದುರೆ ಇಲ್ಲದೇ ರಥ ಓಡುವಂತೆ ಮಾಡಿ, ರಾಹುವಿನಿಂದ ಸೂರ್ಯನನ್ನು ಬಿಡಿಸಿದವರು ಅಶ್ವಿನೀದೇವತೆಗಳು.

ಯಜ್ಞತ್ರಯದ ಬಗ್ಗೆ ವಿಶಿಷ್ಟಜ್ಞಾನದ ಭಕ್ತರನ್ನು ರಕ್ಷಿಸುವಂತೆ, ಹಿಂದಿನ ವ್ಯಕ್ತಿಗಳನ್ನು ರಕ್ಷಿಸಿದ ರೀತಿಯಲ್ಲಿ, ಗೋವುಗಳಿಗಾಗಿ ನಡೆದ ಯುದ್ಧದಲ್ಲಿ ಯಜ್ಞಯಜಮಾನರನ್ನು

ರಕ್ಷಿಸಿದಂತೆ, ಈ ಋಷಿಗೂ ಸಕಲ ರಕ್ಷಣೆ, ವಸತಿ, ಧನ, ರಥ, ಕುದುರೆ, ಸಹಾಯ, ಅನ್ನ ಒದಗಿಸಲಿ.

ಅಶ್ವಿನೀ ದೇವತೆಗಳು ತಮ್ಮ ವಾಕ್ಯಗಳನ್ನು ಕರ್ಮಯುಕ್ತ ಮಾಡಲಿ, ಇಷ್ಟಾರ್ಥಪೂರಿಸಲಿ, ವೇದಾರ್ಥ ತಿಳಿವ ಬುದ್ಧಿಶಕ್ತಿಯನ್ನು ಯಜಮಾನನಿಗೆ ಕೊಡಲಿ. ಪ್ರಕಾಶರಹಿತ ರಾತ್ರಿಯ ಕೊನೆಯ ಯಾಮದಲ್ಲಿ ರಕ್ಷಣೆ, ಹಗಲು ರಾತ್ರಿಗಳಲ್ಲಿ ಅಪೇಕ್ಷಿತ ಧನ, ಅನುಗ್ರಹಗಳನ್ನೂ ದಯಪಾಲಿಸಲಿ.

**(ಅಷ್ಟಕ-1, ಅಧ್ಯಾಯ-8, ಸೂಕ್ತಗಳು 113 ರಿಂದ 121ರ ವರೆಗೆ)**

**ಸೂಕ್ತ - 113 (ಇದಂಶ್ರೇಷ್ಠಂ ಜ್ಯೋತಿಷಾಂ.....**

ಕುತ್ಸ ಆಂಗೀರಸ ಋಷಿ ಹಾದೌ ಉಷಾದೇವತೆಗಳನ್ನೂ ರಾತ್ರಿಯನ್ನೂ ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ನಿತ್ಯರಾದ ಉಷೆ ಮತ್ತು ರಾತ್ರಿಯರು ಸೂರ್ಯನೊಂದಿಗೆ ನಿಕಟ ಸಂಬಂಧವಿರುವವರು. ಒಂದೇ ಕ್ರಮದಲ್ಲಿ ಒಂದೇ ಮಾರ್ಗದಲ್ಲಿ ಒಂದೆಡೆನಿಲ್ಲದೆ ಒಬ್ಬರಿಗೊಬ್ಬರು ಅಡ್ಡಿಯಾಗದೆ ಅಂತರಿಕ್ಷದಲ್ಲಿ ಚಲಿಸುತ್ತಾ ಉದ್ದಿಷ್ಟಕಾರ್ಯ ಮಾಡುತ್ತಾರೆ, ಆಯಸನ್ನು ಕ್ಷಯಿಸುತ್ತಾರೆ.

ರಾತ್ರಿಯ ಕೊನೆಯ ಯಾಮದಲ್ಲಿ ಪೂರ್ವದಲ್ಲಿ ಉಷೆಯ ಉದಯವಾಗುತ್ತದೆ, ಕೂಡಲೇ ರಾಕ್ಷಸ ನಿರ್ಗಮನ, ಯಾಗಾದಿಗಳ ಪ್ರಾರಂಭ, ಕತ್ತಲಿಂದಾಗಿ ನಷ್ಟವಾಗಿದ್ದಂತೆ ಆಗಿದ್ದ ಗೃಹದ್ವಾರ ಐಶ್ವರ್ಯಾದಿಗಳು ಸ್ಪಷ್ಟವಾಗಿ ಕಾಣುತ್ತಾ ಅಂತರಿಕ್ಷ ಮೂಲೆ ಮೂಲೆಗಳಲ್ಲಿ ಪ್ರಕಾಶ ವ್ಯಾಪ್ತಿಯಾಗುತ್ತದೆ.

ಮೃತ ಪ್ರಾಯರಾಗಿ ಮಲಗಿದ್ದವರನ್ನು ಚೇತನಕಾರಿಯಾಗುವಂತೆ ಎಚ್ಚರಿಸಿ, ತಮ್ಮ ತಮ್ಮ ಕಾರ್ಯಕ್ಕೆ- ದ್ರವ್ಯಸಂಪಾದನೆ, ವಿಷಯಭೋಗ, ಅನ್ನಯಾಗ, ಉದ್ಯೋಗ ಇತ್ಯಾದಿಗಳಿಗೆ - ಪ್ರೇರಿಸುವವಳು ಉಷೆಯೇ.

ನಿತ್ಯವೂ ಕತ್ತಲೆಕಳೆದು ಸೂರ್ಯ ಮಾರ್ಗ ಸ್ಪಷ್ಟಮಾಡುವ ಉಷಸ್ಸು ಹಿಂದೆ ಎಷ್ಟೋ ಕಳೆದಿದೆ, ಕಳೆದ ಜಾಗಕ್ಕೆ ಹೊಸದಾಗಿ, ಮುಂದಿನದಕ್ಕೆ ಮೊದಲನೆಯದಾಗಿ ಹೊಸಉಷೆಯ ವ್ಯಾಪನೆ ಆಗುತ್ತದೆ.

ಉಷಸ್ಸನ್ನು ಹಿಂದೆ ನೋಡಿದವರು ಈಗಿಲ್ಲ, ಈಗ ನೋಡುತ್ತಿದ್ದೇವೆ, ಮುಂದೆ ನೋಡುವವರು ಹುಟ್ಟುತ್ತಾರೆ.

ಅಗ್ನಿಯ ಜ್ವಲನ ಕಾರ್ಯ, ಪ್ರಪಂಚಾಭಿವೃದ್ಧಿ ಮನುಷ್ಯರ ಕಾರ್ಯತ್ವರತೆಯಂತಹ ಶುಭಗಳಿಗೆ ಉಷೆಯೇ ಕಾರಣ.

ಉಷೆಯು ಯಾಗಕ್ಕೆ ಆಗಮಿಸಿ ಸೋಮ ಮತ್ತು ಸ್ತುತಿಗಳನ್ನು ಸ್ವೀಕರಿಸಲಿ, ಸಂತುಷ್ಟಳಾಗಿ, ಯಾಗದ ಯಾಜ್ಞಿಕರ ತಮೋನಿವಾರಣೆ ಮಾಡಲಿ. ಯಶಸ್ವಿತರುವ ಪ್ರಜಾಪಿತ ಅನ್ನ ಅಶ್ವಾದಿ ಧನಗಳನ್ನು ಯಜಮಾನನಿಗೆ ಕೊಟ್ಟು, ಜನರಲ್ಲಿ ಮುಖ್ಯಸ್ಥನನ್ನಾಗಿ ಮಾಡಲಿ.

**ಸೂಕ್ತ - 114 ( ಇಮಾರುದ್ರಾಯ ತವಸೇ ಕಪರ್ದಿನೇ.....**

ಕುತ್ಸ ಆಗಿರಸ ಋಷಿ ರುದ್ರದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ರುದ್ರನು ಮಹಾಶಕ್ತ ಜಟಾಧಾರಿ, ಶತ್ರುನಾಶಕ, ಇಷ್ಟಾರ್ಥಪ್ರದ, ಪ್ರತಿಪಕ್ಷ ಧ್ವಂಸಕ ಉಜ್ವಲಕಾಂತಿಯುತ ತೇಜಸ್ವಿ, ಯಜ್ಞಸಾಧಕ ವಕ್ರಗತಿಯುಳ್ಳವ ಭೂತ ಭವಿಷ್ಯತ ಜ್ಞಾನಿ, ಉತ್ಕೃಷ್ಟ ಆಹಾರಯುಕ್ತ ವೈದಿಕಗಮ್ಯ ಅಮರ.

ಪೃಥವಿ ಅಂತರಿಕ್ಷಗಳಿಗೆ, ಜ್ಞಾನಕರ್ಮಗಳಿಗೆ ರುದ್ರನೇ ಸ್ವಾಮಿ, ಮೂಲಪುರುಷ ಮನುವು ರುದ್ರನಿಂದಲೇ ರೋಗಾದ್ಯುಪದ್ರವ ಶಮನ, ಭಯರಾಹಿತ್ಯಗಳನ್ನು ಪಡೆದನು, ರುದ್ರನ ಸ್ತೋತ್ರದಿಂದಲೇ ಗ್ರಾಮದಲ್ಲೇ ರೋಗಾದಿ ಉಪದ್ರವ ಇಲ್ಲದಂತಾಗುತ್ತಾ, ಮನುಷ್ಯ ಪ್ರಾಣಿ ವರ್ಗದವರೆಲ್ಲಾ ಪುಷ್ಟಿಪಾಗೂ ಸುಖ ಪೊಂದುತ್ತಾರೆ.

ಯಾಜ್ಞಿಕರು ರುದ್ರನನ್ನು ಹವಿಸ್ಸು ಸ್ತೋತ್ರ ಮಂತ್ರಗಳಿಂದ ಆಹ್ವಾನಿಸುತ್ತಾರೆ. ರುದ್ರನಿಂದ ಪಡೆದದ್ದನ್ನು ರುದ್ರನಿಗೇ ಅರ್ಪಿಸಿ, ಪ್ರಸನ್ನ ಪಡಿಸಿಕೊಳ್ಳುತ್ತಾರೆ.

ರುದ್ರನು ದೇವತೆಗಳ ಕ್ರೋಧವನ್ನು ದೂರ ಮಾಡಲಿ. ಯಾಜ್ಞಿಕರಿಗೂ ಅವರ ಮಕ್ಕಳು ಮೊಮಕ್ಕಳಿಗೂ ಸುಖ ಸೌಖ್ಯ ಸಾಧನ ಉಟುಮಾಡಲಿ. ಮನುಷ್ಯ ಭೋಗ ಅನ್ನ ಔಷದ ಆರೋಗ್ಯ ರಕ್ಷಕಕವಚ ವಾಸಗೃಹಗಳನ್ನು ಅನುಗ್ರಹಿಸಲಿ.

ವೃದ್ಧ, ಯುವ, ಬಾಲ, ಗರ್ಭಸ್ಥಶಿಶು, ಪುತ್ರ ಪೌತ್ರ ಇಷ್ಟಮಿತ್ರರು, ಅಶ್ವವೀರರು – ಇವರ್‍ಯಾರೂ ವಧೆಯಾಗುವುದು ಬೇಡ.

ಯಾಜ್ಞಿಕರ ಈ ಸ್ತೋತ್ರವನ್ನು ಮಿತ್ರಾವರುಣ ಅದಿತಿ, ಸಾಗರದೇವತೆ ಪೃಥ್ವಿ ಅಂತರಿಕ್ಷ ದೇವತೆಗಳು ಮಹಾತ್ಮಯುಕ್ತವನ್ನಾಗಿ ಮಾಡಲಿ.

**ಸೂಕ್ತ - 115 (ಚಿತ್ರಂ ದೇವಾನಾ ಮುದಗಾದನೀಕಂ.....**

ಕುತ್ಸ ಆಂಗಿರಸ ಋಷಿಗಳು ಸೂರ್ಯ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಸೂರ್ಯನು ಚರಾಚರ ಜಗತ್ತಿಗೆ ಮಿತ್ರಾ ವರುಣ ಅಗ್ನಿಯಂತಹ ಪ್ರಪಂಚಕ್ಕೆ ಕಣ್ಣನಂತಿದ್ದಾನೆ. ಅವನಪ್ರಕಾಶ ಕಿರಣಗಳು ಸ್ವರ್ಗ ಭೂಮಿ ಆಕಾಶವನ್ನೆಲ್ಲಾ ವ್ಯಾಪಿಸಿದೆ. ಸೂರ್ಯನೇ ಚರಾಚರ ಜಗತ್ತಿಗೆ ಆತ್ಮ

ಉಷೆಯನ್ನೇ ಓಂಬಾಲಿಸುತ್ತಾ ಸೂರ್ಯನು ಉದಯಿಸಿದ ಕೂಡಲೇ ಸೂರ್ಯರಶ್ಮಿಗಳು

ಯಾಜ್ಞಿಕರನ್ನು ಪಾಪರಹಿತರನ್ನಾಗಿ ಮಾಡುತ್ತವೆ. ಯಾಜ್ಞಿಕನು ಉಷೋದಯದೊಂದಿಗೆ ಪೂಜಾಕಾರ್ಯ ಪ್ರಾರಂಭಿಸುತ್ತಾನೆ.

ಸೂರ್ಯ ಕಿರಣೋದಯದೊಂದಿಗೆ ಪ್ರಾರಂಭವಾಗುವ ಕೃಷಿ ಆದಿ ಕಾರ್ಯಗಳು, ಕಿರಣಾಸ್ತ ದೊಂದಿಗೆ ಸ್ಥಗಿತಗೊಳ್ಳುತ್ತವೆ.

ವಿಚಿತ್ರಾವಯವದ ಸೂರ್ಯನ ಕುದುರೆಗಳು ಆಕಾಶದಲ್ಲಿ ವೇಗವಾಗಿ, ಒಂದೇದಿನದ ಅವಧಿಯಲ್ಲಿ ಭೂಮಿ ಆಕಾಶವನ್ನೆಲ್ಲಾ ಸುತ್ತಿ ತಮಸ್ಸುನಿವಾರಿಸಿ, ಪ್ರಕಾಶ ಉಂಟುಮಾಡುತ್ತದೆ.

ಮಿತ್ರಾ ವರುಣ ಅದಿತಿ ಪೃಥ್ವಿ ಸಿಂಧು ಅಂತರಿಕ್ಷ ದೇವತೆಗಳು ಸೂರ್ಯನ ಇಂತಹ ಸ್ಥಿತಿಯನ್ನು ಮಹಾತ್ಮಯುಕ್ತರನ್ನಾಗಿ ಮಾಡಲಿ.

**ಸೂಕ್ತ - 116 ( ನಾಸತ್ಯಾಭ್ಯಾಂ ಬರ್ಹಿರಿವ.....**

ಕಕ್ಷೀವಾನ್ ದೈರ್ಘತಮಸ್ ಔಶಿಜಃ ಋಷಿಗಳು ಅಶ್ವಿನೀದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ನಾಸತ್ಯರು ಎಂದರೆ ಅಶ್ವಿನೀದೇವತೆಗಳು ಸಮಿತ್ತು ಮತ್ತು ವೃಷ್ಟಿಗಾಗಿ ಯಾಗಗಳಲ್ಲಿ ಸ್ತುತಿಸಲ್ಪಡುತ್ತಾರೆ.

ಅಶ್ವಿನೀದೇವತೆಗಳ ಸಾಹಸ ಕಾರ್ಯಗಳಿಂದ ಅವರ ಗೌರವ ಹೆಚ್ಚಿದೆ. ಬಲಿಷ್ಠ ಶೀಘ್ರಗಾಮಿ ಕತ್ತೆಗಳು ಇವರ ವಾಹನವೆಳೆಯುವವು. ಅವು ಅನೇಕ ಯುದ್ಧಗಳಲ್ಲಿಜಯಿಸಿವೆ.

ಅಶ್ವಿನೀ ದೇವತೆಗಳು ವಿಮದನ ಪತ್ನಿಯನ್ನು ಶತ್ರುಗಳಿಂದ ಬಿಡಿಸಿದರು, ರಾಜರ್ಷಿ ಪೇದುವಿಗೆ ಶತ್ರುನಾಶಕವಾದ ಬಿಳೀ ಕುದುರೆ ಕೊಟ್ಟರು, ಅಂಧಕಾರದಲ್ಲಿ ಅಂಗವಿಕಲನಾಗಿ ಅಗ್ನಿಪೀಡೆಗೆ ಒಳಗಾದ ಅತ್ರಿಗೆ ಶೀತೋದಕ ಸರ್ವಾಂಗಗಳನ್ನೂ ಕೊಟ್ಟರು. ವೃದ್ಧಚ್ಯವನ ಋಷಿಗೆ ಯೌವನ ಹಾಗೂ ಯುವಪತ್ನಿಯನ್ನು ಕೊಟ್ಟರು. ನಿರ್ಜನ ಪ್ರದೇಶದ ಭಾವಿಯಲ್ಲಿ ಅಡಗಿಸಿದ್ದ ನಂದನನನ್ನು ಭಾವಿಯಿಂದ ಕಾಪಾಡಿದರು. ದಧ್ಯಙಋಷಿ ಕುದುರೆಯ ತಲೆಪಡೆದ ಮತ್ತು ಅಶ್ವಿನೀದೇವತೆಗಳಿಗೆ ಮಧುವಿದ್ಯೆ ಭೋದಿಸಿದ, ನಪುಂಸಕನ ಪತ್ನಿ ವಧ್ರಿಮತಿಗೆ ಹಿರಣ್ಯ ಹಸ್ತನೆಂಬ ಮಗನನ್ನು ಕರುಣಿಸಿದವರು ಅಶ್ವಿನೀ ದೇವತೆಗಳು. ವೃಕದ ಬಾಯಿಂದ ವರ್ತಿಕಾ ಪಕ್ಷಿಯನ್ನು ಬಿಡಿಸಿದರು, ಅಂಧಋಷಿಕವಿಗೆ ದೃಷ್ಟಿಕೊಟ್ಟರು. ಪಾದಹೀನೆ ವಿಶ್ಪಲೆಗೆ ಕಬ್ಬಿಣಪಾದ ಜೋಡಿಸಿ ಶತ್ರುಧನ ಜಯಿಸುವಂತೆ ಮಾಡಿದರು. ವೇಗಪಂದ್ಯದಲ್ಲಿ ಸೂರ್ಯಪುತ್ರಿಯನ್ನು ಸೋಲಿಸಿದರು. ರಾಜರ್ಷಿ ದಿವೋದಾಸನಮನೆಗೆ ಮೊಸಳೆ ಮತ್ತು ವೃಷಭ ಹೂಡಿದ ರಥದಲ್ಲಿ ಧನಯುಕ್ತ ಅನ್ನ ಒದಗಿಸಿದರು.

ಜನು ಮಹರ್ಷಿಗೆ ಬಲಧನ ಸುಸಂತಾನ ವೀರ್ಯಯುತ ಅನ್ನ ಒದಗಿಸಿದರು. ಜಾಹೂಷ ರಾಜನನ್ನು ದುರ್ಗಮ ದಾರಿಯಲ್ಲಿ ರಾತ್ರಿಯಲ್ಲಿ ಸುಗಮವಾಗಿ ಪರ್ವತ ಹತ್ತಿಸಿದರು. ಋಷಿ ವಶಸಿಗೆ ಪ್ರತಿ ದಿನ ಸಾವಿರ ವರವದ ವ್ಯವಸ್ಥೆಗೊಳಿಸಿದರು. ಪುರುಶ್ವನ ಶತ್ರುಗಳನ್ನು ನಾಶಗೊಳಿಸಿದರು. ಶರುಗಾಗಿ ಆಳಬಾವಿಯ ನೀರು ಮೇಲೆರುವಂತೆ

ಮಾಡಿದರು. ಶಾಂತ ಶಯುವಿನ ಗೊಡ್ಡು ಹಸುವಿನಲ್ಲಿ ಹಾಲು ಉತ್ಪಾದಿಸಿದರು. ವಿಶ್ವಕನಮಗ ಕೃಷ್ಣನ ಮಗನನ್ನು ಕಾಣುವಂತೆ ಮಾಡಿದರು.

ಹತ್ತು ಹಗಲು ಒಂಬತ್ತು ರಾತ್ರಿ ಪಾಶಭದ್ಧನಾಗಿ ನೀರಿನಲ್ಲಿ ಒಂಸಿತನಾಗಿದ್ದ ರೇಭನನ್ನು ಮೇಲೆತ್ತಿದರು.

ಅಶ್ವಿನೀದೇವತೆಗಳ ವಾಹಕ ಕತ್ತೆಯು ತೋಳನರೂಪದಲ್ಲಿದ್ದಾಗ ಋಜ್ರಾಶ್ವನ್ನು ನೂರುಮೇಕೆ ಬಲಿಕೊಟ್ಟದ್ದರಿಂದ ಅವನ ತಂದೆ ಕೋಪದಿಂದ ಋಜ್ರಾಶ್ವನನ್ನು ಕುರುಡನನ್ನಾಗಿ ಮಾಡಿದನು. ಅಶ್ವಿನೀದೇವತೆಗಳು ಅವನಿಗೆ ದೃಷ್ಟಿ ಒದಗಿಸಿದರು.

'ಕಾರೋತರ' ಪಾತ್ರೆಗೆ ನೂರು ಮಡಕೆಗಳಷ್ಟು ಸುರೆಯನ್ನು ತಮ್ಮ ವಾಹಕದ ಗೊರಸುಗಳಿಂದಲೇ ಸುರಿಸಿದರು.

ನೂರುಚಕ್ರಗಳ ಆರು ಕುದುರೆಗಳ ರಥದಲ್ಲಿ ತುಗ್ರನ ಮಗ ಭುಜ್ಯನು ರಥದೊಂದಿಗೆ ಮೂರು ಹಗಲು ರಾತ್ರಿಗಳು ಸಮುದ್ರದಲ್ಲಿ ಮುಳಗಬೇಕಾಯಿತು. ಭುಜ್ಯನನ್ನು ತೇಲುವಂತೆ ಮಾಡಿ ಸಮುದ್ರದಾಚೆಗೆ ತಂದೆಯ ಬಳಿಗೆ ಭುಜ್ಯನನ್ನು ತಂದು ಬಿಟ್ಟವರು – ಅಶ್ವಿನೀದೇವತೆಗಳು.

ಅಶ್ವಿನೀದೇವತೆಗಳ ಸಾಹಸಗಳಿಂದ ಯಾಜ್ಞಕರು ಸಂತೋಷಗೊಂಡಿದ್ದಾರೆ. ಅಶ್ವಿನೀ ದೇವತೆಗಳು ವೀರ್ಯವಂತ ಮಕ್ಕಳನ್ನು, ಒಳ್ಳೆಯ ಗೋವುಗಳನ್ನು, ಯಾಜ್ಞಕರಿಗೆ ಕೊಡಲಿ. ಯಜಮಾನನು ರಾಷ್ಟ್ರಕ್ಕೆ ಅಧಿಪತಿಯಾಗುವಂತೆ, ಇಂದ್ರಿಯಪಾಟವ ಉಳ್ಳವರಾಗಿ ಬಹುಕಾಲ ಜೀವಿಸಿ ನಂತರ ವಾರ್ಧಕ್ಯಪಡೆಯುವಂತೆ ಅನುಗ್ರಹಿಸಲಿ.

**ಸೂಕ್ತ** - 117 ( **ಮಧ್ವಃ ಸೋಮಸ್ಯಾಶ್ವಿನಾ ಮದಾಯ......**

ಋಷಿ ಕಕ್ಷೀವಾನ ದೈರ್ಘತಮಸ ಔಶಿಜಃಯ ಅಶ್ವಿನೀದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಪ್ರಾರ್ಥಿಸುತ್ತಾರೆ.

ಅಶ್ವಿನೀದೇವತೆಗಳು ಮಹಾಸಾಹಸಿಗಳು. ಪಂಚಜನಸಂಭಂಧಿ ಅತ್ರಿಯನ್ನು ರಕ್ಷಿಸಿ ಪುತ್ರಪೌತ್ರರನ್ನು ಕೊಟ್ಟರು. ಕೂಪೋದಕದಿಂದ ರೇಭಋಷಿಯನ್ನು ಎತ್ತಿ ಅವನ ಅವಯುವ ಸರಿಪಡಿಸಿದರು. ವಿತ್ವಕನ ನಷ್ಟಪುತ್ರ ವಿಷ್ಣಾಕುವನ್ನು ದೊರಕಿಸಿದರು. ತಂದೆಯ ಮನೆಯಲ್ಲೇವಾರ್ಧಕ್ಯ ಹೊಂದುತ್ತಿದ್ದ ಘೋಷಾಳಿಗೆ ಪತಿಯನ್ನು ಒದಗಿಸಿದರು. ಶ್ಯಾವನಿಗೆ ಸ್ವುರದ್ರೂಪಿ ಪತ್ನಿಯನ್ನೂ, ಕುರಡಕಣ್ವರಿಗೆ ದೃಷ್ಟಿಯನ್ನೂ ನೃಷದಪುತ್ರರಿಗೆ ಶ್ರವಣೇಂದ್ರಿಯಗಳನ್ನು ಕೊಟ್ಟರು. ಶಯುವನ್ನು ರಕ್ಷಿಸಿ ಹೂಳಲ್ಪಟ್ಟ ವಂದನನನ್ನು ಮೇಲೆತ್ತಿದರು. ಪೇದುವಿಗೆ ಉತ್ತಮಾಶ್ವ ಒದಗಿಸಿದ, ರೇಭನನ್ನು ರಕ್ಷಿಸಿದ, ಕುಂಟವಿಷ್ಪಲೆಗೆ ಕೃತಕಕಾಲು ಕೊಟ್ಟ, ಭರದ್ವಾಜ ಮುನಿಗೆ ಅನ್ನ ಅನುಗ್ರಹಿಸಿದ, ಚ್ಯವನನನ್ನು ಯುವಕನನ್ನಾಗಿಸಿದ, ಭುಜ್ಯನನ್ನೂ ತಂದೆ ತುಗ್ರನ ಬಳಿಗೆ ಸುಖವಾಗಿ ಕರೆತಂದವರು ಅಶ್ವಿನೀ ದೇವತೆಗಳು.

ವರ್ತಿಕಾಪಕ್ಷಿಯನ್ನು ತೋಳದಿಂದ ಬಿಡಿಸಿದ, ಕಠಿಣ ಬೆಟ್ಟಕ್ಕೆ ಜಾಹುಷನನ್ನು ಕರೆದೊಯ್ದು ಅಸುರ ವಿಶ್ವಾಂಚನ ಮಗನನ್ನು ವಿಷದಿಂದ ಕೊಂದವರು **ಅಶ್ವಿನೀದೇವತೆಗಳು.**

ಉಷೆಯನ್ನು ಅವಳ ಪ್ರಾರ್ಥನೆಯಂತೆ ಸೂರ್ಯಮಂಡಲ ದಿಂದಪ್ರತ್ಯೇಕಿಸಿ, ಮೇಘಗಳಿಂದ ಮಳೆತರಿಸಿದರು. ತಂದೆಯ ಕೋಪಕ್ಕೆ ಒಳಗಾಗಿ ಕುರುಡಾಗಿದ್ದ ಋಜ್ರಾಶ್ವನು ದೃಷ್ಟಿಪಡೆದನು. ವ್ಯಾಧಿಗ್ರಸ್ತ ಅತ್ರಿಯ ಅಂಗ ಸರಿಪಡಿಸಿದರು. ವಿಷ್ಪಲೆಯ ರೋಗ ಶಮನ ಮಾಡಿದರು. ಪುರುಮಿತ್ರನ ಮಗಳನ್ನು ವಿಮುದನ ಪತ್ನಿಯನ್ನಾಗಿ ಮಾಡಿದರು. ಮನುವಿಗಾಗಿ ಧಾನ್ಯನಾಶಕ ದಸ್ಯುಗಳನ್ನು ನಾಶಗೊಳಿಸಿ ಸೂರ್ಯನ ತೇಜಸ್ಸು ವೃದ್ಧಿಸಿದರು.

ದಧೀಚ ಋಷಿಗೆ ಅಶ್ವದ ತಲೆ ಜೋಡಿಸಿ, ತಾವು ಪ್ರವರ್ಗ್ಯ ಮತ್ತು ಮಧುವಿದ್ಯೆಯರಹಸ್ಯ ಅರಿತರು. ವಧ್ರಿಮತಿಯು ಹಿರಣ್ಯ ಹಸ್ತನೆಂಬ ಪುತ್ರನನ್ನು ಪಡೆದಳು. ಮೂರು ತುಂಡಾಗಿದ್ದ ಶ್ಯಾವನನ್ನು ಪುನಃ ಸೇರಿಸಿ ಜೀವ ಕೊಟ್ಟರು.

ಇಂತಹ ಅಶ್ವಿನೀ ದೇವತೆಗಳನ್ನು ಉಪಚರಿಸಲು, ಸೂರ್ಯ ಪುತ್ರಿ ಅಶ್ವಿನಿಗಳ ರಥವೇರಿದಳು. ಯಾಜ್ಞಿಕರು ಅಶ್ವಿನಿಗಳನ್ನು ಉಪಚರಿಸಲು ಮಧುರ ಸೋಮರಸ, ಸ್ತುತಿ, ಧರ್ಭಾಸನಸಿದ್ಧಗೊಳಿಸಿದ್ದಾರೆ. ಪಜ್ರಕುಲೋತ್ಪನ್ನನಾದ ಈ ಋಷಿಯ ಯಾಗಕ್ಕೆ ಮನೋವೇಗದಲ್ಲಿ ಎಲ್ಲಾ ಕರ್ಮಗಳನ್ನೂ ರಕ್ಷಿಸಿ ಪುತ್ರ, ಪ್ರಭೂತಐಶ್ವರ್ಯ ಅನುಗ್ರಹಿಸಲಿ – ಎಂದು ಪ್ರಿಯವಾಕ್ಯಗಳಿಂದ ಪಾರ್ಥಿಸುತ್ತಾರೆ.

**ಸೂಕ್ತ 118 ( ಆವಾಂ ರಥೋ ಅಶ್ವಿನಾ ಶ್ಯೇನಪತ್ವಾ.....**

ಕಕ್ಷೀವಾನ ದೈರ್ಘತಮಸ ಔಶಿಜ ಋಷಿ ಅಶ್ವಿನೀ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳು ದಾರಿದ್ರ್ಯ ಪರಿಹಾರಕರು, ಮಹಾಸಾಹಸಿಗಳು; ಇವರಲ್ಲಿ ಪ್ರೀತಳಾಗಿ ಸೂರ್ಯಪುತ್ರಿ ಇವರ ರಥವೇರಿದಳು.

ವಂದನ ಮತ್ತು ರೇಭರನ್ನು ಭಾವಿಯಿಂದೆತ್ತಿ, ಭುಜ್ಯನನ್ನು ಸಮುದ್ರದಂಡೆಗೆ ಸುಖವಾಗಿ ತಂದು, ಚ್ಯವನನನ್ನು ಯುವಕನಾಗಿಸಿ, ಅತ್ರಿಗೆ ಅಗ್ನಿ ಬಾಧೆ ತಪ್ಪಿಸಿ, ಕಣ್ಣಿನ ಪೊರೆಯನ್ನು ಕಣ್ವರಿಗೆ ತೆಗೆದು, ಶಯುವಿನ ಗೊಡ್ಡು ಹಸುವಿಗೆ ಹಾಲುತುಂಬಿ, ವರ್ತಿಕಾಪಕ್ಷಿಯನ್ನು ರಕ್ಷಿಸಿ, ಉಷೆಯನ್ನು ಸೂರ್ಯನಿಂದ ಬಿಡಿಸಿ, ವಿಷ್ಪಲೆಗೆ ಕಬ್ಬಿಣದ ಮಾಣಕಾಲು ಜೋಡಿಸಿ, ಪೇದುವಿಗೆ ಇಂದ್ರದತ್ತ ದ್ರವ್ಯಸಂಪಾದಕ ಅಶ್ವ ಧಯಪಾಲಿಸಿದವರು – ಅಶ್ವಿನೀದೇವತೆಗಳು.

ಸ್ತುತಿಸುವವರ ರಕ್ಷಣೆಗಾಗಿ ಶ್ಯೇನಪಕ್ಷಿಯಂತೆ ವೇಗವಾಗಿ ಬರಲಿ. ಉಷಃ ಕಾಲದಲ್ಲಿ ಯಾಜ್ಞಿಕರಿಂದ ಹವಿಸ್ಸುಸ್ವೀಕರಿಸಲಿ. ಯಾಜ್ಞಿಕರಿಗೆ ಸುಖಧನ, ಗೋಕ್ಷೀರ, ಅಶ್ವಗಳಶಕ್ತಿ, ಪುತ್ರಾದಿಗಳ ಅಭಿವೃದ್ಧಿತರಲಿ.

**ಸೂಕ್ತ - 119 ( ಆವಾಂರಥಂ ಪುರುಮಾಯಂ ಮನೋಜವಂ......**

ಋಷಿ ಕಕ್ಷೀವಾನ ದೈರ್ಘತಮಸ ಔಶಿಜರು ಅಶ್ವಿನೀದೇವತೆಗಳನ್ನು ಜಗತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ರಥ ಪಂದ್ಯದಲ್ಲಿ ಸೂರ್ಯನನ್ನು ತಲುಪಿದ, ಅಶ್ವಿನೀದೇವತೆಗಳ ಮೇಲಿನ ವಿಶ್ವಾಸದಿಂದ ಸೂರ್ಯಪುತ್ರಿ ಊರ್ಜಾನಿಯು ಇವರನ್ನು ವರಿಸಿದಳು. ಬಹುಯಾಜ್ಞಕರಸ್ವರ್ಗಗೆ ಹೋಗಲು ವೇಗವಾಗಿ ರಥ ಓಡಿಸಲು ಊರ್ಜಾನಿ ಪ್ರೇರಿಸುತ್ತಾಳೆ.

ಅಶ್ವಿನೀದೆವತೆಗಳು ಬುಜ್ಯ, ದಿವೋದಾಸ, ರೇಭ, ಅತ್ರಿ, ಶಯು, ವಂದನರಿಗೆ ಮಾಡಿದ ಉಪಕಾರ ಕೆಲವು, ಅವರ ಸಾಹಸಗಳಷ್ಟೇ. ಧಧೀಚಿಯಿಂದ ಪಡೆದ ಮಧು ವಿದ್ಯೆಯಿಂದ ಮಧುವನ್ನು ದುಂಬಿಗಳಿಗೆ ಒದಗಿಸಿದರು. ಗರ್ಭಸ್ಥವಾಮದೇವನ ಸ್ತುತಿಯಿಂದ ಆ ಋಷಿಯು ತಾಯಿಯ ಉದರದಿಂದ ಜನಿಸುವಂತೆ ಮಾಡಿದರು.

ಜೀವನ ಸಾರ್ಥಕ್ಯಕ್ಕೆ ಅಶ್ವಿನೀದೇವತೆಗಳನ್ನು ಯಜ್ಞಕ್ಕೆ ಆಹ್ವಾನಿಸುತ್ತಾರೆ. ಮದಯುಕ್ತ ಅಶ್ವಿನೀದೇವತೆಗಳು ಸೋಮರಸದಿಂದ ಸಂತುಷ್ಟಿಗೊಳ್ಳಲಿ, ಯಜ್ಞಕಾರ್ಯ ಸಮರ್ಥವಾಗಿ ನೆರವೇರಿಸಲಿ. ಐಶ್ವರ್ಯ ರಕ್ಷಣೆ ಲಭಿಸುವಂತಾಗಲು ಅಶ್ವಿನೀ ದೇವತೆಗಳು ಸದಾಯಾಜಮಾನನ ಜೊತೆಯೇ ಇರಲೆಂದು ಪ್ರಾರ್ಥಿಸುತ್ತಾರೆ.

**ಸೂಕ್ತ 120 ( ಕಾ ರಾಧ ದ್ಧೋತ್ರಾಶ್ವಿನಾ ವಾಂ ವಾಂ.....**

ಕಕ್ಷೀವಾನ ದೀರ್ಘತಮಸ ಔಶಿಜ ಋಷಿ. ಅಶ್ವಿನೀದೇವತೆಗಳನ್ನು ದುಸ್ವಪ್ನ ನಾಶಕ್ಕಾಗಿಯೂ ಗಾಯತ್ರೀ, ಕಕುಪ್, ಕಾವಿರಾಟ್, ನಷ್ಟರೂಪಿ, ತನುಶಿರಾ, ಉಷ್ಣಿಕ್, ವಿಷ್ಟಾರ ಬೃಹತೀಕೃತಿ, ವಿರಾಟ ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇತರ ದೇವತೆಗಳಿಗಿಂತ ಪಕ್ವಜ್ಞಾನಿಗಳಾದ ಅಶ್ವಿನೀದೇವತೆಗಳ ಮಹಿಮೆಯನ್ನು ಅವರಿಂದಲೇಅರಿತು, ಅದರಂತೆಯೇ ಸ್ತುತಿಸಬೇಕು. ಇದನ್ನು ಅರಿಯದವರಿಗೆ ಅಶ್ವಿನೀದೆವತೆಗಳನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ.

ಘೋಶಾ ಎಂಬ ಸ್ತ್ರೀ, ಭೃಗು, ಪಜ್ರವಂಶಜರು ಅಶ್ವಿನೀದೇವತೆಗಳನ್ನು ಸ್ತುತಿಸಿದ ವಾಕ್ಯಗಳು ಶ್ರೇಷ್ಠವಾಗಿದೆ. ಋಜ್ರಾಶ್ವನಂತೆ ಯಾಜ್ಞಕನೂ ಸ್ತುತಿಸುತ್ತಾನೆ.

ಅಶ್ವಿನೀದೇವತೆಗಳ ರಥವನ್ನು ಯಾಜ್ಞಕನು ಸ್ತುತಿಸುತ್ತಾನೆ. ಶ್ರೇಯಸ್ಸಿಗಾಗಿ ಅಶ್ವಿನೀದೇವತೆಗಳಿಂದ ದತ್ತವಾದದ್ದೆಲ್ಲಾ ಅವರ ರಥದಿಂದಲೇ ದತ್ತವಾದದೆಂದು ತಿಳಿಯುತ್ತಾನೆ.

ಕನಸು ಮತ್ತು ಸ್ವಾರ್ಥಿಯಧನ - ಎರಡು ಶೀಘ್ರನಷ್ಟ ಹೊಂದುವವೆಂದು ತಿಳಿದಿರುವ ಯಾಜ್ಞಕ ಅವುಗಳ ಬಗ್ಗೆ ನಿರ್ಲಿಪ್ತನಾಗಿದ್ದಾನೆ.

ಅಶ್ವಿನೀ ದೇವತೆಗಳು ಬಲಕಾರಕ ಸೋಮ ಸ್ವೀಕರಿಸಲಿ ಯಾಜ್ಞಕರನ್ನು ಶತ್ರುಗಳಿಂದ ರಕ್ಷಿಸಲಿ. ಗೋಧನ ಬಲ ವೃದ್ಧಿಮಾಡಲಿ. ಯಾಜ್ಞಕರು ಶ್ರೇಷ್ಠ ಉದ್ಯಮದಲ್ಲಿ ತೊಡಗುವಂತೆ ಮಾಡಿ ಪುತ್ರಯುಕ್ತರನ್ನಾಗಿಸಿ ಇಷ್ಟಸಿದ್ಧಿಯುಂಟುಮಾಡಲು ಅಶ್ವಿನೀದೇವತೆಗಳಲ್ಲಿ ಯಜಮಾನಋಷಿ ಪ್ರಾರ್ಥಿಸುತ್ತಾರೆ.

**ಸೂಕ್ತ** 121 ( **ಕದಿತ್ಥಾ ನೄ್ಃ ಪಾತ್ರಂ ದೇವಯಾತಾಂ......**

ಕಕ್ಷೀವಾನ್ ದೈರ್ಘತಮಸ ಔಶಜಃ ಋಷಿ ವಿಶ್ವೇ ದೇವತ ಇಂದ್ರನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮಹಾಮಹಿಮ ಇಂದ್ರನು ಸೂರ್ಯರೂಪಿಸಿಂದ ರಾತ್ರಿ ಉಷೆಯನ್ನು ಅನುಸರಿಸುತ್ತಾನೆ. ಇಂದ್ರನು ಉಷೆಗೆ ಪ್ರಕಾಶಕೊಡುವ ಸೂರ್ಯನೇ. ದ್ವಿಪಾದಿಚತುಶ್ಪಾದಿಗಳ ಹಿತರಕ್ಷಣೆಗಾಗಿ ಅಂತರಿಕ್ಷ ಬೀಳದಂತೆ ಹಿಡಿದಿದ್ದಾನೆ.

ಪ್ರಕೃತಿವಿರುದ್ದವಾಗಿ, ಹೆಣ್ಣುಕುದುರೆ ಹಸುವನ್ನು ಪ್ರಸವಿಸುವಂತೆ ಮಾಡಿದನು. ಋಭುವ ಕೊಟ್ಟ ವಜ್ರಾಯುಧದಿಂದ ಕುತ್ಸನ ಹಿಂಸಕರನ್ನು ವಧಿಸಿದ. ಮೇಘರೂಪಿ ಶುಷ್ಣಾಸುರನನ್ನು ವಧಿಸಿದ. ವೃತ್ರಾಸುರನನ್ನು ಕೊಂದು ಭೂಮ್ಯಾಕಾಶಕ್ಕೆ ಸಂತೋಷ ತಂದ. ಮನುಸಂಭಂಧಿ ದ್ರೋಹಿ ಫಣಿಯು ಅಪಹರಿಸಿದ ಹಸುಗಳನ್ನು ಬಿಡಿಸಿದ. ತೊಂಬತ್ತಕ್ಕೂ ಹೆಚ್ಚು ಯಜ್ಞಹಿಂಸಕ ರಾಕ್ಷಸರನ್ನು ಕೊಂದು ನದಿಗೆಸೆದ.

ಸಾಹಸಿ ಇಂದ್ರನು, ಹವಿಸ್ಸನ್ನು ಕೊಟ್ಟಾಗ ಕ್ಷಿಪ್ರವಾಗಿ ಕೆಲಸ ಮಾಡುತ್ತಾನೆ.

ಆಂಗೀರಸ ಋಷಿಯ ಆಹ್ವಾನಮನ್ನಿಸಿ ಇಂದ್ರನು ಯಜ್ಞಕ್ಕೆ ಬರಲಿ. ಮನೋಹರ ಮದಕಾರಕ ಸೋಮಪಾನಮಾಡಿ ಉಳಿದದ್ದನ್ನು ತನ್ನ ಕುದುರೆಗೆ ಕೊಡಲಿ. ಸೋಮಮಿಶ್ರಿತ ಹವಿಸ್ಸಿನ ಸೇವನೆಯಿಂದ ಸೂರ್ಯಪ್ರಕಾಶಿ ಇಂದ್ರನು, ಯಾಜ್ಞಕರಿಗೆ ಸಂತೋಷತರಲಿ. ದ್ರವ್ಯಾಪಹಾರಿಗಳನ್ನು ಭೇದಿಸಲಿ. ದಾರಿದ್ರ್ಯ ಅಪಜಯದಿಂದ ಕಾಪಾಡಲಿ. ಅನುಗ್ರಹ ಭುದ್ದಿಯಿಂದ ರಥ ಅಶ್ವ ಐಶ್ವರ್ಯ ಕೀರ್ತಿ ಆಹಾರ ಗೋಸಂಪತ್ತು ಪುತ್ರ ಪೌತ್ರಾದಿಗಳನ್ನು ಪ್ರಿಯವಾಕ್ಕುಗಳನ್ನು ಅನುಗ್ರಹಿಸಲಿ. ಅವುಗಳಿಂದಾಗುವ ಸಂತೋಷವನ್ನೂ ಅನುಗ್ರಹಿಸಲಿ.

( **ಅಷ್ಟಕ** 2 - **ಅಧ್ಯಾಯ** 1 - **ಸೂಕ್ತಗಳು** 122 **ರಿಂದ** 136 **ರವರೆಗೆ** )

**ಸೂಕ್ತ** - 122 ( **ಪ್ರಷಃ ಪಾಂತಃ.....**

ಕಕ್ಷೀವಾನ್ ದೈರ್ಘತಮಸ ಔಷಜಃ ಋಷಿಗಳು ವಿಶ್ವೇದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಆಂಗೀರಸ ಪ್ರೇರಿತರಾಗಿ ಕಕೀಷ್ವಂತ ಋಷಿಗಳು ಅವರ ಶಿಷ್ಯರೊಂದಿಗೆ, ರೋಗನಿವಾರಣೆಗಾಗಿ ಅಶ್ವಿನೀದೇವತೆಗಳನ್ನೂ, ಫಲದಾನಕ್ಕಾಗಿ ಪೂಷನನ್ನೂ, ಐಶ್ವರ್ಯಕ್ಕಾಗಿ ಅಗ್ನಿಯನ್ನೂ ಉಷಃ ಕಾಲದಲ್ಲಿ ಸ್ತುತಿಸುತ್ತಾರೆ.

ರುದ್ರದೇವನು ಪಾಪ ಪರಿಹಾರಕರ್ತ. ರೋಧಸಿ ಮತ್ತು ರುದ್ರರ ಪುತ್ರರಾದ ಮರುದ್ದೇವತೆಗಳು ಭೂಮಿ ಆಕಾಶ ಅಂತರಿಕ್ಷ ಅಂತರ್ಗತರಾಗಿ ರಾಕ್ಷಸರನ್ನು ಓಡಿಸುತ್ತಾರೆ. ಉಷೆಯು ಪ್ರಪಂಚವನ್ನೇ ಶ್ವೇತವರ್ಣ ಮಾಡುವಳು ಹಾಗೂ ಆಹ್ವಾನಕ್ಕೆ ಮುನ್ನವೇ ಅಭಿವೃದ್ಧಿಮಾಡುವಳು.

ಉದಕಪುತ್ರ ಅಗ್ನಿ, ಸರ್ವತ್ರಸಂಚಾರಿ ಆದಿತ್ಯ, ಮಳೆ ತರುವ ವಾಯು, ಸ್ತೋತ್ರಪುರುಷ ಇಂದ್ರ, ಮಾತೃಸ್ಥಾನೀಯರಾದ ಅಹೋ ರಾತ್ರಿಯರು, ಜಲಾಭಿಮಾನ ದೇವತೆ ಸಿಂಧು, ಅಸಂಖ್ಯ ಗೋದಾಸಿಗಳಾದ ಮಿತ್ರಾವರುಣರು – ಇವರೆಲ್ಲರೂ ಉತ್ತಮ ಐಶ್ವರ್ಯ ಅನ್ನ ಅಶ್ವರಥಯುಕ್ತರಾದ ಅಮರರು. ಈ ಎಲ್ಲಾ ದೇವತೆಗಳನ್ನೂ ಸ್ತುತಿಪೂರ್ವಕವಾಗಿ ಸೋಮಪಾನ ಮಾಡಲು, ಯಜ್ಞಕ್ಕೆ ಋಷಿ ಆಹ್ವಾನಿಸುತ್ತಾನೆ.

ರಕ್ಷಕರಿಲ್ಲದ ಋಷಿಯು, ತನ್ನ ಬುದ್ಧಿವೃದ್ಧಿಗೆ, ಹೆಚ್ಚು ಆಹಾರಕ್ಕೆ, ಹೆಚ್ಚು ಸಂತೋಷಕ್ಕಾಗಿ ಅಪೇಕ್ಷಿಸುತ್ತಾ, ದ್ರೋಹಿಗಳಿಗೆ ಸೋಮವನ್ನೂ ದೇವತೆಗಳಿಗೆ ನೀಡದವರಿಗೆ ವ್ಯಾಧಿಯುಂಟಾಗಲಿ ಎಂದೂ ಅಪೇಕ್ಷಿಸುತ್ತಾನೆ.

ಪಂಚಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳಿಗೆ ಬಲಕಾರಕಗಳಾದ ಅನ್ನ ಐಶ್ವರ್ಯಾದಿಗಳನ್ನು ವರುಣಾದಿ ವಿಶ್ವೇದೇವತೆಗಳು ಅನುಗ್ರಹಿಸಲಿ. ಯಜ್ಞಮಾಡುವವರು ಬಲಿಷ್ಟರಾಗಿ ಶತ್ರುಜಯಿಗಳಾಗಿ ದಾನಶೂರ ಸುಶಿಕ್ಷಿತರಾಗಲಿ.

ನಹುಷರಾಜನ ನಾಲ್ಕು ಮಕ್ಕಳು ಹಾಗೂ ಅಯವ ರಾಜನ ಮೂರುಮಕ್ಕಳುಗಳಿಂದ ಹಿಂಸೆಗೊಳಗಾದ ಕಕ್ಷೀವಂತ ಋಷಿಯು, ಆ ಹಿಂಸಕರು ಮಿತ್ರಾವರುಣ ಸೂರ್ಯರ ತಾಪದಿಂದ ಹಿಂಸಿತರಾಗಲೆಂದು ಅಪೇಕ್ಷಿಸುತ್ತಾನೆ.

ಕರ್ಣಕುಂಡಲ ರತ್ನಾಹಾರಯುಕ್ತ ಸುರದ್ರೂಪಿ ಪುತ್ರರನ್ನೂ, ಐಹಿಕಾಮುಷ್ಮಿಕ ಫಲಗಳನ್ನೂ ಅನುಗ್ರಹಿಸುವಂತೆ, ವಿಶ್ವೇದೇವತೆಗಳನ್ನು ಕಕ್ಷೀವಂತ ಪ್ರಾರ್ಥಿಸುತ್ತಾನೆ.

**ಸೂಕ್ತ - 123 ( ಪೃಥೋ ದಕ್ಷಿಣಾಯಾ.....**

ಋಷಿ ಕಕ್ಷೀವಾನ್ ದೈರ್ಘತಮಸ ಔಶಿಜರು, ಉಷಾ ದೇವತೆಯನ್ನು, ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ನಕ್ಷತ್ರಗಳು ಮರೆಯಾಗಿ ಸೂರ್ಯೋದಯವಾಗುವಾಗಿನ ನಡುವಿನ 21 ರಿಂದ 26 ಘಳಿಗೆಗಳ ಅವಕಾಶ – ರಾತ್ರಿಯ ಕೊನೆಯ ಭಾಗ – ಉಷಃಕಾಲ.

ನಾನಾರೂಪಿ ನಿತ್ಯ ಶುದ್ಧ ತರುಣಿ ಉಷೆಯು ಎತ್ತರ ಪ್ರದೇಶದಿಂದ ಪ್ರಪಂಚವನ್ನು ನೋಡುತ್ತಾ ಕತ್ತಲನ್ನು ನಿವಾರಿಸಿ ಪ್ರತಿಗೃಹಕ್ಕೂ ಬೆಳಕು ತರುತ್ತಾಳೆ.

ಎಲ್ಲಾ ದೇವತೆಗಳಿಗೂ ಮೊದಲೇ ಆಗಮಿಸಿ, ಯಜ್ಞದ ಹವಿಸ್ಸಿನ ಭಾಗವನ್ನು ಪಡೆಯುತ್ತಾಳೆ.

ಅಹೋರಾತ್ರಿಗಳು ಆಯುಃ ಕ್ಷಯಕಾರಕಗಳು, ಒಂದಾದನಂತರ ಒಂದುಕ್ರಮ ರೂಪದಲ್ಲಿ ಬರುತ್ತವೆ. ಕತ್ತಲಲ್ಲಿ ಕಾಣಲಾಗದ ಪದಾರ್ಥಗಳನ್ನು, ಕಾಣುವಂತೆ ಮಾಡಲು, ಹಗಲುರೂಪದಲ್ಲಿ ಉಷೆ ಬರುತ್ತಾಳೆ.

ಆದಿತ್ಯನಿಗೆ ಅಲಂಕಾರಕಳಾಗಿ, ಆದಿತ್ಯನ ಆದಿಭಾಗ ಪ್ರಕಟಿಸುತ್ತಾ, ಜನತಮಸ್ಸನ್ನು ನಿವಾರಿಸುತ್ತಾ, ಮಂಗಳ ಉಂಟುಮಾಡುತ್ತಾಳೆ.

ಉಷೆಯು ಉದಿಸುವಾಗ, ಮಗುವಿನಂತೆ ನಗ್ನಾವಸ್ಥೆಯಿಂದಿದ್ದು, ಯುವಾವಸ್ಥೆಯಾಗಿ,

ಮಂದಹಾಸ ವಿಶೇಷಕಾಂತಿ ಬೀರುತ್ತಾ, ಪ್ರಿಯನ ಮುಂದೆ ಲಾವಣ್ಯ ಮಂದಸ್ಮಿತಳಾಗಿ, ನೀಲಪೀತ್ಯಾದಿ ರೂಪ ವ್ಯಕ್ತಪಡಿಸುತ್ತಾಳೆ.

ಪ್ರತಿ ಉಷಸ್ಸೂ ಯಾವುದೇ ಒಂದಿನದರಂತೆ ಇರದೆ, ಹೊಸಬರಂತೆಯೇ ಇರುತ್ತವೆ. ಯಾವಭಾಗಕ್ಕೆ ಪ್ರಕಾಶ ಹಾಗೂ ಹವಿಸ್ಸನ್ನು ಹಂಚುವಳೋ, ಆ ಭಾಗದಲ್ಲಿನ ದೇವತೆಗಳು, ಯಜಮಾನನನ್ನು ಪಾಪರಹಿತನೆಂದು ಸಾರಲಿ. ದುಃಖಕಾರಕರು ಹಾಗೂ ಕತ್ತಲನ್ನೂ ಓಡಿಸಲಿ – ಎಂದು ಋತ್ವಿಜರೊಂದಿಗೆ ಋಷಿಪ್ರಾರ್ಥಿಸುತ್ತಾನೆ.

ಆದಿತ್ಯನ ಕಿರಣಗಳನ್ನು ನಮ್ಮ ಅನುಕೂಲಕ್ಕೆ ಪರಿವರ್ತಿಸಿ ಪ್ರತಿಯೊಂದು ಮಂಗಳಕಾರ್ಯಕ್ಕೆ ಸಿದ್ಧಮಾಡಲು, ಯಾಜ್ಞಿಕರ ತಮಸ್ಸನ್ನು ನಿವಾರಿಸಲು, ಸ್ತುತಿತಳಾಗಲು ಹವಿರಾದಿಯುಕ್ತರಾದ ಯಾಜ್ಞಕರಿಗೆ ಬ್ರಹ್ಮಿತ ಐಶ್ವರ್ಯ ಅನುಗ್ರಹಿಸಲು, ಉಷಾದೇವಿಯಲ್ಲಿ ಪ್ರಾರ್ಥನೆ.

**ಸೂಕ್ತ** - 124 ( **ಉಷಾ ಉಚ್ಛಂತೀ.....**

ಕಕ್ಷೀವಾನ್ ಧೀರ್ಘತಮಸ ಔಶಿಜಃ ಋಷಿಗಳು ಉಷಾಃದೇವತೆಯ ಸ್ತುತಿಯನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಮುಂದುವರಿಸುತ್ತಾರೆ.

ತಮೋನಿವಾರಕ ಪ್ರವಾಹರೂಪಿಯಾದ, ಉಷೆಯು ಸ್ತುತ್ಯಳು, ಉಷೆಯನ್ನು ಒಂದೆ ನೋಡಿದವರು ಈಗಿಲ್ಲ. ಮುಂದಿನವರ ಪಾಡೂ ಇದೇ. ಬರಲಿರುವ ಪ್ರಾಣಿಗಳ ಪ್ರಜ್ಞಾವಾಕ್ಕುಗಳಿಗೆ ಉಷೆಯುಮೊದಲಿಗಳು; ಯಜ್ಞಕ್ಕೆ ಅಡ್ಡಿಮಾಡದೆ, ಮಾನವರ ಆಯಸ್ಸು ಕ್ಷಯಿಸುವಂತೆ ಮಾಡುತ್ತಾಳೆ.

ಸೂರ್ಯಪಥವನ್ನೇ ಅನುಸರಿಸುತ್ತಾ, ಸಣ್ಣದು ದೊಡ್ಡದು ಎಂಬ ಭೇದವಿಲ್ಲದೇ, ಭೂಮ್ಯಾಕಾಶವನ್ನು ಬೆಳಗಿಸುತ್ತಾ, ಪೂರ್ವದಿಕ್ಕಿನಲ್ಲಿ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತಾಳೆ.

ನಾಲ್ಕುದಿಕ್ಕುಗಳ ಸೂಚಿಯಾಗಿ, ಕರ್ಮನಿರತರಿಗೆ ಕರ್ಮಜ್ಞಾನ ಉಂಟುಮಾಡುತ್ತಾ, ಪಶುಪಕ್ಷಿ ಮಾನವರನ್ನೆಲ್ಲಾ ಆಹಾರಕ್ಕೆ ಹೊರಡಿಸಿ, ಸೂರ್ಯಾಭಿಮುಖವಾಗಿ ಚಲಿಸುತ್ತಾಳೆ.

ಉಷೆಯ ಉತ್ಪನ್ನಕ್ಕೆ ರಾತ್ರಿ ಕಾರಣ, ಸೂರ್ಯನಿಗೆ ಉಷೆ ಕಾರಣ. ಸೂರ್ಯನಿಂದ ಜಗವೆಲ್ಲಾ ತೇಜೋಭರಿತ, ಕೆಂಪುಬಣ್ಣದ ಹಸುಕಟ್ಟಿದ ರಥದಲ್ಲಿ ಉಷೆಯು ಬರುವಾಗ, ಪೂರ್ವದಲ್ಲಿ ಅರುಣವರ್ಣ ಉದಯಿಸಿ, ಮನೆಯಲ್ಲಿ ಅಹವನೀಯಾಗ್ನಿಯು ಪ್ರಕಾಶಿಸಿ, ಅಗ್ನಿಹೋತ್ರವು ಯಾಜ್ಞಿಕರನ್ನು ಎಚ್ಚರಿಸುತ್ತದೆ.

ಒಂದಿನ ಉಷಸ್ಸಿನಂತೆ ಮುಂದಿನದೂ ಶುಭಕರವಾಗಲಿ, ಹವಿರಾದಿಯುಕ್ತ ಯಜ್ಞಕರ್ತರನ್ನು ಪ್ರಬುದ್ಧರನ್ನಾಗಿ ಮಾಡಲಿ, ಐಶ್ವರ್ಯಕೊಡಲಿ, ವೃಶ್ಯರಿಗೆ ಧೀರ್ಘನಿದ್ದೆ ಕೊಡಲಿ. ಉಷೋದಯದ ನಂತರ ಮನುಜ ಪಶು ಪಕ್ಷಿಗಳೆಲ್ಲಾ ತಮ್ಮ ತಮ್ಮ ಕಾರ್ಯಪ್ರವೃತ್ತರಾಗಲಿ, ಹವಿರ್ದಾನ ಮಾಡುವ ಯಜಮಾನರಿಗೆ, ಅಧಿಕ ಧನಕೊಟ್ಟು ಅಭಿವೃದ್ಧಿ ಪಡಿಸಲಿ.

[ಯಜನ (ಯಜ್ಞಮಾಡುವುದು) ಯಾಜನ (ಪುರೋಹಿತನಾಗಿ ಯಜ್ಞಮಾಡಿಸುವುದು) ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ – ಈ ಆರೂ ಬ್ರಾಹ್ಮಣನಿಗೆ ಉತ್ತಮ ಷಡಂಗ ಕರ್ಮಗಳು. ಕ್ಷತ್ರಿಯ ಮತ್ತು ವೈಶ್ಯರಿಗೆ ಯಾಜನ ಅಧ್ಯಯನ ದಾನಕ್ಕೆ ಮಾತ್ರಾ ಅಧಿಕಾರಉಂಟು.

ಕಕ್ಷಿವಂತನು ಸ್ವನಯರಾಜನಿಂದ ಅರ್ಪಿತ ರತ್ನಾದಿಗಳನ್ನು, 'ಅದೃಷ್ಟ'ಎಂದು ಸ್ವೀಕರಿಸಿ, ತಂದೆಗೆ ಸಮರ್ಪಿಸಿದನು. ನಂತರ ತಂದೆಯಿಂದ ಕೊಡಲ್ಪಟ್ಟ ಧನದಿಂದ, ಪುತ್ರಭೃತ್ಯರನ್ನು ಪೋಷಿಸುತ್ತಾ, ಧೀರ್ಘಾಯು ಉತ್ತಮ ಸಂತಾನ ಐಶ್ವರ್ಯ ಪಡೆದನು.. ಕಕ್ಷಿವಂತನ ತಂದೆ ಸ್ವನಯನನ್ನು ಆಶೀರ್ವದಿಸುವ ಕ್ರಮ ಇದು.]

ಗುರುಕುಲದಿಂದ ಹಿಂತಿರುಗುವಾಗ ಕಕ್ಷೀವಂತನಿಗೆ, ಗವಾದಿಧನಗಳನ್ನು ಕೊಟ್ಟ ರಾಜ ಸ್ವನಯನನು, ಉತ್ತಮ ಅಶ್ವ ಹಿರಣ್ಯಯುಕ್ತನಾಗಲಿ, ಇಂದ್ರನು ಪ್ರಭೂತ ಅನ್ನ ದಯಪಾಲಿಸಲಿ.

ಸೋಮಯಾಗ ಮಾಡುವವರಿಗೆ, ದೀಕ್ಷೆವಹಿಸುವವರಿಗೆ, ಪಿತೃಗಳಿಗೆ ಹಾಗೂ ಸಕಲ ಪ್ರಾಣಿಗಳಿಗೂ ಸಮೃದ್ಧ ಹಾಲು ತುಪ್ಪಗಳನ್ನು ಒದಗಿಸುತ್ತಾ, ಗೋವುಗಳು ಸಂತೋಷಕಾರಕವಾಗಿರಲಿ.

ದೇವತೆಗಳನ್ನು ಹವಿಸ್ಸಿನಿಂದ ತೃಪ್ತಿಪಡಿಸುವವರು, ದುಃಖ ಪಾಪಗಳಿಲ್ಲದಂತಾಗಿ, ದೇವಲೋಕ ಪ್ರಾಪ್ತವಾಗಿ, ದೇವತೆಗಳೇ ಆಗುತ್ತಾರೆ; ಭೂಮಿಯು ಸಂತೋಷಿಸುತ್ತಾಳೆ ಹಾಗೂ ಪ್ರವಾಹದ ನೀರು ಸಾರಯುತವಾಗಿರುತ್ತದೆ.

ಬ್ರಹ್ಮವೇತ್ತಗಳು ಜ್ಞಾನಿಗಳಾಗಲು, ಯಜ್ಞದಾನಾದಿಗಳಿಂದ ಪ್ರಯತ್ನಿಸಬೇಕು, ದಾತೃಗಳಿಗೆ ಲಭಿಸುವ ಉತ್ತಮ ಸ್ಥಾನ ಪ್ರಶಂಸನೀಯ. ದಕ್ಷಿಣೆಯು ಯಶೋರೂಪದ ಶ್ರೇಯಸ್ಸು, ಅದನ್ನು ತಿರಸ್ಕರಿಸಬಾರದು.

ಸೋಮಯಾಗಾದಿಗಳನ್ನು ಮಾಡುವವರಿಗೆ, ಭೂಮಿಯಲ್ಲಿ ಚಂದನಾದಿಕಾಮ್ಯ ಪದಾರ್ಥಗಳೂ, ಸೂರ್ಯಾದಿಲೋಕದ ಭೋಗಗಳೂ, ಜರಾಮರಣಾದಿರಹಿತ್ಯ ದೀರ್ಘಾಯಸ್ಸುಗಳು ಇಹಲೋಕದಲ್ಲೇ ಉಂಟಾಗುತ್ತವೆ.

ಹವಿಸ್ಸು ಸ್ತೋತ್ರಾರ್ಪಣೆ ವ್ರತ ಇತ್ಯಾದಿಗಳಿಂದ ದೇವ ತೃಪ್ತಿ ಉಂಟು ಮಾಡುವವರಿಗೆ, ಮುಪ್ಪಿಲ್ಲ – ಪಾಪ ಶೋಕಾದಿಗಳಿಲ್ಲ.

ಋಷಿಗಳು, ದೇವತೆಗಳ ತತ್ವಸ್ವರೂಪ, ವಿಶ್ವದ ರಹಸ್ಯತತ್ವಗಳು, ದರ್ಶನಶಕ್ತಿ – ಎಲ್ಲಾ ತಿಳಿದವರು.

ಶುಭಕರ್ಮಗಳಿಂದ, ಧನ, ರಥಸಾಧನಯುಕ್ತನಾಗಿ ಬಂದ ಕಕ್ಷೀವಾನನು, ತಂದೆಯನ್ನು ಮದಕಾರಿ ಸೋಮರಸ ಸ್ವೀಕರಿಸಲೆಂದೂ, ನಂತರ ದಾತೃವನ್ನು ಪುತ್ರ ಭೃತ್ಯಾದಿಗಳಿಂದ, ಸಂವೃದ್ಧರಾಗಿರಲೆಂದು, ಸದ್ವಾಕ್ಯಗಳಿಂದ ಹಾರೈಸಲೆಂದೂ ವಿನಂತಿಸುತ್ತಾರೆ.

**ಸೂಕ್ತ - 126 ( ಅಮಂದಾನ್ಸ್ತೋ.....**

ಋಷಿ ಕಕ್ಷಿವಾನ ಧೀರ್ಘತಮಾಸ ಓಷಜ ಋಷಿಗಳು ಭಾವಯವ್ಯ ರೋಮಶಾರನ್ನು ತ್ರಿಷ್ಟುಪ್, ಅನುಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಪ್ರಶಂಸಿಸುತ್ತಾರೆ.

ರಾಜಸ್ವನಯನನ ತಂದೆ ಭಾವಯವ್ಯ, ತಾಯಿ ಬೃಹಸ್ಪತಿಯ ಪುತ್ರಿ ರೋಮಶಾ. ಋಷಿ ಕಕ್ಷೀವಾನನಿಗೆ ಸ್ವನಯನನು ತನ್ನ ಪತ್ನಿಯಾಡಗೂಡಿ, ಅಪರಿಮಿತ 'ಸಿಷ್ಕ' ಶುದ್ಧವಾದ ನೂರು ಅಶ್ವಗಳು, ಮದೋದಕಯುಕ್ತ ಮಾಸಲು ಕೆಂಪುಬಣ್ಣದ ಗಮನಶೀಲವಾದ ನಲವತ್ತು ಕುದುರೆಗಳು, ಹತ್ತು ರಥಗಳು, ಎತ್ತುಗಳು, 1060 ಹಸುಗಳೂ, ಹುಲ್ಲು ಮೊದಲಾದ ಆಹಾರಗಳು, ಅವುಗಳ ಅನುಚರರು – ಇವನ್ನೆಲ್ಲಾ ಕೊಟ್ಟಿದ್ದಾರೆ. ಕಕ್ಷಿವಾನನು ಇವನ್ನೆಲ್ಲಾ ತಂದೆ ಭಾವಯವ್ಯರಿಗೆ ಅರ್ಪಿಸಿದ್ದಾರೆ.

ಭಾಂದವರೆಲ್ಲಾ, ಪರಸ್ಪರಾನುರಾಗದಿಂದ ಈ ಉಡುಗರೆಗಳನ್ನು ಉಪಯೋಗಿಸಿಕೊಂಡು, ಸೋಮಯಾಗಮಾಡಿ ಕೀರ್ತಿ ಪಡೆಯಲೆಂದು ಅಪೇಕ್ಷಿಸುತ್ತಾರೆ. ಸ್ವನಯನ ರಾಜನು 'ಸ್ವರ್ಗದಲ್ಲಿ ಶಾಶ್ವತ ಕೀರ್ತಿವಂತನಾಗಲಿ', ಎಂದು ಮನಃ ಪೂರ್ವಕವಾಗಿ ಹಾರೈಸುತ್ತಾರೆ.

ರೋಮಶಾ – ಭಾವಯವ್ಯರ ಗೃಹ ಕೃತ್ಯಕ್ಕೆ ಸಂಭಂದಿಸಿದ ತುಣುಕೊಂದು ಇಲ್ಲಿದೆ. ರೋಮಶಾಳು ತಾನು ಪ್ರೌಢಳೆಂದೂ ಸೌಖ್ಯಕೊಡಬಲ್ಲವಳೆಂದೂ ತನ್ನನ್ನು ಆಲಂಗಿಸುವಂತೆಯೂ ಕೇಳುತ್ತಾಳೆ.

**ಸೂಕ್ತ - 127 ( ಅಗ್ನಿಂಹೋತಾರಂ.....**

[ಬ್ರಹ್ಮರೇತಸ್ಸು ಅಗ್ನಿಯಲ್ಲಿ ಹೋಮಗೊಂಡಾಗ ಉಂಟಾದ ಜ್ವಾಲೆಯಿಂದ ಭೃಗುಋಷಿ ಉತ್ಪನ್ನರಾದರು. ಜ್ವಾಲೆ ಆರಿದನಂತರ ಉಳಿದ ಅಂಗಾರಗಳಿಂದ ಅಂಗೀರಸ ಋಷಿ ಉತ್ಪನ್ನರಾದರು.]

ಪರಿಚ್ಛೇಪ್ಪೋದೃಪ್ಪೋದಾಸಿ ಋಷಿಗಳು ಅಗ್ನಿದೇವನನ್ನು ಅತ್ಯುಕ್ಷ್ಟಿ, ಅತಿದೃತಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸಿ ಆಹ್ವಾನ ನೀಡುತ್ತಾರೆ.

ಆಂಗೀರಸ ಜ್ಯೇಷ್ಟ ಅಗ್ನಿಯು, ಶತ್ರುನಾಶಕ್ಕಾಗಿ ಪೂಜಿಸಲ್ಪಡಬೇಕಾದವನು. ಅಗ್ನಿಯ ಸಂಯೋಗದಿಂದ ಪರ್ವತಗಳೂ ನೀರೂ ಶೋಧಿತವಾಗುತ್ತವೆ, ಅರಣ್ಯ ನಾಶವಾಗುತ್ತದೆ.

ಅರಣಿಯಲ್ಲಿ ಉತ್ಪನ್ನನಾಗಿ ಅಗ್ನಿಯು, ಸ್ವಶಕ್ತಿಯಿಂದಲೇ ಶತ್ರುಭೇದನಮಾಡಿ ವೀರನಂತೆ, ಸ್ಥಾಪಿತನಾಗುತ್ತಾನೆ.

ಯಜ್ಞಶಾಲೆಯನ್ನು ಅಲಂಕರಿಸುವ ಅಗ್ನಿಯು, ಮಾನವರ ಪರವಾಗಿ ದೇವತೆಗಳನ್ನು ಯಜ್ಞಕ್ಕೆ ಆಹ್ವಾನಿಸಿ, ಹೋಮದಲ್ಲಿ ತುಪ್ಪವನ್ನು ಜ್ವಾಲೆಯಿಂದ ಸ್ವೀಕರಿಸಿ, ಕಠಿಣ ವ್ರೀಹ್ಯಾದಿಗಳನ್ನು ಪಕ್ವಮಾಡಿ, ಪಾಪಗಳನ್ನು ನಾಶಮಾಡುತ್ತಾನೆ.

ಹವಿಸ್ಸನ್ನರ್ಪಿಸುವ ಭಕ್ತರು, ಅಜರಾಮರರಾಗುತ್ತಾರೆ. ಭಕ್ತರಾಗಿರಲಿ–ಇಲ್ಲದಿರಲಿ, ಅಗ್ನಿಯು ರಕ್ಷಿಸುತ್ತಾನೆ.

ಹವಿರ್ಪಾಚಕ ಅಗ್ನಿಯು ತೃಪ್ತಿಗೊಂಡನಂತರವೇ ಇತರ ದೇವತೆಗಳಿಗೆ ಅಗ್ನಿಯು ಹವಿಸ್ಸನ್ನು ಒಯ್ಯುವುದು, ಹಾಗೂ ಯಾಗರಕ್ಷಣೆ ಮಾಡುವುದು.

ಹರ್ಷಯುಕ್ತ ಅಗ್ನಿಯನ್ನು, ಪ್ರಜೆಗಳು ಸ್ವರ್ಗಾದಿ ಅಭೀಷ್ಟಕ್ಕಾಗಿ, ಸೇವಕರಂತೆ ಸ್ತುತಿಸುತ್ತಾರೆ ಮತ್ತು ಸುಖಾಭಿಲಾಷೆಗಾಗಿ, ಸನ್ಮಾರ್ಗ ಅವಲಂಬಿಸುತ್ತಾರೆ. ಉಷಃಕಾಲದಲ್ಲಿ ಶುದ್ಧಾಂತಃಕಾರಣದಿಂದ ಹೋತೃಗಳು ಸ್ತುತಿಸುತ್ತಾರೆ.

ಯಾಜ್ಞಕರಿಗೆ ಸಮೀಪಸ್ಥನಾದ ದೇದೀಪ್ಯಮಾನ ಅಗ್ನಿಯು ಪೃಥ್ವೀಸಂಬಂಧ ಭೋಗಗಳು, ಸ್ವರದ್ರೂಪಿ ಪುತ್ರರು, ಪಚ್ಚಾದ ಕೀರ್ತಿ ಅನ್ನಗಳನ್ನು ನೀಡಲಿ, ಹಾಗೂ ಕ್ರೂರ ಪುರುಷನಂತೆ, ಯಾಜ್ಞಕಋಷಿಗಳ ಶತ್ರುಗಳನ್ನು ನಾಶ ಮಾಡಲಿ.

**ಸೂಕ್ತ** - 128 ( **ಅಯಂಜಾತಯ.....**

ಪುರುಚ್ಛೇಪೋ ದೈವೋದಾಸಿ ಋಷಿಗಳು ಅಗ್ನಿದೇವನನ್ನು ಅತ್ಯಷ್ಟಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅರಣಿಯಲ್ಲಿ ಉದ್ಭವನಾದ ಅಗ್ನಿಯು, ತನ್ನ ಹಾಗೂ ದೇವತೆಗಳ ಹವಿರಾದಿಗಳ ಇಚ್ಛೆ ಪೂರೈಸಿಕೊಳ್ಳಲು, ಯಾಜ್ಞಕರಿಗೆ ಸ್ವರ್ಗಸುಖ, ಪಾಪನಿವಾರಣೆಗಾಗಿ ಬರುತ್ತಾನೆ, ಯಾಜ್ಞಕರ ನಮಸ್ಕಾರಗಳು ಮತ್ತು ಆಜ್ಯಗಳಿಂದ ಸಂತೋಷಗೊಳ್ಳುತ್ತಾನೆ.

ಸೂರ್ಯಸಮೀಪಸ್ಥ ವಾಯುವು, ಯಜ್ಞಪೂರ್ಣವಾಗುವವರೆಗೂ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತಾ, ಮೇಘದಿಂದ ಮಳೆತಂದು, ಪುರೋಡಾಶಾದಿ ಹೋಮ ಮಾಡುತ್ತಾನೆ.

ಶುಭಕರ್ಮಾಚಾರಣೆ, ಕರ್ತವ್ಯಜ್ಞಾನದಿಂದ ಹಾಗೂ ಧನದ ಬಲದಿಂದ ಯಾಗಕರ್ತನು ಅಗ್ನಿಯನ್ನು ಸಮೀಪಿಸಿ, ಹವಿಸ್ಸು ಸ್ತುತಿಗಳನ್ನು ಅರ್ಪಿಸಿ, ಫಲಭೋಕ್ತವಾಗುತ್ತಾನೆ.

ಉತ್ಕೃಷ್ಟ ಕರ್ಮಕ್ಕಾಗಿ, ಸ್ವಸಾಮರ್ಥ್ಯದಿಂದ ಜ್ವಾಲಾರೂಪಿ ಅಗ್ನಿಯು, ಭೂಮಿಯಲ್ಲಿ ಪ್ರಕಾಶಿಸುತ್ತಾ, ಜ್ವಾಲೆಗಳಿಂದ ಹವಿಸ್ಸನ್ನು ಸ್ವೀಕರಿಸುತ್ತಾ, ಯಜಮಾನನ ಶತ್ರುಗಳ ಹಿಂಸಕನಾಗಿ, ಇಷ್ಟವಾದ ದಾನ ಮಾಡುತ್ತಾನೆ.

ದುಷ್ಕರ್ಮಗಳು ಹಿಂಸೆ ಮತ್ತು ದುಃಖಗಳನ್ನು ತರುತ್ತವೆ. ಇದಕ್ಕೆ ಕಾರಣವಾದ ಪಾಪವನ್ನು ಅಗ್ನಿಯು ಹಿಂಸಿಸಿ, ಮಾಡಿದ ಪಾಪಹಿಂಸೆಗಳಿಂದ ಯಜಮಾನನನ್ನು ಕಾಪಾಡಿ, ಅಪೇಕ್ಷಿತ ಅನ್ನ ದಯಪಾಲಿಸುತ್ತಾನೆ.

**ಸೂಕ್ತ** - 129 **(ಯಂತ್ವರಥ ಏಂದ್ರ.....**

ಪರಿಚ್ಛೇಪೋದೈವೋದಾಸಿ ಋಷಿಗಳು ಇಂದ್ರನನ್ನು ಅತ್ಯಷ್ಟಿ ಅತಿಶಕ್ವರೀ ಅಷ್ಟಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಸೃಷ್ಟಿಕರ್ತನಿಂದ ಸೃಷ್ಟನಾದ ಇಂದ್ರನು, ಯಾರಿಗೆ ಧನಧಾನ್ಯ ಕೊಡಲು

ಇಷ್ಟಪಡುವನೋ, ಅವರನ್ನು ಯಜ್ಞಮಾಡಲು ಸಮರ್ಥರನ್ನಾಗುವಂತೆ ಮಾಡುತ್ತಾನೆ.

ಮರುತ್ತುಗಳು ಮೊದಲು ಮನುಷ್ಯರಾಗಿದ್ದವರು, ದೈವತ್ವಪೊಂದಿ ಸಂಗ್ರಾಮನಾಯಕರಾದವರು. ಇವರ ಪ್ರೋತ್ಸಾಹದಿಂದ ಇಂದ್ರನು ಯುದ್ಧದಲ್ಲಿ ಜಯಿಸುತ್ತಾನೆ, ಶತ್ರುನಾಶ ಮಾಡುವಾಗ ಸೈನ್ಯವು ತನ್ನ ಭಕ್ತರನ್ನು ಎದುರಿಸದಂತೆ, ಹಿಂದಿರುಗದಂತೆಯೂ ಮಾಡುತ್ತಾನೆ.

ನೀರಿರುವ ಮೇಘಗಳನ್ನು ಭೇದಿಸಿ ಮಳೆಗರಿಸುತ್ತಾ, ಉಳಿದವನ್ನು ಹಾಗೇ ಬಿಡುವ ಇಂದ್ರನ ಕೃತ್ಯಗಳನ್ನು, ರುದ್ರ ಮಿತ್ರ ವರುಣರೂ ಪ್ರಶಂಶಿಸುತ್ತಾರೆ.

ಪಾಪವು ಮುಂದಾಗುವ ಶುಭಗಳನ್ನು ಕೆಡಿಸುತ್ತದೆ. ಆದುದರಿಂದಲೇ ಇಂದ್ರನು ಯಜ್ಞಹಿಂಸಕರನ್ನು ಹಿಂಸಿಸಿ, ಅನಿಷ್ಟ ಪಾಪಗಳನ್ನು ಪರಿಹರಿಸಿ, ಯಾಜ್ಞಕರನ್ನು ಪಾಪರಹಿತರನ್ನಾಗಿ ಮಾಡುತ್ತಾನೆ. ಸೂರ್ಯನಂತೆ, ತನಗೆ ಹಿತರಲ್ಲದವರಿಗೂ ಹಿತಕೊಡುತ್ತಾನೆ.

ಸೋಮರಸವು ಇಂದ್ರನ ಸಾಹಸವನ್ನು ವೃದ್ಧಿಸಲಿ. ಅಭಿವೃದ್ಧಿ ಹೊಂದಿದ ನಿಂದಕರನ್ನು, ಕೊಂಚ ಕೊಂಚವಾಗಿ ಅಧೋಗತಿಗೆ ಇಳಿಸಲಿ. ಶತ್ರುಗಳನ್ನು ನಮ್ರರನ್ನಾಗಿಮಾಡಲಿ.

ಪ್ರಾರ್ಥನಾಚತುರ, ಮೇಧಾವಿ ಋತ್ವಿಜ ಯಾಜ್ಞಕರ ಹವಿಸ್ಸನ್ನು ಸ್ವೀಕರಿಸಿ, ಸ್ತುತಿಯನ್ನು ಕೇಳುತ್ತಾ, ಇಂದ್ರನು ಯಜ್ಞಶಾಲೆಯಲ್ಲಿಯೇ ಇರಲಿ. ಪಿತೃಗಳಿಗೆ ಕೊಟ್ಟಂತಹ ಸ್ವರ್ಗಾದಿಗಳನ್ನೂ, ಇಷ್ಟವಾದ ಶಾಶ್ವತವಾದ ದಾನಗಳನ್ನೂ, ವೀರ್ಯವಂತ ವೀರಪುತ್ರಾದಿಗಳನ್ನೂ, ಸಮಸ್ತ ಧನವನ್ನೂ ಅನುಗ್ರಹಿಸಲಿ. ಶತ್ರುರಹಿತ ಸುರಕ್ಷಿತ ಧನಯುಕ್ತ ಮಾರ್ಗದರ್ಶನ ಮಾಡಲಿ.

**ಸೂಕ್ತ** - 130 (**ಏಂದ್ರಿಯಾಹ್ಯ**.....

ಪರಿಚ್ಛೇಪೂದ್ಯವೋದಾಸ ಋಷಿ ಇಂದ್ರನ ಸ್ತುತಿಯನ್ನು ಅತ್ಯುಷ್ಟಿ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಮುಂದುವರಿಸುತ್ತಾರೆ.

ಇಂದ್ರನು, ಪಣಿಯ ಗೋವ್ರಜದಿಂದ ಗೋವುಗಳನ್ನು ಬಿಡಿಸಿದ, ಉದಕವನ್ನು ಸಮುದ್ರದ ಅಭಿಮುಖ ಹರಿಯುವಂತೆ ಮಾಡಿದ, ಆಹಾರವನ್ನು ಭೂಮಿಯ ಮೇಲೆಲ್ಲಾ ಹರಡಿದ. ಕಠಿಣ ಪರ್ವತದ ನಡುವೆ ಅಡಗಿದ್ದ ಸೋಮನನ್ನು ಪಡೆದನು.

ಸ್ವಲ್ಪ ಸೋಮವನ್ನು, ಗಾಯತ್ರಿಯು ಸ್ವರ್ಗದಿಂದ ಪಕ್ಷಿರೂಪದಿಂದ ಭೂಮಿಗೆ ತಂದಳು, ನದೀರೂಪದಲ್ಲಿ ಯಾಜ್ಞಕರಿಗೆ ಒದಗಿಸಿದಳು.

ವಜ್ರಾಯುಧದಿಂದ ಶಂಬರಾಸುರನನ್ನೂ, ಅವನ ತೊಂಭತ್ತು ನಗರಗಳನ್ನೂ ನಾಶಮಾಡಿ, ಅವನ ಐಶ್ವರ್ಯಗಳನ್ನು ದಿವೋದಾಸನಿಗೆ ಕೊಟ್ಟವನು - ಇಂದ್ರನೇ.

ಅಸುರ ಕೃತ್ಸನ ಚರ್ಮಸುಲಿದು ಹಿಂಸಕರೆಲ್ಲರನ್ನೂ ಅವರ ಅನುಚರರೆಲ್ಲರನ್ನೂ ಇಂದ್ರನು ನಾಶಮಾಡಿದ.

ದೂರದ ಸ್ವರ್ಗದಿಂದ ಇಂದ್ರನು, ಸೋಮ ಹವಿಸ್ಸುಗಳ ಸ್ವೀಕಾರಕ್ಕೆ ಚಂದ್ರನಂತೆ, ಅಗ್ನಿಯಂತೆ, ಬಂದು ಸೂರ್ಯನಂತೆ ಅಭಿವೃದ್ಧಿಹೊಂದಲಿ.

ವಜ್ರಾಯುಧದಿಂದ ವೃತ್ರನನ್ನು ಕೊಂದಂತೆ, ಶತ್ರುವನ್ನು ವಧಿಸಲಿ; ಶತ್ರುಪುರ ಭೇದಿಸಲಿ.

ಯಜ್ಞಯಜಮಾನ ದಿವೋದಾಸನು, ಹವಿಸ್ಸು ಸ್ತುತಿ ಅನ್ನಗಳನ್ನು ಇಂದ್ರನಿಗೆ ಅರ್ಪಿಸಿ, ಸುಖ ಬಲ ಐಶ್ವರ್ಯ, ಎಲ್ಲಾ ಬಗೆಯ ಸಂಪತ್ತುಗಳನ್ನು ಯಾಚಿಸುತ್ತಾನೆ.

[ಯೋಗಾಭ್ಯಾಸನಿರತ ವಿರಾಗಿ ಆತ್ಮಸಾಕ್ಷಾತ್ಕಾರ ಹೊಂದುತ್ತಿರುವ ಯೋಗಿ ಯುದ್ಧದಲ್ಲಿ ಪ್ರಾಣಾರ್ಪಣೆ ಮಾಡುವ ವೀರ – ಇವರುಗಳಿಗೆ ಪುನರ್ಜನ್ಮವಿಲ್ಲ – ಎಂದು ಯಜಮಾನನು ತಿಳಿಸಿದ್ದಾನೆ]

**ಸೂಕ್ತ** - 131 (**ಇಂದ್ರಾಯ.....**

ಪರುಚ್ಛೇಪ ದೈವೋದಾಸಿ ಋಷಿಗಳು ಇಂದ್ರದೇವನ ಸ್ತುತಿಯನ್ನು ಅತ್ಯಷ್ಟಿ ಛಂದಸ್ಸಿನ ಋಕ್‌ಗಳಿಂದ ಮುಂದುವರೆಸುತ್ತಾರೆ.

ಸ್ವರ್ಗದಲ್ಲಿ ದುಷ್ಟರಿಗೆ ಪ್ರವೇಶವೇ ಇಲ್ಲ. ದೇವತೆಗಳೆಲ್ಲಾಸೇರಿ ಅಲ್ಲಿ ಇಂದ್ರನಿಗೆ ಅಗ್ರಸ್ಥಾನ ಕೊಟ್ಟಿದ್ದಾರೆ. ಯಾಜ್ಞಿಕರ ಆಧಾರಭೂತ ಸ್ವರ್ಗಸುಖಕ್ಕಾಗಿ, ಎಲ್ಲರೂ ಇಂದ್ರನಲ್ಲಿಗೆ ಹೋಗುತ್ತಾರೆ.

ಇಂದ್ರನು ಕರ್ಮಾಚರಣೆ ಮಾಡುವವರ ಹಾಗೂ ಕರ್ಮಘಾತಕರ ವ್ಯತ್ಯಾಸ ತಿಳಿದವನು, ಪ್ರಾರ್ಥನೆಗೆ ಕಿವಿಗೊಡುವವನು, ಸುಸಂಸ್ಕೃತ ಮೇಧಾವಿ.

ಸ್ತ್ರೀಯರಿಗೆ ಮಂತ್ರ ಅಧ್ಯಯನ ಮಾಡುವ, ಯಾಗಮಾಡುವ ಸಾಮರ್ಥ್ಯ, ಸರಿಯಾದ ತಿಳುವಳಿಕೆ – ಇಲ್ಲದ್ದರಿಂದ, ಪತಿಯೇ ಪತ್ನಿಯ ಅನುಷ್ಠ ಪಡೆಯುತ್ತಾನೆ. ದಂಪತಿಗಳು ಅವರ ಕಾಮನಾಪೂರ್ತಿಕೆಗಾಗಿ ಪಯೋವ್ರತಧಾರಿಗಳಾಗುತ್ತಾರೆ.

ಇಂದ್ರನು ಯಜ್ಞದ ಯಜಮಾನನ ಸ್ತುತಿ ಆಲಿಸಲಿ, ಮಾರಣಶೀಲ ಶತ್ರುವನ್ನು ವಧಿಸಲಿ, ಸಂಧವಸೇಯ ಚೋರಾದಿ ಭಯ, ಅರಿಷ್ಟಗಳು, ಕ್ರೋಧಾದಿಗಳು ಯಾಜ್ಞಿಕರನ್ನು ನಾಶ ಮಾಡಬೇಕೆಂಬ ದುರ್ಬುದ್ಧಿ – ನಾಶವಾಗಲಿ.

ಯಾಜ್ಞಿಕರು, ಅನ್ನಾದಿಯಶಸ್ಸಿಗಾಗಿ, ಇಂದ್ರನನ್ನು ಹವಿರಾದಿಗಳಿಂದ ಪೂಜಿಸುತ್ತಾರೆ, ಅವನಿಂದ ಯುದ್ಧದಲ್ಲಿ ಗೆದ್ದ ಧನ, ವಿದ್ಯಾಭಿವೃದ್ಧಿ, ಸ್ವರ್ಗಸುಖ ಸಂತೋಷ ಬಯಸುತ್ತಾರೆ, ಇದಕ್ಕಾಗಿ ಪುನಃ ಪುನಃ ಸೋಮವನ್ನಿತ್ತು ಇಂದ್ರನನ್ನು ಪ್ರೋತ್ಸಾಹಿಸುತ್ತಾರೆ.

**ಸೂಕ್ತ** - 132 (**ತ್ವಯಾವಯಂ.....**

ಪರುಚ್ಛೇಪ ದೈವೋದಾಸಿ ಋಷಿ ಇಂದ್ರ ಹಾಗೂ ಪರ್ವತ ದೇವನನ್ನು ಅತ್ಯಷ್ಟಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಶುಭಾಶುಭಫಲಗಳು ಅವರವರ ಕರ್ಮಾನುಸಾರ ಉಂಟಾಗುತ್ತವೆ.

ಯಾಜ್ಞಿಕರು, ಉಷಃಕಾಲದಲ್ಲಿ ಎದ್ದು, ಆಜ್ಯ ಸೋಮ ಹವಿಸ್ಸುಗಳಿಂದ ಇಂದ್ರನನ್ನು ಪ್ರೋತ್ಸಾಹಿಸುತ್ತಾರೆ. ಇದರಿಂದ ತೃಪ್ತನಾದ ಇಂದ್ರನು ಆ ಹವಿಸ್ಸುಗಳನ್ನು ಸೂರ್ಯನಿಗೆ ಕಳಿಸಿ, ಅವನ ರಶ್ಮಿಗಳಿಂದ ಉದಕ ಉಂಟಾಗುವಂತೆ ಮಾಡಿ, ಯಜಮಾನ ಹಾಗೂ ಗೋವುಗಳಿಗಾಗಿ ಉದಕ ವರ್ಷಿಸುತ್ತಾನೆ.

ಹಿಂದೆ ಅಂಗೀರಸರಿಗೋಸ್ಕರ ಮಾಡಿದ್ದಂತೆಯೇ, ಇಂದ್ರನು, ಯಾಗವಿರೋಧಿಗಳನ್ನೂ, ಕೋಪಾ ವಿಷ್ಟರನ್ನೂ ವಧಿಸಲಿ. ಪ್ರಭಲಶತ್ರುಗಳು, ಯುದ್ಧದಲ್ಲಿ ಮುಂದಾಗಿರಲಿ, ಗಹನ ಪ್ರದೇಶದಲ್ಲಿರಲಿ, ಎಷ್ಟೇದೂರದಲ್ಲಿರಲಿ – ಸಮಸ್ತ ಉಪಾಯಗಳಿಂದಲೂ ಇಂದ್ರನು ಶತ್ರುಗಳನ್ನು ವಧಿಸಲಿ.

ಸ್ವರ್ಗಸಾಧನೆಗಾಗಿ, ದೇವಸಮ್ಮುಖದಲ್ಲೇ ಇರಲು ಯಾಜ್ಞಿಕ ಇಚ್ಛಿಸುತ್ತಾನೆ.

**ಸೂಕ್ತ** - 133 **(ಉಭೇಪುನಾಮಿ.....**

ಪರುಚ್ಛೇಪೊದೈವೊದಾಸಿ ಋಷಿಗಳು ಇಂದ್ರನನ್ನು ಕುರಿತು ತ್ರಿಷ್ಟುಪ್ ಅನುಷ್ಟುಪ್ ಗಾಯತ್ರೀ ಅತ್ಯಷ್ಟಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ನೂರೈವತ್ತು ಶತ್ರುಸೇನೆ ನಾಶಮಾಡುವುದು ಸಹಾ, ಇಂದ್ರನ ಪೌರುಷಕ್ಕೆ ಕಮ್ಮಿಯೇಸರಿ.

ಇಂದ್ರನನ್ನು ಉದ್ದೇಶಿಸಿ ಮಾಡಿದ ಯಜ್ಞದಿಂದ, ದ್ಯಾವಾಪೃಥವಿಗಳು ಪವಿತ್ರವಾಗುತ್ತವೆ. ಯಜ್ಞದಿಂದ, ದ್ರೋಹಿಗಳ ಆಶ್ರಯವಾದ ಭೂಭಾಗಸುಡಲ್ಪಟ್ಟು, ಅಂತಹ ಶತ್ರುಗಳೆಲ್ಲಾ ಸುಡಲ್ಪಟ್ಟು, ಅವರ ತಲೆಗಳು ಪುಡಿಯಾಗುವ ಅತಿನಿಂದಿತ ಸ್ಥಳವಾಗುತ್ತದೆ; ಇಂದ್ರನಿಲ್ಲದ ಜಾಗ – ಸ್ಮಶಾನ.

ಅತಿಭಯಂಕರ, ಮಾಸಲು ಕೆಂಪುಬಣ್ಣದ, ಘಟ್ಟಿಯಾಗಿ ಕಿರಿಚುತ್ತಿರುವ ಪಿಶಾಚಿ – ಜಡೆಯನ್ನು – ಇಂದ್ರನು ಹಿಂಸಿಸಿನಾಶಪಡಿಸಲಿ.

ಇಂದ್ರನು, ತನ್ನ ಇಪ್ಪತ್ತೊಂದು ಅನುಚರರೊಂದಿಗೆ, ಮೇಘವನ್ನು ಸೀಳಿ ಒಣಗುವ ಸಸ್ಯಗಳಿಗೆ ವೃಷ್ಟಿತರಲಿ; ದೇವಲೋಕ, ದ್ಯಾವಾಪೃಥವಿಗಳಿಗೆ, ಹವಿಸ್ಸಿನ ಅಭಾವ ನೀಗಿಸಲಿ.

ಇಂದ್ರನು, ಸೋಮವನ್ನು ಸಿದ್ಧಮಾಡುವವರ ಹಾಗೂ ದೇವತೆಗಳ ಶತ್ರುಗಳನ್ನು ಸಮರ್ಥನಾಗಿ ನಾಶಮಾಡುತ್ತಾನೆ. ಆದುದರಿಂದಲೇ ಸೋಮಯಾಗಮಾಡುವವರು ಅನ್ನವಂತ, ಧನವಂತ ಅಜೇಯರೂ ಅಗಿರುತ್ತಾರೆ.

**ಸೂಕ್ತ** - 134 **(ಆತ್ವಾಜವೋ.....**

ಪರಿಚ್ಛೇಪೋ ದೈವೋದಾಸಿ ಋಷಿಗಳು ವಾಯುದೇವನನ್ನು ಅತ್ಯಷ್ಟಿ ಮತ್ತು ಅಷ್ಟಿ ಛಂದಸ್ಸಿನ ಋಕ್‌ಗಳಲ್ಲಿ ಪ್ರಾರ್ಥಿಸುತ್ತಾರೆ.

ದೇವತೆಗಳ ಪ್ರೀತಿಸಂಪಾದಿಸಲು ಪಾಪರಾಹಿತ್ಯ ಪಡೆಯಬೇಕು. ಇದಕ್ಕೆ ಸಾಧನ 'ಶುದ್ಧಿ'.

ವಾಯುವು, ಗೋವುಗಳಲ್ಲಿ ಕ್ಷೀರವನ್ನು ಸುರಿಸುವವ, ಮರುತ್ತುಗಳನ್ನು

ಉಂಟುಮಾಡುವವ, ಉಷಸ್ಸನ್ನು ಪ್ರಕಾಶಿಸುವವ.

ಯಾಜ್ಞಿಕರ ಅನಿಷ್ಟ ಪಾಪಗಳನ್ನು ವಾಯುವು ಪರಿಹರಿಸಿ, ಜ್ಞಾನಿಯಾದ ಯಜಮಾನನ ಅಜಾಗರೂಕತೆಯನ್ನು ನಾಶಮಾಡುತ್ತಾ ಜಾಗ್ರತಿ ಉಂಟುಮಾಡುತ್ತಾನೆ.

ಯಜ್ಞಘಾತಕ ತಸ್ಕರರನ್ನು ನಾಶಮಾಡಿ, ಪ್ರಪಂಚದ ಭಯನಾಶಮಾಡುವವ-ವಾಯುವೇ.

ಲೋಕಹಿತಾಶ್ವ ಮತ್ತು ಅರುಣಾಶ್ವಗಳು, ವಾಯುವಿನ ಭಾರವಾಹಿ ಕುದುರೆಗಳಾದರೂ, ತನ್ನ ಪ್ರೀತಿಯ ಕುದುರೆ 'ನಿಯತ್ತು'ವನ್ನು ಹೂಡಿದ ರಥದಲ್ಲಿ ಸಂಚರಿಸುತ್ತಾನೆ.

ಪ್ರಥಮ ಪಾನಾರ್ಹನಾದ ವಾಯುವನ್ನು, ಚರುಪುರೋಡಾಶಾದಿಗಳನ್ನು ಹಾಗೂ ಹವಿಸ್ಸನ್ನು ಸ್ವೀಕರಿಸಲು ಬರುವಂತೆ, ಹರ್ಷಪ್ರಿಯ ಸ್ತುತ್ಯಪ್ರಿಯ ವಾಕ್ಯಗಳಿಂದ, ಯಜ್ಞಕ್ಕೆ ಯಜಮಾನನು ಆಹ್ವಾನಿಸುತ್ತಾನೆ. ಹರ್ಷಕಾರಕ ದಾನ ಕೊಡಲೆಂದು ಯಾಚಿಸುತ್ತಾನೆ.

**ಸೂಕ್ತ** - 135 (**ಸ್ತೀರ್ಣಂ ಬರ್ಹಿರುಪನೋ**.....

ಪರಿಚ್ಛೇಪೋ ದೈವೋದಾಸಿ ಋಷಿಗಳು ವಾಯು ಹಾಗೂ ಇಂದ್ರ ದೇವನನ್ನು ಅತ್ಯುಷ್ಟಿ ಮತ್ತು ಅಷ್ಟಿ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಭರತರಾಜ ವಂಶೀಯರು, ತಮ್ಮ ಕೊಳ್ಳೆಯಲ್ಲಿ ನಾಲ್ಕರಲ್ಲಿ ಒಂದು ಭಾಗವನ್ನು ಯಾಗಕ್ಕಾಗಿ ಕೊಡುತ್ತಿದ್ದರು.

ವಾಯುವು ಸೋಮಪಾನಕ್ಕೆ 'ಪ್ರಥಮಾರ್ಹ'ನೆಂದು ದೇವತೆಗಳು ನಿಯಮಿಸಿದ್ದಾರೆ. ಯಜ್ಞದ ಸತ್ವ ಉಳಿದಿರುವುದು ವಾಯುವಿನ ಚೈತನ್ಯದಿಂದಲೇ. ನಿರಾಲಂಬ ಆಕಾಶದಲ್ಲಿ, ದ್ಯಾವಾಪೃಥವಿಗಳ ನಡುವೆ, ಸಂಚರಿಸುವ ವಾಯುವಿನ ರಥಕ್ಕೆ ನಿಯಮನ ಸಾಧ್ಯವಿಲ್ಲ; ಸೂರ್ಯ ರಶ್ಮಿಗಳಂತೆ ಸ್ವತಂತ್ರ.

ವಾಯು ತೃಪ್ತಿಗಾಗಿ ಯಜ್ಞ ನಡೆದಿದೆ. ಧರ್ಭಾಸನಕ್ಕೆ ವಾಯುವು ಆಗಮಿಸಿ, ತೃಪ್ತಿಯಿಂದ ಸೋಮ ಸ್ವೀಕರಿಸಿ, ಯಾಜ್ಞಿಕರನ್ನು ಅನುಗ್ರಹಿಸಲಿ.

ಅಶ್ವತ್ಥವೃಕ್ಷ ಕ್ಷೇತ್ರವು, ರೋಗರಹಿತವಾದದು; ಚೋರಾಧಿ ಭಯವಿಲ್ಲದ್ದು, ಯಾಗನಿರ್ವಾಹಕ ಸಮರ್ಥಕ್ಷೇತ್ರ. ಅಶ್ವತ್ಥವೃಕ್ಷ ಪ್ರದೇಶದ, ಸೋಮಸಿದ್ಧತೆಯಾಗುತ್ತಿರುವ ಕ್ಷೇತ್ರಕ್ಕೆ ಇಂದ್ರನು ಬರಲಿ. ಆಲಸ್ಯದಿಂದ ನಿದ್ರಾಧೀನರಾದವರ ಮನೆಗೆ, ಹೋಗದಿರಲಿ.

ಸೊಟ್ಟ ಸಾಧನಗಳಲ್ಲಿ, ಉಣ್ಣೆಯ ಮೂಲಕ ಶೋಧಿತವಾಗಿ ಹರಿವ ಸೋಮವು, ಇಂದ್ರ ವಾಯುಗಳಿಗಾಗಿ ಹರಿದು ಬರಲಿ.

ಇಂದ್ರವಾಯುಗಳು ಬರುವಾಗ ಸುವರ್ಣ ಗೋವು ಅಶ್ವಗಳನ್ನು ತರಲಿ.

**ಸೂಕ್ತ** - 136 (**ಪ್ರಸುಜ್ಯೇಷ್ಠ**.....

ಪರುಚ್ಛೇಪೋ ದೈವೋದಾಸಿ ಋಷಿಗಳು ಮಿತ್ರಾವರುಣ ಹಾಗೂ ಲಿಂಗೋಕ್ತ

ದೇವತೆಗಳನ್ನು ಅತ್ಯಷ್ಟಿ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರನ ಪ್ರೀತಿ, ಮರುತ್ತುಗಳ ಅನುಗ್ರಹಕ್ಕೆ ಪಾತ್ರರಾಗುವಂತಾದಾಗ, ದೇವತೆಗಳ ರಕ್ಷಣೆ ದೊರೆಯುತ್ತದೆ. ಮಿತ್ರಾವರುಣ, ಉಷಾ, ಸೂರ್ಯ, ದ್ಯಾವಾಪೃಥವಿ, ರುದ್ರ ಇವರೆಲ್ಲಾ ಉಪಕಾರಿ, ವರದಾತೃ ಸುಖಕಾರಕರು.

ಆದಿತ್ಯರೆಂದರೆ – ಮಿತ್ರಾ, ವರುಣ, ಅರ್ಯಮ, ದಕ್ಷ, ಭಗ ಮತ್ತು ಅಂಶ ಈ ಆರೂಮಂದಿ ದೇವತೆಗಳೆಂದೇ ಪರಿಗಣಿತರು.

ಮಿತ್ರಾ ವರುಣರು ಹಾಗೂ ಇಷ್ಟಾರ್ಥ ದೇವತೆಗಳೂ ಯಜ್ಞಕ್ಕೆ ಬರಲಿ, ಸೋಮದಿಂದ ವಿಶೇಷ ಸುಖಪಡೆಯಲಿ.

ತೃಪ್ತರಾದ ಮಿತ್ರಾ ವರುಣರು, ಸಮಸ್ತರನ್ನೂ ಅವರವರ ವ್ಯಾಪಾರಕ್ಕೆ ತೊಡಗಿಸಲಿ. ಸಮಾನಪ್ರೀತಿಯಿಂದ ಯಾಜ್ಞಿಕರ ಇಷ್ಟಾರ್ಥನೆರವೇರಿಸಲಿ ಹಾಗೂ ಶತ್ರುರಹಿತರನ್ನಾಗಿ ಮಾಡಲಿ. ನ್ಯೂನಾತಿರೇಕ ಪಾಪಗಳಿಂದ ದೂರ ಮಾಡುತ್ತಾ, ಸ್ತುತಿಸುವವರನ್ನೂ, ಹವಿರ್ದಾನ ಮಾಡುವ ಮರ್ತ್ಯರನ್ನೂ ರಕ್ಷಿಸಲಿ.

ಯಾಜ್ಞಿಕರಿಗೆ ಧೀರ್ಘಾಯಸ್ಸು ಪುತ್ರಪೌತ್ರ ಭೃತ್ಯರುಗಳನ್ನೂ, ಹಾಗೂ ರಕ್ಷಣೆಯೊಂದಿಗೆ ಸುಖವನ್ನೂ ಕೊಡಲಿ.

## (ಅಷ್ಟಕ - 2, ಅಧ್ಯಾಯ - 2, ಸೂಕ್ತ 137 ರಿಂದ 157 ರವರೆಗೆ)

**ಸೂಕ್ತ** - 137 **(ಸುಷುಮಾಯಾತವಿಂದ್ರ.....**

ಪುರುಚ್ಛೇಪೋದೈವೋದಾಸಿ ಋಷಿಗಳು ಮಿತ್ರಾವರುಣ ದೇವತೆಗಳನ್ನು ಅತಿಶಕ್ವರೀ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ರಸಭರಿತ ಬಳ್ಳಿಯಿಂದ, ಯಜ್ಞನಿರ್ವಹಣ ಶಕ್ತಿಯುತವಾದ ಸೋಮರಸಕ್ಕೆ ಹಾಲು ಮೊಸರು ತೀರ್ಥೋದಕ ಮಿಶ್ರಮಾಡಿ, ಅಧ್ವರ್ಯುವು ರುಚಿಕರವಾಗಿ ಸಿದ್ಧಮಾಡಿದ್ದಾರೆ. ಸೂರ್ಯ ಕಿರಣಗಳೂ ಮಿಶ್ರಿತವಾಗಿ ಉತ್ಕೃಷ್ಟ ಹರ್ಷಕಾರಿಯಾಗಿವೆ.

ದ್ಯುಲ್ಲೋಕವಾಸಿಗಳಾದ ಮಿತ್ರಾವರುಣರು, ಯಜ್ಞಕ್ಕೆ ಆಗಮಿಸಿ ಸೋಮ ಸ್ವೀಕರಿಸಿ ಯಜ್ಞ ರಕ್ಷಣೆ ಮಾಡಲು ಆಹ್ವಾನಪೂರ್ವಕ ಪ್ರಾರ್ಥನೆ – ಋಷಿಗಳಿಂದ.

**ಸೂಕ್ತ** - 138 **(ಪ್ರಪ್ರ ಪೂಷ್ಣ.....**

ಪರುಚ್ಛೇಪೋ ದೈವೋದಾಸಿ ಋಷಿಗಳು ಪೂಷದೇವನನ್ನು ಅತ್ಯಷ್ಟಿ ಋಕ್‌ಗಳಿಂದ ಸ್ತುತಿಸುತಾರೆ.

ಪೂಷದೇವನು ಸುಖಕಾರಿ, ಪ್ರಕಾಶಮಾನ, ರಕ್ಷಕ, ದೇವತಾತ್ಮ ವೃಷ್ಟಿಕಾರಕ, ಯಾಜ್ಞಿಕರ ಮನಸ್ಸನ್ನು ಒಂದುಗೂಡಿಸುವವ, ಯಜ್ಞಾಂತ್ಯದವರೆಗೂ ತಾನೂ ಯಜ್ಞದಲ್ಲಿ ಭಾಗವಹಿಸುವವ, ಆಡಿನ ರೂಪದ ಕುದುರೆಗಳುಳ್ಳವ, ಸಂಗ್ರಾಮದಲ್ಲಿ ಮುಂದಾಗಿದ್ದು ಶತ್ರುನಾಶ ಮಾಡುತ್ತಾನೆ. ಪೂಷದೇವನ ಶಕ್ತಿ ಸಾಮರ್ಥ್ಯಗಳು ಯಜ್ಞಯಜಮಾನನಿಗಾಗಿಯೇ ಉತ್ಪನ್ನವಾದದ್ದು.

ಯಜಮಾನನಿಗೆ ಪ್ರಿಯ ಉಂಟುಮಾಡಲು ಅನುಯುಕ್ತರಾಗಿಸಲು, ವೈರಿಅನ್ನನಾಶಕ್ಕಾಗಿ, ಪೂಷದೇವನು ಕೋಪರಹಿತನಾಗಿ ಸುಮನಸ್ಕನಾಗಿ ಬರಲಿ – ಎಂದು ಯಜಮಾನನು ಯಜ್ಞಕ್ಕೆ ಆಹ್ವಾನಿಸುತ್ತಾನೆ.

ಪೂಷನು ಅಸಂಖ್ಯಧನ ಉದಾರದಾನ ಸಕಲ ಭೋಗ ಅನುಭವಿಸುವಂತಹ ರಕ್ಷಣೆ ಒದಗಿಸಿ, ಯಜಮಾನನ ಸಮೀಪದಲ್ಲೇ ಇರುವಂತೆ ಋಷಿಯ ವಿನಂತಿ.

**ಸೂಕ್ತ** - 139 **(ಅಸ್ತು ಶ್ರೌಷಟ್‌ಪುರೋ.....**

ಪರುಚ್ಛೇಪ್ರೋ ದೈವೋದಾಸಿ ಋಷಿಗಳು ವಿಶ್ವೇದೇವತೆಗಳು, ಮಿತ್ರಾವರುಣ ಅಶ್ವಿನಿ ಇಂದ್ರ ಅಗ್ನಿ ಮರುತ್ ಇಂದ್ರಾಗ್ನಿ ಬೃಹಸ್ಪತಿಯರನ್ನು ಕುರಿತು, ಅತ್ಯಷ್ಟಿ ಬೃಹತಿ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮಿತ್ರಾವರುಣರು ಉದಕದಾತರು, ಇಂದ್ರನು ಧನಾಧಿಪತಿ, ಅಶ್ವಿನೀದೇವತೆಗಳು ಸಕಲ ಧನಸ್ವಾಮಿಗಳು ಹಾಗೂ ಸ್ವರ್ಗದ ಹಾದಿಯಲ್ಲಿ ಶತ್ರುನಾಶ ಮಾಡುತ್ತಾ ವೃಷ್ಟಿತರುವವರು. ಮರುತ್ತುಗಳು ಶತ್ರುಗಳಿಂದ ಅಪಹೃತವಾಗಲಾರದಂತಹ ವಸ್ತುಗಳನ್ನು ಮಾನವರಿಗೆ ಕೊಡುವವರು. ಹನ್ನೊಂದು ಸಂಖ್ಯೆಯಲ್ಲಿ, ದ್ಯುಲೋಕ, ಪೃಥ್ವಿ ಅಂತರಿಕ್ಷ ಪ್ರಸಿದ್ಧ ದೇವತೆಗಳು ಯಜ್ಞವನ್ನು ಸೇವಿಸಲಿ.

ಅವ್ಯಕ್ತ ಶಕ್ತಿಯ ಅಗ್ನಿಯು ಯಜಮಾನನ ಸ್ತುತಿ ಕರ್ಮ ಶುದ್ಧ ಮನಸ್ಸುಗಳನ್ನೂ, ಅವನ ಸಂದೇಶ ಅಭಿಲಾಷೆಗಳನ್ನೂ ದೇವತೆಗಳಲ್ಲಿ ಸೇರಿಸಲಿ.

ಯಜಮಾನನ ಪೂರ್ವಜರಾದ ದಧೀಚಿ, ಅಂಗೀರಸ, ಪ್ರಿಯಮೇಧ, ಕಣ್ವ ಅತ್ರಿ, ಮನು, ಇತ್ಯಾದಿ ದೇವಮಾನವ ಸಂಬಂಧಿ ಚಿರಂಜೀವಿಗಳು ಮಹತ್ವಪೂರಿತ ಸ್ಥಾನಪಡೆಯಲಿ.

ಪರ್ವತದ ಸೋಮಲತಾರಸ, ದೇವತೆಗಳ ಸುಖಕ್ಕಾಗಿ ಸಿದ್ಧವಿದೆ. ಅರ್ಯಮನ ಜೊತೆಯ ಧೇನು ಸಹಾಯಕವಾಗಿದೆ. ಸತತ ಪರಿಶರ್ಪಣೆ ಆಗುತ್ತಿದೆ.

ಯಜ್ಞಫಲರೂಪವಾಗಿ ಸುಖಕರ ವೃಷ್ಟಿ ಧನಗಳನ್ನು ದೇವತೆಗಳು ಯಾಜ್ಞಿಕರಿಗೆಕೊಡಲಿ.

**ಸೂಕ್ತ** - 140 **(ವೇದಿಷದೇ............**

ದೀರ್ಘತಮ ಔಚಿತ್ಯ ಋಷಿಗಳು, ಅಗ್ನಿದೇವನನ್ನು, ಜಗತೀ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು, ಚಲಿಸುತ್ತಿರುವ ಎರಡು ಅರಣಿಗಳಿಂದ ಉತ್ಪನ್ನನಾಗಿ, ನಾಲಿಗೆಯಾದ ಜ್ವಾಲೆಯಿಂದ ಕತ್ತಲೆಯನ್ನು ಕಳೆಯುತ್ತಾನೆ.

ಪೊದೆಗಳ ದಹನದ ಶಕ್ತಿಯಿಂದ ವೃದ್ಧಿಗೊಂಡ, ಹೊಗೆಯೇ ಇಲ್ಲದ ಜ್ವಾಲೆಯ ಅಗ್ನಿಯನ್ನು, ಯಾರೂ ತಡೆಯಲಾರರು.

ಮೇಲ್ಮುಖ ಜ್ವಾಲೆಯೊಂದಿಗೆ ಸೇರಿ, ಮೃತಪ್ರಾಯ ಜ್ವಾಲೆಯು ಸಹಾ, ಚೈತನ್ಯ ಪ್ರಾಣಧಾರಕ ಶಕ್ತಿಯನ್ನು ಅಗ್ನಿಗೆ ಉಂಟುಮಾಡುತ್ತದೆ.

ಭೂಮಿಯ ಮೇಲಣ ತೃಣ ಗುಲ್ಮಾದಿಗಳನ್ನು ದಹಿಸುತ್ತಾ, ಭೂಮಿಯನ್ನು ಕೃಷ್ಣ ವರ್ಣವನ್ನಾಗಿಸುತ್ತದೆ.

ಅಗ್ನಿಯ ಜ್ವಾಲೆಗಳು ಹರಡಿಬೆಳಗುತ್ತಾ, ಯಾಗಾದಿಗಳಿಗೆ ಉಪಯುಕ್ತ ಪೂಜ್ಯ ಅಗ್ನಿಯಾಗಿ, ಯಜಮಾನನ ಯಜ್ಞಾಗ್ನಿಯೊಂದಿಗೆ ಸೇರಿ ತನ್ನ ಪಿತೃಗಳು- ದ್ಯಾವಾಪೃಥವಿಗಳಿಗೆ – ತೇಜೋರೂಪ ಉಂಟುಮಾಡುತ್ತದೆ.

ಎರಡು ನಾಲಿಗೆಗಳುಳ್ಳ ಅಗ್ನಿಯು, ಒಂದರಲ್ಲಿ ಹವಿಸ್ಸನ್ನು ಸ್ವೀಕರಿಸುತ್ತಾ ಮತ್ತೊಂದರಲ್ಲಿ ತನ್ನೆದುರಿಗಿರುವ ವನತೃಣಗಳನ್ನೆಲ್ಲಾ ದಹಿಸುತ್ತಾನೆ.

ಯಜಮಾನನು, ಇಂತಹ ಚೈತನ್ಯಯುತ ಅಗ್ನಿಯನ್ನು ಅನ್ನಪೂರಕ ಯಾಗಕ್ಕೆ ಆಹ್ವಾನಿಸಿ, ದರ್ಭೆವಸ್ತ್ರಗಳ ಮೃದು ವೇದಿಕೆ ಸಿದ್ಧಪಡಿಸುತ್ತಾನೆ.

ಅಗ್ನಿಯ ಪ್ರಖರ ಜ್ವಾಲೆ ಸೋಮ ಹವಿಸ್ಸು ಆಜ್ಯಗಳನ್ನು ಸ್ವೀಕರಿಸಲಿ, ಶತ್ರುಗಳ ಪಟನ್ನು ತಡೆದು, ಯಾಜ್ಞಕನಿಗೆ ಇಷ್ಟಾರ್ಥಸಲ್ಲಿಸಲಿ.

ರಮಣೀಯ ಧನ, ವೀರಪುತ್ರರುಗಳನ್ನು ಕೊಟ್ಟು, ಸಂಸಾರ ದಾಟಿಸಿ ಶಾಶ್ವತ ಬ್ರಹ್ಮಲೋಕ ತಲುಪಿಸುವ ಸಾಧನ 'ದೋಣಿ'ಯನ್ನು ಅನುಗ್ರಹಿಸಲಿ.

ಯಾಜ್ಞಕರ ಸ್ತುತಿಗಳನ್ನು ಅಗ್ನಿ, ದ್ಯಾವಾಪೃಥವಿ, ಗೋವು, ನದೀ, ತೃಣಾದಿಗಳು ಶ್ಲಾಘಿಸಲಿ. ಹೊಂಬಣ್ಣದ ಗೋವು ಉಷಸ್ಸು ಶ್ರೇಷ್ಠ ಅನ್ನ ಒದಗಿಸಲಿ.

**ಸೂಕ್ತ - 141 (ಬಳಿತ್ಥಾತದ್ವಪುಷೇ.....**

ಧೀರ್ಘತಮಔಚಿತ್ಯ ಋಷಿಗಳು ಅಗ್ನಿದೇವನನ್ನು, ಜಗತೀ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಸ್ತೋತ್ರಾರ್ಹ ಅಗ್ನಿಯು, ಎಲ್ಲಾ ಪ್ರಾಣಿಗಳ ಶರೀರಕ್ಕೆ ಆದಿತ್ಯ ತೇಜಸ್ಸನ್ನು ಕೊಡುತ್ತಾನೆ.

ಯಾಜ್ಞಿಕರು ಮಂತ್ರರೂಪಶಕ್ತಿ, ಶರೀರ ಸಾಮರ್ಥ್ಯದಿಂದ ಸ್ತೋತ್ರಾರ್ಹ ಅಗ್ನಿಯನ್ನು ಉತ್ಪಾದಿಸಿ, ಕಟ್ಟಿಗೆಯಲ್ಲೇ ಸುಪ್ತನಾದ ಅಗ್ನಿಯನ್ನು ಜಾಗ್ರತಗೊಳಿಸಿ, ವಾಯುವಿನ ಸಹಾಯದಿಂದ, – ಶ್ರೇಷ್ಠವಾದ ಶ್ರೇಷ್ಠವಲ್ಲದ, ಪ್ರಾಚೀನ ನೂತನ,– ತಾರತಮ್ಯವಿಲ್ಲದೆ, ಮೂಲಿಕೆಗಳನ್ನು ದಶದಿಕ್ಕುಗಳಿಂದಲೂ ಅಕ್ರಮಿಸುತ್ತಾನೆ.

ಶುದ್ಧ ಯುವಕ ಅಗ್ನಿಜ್ವಾಲೆಗಳು ಊರ್ಧ್ವಮುಖವಾಗಿ ಅಂತರಿಕ್ಷ ಸೇರುತ್ತವೆ.

ಜ್ವಲಿಸುವ ಅಗ್ನಿಯಿಂದಾಗಿ ಕಾಷ್ಠಾದಿಗಳು ಕಪ್ಪಾಗಿ, ಮೃಗಪಕ್ಷಿಗಳು ಓಡಿಹೋಗುತ್ತವೆ.

ಕರ್ತವ್ಯನಿರತ ವರುಣ, ಉದಾರದಾನಿ ಮಿತ್ರ- ಇವರುಗಳು, ತೀಕ್ಷ್ಣತೇಜಸ್ಸನ್ನು ಅಗ್ನಿಯಿಂದ ಪಡೆಯುತ್ತಾರೆ.

ಇಂತಹ ಅಗ್ನಿಯು ಅಪ್ರತಿಹತ ಶಕ್ತನಾದರೂ ಸೌಮ್ಯ. ಸಾರ್ವಭೌಮ ಪ್ರಭುವಾಗಿರಲು ಅರ್ಹ.

ಋತ್ವಿಜರು, ದೇವತೆಗಳನ್ನು ತೃಪ್ತಿಪಡಿಸುವ ಅಗ್ನಿಯನ್ನು ಶರೀರಬಲ ಕರ್ಮಗಳಿಂದ ಪೂಜಿಸುತ್ತಾರೆ. ಅಗ್ನಿಯು ಧನಾಪೇಕ್ಷಿಗಳಿಗೆ ಉತ್ತಮ ಧನ, ಪುತ್ರಾಪೇಕ್ಷಿಗಳಿಗೆ ಸೌಮ್ಯ ಪ್ರೀತಿಪಾತ್ರ ಸಮರ್ಥ ವಿಧ್ಯಾವಂತ ಪುತ್ರರನ್ನೂ ಕರುಣಿಸುತ್ತಾನೆ.

ಪೂಜಾಯೋಗ್ಯ ಗಂಭೀರ ಶಬ್ದಯುತ ಮಂತ್ರಗಳಿಂದ ಯಾಜ್ಞಿಕರು ಅಗ್ನಿಯನ್ನು ಸ್ತುತಿಸುತ್ತಾರೆ. ವೈಭವದಿಂದ ಸ್ವರ್ಗಾಭಿಮುಖವಾಗಿ, ತಮ್ಮನ್ನೂ ಅಗ್ನಿಯು ಕರೆದುಕೊಂಡು ಹೋಗಲು ಅಪೇಕ್ಷಿಸುತ್ತಾರೆ.

**ಸೂಕ್ತ - 142 (ಆಪ್ರೀಸೂಕ್ತ ) (ಪ್ರತವ್ಯೋಽಶಿಂ........................**

ಧೀರ್ಘತಮ ಔಚಥ್ಯ ಋಷಿಗಳು. ಸವಿತ, ತನೂನಪಾತ್, ನರಾಶಂಸ, ಇಳಾ, ಬರ್ಹಿ ದೇವೀರ್ದ್ವಾರ, ಉಷಾಸಾನಕ್ತಾ, ದೈವಾಹೋತಾರೌ, ಪ್ರಚೇತಸೌ, ತ್ರಿಸ್ರೋದೇವ್ಯಃ ಸರಸ್ವತೀ ಇಳಾಭಾರತೀ, ತ್ವಷ್ಟಾ ವನಸ್ಪತಿ, ಸ್ವಾಹಾಕೃತಯಃ - ಇಂದ್ರ ದೇವತೆಗಳನ್ನು ಅನುಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಪ್ರಜ್ವಲಿಸುವ ಅಗ್ನಿಯು, ಪ್ರಾಚೀನ ವಸ್ತುವನ್ನೂ, ಯಜ್ಞವನ್ನೂ ವಿಸ್ತರಿಸುತ್ತಾ ಯಜಮಾನನ ಹವಿಸ್ಸನ್ನು ಸ್ವೀಕರಿಸಲು ದೇವತೆಗಳನ್ನು ಕರೆತರಲಿ.

ತನೂನಪಾತ ಎಂಬ ಅಗ್ನಿಯು, ಆಜ್ಯ, ಸೋಮ ದ್ರವ್ಯಗಳಿಂದ ಕೂಡಿದ ಯಜಮಾನನ ಯಜ್ಞಕ್ಕೆ ಬಂದು, ಸಮಾಪ್ತವಾಗುವವರೆಗೂ ಇರಲಿ. ದೇವತೆಗಳನಡುವೆ ಶುದ್ಧವಾದ ನರಾಶಂಸನು, ದ್ಯುಲೋಕದಿಂದ ಬಂದು, ಅನ್ನಶುದ್ಧಿ ಮಾಡುವ ಅಗ್ನಿಯೊಡನೆ ಸೇರಿ ಮಧುರಫಲ ನೀಡಲಿ.

ಇಳನೆಂಬ ಪ್ರಸಿದ್ಧ ಅಗ್ನಿಯು ಸ್ತುತಿಯಿಂದ ಪ್ರೀತನಾಗಲಿ. ಧರ್ಭಾಸನ, ಸುಜಿಹ್ವಾದಿಗಳೊಂದಿಗೆ ಕಾಯುತ್ತಿರುವ ಸೋಮ ಯಾಗಕ್ಕೆ ಇಂದ್ರನನ್ನು ಕರೆತರಲಿ.

ಮಹದಾಕಾರದ, ಪರಸ್ಪರ ಅಂಟಿಕೊಳ್ಳದ, ಶುದ್ಧಮಾಡುವ ಶಕ್ತಿಯುಳ್ಳ ದ್ವಾರಾಭಿಮಾನಿ ದೇವತೆಗಳು, ದೇವತೆಗಳ ಪ್ರವೇಶಕ್ಕಾಗಿ, ದೂರ ಸರಿದು ದಾರಿ ಮಾಡಿಕೊಡಲಿ.

ಅಹೋರಾತ್ರಿ ದೇವತೆಗಳು ಯಜ್ಞನಿರ್ಮಾಣಕಾರರು, ಅಪ್ರಾರ್ಥಿತವಾಗಿ ಆಗಮಿಸಿ ಯಜ್ಞಭಾಗಿಗಳಾಗಲಿ.

ಪರ್ವವನ್ನುಂಟುಮಾಡುವ ಜ್ವಾಲೆ ಮತ್ತು ಯಜಮಾನನ್ನು ಅನುಗ್ರಹಿಸುವುದು - ಈ ಎರಡೂ ಅಗ್ನಿಯಫಲ ರೂಪಗಳು. ಫಲದಾಯಕ ಯಜ್ಞವನ್ನು ನೆರವೇರಿಸಲಿ.

ಮಹತ್ಸ್ವರೂಪಿ, ಆದಿತ್ಯ ಸಂಭಂಧಿ ವಾಗ್ದೇವಿಯು ಯಜ್ಞಕ್ಕೆ ಬರಲಿ.

ವಿದ್ಯುತ್‌ರೂಪಿ ಅಗ್ನಿಯು ವೃಷ್ಟಿ ಅಭ್ಯುದಯವನ್ನು ವಿಸ್ತ್ರುಂಕಾರಿಯಾಗಿ ಸೃಷ್ಟಿಸಲಿ. ರೂಪಾಭಿಮಾನಿ ಅಗ್ನಿಯು, ದೇವತೆಗಳು ಅವರವರ ಕರ್ತವ್ಯನಿರತರಾಗುವಂತೆ ಮಾಡಿ, ಹವಿಸ್ಸನ್ನು ಹಂಚಲಿ.

ಪೂಷದೇವ ಮತ್ತು ಮರುದ್ದೇವತೆಗಳು, ದೇವತೆಗಳ ಸರ್ವಸಂಘಕ್ಕೂ, ವಾಯುವಿಗೂ, ಗಾಯತ್ರೀ ರೂಪದ ಇಂದ್ರನಿಗೂ, ಹವಿಸ್ಸರ್ಪಿಸಲು ಸ್ವಾಹಾಕಾರಮಾಡಲಿ.

ಹವಿಸ್ಸನ್ನು ಸ್ವೀಕರಿಸಲು ಈ ಅಹಿಂಸಾತ್ಮಕ ಯಜ್ಞಕ್ಕೆ ಇಂದ್ರನು ಬರಲಿ.

**ಸೂಕ್ತ - 143 (ಪ್ರತವ್ಯೋಸಿ.....**

ದೀರ್ಘತಮ ಔಚಥ್ಯ ಋಷಿ ಅಗ್ನಿದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಗ್ನಿಯು ಉತ್ಪನ್ನನಾದೊಡನೆಯೇ, ವಾಯುವಿನೆದುರು ಪ್ರತ್ಯಕ್ಷನಾಗುವವ, ಜ್ವಲನದಿಂದ ದ್ಯುಲೋಕ ಮತ್ತು ಪೃಥ್ವಿಯನ್ನು ಬೆಳಗುವವ, ತಡೆಯಲಾಗದ ಪ್ರಸರಣದವ.

ಬೃಗು ವಂಶದ ರಾಜರೆಲ್ಲರಿಂದಲೂ ಯಜ್ಞದಲ್ಲಿ ಸ್ಥಾಪಿತನಾದಂತೆ, ಅಗ್ನಿ ಈ ಯಾಜ್ಞಕನ ಯಜ್ಞದಲ್ಲೂ ಉತ್ತರ ವೇದಿಕೆಯಲ್ಲಿ ಸಕಾಲದಲ್ಲಿ ಸ್ಥಾಪಿತನಾಗಲಿ. ಸ್ತೋತ್ರ ಅಪೇಕ್ಷಿಸಿ, ಯಜ್ಞಕರ್ಮ ಪ್ರೇರಿಸಿ ಪ್ರಜ್ಞಬೆಳೆಸಲಿ.

ಅಗ್ನಿಯು ವನವೃಕ್ಷಾದಿಗಳನ್ನು ನಾಶಪಡಿಸುವಂತೆ, ಯಜಮಾನ ಶತ್ರುಗಳನ್ನೂ ನಾಶಮಾಡಲಿ. ಇಷ್ಟಾರ್ಥ ಸಕಲ ಧನ, ಗವಾದಿ ಧನ ಪೂರೈಸಿ ಯಜ್ಞ ಫಲದಾತನಾಗಲಿ.

ಯಾಜ್ಞಕರ ವಿಷಯದಲ್ಲಿ ಜಾಗ್ರತನಾಗಿದ್ದು ಅವರ ಪುತ್ರಪೌತ್ರರನ್ನು ಕಲ್ಯಾಣದಿಂದ ರಕ್ಷಿಸಲಿ.

**ಸೂಕ್ತ - 144 (ಏತಿಪ್ರಹೋತಾ.....**

ದೀರ್ಘತಮ ಔಚಥ್ಯ ಋಷಿಗಳು ಅಗ್ನಿದೇವನನ್ನು ಜಗತೀ ಛಂದಸ್ಸಿನ ಋಕ್‌ಗಳಿಂದ ಪ್ರಾರ್ಥಿಸುತ್ತಾರೆ.

ಹೋತೃ ಅಧ್ವರ್ಯುಗಳು, ದಂಪತಿಗಳಂತೆ, ಒಂದೇ ಶ್ರಮದಿಂದ ಒಂದೇ ಪ್ರಯೋಜನಕ್ಕೆ ಒಟ್ಟಾಗುತ್ತಾರೆ, ಒಂದೇ ಕರ್ಮನಿರ್ವಹಿಸುತ್ತಾರೆ. ಹೀಗೆಯೇ ಅಗ್ನಿ ಮತ್ತು ಸೀರುಗಳೂ ಸೇರಿ ಪರಿಶ್ಕೃತರಾಗಿ ವೃಷ್ಟಿ ಉಂಟುಮಾಡುತ್ತಾರೆ.

ಅಧ್ವರ್ಯುವು ವಿಶೇಷಅನುಭವದಿಂದ ಪ್ರಜ್ಞಾಪೂರ್ವಕವಾಗಿ ಯಜ್ಞಾಚರಣೆ ಮಾಡುತ್ತಾನೆ. ಹವಿಸ್ಸು ಅನ್ನ ಆಜ್ಯದಿಂದ, ಜೀರ್ಣನಾಗಿದ್ದರೂ ಸದಾ ಅಗ್ನಿಯನ್ನು ತರುಣನಂತೆ ಮಾಡುತ್ತಾನೆ.

ಸ್ವಸಾಮರ್ಥ್ಯದಿಂದ ಅಗ್ನಿಯು ದೇವಮಾನವರಿಗೆ ಈಶ್ವರನಾಗಿದ್ದಾನೆ. ದ್ಯಾವಾಪೃಥವಿಗಳನ್ನು ವ್ಯಾಪಿಸುತ್ತಾ, ನೂತನ ಸ್ತೋತ್ರ ಸ್ವೀಕರಿಸುತ್ತಾ, ಮನೋಹರನಾಗಿ

ಎಲ್ಲರಿಗೂ ಗೋಚರಿಸುತ್ತಾ, ಯಾಜ್ಞಿಕರ ಹತ್ತುಬೆರಳುಗಳಿಗೂ ತೃಪ್ತಿತರುತ್ತಾನೆ.

ಹರ್ಷದಾಯಕ ಹವಿಸ್ಸು ಸ್ತೋತ್ರದಿಂದ ಅಗ್ನಿಯು ತೃಪ್ತನಾಗಲಿ, ಎಲ್ಲರಿಗೂ ಆಶ್ರಯದಾತನಾಗಿ ರಕ್ಷಣೆ ನೀಡಲಿ.

**ಸೂಕ್ತ** - 145 (**ತ್ವಂ ಪೃಚ್ಛತಾ.....**

ದೀರ್ಘತಮ ಔಚಥ್ಯ ಋಷಿಗಳು ಅಗ್ನಿದೇವನನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಸಕಲ ದೇವತೆಗಳಿಗೂ ಏಕಮಾತ್ರ ಪ್ರತಿನಿಧಿಯಾದ ಅಗ್ನಿಯು ಕೃಪಗ, ಅಹಂಕಾರರಹಿತರು ಮಾತ್ರಾ ಪಾತ್ರರಾಗುತ್ತಾರೆ. ಸಕಲ ಪ್ರದೇಶಗಳಲ್ಲೂ ಸಂಚರಿಸಿ ತಿಳಿಯಬೇಕಾದದ್ದನ್ನೆಲ್ಲಾ ನಿರ್ಣಾಯಕವಾಗಿ ತಿಳಿದು, ಅಹಂಕಾರರಹಿತ ಯಜಮಾನನು ಕೇಳುವ ಯೋಗ್ಯಪ್ರಶ್ನೆಗಳಿಗೆ ಉತ್ತರಿಸುತ್ತಾನೆ. ಪೂರ್ವಭಾವಿಯಾದ ಅಥವಾ ಪ್ರತ್ಯುತ್ತರವನ್ನು ಅಗ್ನಿಯು ಸಹಿಸನು.

ಬಳಲಿದ್ದರೂ ಸಹಾ, ಯಜಮಾನನ ಪ್ರೀತ್ಯರ್ಥ ಯಜ್ಞಕರ್ಮದಲ್ಲಿ ತೇಜಸ್ಸಿಂದ ಸಂಯುಕ್ತನಾಗುತ್ತಾನೆ ಮತ್ತು ಯಾಜ್ಞಕರಿಗೆ ಯಜ್ಞಾನುಷ್ಠಾನ ಕರ್ತವ್ಯಜ್ಞಾನ ಉಪದೇಶಿಸುತ್ತಾನೆ.

**ಸೂಕ್ತ** - 146 (**ತ್ರಿಮೂರ್ಧಾನಂ.....**

ದೀರ್ಘತಮ ಔಚಥ್ಯ ಋಷಿಗಳು ಅಗ್ನಿದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ಜ್ವಾಲೆಗಳಿಂದ ಸರ್ವತ್ರಸಂಚರಿಸುತ್ತಾ, ಎತ್ತರ ವೇದಿಕೆಯಲ್ಲಿ ಪಾದವಿರಿಸಿದ್ದಾನೆ. ಸೂರ್ಯಸ್ವರೂಪಿ ನಾಶರಹಿತ ಅಗ್ನಿಯನ್ನು, ಮಹಾನ್ ಜ್ಞಾನಿಗಳಾದ, ಕಲ್ಮಷರಹಿತ ಉಪಚಾರಕುಶಲರೂ ಮೇಧಾವಿ ಪ್ರಯೋಗಕುಶಲರೂ ಆದ, ಹೋತೃ ಅಧ್ವರ್ಯು ಹಾಗೂ ಯಜಮಾನ, ಅವನ ಪತ್ನಿ ಯಜ್ಞ ಸಿದ್ಧ ಮಾಡಿ ಸಂತೋಷಗೊಳಿಸುತ್ತಾರೆ. ಹೃದಯ ಪೂರ್ವಕ ಆರಾಧಿಸುತ್ತಾರೆ; ಪ್ರತ್ಯಕ್ಷ ಮಾಡಿಕೊಳ್ಳುತ್ತಾರೆ.

ಅನುಗ್ರಹ ಬುದ್ಧಿಯಿಂದ ಹವಿಸ್ಸನ್ನು ದೇವತೆಗಳಿಗೂ, ಮಾನವರಿಗೆ ಧನವನ್ನು ಹಂಚುತ್ತಾ ದಶದಿಕ್ಕುಗಳಲ್ಲೂ ಕಾಣಿಸಿಕೊಳ್ಳುತ್ತಾ ಪೂಜ್ಯನಾಗುತ್ತಾನೆ.

**ಸೂಕ್ತ** 147 ( **ಕಥಾತೇ......**

ದೀರ್ಘತಮ ಔಚಥ್ಯ ಋಷಿಗಳು ಅಗ್ನಿ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಿಂದ ಪ್ರಾರ್ಥಿಸುತ್ತಾರೆ.

ಲೋಕದಲ್ಲಿ ಕೆಲವರು ಅಗ್ನಿಯನ್ನು ಅಲಕ್ಷಿಸುತ್ತಾರೆ. ಕೆಲವರು ಹೊಗಳುತ್ತಾರೆ. ಯಜಮಾನನು ಅಗ್ನಿ ಮೂರ್ತಿಯನ್ನು ಸ್ತೋತ್ರ ಸ್ತುತಿಯಿಂದ ಪೂಜಿಸುತ್ತಾನೆ.

ಅಗ್ನಿಯ ಪ್ರಕಾಶರಶ್ಮಿಗಳು ವಾಯುವಿನಲ್ಲಿ ಅಧಿಕವಾಗಿ ವ್ಯಾಪಿಸಿ, ಅನ್ನ

ಆಯುಸ್ಸುಗಳನ್ನು ಯಜ್ಞಕರ್ತರಿಗೆ ಹಾಗೂ ಅವರ ಪುತ್ರ ಪೌತ್ರಾದಿಗಳಿಗೆ ಒದಗಿಸಿ ಸಂತೋಷ ಭಾಗ್ಯ ಕಲ್ಪಿಸುವರು.

ಅಗ್ನಿಯ ಸುಖಕಾರಕ ರಶ್ಮಿ ದೀರ್ಘತಮಸ್ಸನ್ನು ಅಂಧಕಾರ ದುಃಖದಿಂದ ರಕ್ಷಿಸಿದವು. ಈ ರಶ್ಮಿಗಳನ್ನು ತಿಳಿದವರು, ತಮ್ಮನ್ನು ತಾವು ಕಾಪಾಡಿಕೊಳ್ಳಬಲ್ಲರು; ಅವರನ್ನು ಶತ್ರುಗಳು ಹಿಂಸಿಸಲಾರರು.

ಮಾನಸಿಕ ವಾಚಿಕ ರೂಪ ಮಂತ್ರಗಳಿಂದ, ದುಷ್ಟಮಾನವರು ಬೇರೆಯವರನ್ನು ಗಾಸಿ ಗೊಳಿಸುತ್ತಾರೆ. ಆದರೆ ಅಗ್ನಿಯು, ತನ್ನನ್ನು ಸ್ತುತಿಸುವವರನ್ನು, ದುರ್ಮಂತ್ರದ ದುಷ್ಪರಿಣಾಮ ರಕ್ಷಿಸಿ ಅಭಯ ಕೊಡುತ್ತಾನೆ.

**ಸೂಕ್ತ 148 ( ಮಥೀದ್ಯದೀಂ.....**

ದೀರ್ಘತಮ ಔಚಥ್ಯ ಋಷಿಗಳು ಅಗ್ನಿ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಪ್ರಕಾಶಿಸುವ ಆದಿತ್ಯನು ದೇವತೆಗಳಿಗಿದ್ದಂತೆ ಅಗ್ನಿಯು ಮಾನವರಿಗೆ ಇರುತ್ತಾನೆ. ವಾಯುವಿನಿಂದ ಪ್ರಜ್ವಲಿತ ನಾನಾರೂಪಿ ಅಗ್ನಿಯು, ದೇವತೆಗಳನ್ನು ಯಜ್ಞಕ್ಕೆಕರೆತರುವ ದೇವಪ್ರತಿನಿಧಿ.

ಅಗ್ನಿಯು ಗಾರ್ಹಪತ್ಯಸ್ಥಾನದಲ್ಲಿ ಶಾಶ್ವತವಾಗಿ ಜಾಗರೂಕತೆಯಿಂದ ರಕ್ಷಿತನಾಗಿ ಹಿಡಿದಿಡಲ್ಪಟ್ಟಿದ್ದಾನೆ. ಸ್ತೋತ್ರಗಳಿಂದ ಯಾಜ್ಞಕರು ಆಹವನೀಯಾರ್ಥ ಅಲ್ಲೇ ಸಿಲ್ಲಿಸಿಕೊಂಡಿದ್ದಾರೆ, ನಂತರ ಯಜ್ಞಸ್ಥಾನಕ್ಕೆ ಕರೆದೊಯ್ಯುತ್ತಾರೆ.

ಶತ್ರುಗಳಾಗಲಿ, ಕಡಕಿನ ಸ್ವಭಾವದವರಾಗಲಿ, ಹಿಂಸಕರಾಗಲಿ, ಶ್ರದ್ಧಾಪೂರ್ವಕ ಸ್ತೋತ್ರಕ್ರಮ ಕೀರ್ತನೆಗಳಿಂದ ದೇವತೆಗಳು ಹಾಗೂ ಅಗ್ನಿ ತೃಪ್ತರಾಗುವುದರಿಂದ ಯಜಮಾನನನ್ನು ಹಿಂಸಿಸಲಾರರು.

ಅಜ್ಞಾನಿ ಅವಿದ್ವಾಂಸರು ಯಜಮಾನನ ಅಗ್ನಿಯನ್ನು ತಿಳಿಯಲಾರರಾದರೂ, ಅಗ್ನಿಯ ಮಹಾತ್ಮ್ಯವನ್ನು ಕುಂದಿಸಲಾರರು.

ವಾಯುವಿನ ಸಹಾಯದಿಂದ ಅನೇಕ ವೃಕ್ಷಭರಿತ ಕಾಡನ್ನು ದಹಿಸುವ ಅಗ್ನಿಯನ್ನೂ, ಯಜಮಾನರು ಭಕ್ತಿ ಶ್ರದ್ಧೆಗಳಿಂದ ಯಜ್ಞಾದಿಗಳಿಂದ ಭಜಿಸುತ್ತಾರೆ.

**ಸೂಕ್ತ - 149 (ಮಹಃಸರಾಯ.....**

ದೀರ್ಘತಮ ಔಚಥ್ಯ ಋಷಿಗಳು, ಅಗ್ನಿದೇವನನ್ನು, ವಿರಾಟ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಪ್ರಭುಗಳಿಗೆ ಪ್ರಭುವಾಗಿ, ಸೂರ್ಯನಂತೆ ಬೆಳಗುತ್ತಾ, ವಾಯುವಿನಂತೆ ಆಕಾಶಸ್ಥನಾಗಿರುವ ಅಗ್ನಿ, ಇಷ್ಟಾರ್ಥ ಧನದಾತ.

ಅಗ್ನಿಯು ಸೋಮರಸ ತಯಾರಿಕೆಯ ಶಬ್ದದಲ್ಲೇ ಸಂತೋಷ ಪಡುವವ,

ಉದಕಯುಕ್ತ, ಯಾಗಪ್ರವೇಶವಾಸಿ, ಅತ್ಯಪೇಕ್ಷಿತ ಧನ ಹೊಂದಿರುವವ.

ಸೃಷ್ಟಿಯನ್ನೆಲ್ಲಾ ಜೀವರಸದಿಂದ ತುಂಬಿರುವ ಅಗ್ನಿಯು, ಗರ್ಭಾಶಯ ಪ್ರವೇಶಿಸಿ ಜೀವರಾಶಿಯನ್ನು ಸೃಷ್ಟಿಸುತ್ತಾನೆ.

ಹವಿಸ್ಸನ್ನು ಅರ್ಪಿಸುವ ಮಾನವರಿಗೆ ಶ್ರೇಷ್ಠ ಸಂಪತ್ತುಗಳ ಪಿತೃವಾಗಿರುತ್ತಾನೆ.

**ಸೂಕ್ತ - 150 (ಪುರುತ್ವಾ.....**

ಧೀರ್ಘತಮ ಔಚಥ್ಯ ಋಷಿಗಳು ಅಗ್ನಿದೇವನನ್ನು ಉಷ್ಣಿಕ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ದೇವಭಕ್ತರಲ್ಲದವರು ಎರಡುಬಗೆ ಉಂಟು - ಧನಿಕರಾಗಿದ್ದು ಅಗ್ನಿಯನ್ನು ಪೂಜಿಸದೆ ದಕ್ಷಿಣೆ ಧನಕೊಡದವರು, ಮತ್ತು ದೈವ ಭಕ್ತರಲ್ಲದ ಸ್ತುತಿಸದ ನಾಸ್ತಿಕರು. ಈ ಎರಡೂ ಬಗೆಯವರನ್ನೂ ಅಗ್ನಿಯು ಅನುಗ್ರಹಿಸಬಾರದೆಂದು ಯಜಮಾನನ ಅಪೇಕ್ಷೆ.

ಮೇದಾವಿ ಅಗ್ನಿಯನ್ನು ಯಜ್ಞಾದಿಗಳಿಂದ ಪೂಜಿಸುವ ಮನುಜನು, ಆಹ್ಲಾದಕರ ಚಂದ್ರಸ್ಥಾನವನ್ನು ಪಡೆಯುತ್ತಾನೆ; ದೇವತೆಗಳಿಗೂ ಅಧಿಕನಾಗುತ್ತಾನೆ.

ಯಜಮಾನನು ಅಗ್ನಿಗೆ ಹವಿಸ್ಸು ಸ್ತುತಿಗಳನ್ನು ಅರ್ಪಿಸುತ್ತಾನೆ. ದಾಸನಂತೆ ಪುತ್ರಾದಿಧನ, ಚಂದ್ರಸ್ಥಾನದ ಅನುಗ್ರಹಕ್ಕಾಗಿ ಪ್ರಾರ್ಥಿಸುತ್ತಾನೆ.

**ಸೂಕ್ತ - 151 (ಮಿತ್ರಂನಯಂ.....**

ಧೀರ್ಘತಮ ಔಚಥ್ಯ ಋಷಿಗಳು ಅಗ್ನಿದೇವನನ್ನು ಉಷ್ಟಕ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಒಟ್ಟಿಗೇಸೇರಿದ ಇಷ್ಟಾರ್ಥಪ್ರದ ಮಿತ್ರಾ ವರುಣರನ್ನು, ಶಕ್ತಿಸಂಪಾದನೆಗಾಗಿ ಮಾನವರು ಯಜ್ಞದಲ್ಲಿ ಶ್ಲಾಘಿಸುತ್ತಾರೆ; ಆತ್ಮ ಸಂತೋಷದಿಂದ ಸೋಮಾಹುತಿ ಅರ್ಪಿಸುತ್ತಾರೆ.

ಅಗ್ನಿಯಿಂದ ಮಿತ್ರಾವರುಣರು ಉಪಚರಿತರಾದಾಗ ಮಳೆ ಉಂಟಾಗುತ್ತದೆ. ಮಹತ್ತಾದ ಧನಯುಕ್ತ ಅನ್ನವನ್ನು ಮೂರು ಲೋಕದಲ್ಲಿಯೂ ಮಿತ್ರಾವರುಣರು ಹೊಂದಿರುವರು. ದನಕರುಗಳನ್ನು ರಕ್ಷಿತವಾಗಿ ಕೊಟ್ಟಿಗೆ ಸೇರಿಸುವವರು ಮಿತ್ರಾವರುಣರೇ.

ಮಿತ್ರಾವರುಣರು, ಯೋಗ್ಯವಾದ ಯಾಗಕರ್ತೃವಿನ ಯಾಗಕ್ಕೆ ಬರಲಿ.ಯಜಮಾನನ ಸ್ತುತಿಯನ್ನು ಕೇಳಲಿ. ಶ್ರದ್ಧಾಪೂರ್ವಕವಾದ ಸ್ತೋತ್ರ ಹವಿಸ್ಸಾದಿ ಕರ್ಮಗಳನ್ನು ಸ್ವೀಕರಿಸಲಿ. ಯಜ್ಞದ ಉತ್ಕೃಷ್ಟತೆಯನ್ನು ಶ್ಲಾಘಿಸಲಿ. ಯಜಮಾನನನ್ನು ಅನುಗ್ರಹಿಸಿ ಯಾಗಕರ್ತರ ಕರ್ಮವನ್ನು ವೃದ್ಧಿಸಲಿ.

ಯಜಮಾನನು ಒಳ್ಳೆಯ ಹಾಗೂ ಕೆಟ್ಟಕರ್ಮಗಳನ್ನು ವಿಂಗಡಿಸುವಂತೆ ಪ್ರಶಸ್ತವಾದ ಕೆಲಸದಲ್ಲಿ ತೊಡಗುವಂತೆ - ಮನಸ್ಸುಂಟು ಮಾಡಲಿ.

**ಸೂಕ್ತ** - 152 (**ಯುವಂವಸ್ತ್ರಾಣಿ** .......

ದೀರ್ಘತಮ ಔಚಥ್ಯ ಋಷಿ, ಮಿತ್ರಾವರುಣ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಮಿತ್ರಾವರುಣರು, ಅವಿಶ್ರಾಂತವಾಗಿ ಸೂರ್ಯನು ಕಾರ್ಯನಿರ್ವಹಿಸುವಂತೆ ಮಾಡಿದರು. ಸೂರ್ಯನಿಗೆ ಅಶ್ವಗಳು ಹಾಗೂ ರಶ್ಮಿಯನ್ನು ಕೊಡಿಸಿದರು. ಮನಸ್ಸಿಗೆ ಗೋಚರವಾಗದ ಗೂಢವಾದ ಯಜ್ಞಕರ್ಮತತ್ವವನ್ನು ಸೂರ್ಯನೊಂದಿಗೆ ಕೂಡಿಸಿದರು. ಉಷೋ ದೇವಿಯನ್ನು ಪಾಪರಹಿತಳೆಂದು ತಿಳಿಸಿದರು,

ದೇವನಿಂದಕರು ಪ್ರಾರಂಭದಲ್ಲಿ ಸಮರ್ಥರಾಗಿದ್ದರೂ, ಅಂತ್ಯದಲಿ ಕ್ಷೀಣಿಸುವಂತೆ, ಮಿತ್ರಾವರುಣರು ಮಾಡುತ್ತಾರೆ. ಯಜ್ಞದೊಂದಿಗೆ ಯಾಜ್ಞಕರನ್ನು ಸೇರಿಸಿ ಅದರ ಫಲ ಅನುಭವಿಸುವಂತೆ ಮಾಡುತ್ತಾರೆ.

ಮಿತ್ರಾವರುಣರು ದೀರ್ಘತಮರನ್ನು ರಕ್ಷಿಸಲಿ. ಗೋವುಗಳಲ್ಲಿ ಕ್ಷೀರ ತುಂಬಲಿ. ಯಜ್ಞಾಹುತಿಯ ನಂತರ, ಶೇಷಾನ್ನ ಭೋಗಿಸಲು ಅನುಮತಿಸಲಿ. ಪುನಃ ಹವಿಸ್ಸನ್ನು ಅರ್ಪಿಸುವ ಸುಯೋಗ ಒದಗಿಸಲಿ, ಶತ್ರುಜಯಕ್ಕೆ ಸಹಾಯಕರಾಗಲಿ. ವೃಷ್ಟಿ ಉಂಟುಮಾಡಿ ತೃಪ್ತಿತರಲಿ, ಸಂತೋಷತರಲಿ – ಎಂದು ಯಜಮಾನರ ಪ್ರಾರ್ಥನೆ.

**ಸೂಕ್ತ** - 153 ( **ಯಜಾಮಹೇ**.....

ದೀರ್ಘತಮ ಔಚಥ್ಯರು ಮಿತ್ರಾವರುಣರನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಪ್ರಾರ್ಥಿಸುತ್ತಾರೆ.

ರಾತಹವ್ಯರಾಜನು, ಅವನ ಕ್ಷೀರಯುಕ್ತ ಹಸುಗಳನ್ನು ಯಜ್ಞದ ಉಪಯೋಗಕ್ಕಕಳಿಸಿ ಸಂತೋಷ ಉಂಟುಮಾಡಿದ್ದಾನೆ. ಮಿತ್ರಾವರುಣರು, ಘೃತವನ್ನುಸುರಿಸಿ ಹಂಚುವಮಹಾತ್ಮರು.

ಭಕ್ತಿಶ್ರದ್ಧೆ ನಮಸ್ಕಾರ ಉದಕಕ್ಷೀರ ಪುರೋಡಾಶಾದಿಗಳಿಂದ ಕರ್ಮಗಳಿಂದ, ಯಜಮಾನನು ಯಜ್ಞಮಾಡುತ್ತಾನೆ. ಮಿತ್ರಾವರುಣರನ್ನು ಸ್ತುತಿಸುವ ಸಂಕಲ್ಪದಿಂದಲೇ, ಯಾಜ್ಞಕರು ತೇಜೋರೂಪ ಸ್ಥಾನ ಹೊಂದುತ್ತಾರೆ. ಯಜ್ಞಮಾಡುವುದರಿಂದ, ಮಿತ್ರಾವರುಣರು ಅನುಭವಿಸುವ ದೇವತ್ವ ಸುಖವನ್ನೇ, ಇವರೂ ಪಡೆಯುತ್ತಾರೆ.

ಯಜಮಾನನ ಹಾಗೂ ಪ್ರಜೆಗಳ ಅಭಿವೃದ್ಧಿಗಾಗಿ ಯೋಗ್ಯ ಅನ್ನವನ್ನು ದಯಪಾಲಿಸಲಿ.

**ಸೂಕ್ತ** - 154 ( **ವಿಷ್ಣೋರ್ನುಕಂ**.....

ದೀರ್ಘತಮಾ ಔಚಥ್ಯ ಋಷಿಗಳು ದೇವತ ವಿಷ್ಣುವನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ವಿಷ್ಣುವು ವಿಸ್ತಾರವಾದ ಅತಿದೀರ್ಘಕಾಲ ಇರುವ ಪೃಥವ್ಯಾದಿ ಸಮಸ್ತ

ಲೋಕವನ್ನು ಹಾಗೂ ಅಂತರಿಕ್ಷವನ್ನೂ ಒಟ್ಟಾಗಿ ಸೇರುವಂತೆ, ಯಾರಸಹಾಯವೂ ಇಲ್ಲದಂತೆ ನಿರ್ಮಿಸಿದ್ದಾನೆ. ಸಕಲ ಲೋಕ ಸಂಚಾರಿ ಸರ್ವವ್ಯಾಪಕನಾದ ವಿಷ್ಣುವು, ಅಮೃತಭರಿತ, ನಾಶರಹಿತವಾದ ತನ್ನ ಮೂರು ಪಾದಗಳಿಂದಲೇ ನಿರ್ಮಾಣ ಮಾಡಿದ್ದಾನೆ.

ಈ ಮೂರು ವಿಷ್ಣುಪಾದಗಳೇ ಮೇಲಿನ ಎಳು ಹಾಗೂ ಕೆಳಗಿನ ಎಳು ಲೋಕಗಳನ್ನೂ, ನಡುವಿನ – ಪೃಥ್ವಿ, ಆಪ್, ತೇಜಸ್ಸು – ಎಂಬ ಮೂರು ಧಾತುಗಳನ್ನೂ ಸೇರಿಸಿ ಎತ್ತಿಹಿಡಿದಿವೆ. ಇಂತಹ ಬಲವಾನ್ ವಿಷ್ಣುವಿಗೆ ಮನಸ್ಸಿನ ಸ್ತೋತ್ರ ಅರ್ಪಿತ.

ಜಗತ್ತಿನಲ್ಲೆಲ್ಲಾ ಆಕ್ರಮಿಸಿಕೊಳ್ಳುವ, ಸಕಲ ಭಕ್ತರ ಬಂಧು ವಿಷ್ಣುವಿನ ಮಧುರ ಆನಂದ ಅನುಗ್ರಹ ಸಂಪಾದನೆಗಾಗಿ, ಪ್ರಿಯ ಅಂತರಿಕ್ಷ ಮಾರ್ಗ ಹೊಂದಲಿಕ್ಕಾಗಿ, ಯಾಜ್ಞಿಕರು ಅಪೇಕ್ಷಿಸಿದ್ದಾರೆ.

**ಸೂಕ್ತ - 155 (ಪ್ರವಃ ಪಾಂತಮಂಧಸೋ..........**

ದೀರ್ಘತಮ ಔಚಥ್ಯ ಋಷಿಗಳು ವಿಷ್ಣು ಮತ್ತು ಇಂದ್ರನನ್ನು ಜಗತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಇಂದ್ರ ಮತ್ತು ವಿಷ್ಣು – ಇಬ್ಬರೂ ವೈಭವ ಕುದುರೆ ಏರಿನಿಂತಿರುವರು. ಪ್ರಭಾವಶಾಲಿ ಪರಾಕ್ರಮಿಗಳು ಸ್ತುತಿ ಅಪೇಕ್ಷಿತರು.

ಇಂದ್ರನ ಪುರುಷ ಶಕ್ತಿ ಆದಿತ್ಯಮಂಡಲದಲ್ಲಿ ಸ್ಥಾಪಿತವಾಗಿದೆ. ಸೋಮವು ಪುರುಷಶಕ್ತಿಯನ್ನು ವೃದ್ಧಿಮಾಡುತ್ತದೆ. ಈ ಶಕ್ತಿಯನ್ನು ಇಂದ್ರನು, ಪ್ರಾಣಿಗಳು ಸಂತಾನ ಭೋಗಶಕ್ತಿ ಅನುಭವಿಸಲೆಂದು, ದ್ಯಾವಾಪೃಥಿವಿಗಳಲ್ಲಿ ಸೇರಿಸಿದ್ದಾನೆ. 'ವಿಷ್ಣುವಿನಅನುಗ್ರಹ' ದಿಂದ ಎಂಬ ಹೆಸರುಳ್ಳದ್ದಾಗಿದ್ದು ಪುತ್ರಪೌತ್ರ ಎಂಬ ಸಂಜ್ಞೆಯುಳ್ಳದ್ದಾಗಿದೆ.

ವಿಷ್ಣುವು ಅಧ್ಯಾತ್ಮಿಕ ಲೋಕಸ್ವಾಮಿ; ಲೋಕಪಾಲಕ, ಅಹಿಂಸಕ, ಸತ್ವವಂತ, ಭ್ರಮಣ ಪರಾಕ್ರಮಿ, ತರುಣ, ಪ್ರಶಂಸಕ, ಮೂರು ಪಾದಗಳಿಂದ ಮೂರು ಲೋಕಗಳನ್ನು ಸಂಚರಿಸಿ ವಿಸ್ತರಿಸುವವನು. ವಿರಾಡ್ರೂಪಿ ಶರೀರದ ವಿಷ್ಣುವು ವಲಯಾಕಾರ ಸಂಚರಿಸುತ್ತಾನೆ.

ಭೂಲೋಕ ಅಂತರಿಕ್ಷಗಳನ್ನು ಆಳಿಯುವ ವಿಷ್ಣುವಿನ ಎರಡು ಪಾದಗಳನ್ನು ಸ್ತುತಿಮಾಡಿ ತಿಳಿಯಬಹುದು. ಆದರೆ ದ್ಯುಲೋಕಆಳಿಯುವ ಪಾದವನ್ನು ತಿಳಿಯಲು ಯಾರಿಗೂ ಸಾಧ್ಯವಿಲ್ಲ, ಪ್ರದೇಶಸಂಚಾರಿ ವಾಯುವಿಗೂ ಸಹಾ!

ವಿಷ್ಣುವು ದೇವತಿರ್ಯಗಾದಿ ನಾನಾರೂಪ ವಿಭಾಗಿಸಿ, ತನ್ನ ಸ್ವರೂಪವನ್ನು ಪರಿಣಾಮ ಗೊಳಿಸುತ್ತಾನೆ. ಲೋಕರಕ್ಷಣಕ್ಕಾಗಿ, ಆಯಾ ಪುರುಷರೂಪ ಪರಾಕ್ರಮಗಳನ್ನು, ಯಾಜ್ಞಿಕರು ಸ್ತುತಿಸುತ್ತಾರೆ.

ಸೋಮ ರೂಪಗಳಲ್ಲಿ ಅನ್ನ ಪೂಜೆಗಳನ್ನು ಅಗ್ನಿಯಮೂಲಕ ವಿಷ್ಣುವಿಗೆ ಅರ್ಪಿಸಿ, ಮತಶಿಷ್ಟ ಸೋಮವನ್ನು ಯಜಮಾನನು ಸೇವಿಸುತ್ತಾನೆ.

ಇಂತಹ ವಿಷ್ಣುವನ್ನು ಯಜಮಾನನು ಯಜ್ಞಕ್ಕೆ ಆಹ್ವಾನಿಸುತ್ತಾನೆ.

ಸೂಕ್ತ - 156 (ಭವಾವಿಂತ್ರೋ........

ದೀರ್ಘತಮ ಔಚಥ್ಯ ಋಷಿಗಳು ವಿಷ್ಣುದೇವನನ್ನು ಜಗತೀ ಛಂಧಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ವಿಷ್ಣುವು ಉತ್ಕೃಷ್ಟ ಸ್ವರ್ಗೋತ್ಪಾದಕ ಶಕ್ತಿಯನ್ನು ಹೊಂದಿದ್ದಾನೆ. ಮೇಘದಿಂದ ವೃಷ್ಟಿಕರಯುತ್ತಾನೆ.

ಯಜಮಾನರು, ಎಲ್ಲರೂ ಧ್ಯಾನಿಸಬೇಕಾದ, ಮಹಾನಾಮ ಪುರುಷಾರ್ಥಪ್ರದ ವಿಷ್ಣುವನ್ನು ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಪುನಃ ಪುನಃ ಸ್ತುತಿ ಸ್ತೋತ್ರ ಹವಿರಾದಿಗಳಿಂದ ಹರಿಸುತ್ತಾರೆ. ವಿಷ್ಣುವು ಯಜಮಾನನ ಸಹಾಯಕ್ಕೆ ಬರುತ್ತಾನೆ.

ಯಜ್ಞವನ್ನು ವರುಣ ಅಶ್ವಿನೀದೇವತೆಗಳು ಸೇವಿಸುತ್ತಾರೆ. ಯಜಮಾನನ್ನು ಫಲ ಅನುಭವಿಸಲು ಅರ್ಹರನನ್ನಾಗಿಸುತ್ತಾನೆ. ಮತ್ತು ಸಂತೋಷಗೊಳಿಸುತ್ತಾನೆ.

ವಿಷ್ಣುವು ಯಜಮಾನನಿಗೆ ರಕ್ಷಣೆ ಯಶಸ್ಸು ಕೊಡಲಿ, ಎಲ್ಲರ ಅಪೇಕ್ಷಿತ ವಿಷ್ಣುಸಾನಿಧ್ಯ ಕೊಡಲಿ, ವಿಷ್ಣುವಿನ ಆ ಅನುಗ್ರಹ ಅನುಭವಿಸುವಂತಾಗಲಿ.

ಸೂಕ್ತ - 157 (ಅಭೋದ್ವಗ್ನಿರ್ಜ್ಮ.....

ದೀರ್ಘತಮ ಔಚಥ್ಯ ಋಷಿಗಳು ಅಶ್ವಿನೀದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಶ್ವಿನೀದೇವತೆಗಳು ಎಲ್ಲಾ ಭೂತಗಳಲ್ಲಿಯೂ ಅಂತಃಸತ್ವಯುಕ್ತರು, ಪ್ರಾಣಿಗಳಲ್ಲಿ ಗರ್ಭರೂಪ ಜೀವಾಂಕುರ ಸ್ಥಾಪಿಸುವವರೂ, ಅತ್ಯಧಿಕ ಶಕ್ತಿಯುತರೂ, ಔಷಧ ಮೂಲಿಕೆಗಳ ಸ್ವರೂಪ ತಿಳಿದ ವೈದ್ಯರೂ ಆಗಿದ್ದಾರೆ.

ಅಶ್ವಿನೀದೇವತೆಗಳು, ವೃಷ್ಟಿಯನ್ನುಂಟುಮಾಡಿ, ಮಧುರ ಉದಕ, ಬಲವೃದ್ಧಿಯಾಗುವಂತೆ ಮಾಡುವರು.

ಅಶ್ವಿನೀದೇವತೆಗಳು ಧನಯುಕ್ತರು, ಮಧುಯುಕ್ತರು, ಮೂರು ಚಕ್ರಗಳ ಮೂರು ಕಾಷ್ಠಗಳ ರಥಯುಕ್ತರು.

ಅಶ್ವಿನೀದೇವತೆಗಳು, ಬಲ ಹೆಚ್ಚಿಸುವ ಅನ್ನಒದಗಿಸಲಿ. ಮಧುರವಾಕ್ಕಿನಿಂದ ಸಂತೋಷ ಹೆಚ್ಚಿಸಲಿ. ಆಯುಸ್ಸನ್ನುವೃದ್ಧಿಸಲಿ. ಯಾಜ್ಞಿಕರ ಪಾಪ ಕಳೆಯಲಿ. ಶೂರ ಯುದ್ಧಗಳಲ್ಲಿ ಶತ್ರುನಾಶ ಮಾಡಿ ವಿಧ ವಿಧ ಧನಲಾಭ ಪಡೆಯಲಿ. ಸುಖಪುತ್ರ, ಭೃತ್ಯ, ಪಶುಗಳನ್ನು - ಯಜಮಾನನಿಗೆ ಉಂಟುಮಾಡಲಿ.

ಶ್ರದ್ಧಾಪೂರ್ವಕವಾಗಿ ಹವಿರಾದಿಗಳನ್ನು ಅರ್ಪಿಸುವ ಯಜಮಾನನ ಬಳಿಯೇ ಇದ್ದು ಉದ್ಧರಿಸಲಿ. ವೇದಿಕೆಯ ಮೇಲಿನ ಅಗ್ನಿಯು, ಉದಕವನ್ನೂ ವನವೃಕ್ಷಗಳನ್ನೂ, ದೇವತಾತ್ಮ ಸವಿತೃವು ನಿಯಮಿತ ಕರ್ಮಮಾಡುವ. ಚೈತನ್ಯವನ್ನು ಜಗತ್ತಿನ ಸಕಲಪ್ರಾಣಿಗಳಿಗೂ, ಉದಯಸೂರ್ಯ ಮತ್ತು ಉಷೆ ಪ್ರಾಣಿಗಳಿಗೆ ಹರ್ಷವನ್ನುತರಲಿ.

**ಸೂಕ್ತ - 158 (ವಸೂ ರುದ್ರಾ.................**

ದೀರ್ಘತಮಾ ಔಚಥ್ಯ ಋಷಿಗಳು ಅಶ್ವಿನೀದೇವತೆಗಳನ್ನು ತ್ರಿಷ್ಟುಪ್ ಮತ್ತು ಅನುಷ್ಟುಪ್ ಛಂದದ ಋಕ್‌ಗಳಿಂದ ಸ್ತುತಿಸುತ್ತಾರೆ.

ಯಾಜ್ಞಿಕರು ಕೊಟ್ಟ ಹವಿಸ್ಸಿನಿಂದ ತೃಪ್ತರಾಗಿ, ಪ್ರಭೂತ ಧನಕೊಡುವ ಅಶ್ವಿನೀದೇವತೆಗಳು, ಒಳ್ಳೆಯದನ್ನು ಮಾಡಬೇಕೆಂಬ ಅನುಗ್ರಹ ಬುದ್ಧಿಯುವರು.

ರಥದಲ್ಲೇ ಸಮುದ್ರವನ್ನು ದಾಟಿ ತುಗ್ರ ಪುತ್ರನನ್ನು ರಕ್ಷಿಸಿದವರು.

ಧೀರ್ಘತಮಸರನ್ನು ಸೇವಕರು ನದಿಯಲ್ಲಿ ಎಸೆದರೂ ತೇಲಿಸಲ್ಪಟ್ಟರಲ್ಲದೇ ಸೇವಕ ತ್ರೈತನು ಹೊಡೆದರೂ ಆ ಏಟು ತ್ರೈತನಿಗೇ ತಗುಲುವಂತೆ ಮಾಡಿದವರು ಅಶ್ವಿನೀದೇವತೆಗಳು. ಹತ್ತು ಯುಗಗಳ ಕಾಲ ಸುಖಜೀವನವನ್ನು ಋಷಿಗಳಿಗೆ ಅನುಗ್ರಹಿಸಿ ಯಜ್ಞಯಾಗಾದಿಗಳನ್ನು ಮಾಡಿಸಿ. ಬ್ರಹ್ಮ ಪದವಿಗೇರುವಂತೆ ಮಾಡಿದರು.

ಇಂತಹ ಅಶ್ವಿನೀದೇವತೆಗಳು ಯಜ್ಞಯಜಮಾನನಿಗೆ ಧನ ರಕ್ಷಣೆ ಅನುಗ್ರಹ ಅಪೇಕ್ಷಿತ ವಸ್ತುಗಳನ್ನು ಕೊಡಲಿ. ಶರೀರ ಸುಖಸಂಪತ್ತಿಗೆ ಗೋವುಗಳನ್ನು ಕೊಡಲಿ. ಅಗ್ನಿಯು ದಹಿಸದಿರಲಿ. ಜೀರ್ಣಾವಸ್ಥೆಯು ವಾರ್ಧಕ್ಯ ಉಂಟಾಗದಿರಲಿ. ಶತ್ರುಗಳಿಂದ ಬದ್ಧನಾಗಿ ತೆವಳುತ್ತಾ ನಡ ನಿಶ್ಶಕ್ತಿ ಉಂಟಾಗದಿರಲಿ - ಎಂದು ಯಜಮಾನ ಪ್ರಾರ್ಥಿಸುತ್ತಾನೆ.

**ಸೂಕ್ತ-159. (ಪ್ರದ್ಯಾವಾ..........**

ಧೀರ್ಘತಮಾ ಔಚಿತ್ಯ ಋಷಿಗಳು ದ್ಯಾವಾಪೃಥಿವಿಗಳನ್ನು ಜಗತೀ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ದ್ಯಾವಾಪೃಥಿವಿಗಳು ಯಜ್ಞ ವೃದ್ಧಿಮಾಡುವ ಮಹಾನ್ ರೂಪಿಗಳು. ಕೆಡಕನ್ನು ಮಾಡದ ಪಿತೃರೂಪಿಗಳು. ದೇವತೆಗಳನ್ನು ಪುತ್ರರನ್ನಾಗಿ ಹೊಂದಿರುವವರು, ಸ್ವಾಯತ್ತರು ಹಾಗೂ ಅನುಗ್ರಹಾತ್ಮಕ ಮನಸ್ಸುಗಳಿಂದ ಯಜಮಾನರೂಪಿ ಪ್ರಜೆಗಳಿಗೆ ಶಾಶ್ವತ ರಕ್ಷಣಾ ಸಹಾಯ ಕೊಡುವರು.

ಆದಿತ್ಯನು ಸಕಲ ಇಷ್ಟಾರ್ಥಪ್ರದ, ದೇವತಾತ್ಮ ಲೋಕ ಕಾರಣ ಕರ್ತವ್ಯ ನಿರ್ವಹಣೆಗಾಗಿ, ಒಂದೇ ಮಾರ್ಗದಲ್ಲಿ ಸಂಚರಿಸುವವನು. ಚೈತನ್ಯಪ್ರಧಾನ ಶಕ್ತಿಯಿಂದ ರಶ್ಮಿಗಳಿಂದ ತಮ್ಮ ಪ್ರಭೆಯನ್ನು ಸುತ್ತಲೂ ಪ್ರಸರಿಸುತ್ತಾನೆ. ಕಿರಣಗಳಿಂದ ಎಚ್ಚೆತ್ತು ಆದಿತ್ಯನ ಮಾರ್ಗವನ್ನೇ ದ್ಯಾವಾಪೃಥಿವಿಗಳು ಅನುಸರಿಸುತ್ತಾ ರಕ್ಷಿಸುತ್ತವೆ.

ಹವಿರರ್ಪಣೆ ಸ್ತುತಿಗಳಿಂದ ದ್ಯಾವಾಪೃಥಿವಿ, ಆದಿತ್ಯರುಗಳಿಂದ ಇಷ್ಟಾರ್ಥ ಅನುಗ್ರಹ ಧನ ಗೃಹ ಗೋಧನ ಸಂಪತ್ತಿಗಾಗಿ ಯಜ್ಞಯಜಮಾನರು ಪ್ರಾರ್ಥಿಸುತ್ತಾರೆ.

**ಸೂಕ್ತ-160 (ತೇ ದ್ಯಾವಾ ಪೃಥಿವಿ......**

ದೀರ್ಘತಮ ಔಚಥ್ಯ ಋಷಿಗಳು. ದ್ಯಾವಾಪೃಥಿವಿಯರನ್ನು ಕುರಿತು ಜಗತೀ ಛಂಧಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ದ್ಯುಲ್ಲೋಕಾಭಿಮಾನಿ ದೇವತೆ ಭೂದೇವಿಯು, ಶುಕ್ಲವರ್ಣೆ; ವರ್ಷದಾಯಕಳು ಸಕಲ ಲೋಕವನ್ನೂ ರಕ್ಷಿಸಿ ಕಾಪಾಡುವವಳು, ಸೂರ್‍ಯ ರಶ್ಮಿಯಿಂದ ಪವಿತ್ರಗೊಳ್ಳುವವಳು.

ದೇವೋತ್ತಮನಾದ ಆದಿತ್ಯನು ಪವಿತ್ರಾತ್ಮ, ಪವಿತ್ರ ರಶ್ಮಿವಂತ, ದ್ಯಾವಾಪೃಥಿವಿಗಳ ಪುತ್ರ. ಉದಕ ಹರಿಯುವುದು, ಲೋಕ ಪವಿತ್ರವಾಗುವುದು ಲೋಕ ಸಂಚಾರಿಯಾದ ಇವನಿಂದಲೇ.

ಸೂರ್‍ಯನು, ಪಾಯಸದಂತೆ ಸಿಹಿ ಉದಕ ವೃಷ್ಟಿಯನ್ನು ದ್ಯುಲೋಕದಿಂದ ಉಂಟುಮಾಡುತ್ತಾ, ಪಿತೃಸ್ಥಾನಿ ಅಂತರಿಕ್ಷದಲ್ಲಿ ಸಂಚರಿಸುತ್ತಾನೆ.

ದ್ಯಾವಾಪೃಥಿವಿಗಳನ್ನು ಆಳಿದವನು ಹಾಗೂ ಅವರನ್ನು ಶಾಶ್ವತವಾಗಿ ಭದ್ರವಾಗಿರುವಂತೆ ನಿರ್ಮಿಸಿದವ, ಕರ್ಮಯುಕ್ತರ ನಡುವೆ ಶ್ರೇಷ್ಠ ಕರ್ಮ ಮಾಡುವವ – ಸೂರ್‍ಯನೇ.

ಇಂತಹ ದ್ಯಾವಾಪೃಥಿವಿ, ಸೂರ್‍ಯರು – ಯಾಜ್ಞಿಕರಿಗೆ ಪ್ರಭೂತ ಅನ್ನ ಬಲ ಸಂತಾನಾಭಿವೃದ್ಧಿ ಕೊಟ್ಟು ಸ್ತುತ್ಯಾರ್ಹವಾದ ವೀರ್‍ಯ ಕೊಡಲಿ.

**ಸೂಕ್ತ-161 .(ಕಿಮುಶ್ರೇಷ್ಠಂ......**

ದೀರ್ಘತಮ ಔಚಥ್ಯ ಋಷಿಗಳು ಋಭುದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಋಭುಗಳು ಶಕ್ತಿಪುತ್ರರು. ಇವರ ಪರಿಚಯ ಅಗ್ನಿಯ ಮೂಲಕ ಯಜಮಾನನಿಗೆ ಆಗುತ್ತದೆ. ಋಭುಗಳು ವೃಷ್ಟ್ಯಾದಿಗಳಿಗೆ ನೇತೃಗಳು, ಸೂರ್‍ಯರಶ್ಮಿರೂಪರು, ಪ್ರಕಾಶಮಾನರು, ಪ್ರಾಣಿಹಿತಕ್ಕಾಗಿ ಸಸ್ಯಗಳನ್ನು ಸೃಷ್ಟಿಸಿದವರು. ತಗ್ಗು ಪ್ರದೇಶಕ್ಕೆ ನೀರು ಹರಿಸಿ, ನಿಂತ ನೀರು ಪ್ರಯೋಜನವಾಗುವಂತೆ ಮಾಡಿದವರು. ಕಾರ್‍ಯತಡೆಯುವ ಶತ್ರುಗಳನ್ನು ನಾಶಮಾಡಿ ಅಪಶಬ್ದ ಅವಹೇಳನ ಮಾಡುವವರನ್ನು ತಮ್ಮ ಶಬ್ದದಿಂದಲೇ ಓಡಿಸುತ್ತಾರೆ.

ಋಭುಗಳು ರಾತ್ರಿಯಲ್ಲಿ ಸೂರ್‍ಯಮಂಡಲದಲ್ಲಿ ವಿಶ್ರಮಿಸಿ, ಹಗಲಿನಲ್ಲಿ ಕರ್ತವ್ಯ ನಿರತರಾಗಿದ್ದು, ವಾಯುಪ್ರೇರಣೆಯಿಂದ ವರ್ಷಿಸಿ, ಜಗತ್ತು ವಿವಿಧ ಪ್ರಕಾರಗಳಲ್ಲಿ ಪ್ರಕಾಶಿಸುವಂತೆ ಮಾಡುತ್ತಾರೆ. ಇವರನ್ನು ಅಪೇಕ್ಷಿಸಿ, ದ್ಯುಲ್ಲೋಕದಿಂದ ಮರುತ್ತುಗಳು, ಭೂಲೋಕದಿಂದ ಅಗ್ನಿ, ಅಂತರಿಕ್ಷದಿಂದ ವಾಯು, ಅಂತತರಿಕ್ಷಸ್ಥ ಉದಕದಿಂದ ವರುಣ – ಇವರೆಲ್ಲಾ ಆಗಮಿಸುತ್ತಾರೆ.

ಋಭುಗಳು ಕುದುರೆ ರಥನಿರ್ಮಿಸಿದವರು. ಮೃತ ಹಸುವಿಗೆ ಜೀವತಂದವರು. ವೃದ್ಧಮಾತಾಪಿತೃಗಳಿಗೆ ಯೌವನ ತಂದವರು. ಒಂದು ಅಶ್ವದಿಂದ ಮತ್ತೊಂದು ಅಶ್ವ ನಿರ್ಮಿಸಿದವರು.

ಸತ್‌ಕುಲ ಚಮಸ ಪಾತ್ರೆಯನ್ನು ದಾರುವಿಂದ ತ್ವಷ್ಟನು ತಯಾರಿಸಿದನು. ಮಾತೆಗೆ ಬೇರೆ ಬೇರೆ ರೂಪದಿಂದ ಕಾಣಿಸಿಕೊಂಡು ಮಾತೆಯನ್ನು ತೃಪ್ತಿಗೊಳಿಸಿದರು. ಬೃಹಸ್ಪತಿ ನಾನಾರೂಪ ಗೋವುಗಳನ್ನು ಸ್ವೀಕರಿಸಿದ್ದರಿಂದ ಋಭುಗಳು ಮೂರು ಹೆಸರಿಂದ ಪ್ರಸಿದ್ಧರಾದರು. 'ಅಗ್ನಿ ಉದಕ ಪೃಥ್ವಿ' – ಇವುಗಳು ಸರ್ವಶ್ರೇಷ್ಠ ಎಂಬ ಚರ್ಚೆಯ ಕಾಲದಲ್ಲಿ ಚಮಸ ಪಾತ್ರೆಯನ್ನು ನಾಲ್ಕು ಅವಯವವಾಗುವಂತೆ ಮಾಡಿದರು.

ಇಂದ್ರನ ಕುದುರೆ ಹರಿಗಳು ಅಶ್ವಿನೀಕುಮಾರರಿಂದ ನಿರ್ಮಿತ ರಥಕ್ಕೆ ಯೋಜಿಸಲ್ಪಟ್ಟವು. ಅಗ್ನಿ ಮತ್ತು ತ್ವಷ್ಟರು ಋಭುಗಳ ಪ್ರಭಾವಿತ ಕಾರ್ಯಗಳಿಂದ ಅಂತರ್ಗತರಾದರು.

ಕಲಾಕೌಶಲ್ಯದಿಂದ, ದೇವತೆಗಳಂತೆ ಋಭುಗಳು ಸೋಮ ಭಾಗಕ್ಕೆ ಅರ್ಹತೆಗಳಿಸಿದರು.

ಯಜ್ಞದಲ್ಲಿ ಋತ್ವಿಕರಿಗಾಗಿ, ರಕ್ತಮಾಂಸ ಕತ್ತರಿಸುವ, ಪುರೋಡಾದಿಗಳನ್ನೂ ಬೇರೆ ಮಾಡುವ ಕಾರ್ಯನಿರ್ವಹಿಸುತ್ತಾರೆ.

ಇಂತಹ ಋಭುಗಳು, ಮೂರು ಸವನಗಳಲ್ಲಿಯೂ ಯಾವಾಗಲಾಗಲೀ ಸೋಮಪಾನಕ್ಕಾಗಿ ಯಜ್ಞಕ್ಕೆ ಆಗಮಿಸಲಿ.

**ಸೂಕ್ತ** - 162 **(ಮಾನೋ ಮಿತ್ರ............**

ಧೀರ್ಘತಮೋ ಔಚಥ್ಯ ಋಷಿಗಳು, ಅಶ್ವಸ್ತುತಿಯನ್ನು ತ್ರಿಷ್ಟುಪ್ ಮತ್ತು ಜಗತೀ ಛಂದಸ್ಸಿನ ಋಕ್‌ಗಳಿಂದ ಮಾಡುತ್ತಾರೆ.

ಯಜ್ಞಾಶ್ವವು, ದೇವತೆಗಳಿಂದ ದೇವತೆಗಳಿಗಾಗಿಯೇ ದೇವತೆಗಳರೂಪದಲ್ಲೇ ಇರುವುದು; ಸುಂದರ ದಷ್ಟ ಪುಷ್ಟ ವೀರ್ಯಕರ್ಮಯುಕ್ತವಾದದ್ದೂ ಆಗಿಯತ್ತದೆ. ಸುವರ್ಣಾಭರಣ ಅಲಂಕೃತ ಈ ಅಶ್ವವು ಯಾರಿಂದಲೂ ನಿಂದಿತವಾಗುವಂತಹುದಲ್ಲ.

ಯಜ್ಞಾಶ್ವದ ಮುಂದೆ ನಾನಾ ಬಣ್ಣದ ಶ್ರೇಷ್ಠ ಅಜಗಳು. ಧ್ವನಿಮಾಡುತ್ತಾ ವೇಗವಾಗಿ ಓಡುತ್ತಾ ಇಂದ್ರನಿಗೂ ಪೂಷನಿಗೂ ಅನ್ನಕ್ಕಾಗಿ ಸಿದ್ಧವಾಗುತ್ತವೆ. ಪ್ರಥಮಾರ್ಪಿತ ಅಜವನ್ನು ತ್ವಷ್ಟರು ಶ್ರೇಷ್ಠ ಪ್ರೀತಿದಾಯಕ ಅನ್ನ ಮಾಡುತ್ತಾರೆ.

ದೇವತೆಗಳಿಂದ ಅಪೇಕ್ಷಿತವಾಗಿ ದೇವತೆಗಳಿಗೇ ಸೇರಬೇಕಾದ ಅಶ್ವವು ಮೂರುಸಲ ಅಗ್ನಿ ಪ್ರದಕ್ಷಿಣೆ ಮಾಡುತ್ತದೆ, ಅಶ್ವಕ್ಕೆ ಸಂಚಾರ ಕಾಲದಲಿ ಆಗುತ್ತಿದ ಹಿಂಸೆ, ಹೊಗೆಯಿಂದಾಗುತ್ತಿದ ಹಿಂಸೆ, ಹಾಗೂ ಶಬ್ದ – ಇವೆಲ್ಲಾ ಮಂತ್ರಾದಿಗಳಿಂದ ಶಮನವಾಗುತ್ತದೆ.

ಕಾಲನೇ ಅಶ್ವದ ಛೇದನಕಾರ; ಮೂವತ್ತನಾಲ್ಕು ಪಕ್ಕೆಲಬುಗಳ ಅಶ್ವದ ದೇಹಸ್ವರೂಪ ಸೂಕ್ಷ್ಮವನ್ನು ತಿಳಿದವನು, ವ್ಯರ್ಥವಾಗಿ ಅವಯವತುಂಡುಮಾಡನು, ಅಹೋರಾತ್ರಿ ಅಥವಾ ದ್ಯಾವಾಪೃಥವಿ ರೂಪದ ಇಬ್ಬರು, ಛೇದಕ ತುಂಡುಗಳನ್ನು ಪಿಂಡರೂಪದಲ್ಲಿ ಅಗ್ನಿಯಲ್ಲಿ ಆಹುತಿ ಕೊಡುತ್ತಾರೆ. ಸಂಸ್ಕಾರಗೊಂಡ ಆಹುತಿಯಾದ ಅಶ್ವವನ್ನು

ದೇವತೆಗಳು ಸ್ವೀಕರಿಸುತ್ತಾರೆ.

ಅಶ್ವಭಂಧನದ ಹಗ್ಗ, ತಿನ್ನುವ ಹುಲ್ಲು ನಡೆಯುತ್ತಿರುವ ನೆಲ, ಹೊದ್ದಿದ ಹೊದಿಕೆ, ಆಭರಣಗಳು, ಕುಡಿವ ನೀರು – ಎಲ್ಲವೂ ದೇವತೆಗಳಿಗೇ ಅರ್ಪಿತವಾಗಲಿ.

ಮಾಂಸ ಛೇದಿಸುವಾಗ ವಧಾಸ್ಥಂಭಕ್ಕೆ ಕತ್ತಿಗೆ, ಛೇದಕನ ಕೈಗೆ, ಉಗುರಿಗೆ ಅದರ ಮೇಲೆ ಕುಳಿತು ನೊಣ ತಿನ್ನುತ್ತಿದ ಭಾಗವೂಸಹಾ ದೇವತೆಗಳಿಗೆ ಅರ್ಪಿತವಾಗಲಿ.

ಅಶ್ವದ ಉದರ ಭಾಗದಲ್ಲಿ ಜೀರ್ಣವಾಗದೇ ಉಳಿದ ಆಹಾರವು ಹನನಕಾಲದಲ್ಲಿ ಹೊರಬರುತ್ತದೆ. ಹಳಿಯಾದ, ದುರ್ಗಂಧಯುತ ಮಾಂಸ ಎಲ್ಲವನ್ನೂ, ವಧಿಸುವವರು ದೋಷರಹಿತ ಹಾಗೂ ಶುದ್ಧವಾಗಿ ಮಾಡಿ ದೇವತಾಯೋಗ್ಯ ಮಾಡಲಿ.

ಮಾಂಸ ಬೇಯುತ್ತಿರುವ ಪಾತ್ರೆ ಕೆಳಗೆ ಬೀಳದೇ ಇರಲಿ. ಪಾತ್ರೆಯಿಂದ, ಸಲಾಕೆಯಿಂದ, ಧರ್ಭೆ ಹಾಗೂ ನೆಲದ ಮೇಲೆ ಬೀಳುವ ಮಾಂಸ ಭಾಗವೂ ವ್ಯರ್ಥವಾಗದೇ ದೇವತೆಗಳಿಗೇ ಅರ್ಪಿತವಾಗಲಿ.

ಯೂಪಸ್ತಂಭವನ್ನೂ, ಅಶ್ವಭಂದಕೊಂಡಿಯನ್ನೂ ಭಾಂಡಾದಿಗಳನ್ನೂ ಸಿದ್ಧಪಡಿಸುವ ಶ್ರದ್ಧಾ ಭಕ್ತಿಯುಳ್ಳ ಋತ್ವಿಜರ ಇಷ್ಟಾರ್ಥವೆಲ್ಲಾ ಕೈಗೂಡಲಿ.

ಆಹುತ್ಯರ್ಪಣೆಯಿಂದ ಪ್ರವಹಿಸುವ ಘೃತಾದಿಗಳು ತುಂಬಿ ಹರಿಯುವಂತೆ ಮಾಡಲಿ.

ಬೇಯುತ್ತಿರುವಾಗ, ಆಸಕ್ತಿಯಿಂದ ನೋಡುತ್ತಾ ವಾಸನೆ ಅನುಭವಿಸಿ, ಬೆಂದನಂತರ ದೇವತೆಗಳಿಗೆ ಅರ್ಪಿಸಿ, 'ತಮಗೂ ಕೊಡಲೆಂದು' ಅಪೇಕ್ಷಿಸುವವರಿಗೂ ಸಿಕ್ಕಲಿ.

ಅತೀಂದ್ರಿಯ ಜ್ಞಾನಿಗಳಾದ ಋಷಿಗಳು, ಮೇಧಾವಿ ಋತ್ವಿಜರು, ಈ ಕಾರ್ಯವನ್ನು ಅನುಮೋದಿಸಿ ತೃಪ್ತಿಸೂಚಿಸಲಿ.

ವಾಸ್ತವವಾಗಿ ಅಶ್ವ ಮೃತವಾಗುವುದೇ ಇಲ್ಲ ! 'ಹರಿ' ಎಂಬ ಕುದುರೆಗಳ ಜೊತೆ ಹೋಗುತ್ತದೆ.

ಈ ಹರಿಯರೂಪದ ಅಶ್ವವು, ವಿಶ್ವಪೋಷಕ ಧನ, ಪಾಪರಹಿತ ಸ್ಥಿತಿ, ಪುತ್ರರನ್ನೂ ಕೊಡಲಿ.

**ಸೂಕ್ತ** - 163 ( **ಯದಕ್ರಂದ.....**

ದೀರ್ಘತಮ ಔಚಥ್ಯ ಋಷಿಗಳು ಅಶ್ವಸ್ತುತಿಯನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಮಾಡುತ್ತಾರೆ.

ಮೇಧಾಶ್ವವು ಆದಿತ್ಯನಿಂದ(ಅಥವಾ ಉದಕದಿಂದ) ಉತ್ಪನ್ನವಾಗಿ ಗಿಡಗದಕ್ಕೆಯಂತಹ ರೆಕ್ಕೆ ಜಿಂಕೆಯ ಕಾಲುಗಳಂತಹ ಕಾಲು, ಧೃಡವಾದ ಉಕ್ಕಿನಂತಹ ಶಕ್ತಿಯುತ ಪಾದ, ಆಕರ್ಷಕ ಹೇಷಾರವದಿಂದ ಕೂಡಿರುತ್ತದೆ.

ಇಂದ್ರನಿಗಿಂತಲೂ ಹೆಚ್ಚು ಮನೋವೇಗ ಉಳ್ಳ, ಯಮನಿಂದ ದತ್ತವಾದ ಈ ಅಶ್ವವನ್ನು ವಾಯುವು ರಥಕ್ಕೆ ಸೇರಿಸಿದ. ಇಂದ್ರನು ರಥದಲ್ಲಿ ಕುಳಿತ, ಸೋಮನು ರಥದ ಸಾರಥಿಯಾದ.

ವಿಶಾಲವಾಗಿ ಹರಡಿರುವ ಅಶ್ವದ ಕೇಸರಗಳು ಕೊಂಬಿನಂತೆ ಇವೆ. ರಮ್ಯವಾದ ಜಲನಾತ್ಮಕ ಶರೀರ ಹಾಗೂ ವೇಗದ ಮನಸ್ಸುಳ್ಳವಂತಹದಾಗಿದೆ.

ಅಗ್ನಿ ವಾಯು ಸೋಮ ಆದಿತ್ಯ ಸಂಬಂಧಿ ಅಶ್ವಕ್ಕೆ ದ್ಯುಲೋಕ ಭೂಲೋಕ ಅಂತರಿಕ್ಷಗಳಲ್ಲಿ 'ಮೂರು ಮೂರು ಬಂಧನಗಳಿವೆ' – ಎನ್ನಲಾಗಿದೆ. ಪೃಥ್ವಿಯಿಂದ ಅಂತರಿಕ್ಷದ ಸೂರ್ಯನೆಡೆಗೆ ಪಾಪನಿವಾರಕ ಅಶ್ವವು ಹಾರುತ್ತದೆ.

ಯಜ್ಞಭೂಮಿಯ ಸುತ್ತಲಿರುವ ಅರ್ಪಿಸಿದ ಅನ್ನವನ್ನು ಅಶ್ವವು ಆತುರದಿಂದ ಭಕ್ಷಿಸುತ್ತದೆ.

ಉತ್ತಮ ರಥ, ಮಾನವರು ಗೋವುಗಳು, ಸುಂದರಸ್ತ್ರೀಯರು ದೇವಸಮೂ – ಎಲ್ಲಾ ಇಂತಹ ಅಶ್ವದ ಸ್ನೇಹವನ್ನು ಅಪೇಕ್ಷಿಸುತ್ತಾರೆ.

ಇಂತಹ ಅಶ್ವವು, ದೇವತೆಗಳನ್ನು ಧ್ಯಾನಿಸುತ್ತಾ ವಧ್ಯಸ್ಥಾನಕ್ಕೆ ಕರೆತರಲ್ಪಟ್ಟಾಗ, ಋತ್ವಿಜರು ಅವರ ನೇರಕರ್ಮಗಳನ್ನು ಹೊಗಳುತ್ತಾ ಹಿಂಬಾಲಿಸುತ್ತಾರೆ.

ಸ್ವರ್ಗ ಸೇರಲು ಹರ್ಷದಿಂದಿರುವ ಅಶ್ವವು, ನಂತರದಲ್ಲಿ ಯಜಮಾನನಿಗಾಗಿ ಅಪೇಕ್ಷಿತವಾದದ್ದನ್ನೆಲ್ಲಾ ಅನುಗ್ರಹಿಸಲಿ.

**ಸೂಕ್ತ** - 164 (**ಅಸ್ಯವಾಮಸ್ಯ**.....

ಧೀರ್ಘತಮಾ ಔಚಥ್ಯ ಋಷಿಗಳು ವಿಶ್ವೇದೇವತೆಗಳನ್ನು – ವಾಕ, ಆಪ, ಶಕಧೂಮ, ಸೋಮ, ಅಗ್ನಿ, ಸೂರ್ಯ, ವಾಯು, ಸಂವತ್ಸರ, ಸಂಧ್ಯಾಕಾಲಚಕ್ರ, ಸರಸ್ವತಿ – ದೇವತೆಗಳನ್ನೂ ತ್ರಿಷ್ಟುಪ್ ಜಗತೀ ಪ್ರಸ್ತಾರಪಂಕ್ತಿ ಅನುಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಮನಸ್ಸು ದೇವತೆಗಳ ವಿಷಯದ ಬಗ್ಗೆ ಪ್ರಶ್ನೆಯುಳ್ಳದ್ದು, ಅಲೌಕಿಕವಾದದ್ದು, ಅತಿಶಯ ಅದೃಷ್ಟದಿಂದ, ವಿಶೇಷವಾಗಿ ಉತ್ಪನ್ನವಾಗಿದೆ.

ಯಾಜ್ಞಿಕನ ಮನಸ್ಸು ಕುತೂಹಲಕಾರಕ ಅನೇಕ ವಿಷಯಗಳನ್ನು ತಿಳಿಯಲು ಇಚ್ಛಿಸುತ್ತದೆ. 'ಜಗತ್ತೇ ಈಶ್ವರ ಶರೀರ, ಮಾಯೆಯು ಶರೀರರಹಿತಳಾಗಿ ಅದನ್ನು ಧರಿಸಿದ್ದಾಳೆ'– ಎಂದು ತಿಳಿದು ಕೊಂಡಿದ್ದಾನೆ. ವಿಶ್ವಸೃಷ್ಟಿಗೆ ಮೊದಲು ಈಶ್ವರನನ್ನು ತಿಳಿದಿದ್ದ ಮೊದಲಿಗ ಯಾರು? ಸ್ಥೂಲ, ಸೂಕ್ಷ್ಮಶರೀರಗಳಲ್ಲಿ ಚೇತನ ಎಲ್ಲಿ ಇರುತ್ತದೆ? ಚೇತನದ ಸ್ವರೂಪ ಏನು? ಆರು ಲೋಕವನ್ನೂ ಧರಿಸಿ ನಿಯಮಿಸಿರುವ, ಜನ್ಮರಹಿತ ಪರಮಪುರುಷನ ಸ್ವರೂಪದಲ್ಲಿ ಅದ್ವೈತವಾಗಿರತಕ್ಕ ತತ್ವ ಮತ್ತು ಅದರ ಸ್ವರೂಪ ಯಾವುದು? ಈ ತತ್ವವನ್ನು ತಿಳಿದವರಾರು? ಆದಿತ್ಯನ ಸಪ್ತಸಂಖ್ಯಾತ್ಮಕ ತತ್ವ ಯಾವುದು? – ಇವೆಲ್ಲವನ್ನೂ ಯಾಜ್ಞಿಕನು ತಿಳಿಯಲಿಚ್ಛಿಸುತ್ತಾನೆ.

ಆದಿತ್ಯನು ದ್ಯುಲೋಕದ ಉನ್ನತ ಸ್ಥಾನದಲ್ಲಿರುವವನು, ಅಗ್ನ್ಯಾತ್ಮಕ, ಪಿತೃರೂಪಿ, ದ್ವಾದಶ ರಾಶಿಗಳು ಮಂಡಲಾತ್ಮಕವಾಗಿ, ಅಹೋರಾತ್ರಿಗಳೂ, ಪ್ರತಿಸಂವತ್ಸರದಲ್ಲಿ ಎರಡು ಅಯನಗಳೂ, ಆರುಋತುಗಳೂ, ಹನ್ನೆರಡು ತಿಂಗಳುಗಳೂ ಹಾಗು ಕಾಲಕಾಲಕ್ಕೆ

ವಿವಿಧ ದೃಶ್ಯಗಳನ್ನೂ ಆದಿತ್ಯನು ಹೊಂದಿದ್ದಾನೆ.

ನಾಭಿತ್ರಯದ, ಏಕಚಕ್ರದ ಸೂರ್ಯನ ರಥವನ್ನು ಏಳು ಅಶ್ವಗಳು ಏಕವಾಗಿ ವಹಿಸುತ್ತವೆ. ಕಾಲಕಳೆದಂತೆ ರಥಚಕ್ರದ ನಾಭಿ ಇರಚಿಗಳು ಸವೆಯುವುದಿಲ್ಲ, ನಿಯಮಿತವಾಗಿ ಪ್ರತ್ಯೇಕವಾಗಿ, ಸ್ಥಿರವಾಗಿ ಋತುಗಳು ಜಗತ್ತಿನ ಶ್ರೇಯಸ್ಸಿಗಾಗಿ ಚಲಿಸುತ್ತದೆ. ಏಳುರಶ್ಮಿಗಳೂ ಏಳುಸ್ವರಗಳಂತೆ ತದಾತ್ಮಭಾವದಿಂದ ಸೇರುತ್ತವೆ. ರಥವು ಅಧೋಮುಖಿಯಾಗಿ ಹಾಗೂ ಊರ್ಧ್ವಮುಖವಾಗಿಯೂ ಚಲಿಸುತ್ತದೆ.

ರಶ್ಮಿಗಳು ಕರ್ತವ್ಯವಾಗಿ, ಉದಕವನ್ನು ಸರ್ವದಾ ದ್ರವಿಸುವಂತೆ ಮಾಡಿ, ಸುರಿದ ಮಾರ್ಗದಲ್ಲೇ ಓಡುತ್ತವೆ.

ಪೃಥ್ವಿಯು ಗರ್ಭಧಾರಣೆಯ ಅಪೇಕ್ಷೆಯಿಂದ ರಸಸಂಯುಕ್ತಳಾದಾಗ, ಮೇಘ ವಾಯು ರಶ್ಮಿಗಳು ಆದಿತ್ಯನ ಪುತ್ರ ಸ್ಥಾನ ಪಡೆದವು. ಎಲ್ಲರೂ ಸಂತೋಷಪಟ್ಟರು, ಮೇಘ ವಾಯು ರಶ್ಮಿಗಳು ಸಂಯುಕ್ತವಾಗಿ ಗುಡುಗನ್ನು ಉಂಟುಮಾಡುತ್ತಾ ಮಳೆಗರೆಯುತ್ತವೆ.

ಉನ್ನತ ಪ್ರದೇಶದಲ್ಲಿರುವ ಅಕ್ಷಯನಾದ ಆದಿತ್ಯನು, ದೇವಸ್ತುತ್ಯನು ವಾಯು ಹಾಗೂ ಆಹುತಿರೂಪದ ಘೃತ ಭ್ರಾತೃಸ್ಥಾನದಲ್ಲಿದ್ದಾರೆ. ಅಧೋಭಾಗದ ಅಗ್ನಿ, ಊರ್ಧ್ವಭಾಗದ ಸೂರ್ಯ ಪರಸ್ಪರ ಬೆರೆಯುತ್ತಾರೆ. ಪೃಥ್ವಿಯು ರಕ್ಷಣೆಗೊಳ್ಳುತ್ತಾಳೆ.

ಸೋಮ ಇಂದ್ರರು ಭ್ರಮಣಾತ್ಮಕ ಗ್ರಹಗಳನ್ನು ಸೃಷ್ಟಿಸಿ ರಂಜನಾತ್ಮಕ ಲೋಕವನ್ನು ನಿರ್ಮಿಸಿದ್ದಾರೆ.

ಜ್ಞಾನದೃಷ್ಟಿಯ ಮಹಾತ್ಮರು ಆದಿತ್ಯನ ಪುತ್ರಿ, ರಶ್ಮಿರೂಪಿವೃಷ್ಟಿಯನ್ನು, 'ಪುರುಷರೂಪಿ' ಎಂದು ತಿಳಿಯುತ್ತಾರೆ.

ಆದಿತ್ಯರೂಪಿ ಪರಮೇಶ್ವರನು ಅನುಗ್ರಹಾತ್ಮಕ ಬುದ್ಧಿಯಿಂದ, ಅಪರಿಪಕ್ವ ಜ್ಞಾನಿಗಳಾದ ಯಾಜ್ಞಿಕರನ್ನು, ತನ್ನ ಮಂಡಲದೊಳಗೆ ಪ್ರವೇಶಿಸುವಂತೆ ಮಾಡುತ್ತಾನೆ.

ಪೃಥ್ವಿಯ ಅಗ್ನಿ, ಅಂತರಿಕ್ಷದವಾಯು, ದ್ಯುಲೋಕದ ಆದಿತ್ಯ – ಇವರುಗಳು ಸ್ಥಾಪಿಸಿದ, ಸತ್ಯ ತಿಳಿದ ಜ್ಞಾನಿ. ಮರಣರಹಿತ ಸ್ಥಾನ ಪಡೆಯುತ್ತಾನೆ. ಆದಿತ್ಯನ ಸತ್ಯ ಸ್ವರೂಪಸ್ಥಾನ ಗೂಢವಾಗಿದೆ.

ಸಪ್ತಛಂದಸ್ಸುಗಳು ಅಕ್ಷರಪದ ಸಂಖ್ಯೆಯಿಂದ ಬೇರೆಯಾಗಿ ರಚಿತವಾಗಿವೆ. ಗಾಯತ್ರೀ ಛಂದಸ್ಸಿನಿಂದ, ಮಹಾಶಕ್ತಿಯ ಪೂಜಾಸಾದನ ಸಾಮರಚಿತ. ಜಗತೀ ಛಂದಸ್ಸಿನ ಸಾಮದಿಂದ, ಸ್ಪಂದನ ಶೀಲ ಆದಿತ್ಯನು, ದ್ಯುಲೋಕದಲ್ಲಿ ಸ್ಥಾಪಿತನಾಗಿದ್ದಾನೆ.

ಗೋರೂಪಿ ಆಹುತಿಯು, ಮುಂಗಾಲುಗಳಿಂದ ಅಗ್ನಿಯನ್ನು ಕುರಿತು, ಹಿಂಗಾಲುಗಳಿಂದ ಸೂರ್ಯನನ್ನು ಕುರಿತು ಹೋಗುವುದರಿಂದ, ಆಗೋವು ಎಲ್ಲಿ ಹೋಯಿತೆಂದು, ಯಾವಪ್ರದೇಶಕ್ಕೆ ಪ್ರಯೋಜನಕಾರಿಯೆಂದೂ ತಿಳಿಯದು.

ಸವಿತೃವರ್ಗದ ಪಶುಕರುಗಳು ಮಾನವರಿಗಿಂತ ಉತ್ಕೃಷ್ಟವಾತ್ಸಲ್ಯ ಜ್ಞಾನವನ್ನು ಪ್ರಕಟಿಸುತ್ತವೆ. ತೃಣಭಕ್ಷಿ ಉದಕ ಕುಡಿದು, ಹಾಲನ್ನು ಕೊಡುತ್ತಾ ಯಾಜ್ಞಿಕರನ್ನು ಧನವಂತರನ್ನಾಗಿ ಮಾಡುತ್ತವೆ. ಅಶ್ವಿನೀ ದೇವತೆಗಳಿಗೂ ಕ್ಷೀರ ದೊರೆಯಲಿ.

ಒಂದೇ ತರಹದ ಎರಡು ಪಕ್ಷಿಗಳು ಒಂದಾಗಿ ಸೇರಿಕೊಂಡು ಒಂದೇ ವೃಕ್ಷವನ್ನು ಆಶ್ರಯಿಸಿ, ಒಂದು ಸಿಹಿಫಲವನ್ನು ತಿನ್ನುತ್ತದೆ, ಮತ್ತೊಂದು ತಿನ್ನದೇ ನೋಡುತ್ತದೆ.

ಮರಣ ಧರ್ಮ ದೇಹದೊಳಗೆ, ಮರಣ ಧರ್ಮರಹಿತ ಜೀವಾತ್ಮನು ಇರುತ್ತಾನೆ. ದೇಹ ಆತ್ಮಗಳೆರಡೂ ಒಟ್ಟಾಗಿ ಸಮಾನ ಸ್ಥಾನ, ವಿಷಯ, ಸುವೇಚ್ಛೆ ಕರ್ಮಾನುಭವಗಳಿಗೆ ಲೋಕಾಂತರ ಸಂಚಾರ ಮಾಡುತ್ತಿರುತ್ತಾರೆ. ದೇಹ ಸಂಬಂಧಿಯಾದವರನ್ನೂ ಜನರು ಅರಿಯಬಲ್ಲರು ದೇಹಾತಿರಿಕ್ತ ಆತ್ಮನನ್ನು ಅರಿಯಲಾರ.

ಸಂತಾನರೂಪ ಗರ್ಭದ ಮರ್ಮ ಬಾಹ್ಯ ಉದರ ವೃದ್ಧಿಯಿಂದ ತಿಳಿಯುತ್ತದೆ. ಅದರ ಮರ್ಮ ಅಂತರ್ಯ ತಿಳಿಯದೇ ಪುನಃ ಪುನಃ ಜನ್ಮವೆತ್ತುತ್ತಾ ದುಃಖ ಭಾಗಿಗಳಾಗುತ್ತಾರೆ. ಪಿತೃರೂಪಿ ಅಂತರಿಕ್ಷದ ಆದಿತ್ಯ, ಮಾತೃರೂಪಿ ಪೃಥ್ವಿಗಳಿಂದ ದ್ಯಾವಾಪೃಥವಿಗಳ ನಡುವೆ ಸಕಲ ಭೂತಗಳೂ ಉತ್ಪನ್ನವಾಗುತ್ತವೆ.

ಪೃಥ್ವಿಯ ಕೊನೆಯ ಪರ್ಯವಸಾನವು ಯಜ್ಞವೇದಿ, ಆದಿತ್ಯನ ರೇತಸ್ಸೇ ಸೋಮರಸ, ಸಕಲ ವ್ಯವಹಾರಕ್ಕೆ ಕಾರಣ ಪ್ರಜಾಪತಿಯ ಶ್ರೇಷ್ಠವಾಸಸ್ಥಾನ, ವಿಶ್ವದ ಎಲ್ಲಾ ಭಾಗಗಳನ್ನೂ ಸಂಬಂಧಿಸುವ ವಿಶ್ವದ ನಾಭಿಯೇ ಯಜ್ಞ – ಎಂಬ ವಿಚಾರಗಳಜ್ಞಾನ ಯಾಜ್ಞಕನಿಗೆ ಆಗಬೇಕು.

ಅವಿದ್ಯೆಯಿಂದ, ವಿಷಯಾದಿ ಬಂಧನಗಳಿಂದ, ಬಹಿರ್ಮುಖವಾದ ಮನಸ್ಸಿನಿಂದ, ತತ್ವ 'ಅಹಂಬ್ರಹ್ಮಾಸ್ಮಿ' ಅಂದರೆ – ನಾನೇ ಬ್ರಹ್ಮನಾಗಿರುವೆನು – ಎಂಬ ವಿಚಾರ ಮಾಡಲು ಅರಿತಿಲ್ಲ. ಸತ್ಯಾತ್ಮಕವಾದ ಬ್ರಹ್ಮಜ್ಞಾನ ಲಭಿಸಿದ ಕೂಡಲೇ 'ಅಹಂಬ್ರಹ್ಮಾಸ್ಮಿ' ತತ್ವ ಸಾಕ್ಷಾತ್ಕಾರವಾಗುತ್ತದೆ. ಉತ್ಕೃಷ್ಟರಕ್ಷಕ ಪರಮಾತ್ಮನಲ್ಲಿ ಸಕಲ ದೇವತೆಗಳೂ ಆಶ್ರಯ ಪಡೆದಿದ್ದಾರೆಂದು, ಋಕ್ ಪ್ರಧಾನ ವೇದಪ್ರತಿಪಾದಿಸುತ್ತದೆ. ವೇದಾಧ್ಯಯನ ಪಠಣದಿಂದ, ತತ್ವತಿಳಿದ ಜ್ಞಾನಿಗಳು ಮಾತ್ರಾ, ಬ್ರಹ್ಮೈಕ್ಯ ಪಡೆಯುತ್ತಾರೆ.

ಅಂತರಿಕ್ಷಸ್ಥಳಾದ – ಮಾಧ್ಯಮಿಕಾ ವಾಕ್ಯ – ಅಪರಿಮಿತ ವ್ಯಾಪ್ತಿ ಹೊಂದಿದ್ದಾಳೆ. ಮಾಧ್ಯಮಿಕಾವಾಕ್ಕು – ಇದರಿಂದಲೇ ಮೇಘ ಉತ್ಪತ್ತಿ, ವೃಷ್ಟಿ, ಸಸ್ಯಗಳಿಗೆ ಉದಕಪ್ರಸರಣವಾಗುತ್ತಿದೆ. ನಾಲ್ಕು ಭಾಗಗಳ ವಾಕ್ಕುಗಳನ್ನು ವೇದವಿತ್ತ ಮೇಧಾವಿಗಳು ಅರಿತಿದ್ದಾರೆ ಇತರರು ನಾಲ್ಕನೆಯ ಉಚ್ಚಾರ ವ್ಯವಹಾರ ಮಾತ್ರ ಅರಿತಿದ್ದಾರೆ.

ಅಗ್ನಿಯು ಔಷಧಿಗಳನ್ನು, ಆದಿತ್ಯನು ಪ್ರಕಾಶಾದಿ ಕರ್ಮಗಳನ್ನು, ವಾಯುವು ಚಲನಾದಿಗಳನ್ನೂ – ಭೂಮಿಯ ಮೇಲೆ ವಿಶೇಷ ರೀತಿಯಿಂದ ನಡೆಸುತ್ತಾರೆ. ಆದರೆ ಅವರ ಅನುಭವ ಪಡೆಯಬಹುದೇವಿನಃ ಅವರರೂಪ ಕಾಣಲಾಗದು.

ಒಬ್ಬನೇ ಆದ ಆದಿತ್ಯನು, ಇಂದ್ರ ಮಿತ್ರ ವರುಣ ಅಗ್ನಿ ದಿವ್ಯಾಗ್ನಿ ಗುರುತ್ಮಂತನೂ ಹೌದು. ಮೇಧಾವಿಗಳು ಆದಿತ್ಯನನ್ನು ಪರಮಾತ್ಮನೆಂದೂ, ಅಗ್ನಿಯೆಂದೂ, ಮಾತರಿಶ್ವನೆಂದೂ, ಯಮನೆಂದೂ ಕರೆಯುತ್ತಾರೆ. ಯಜ್ಞದಯಜಮಾನನು ಅನುಷ್ಠಾನದಿಂದ ಯಜ್ಞಧೂಮ ಹಾಗೂ ಅದಕ್ಕೆ ಕಾರಣವಾದ ಅಗ್ನಿಯನ್ನು ಕಂಡಿದ್ದಾನೆ, ಶುಕ್ಲರೂಪದ ಸೋಮರಸ ಸಂಪಾದಿಸಿದ್ದಾನೆ.

ಅಪವರ್ಷಿಯಾಗ್ಗಿಯೂ, ಮಳೆಗಾಲದಲ್ಲಿ ಕೆಳಮುಖನಾಗಿ, ಗ್ರೀಷ್ಮದಲ್ಲಿ ಮೇಲ್‌ಮುಖನಾಗಿ ಮೇಘವ ಪರಿದು ದೇವತೆಗಳಿಗೆ ತೃಪ್ತಿಯಾಗುವಂತ ಮಾಡುತ್ತದೆ, ಕಪ್ಪು ಮೋಡದಿಂದ ಇಳಿದ ಮಳೆನೀರು ಪುನಃ ಆದಿತ್ಯನನ್ನೇ ಸೇರುತ್ತದೆ.

ಸಂವತ್ಸರ ರೂಪಿ ಚಕ್ರಪರಿಧಿಗೆ ಹನ್ನೆರಡು ಅಚ್ಚುಗಳು, ಮೂನ್ನೂರ ಅರವತ್ತು ಅವಯವಗಳೂ ಶಂಕುವಿನಂತೆ ಒಟ್ಟಿಗೆ ಅರ್ಪಿತವಾಗಿವೆ.

ಸರಸ್ವತಿಯ ಸ್ತನ್ಯಪಾನವು, ಯಾಜ್ಞಿಕರ ಋತ್ವಿಕರ ಸುಖದಾಯಿಯಾಗಲಿ, ಪಾನಕ್ಕೆ ಯೋಗ್ಯವಾದುದಾಗಲಿ.

ದ್ಯುಲೋಕೋತ್ಪನ್ನ ದೇವನನ್ನು, ರಕ್ಷಣೆಗಾಗಿ ಪುನಃ ಪುನಃ ಯಜ್ಞಯಜಮಾನನು ಆಹ್ವಾನಿಸುತ್ತಾನೆ. ಹಿಂದೆ ಯಜ್ಞಕರ್ತರು ಶ್ರೇಷ್ಟ ಯಜ್ಞಮಾಡಿ, ದೇವತ್ವ ಪಡೆದು ಸ್ವರ್ಗ ಸೇರಿದಂತೆ – ಯಜಮಾನನೂ ಸ್ವರ್ಗ ಸುಖ ಅನುಭವಿಸುವಂತಾಗಲೆಂದು ಪ್ರಾರ್ಥಿಸುತ್ತಾನೆ.

**ಸೂಕ್ತ** - 165 (**ಕಯಾಶುಭಾ.....**

ಋಷಿ ಅಗಸ್ತ್ಯ ಮರುತ ಇಂದ್ರ ಸಂಭಾಷಣಾ ರೂಪದಿಂದ ಮರುತ ಹಾಗೂ ಇಂದ್ರರಸ್ತುತಿ ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಮಾಡಲ್ಪಟ್ಟಿದೆ.

ಇಂದ್ರನಷ್ಟೇ ಶಕ್ತಿವಂತರಾದ ಮರುತ್ತುಗಳು, ಮರುತ್ತುಗಳಾಗಿರುವುದು ಅವರ ಅತಿಶಯ ಕರ್ಮದಿಂದಲೇ. ಇಂದ್ರ ಮರುತ್ತುಗಳ ಸಂಯುಕ್ತಶಕ್ತಿಯೇ ಇಂದ್ರನ ಪರಾಕ್ರಮ ಕಾರ್ಯಗಳಿಗೆ ಕಾರಣ. ಇಂದ್ರನಿಗೆ ಒದಗಿಸಿದ ಬಲದ ಪ್ರತಿಯಾಗಿ, ಇಂದ್ರನೊಂದಿಗೆ ಮರುತ್ತುಗಳು ಹವಿಸ್ಸನ್ನು ಸ್ವೀಕರಿಸುತ್ತಾರೆ. ಈಶ್ವರೀಗುಣಗಳ ಮರುತ್ತುಗಳಿಂದಾದ ಸ್ತೋತ್ರಗಳಿಂದ ಇಂದ್ರನು ಸಂತುಷ್ಟನಾಗುತ್ತಾನೆ – ಕೀರ್ತಿಪ್ರಕಾಶ ಯಶಸ್ಸುಗಳಿಸುತ್ತಾನೆ.

ಸುಖಕಾರಕ ಸ್ತುತಿಗಳು, ಸೋಮರಸ, ಸಕಲಕರ್ಮಗಳೂ ಸದಾ ಇಂದ್ರನನ್ನು ಉದ್ದೇಶಿಸಿ ಮಾಡಿದವೇ. ಇದರಿಂದ ವಜ್ರಾಯುಧವು ಶತ್ರುಗಳ ಕಡೆಗೂ ಕುದುರೆಗಳು ಯಜ್ಞದ ಕಡೆಗೂ ಓಡುತ್ತವೆ.

ವೃತ್ರವಧೆಯ ಕಾಲದಲ್ಲಿ ಪರಾಕ್ರಮಿ ಇಂದ್ರನ ಕೋಪ ಪ್ರಕಟಣೆ ವಜ್ರಾಯುಧದಿಂದಲೇ. ಅನಪೇಕ್ಷಿತವಾಗಿ ಮರುತ್ತುಗಳು ಶಕ್ತಿ ಒದಗಿಸಿದರು. ಇಂದ್ರನು ಪ್ರವಾಹ ಉಂಟುಮಾಡಿದನು.

ಸ್ವಬುದ್ಧಿ ಸಂಕಲ್ಪಗಳಿಂದ ಕ್ಷಿಪ್ರವಾಗಿ ಕಾರ್ಯನಿರ್ವಹಿಸುವ ಇಂದ್ರನ ಸಮನಾದ ಪ್ರಾಜ್ಞ ಲೋಕಹಿತಕಾರಕರು – ಯಾರೂ ಈಗ ಇಲ್ಲ. ಮುಂದೆ ಹುಟ್ಟುವುದೂ ಇಲ್ಲ. ಯಾವ ದೇವತೆಯಾಗಲೀ ಮಾನವರಾಗಲೀ, ಇಂದ್ರನನ್ನು ಮೀರಿಸಲಾರರು. ಶರೀರ ಪೋಷಣೆಗೆ ಇರಲೆಂದು, ಇಂದ್ರನು ಮರುತ್ತುಗಳ ಎಲ್ಲಾ ಸ್ತುತಿಗಳನ್ನೂ ಸ್ವೀಕರಿಸುತ್ತಾನೆ.

ಮರುತ್ತುಗಳು ಯಜ್ಞಯಜಮಾನರಿಗೆ ಸಖರಾಗಿ ಪೂಜಿತರಾಗಲಿ. ಕರ್ತವ್ಯ

ಹಾಗೂ ಸ್ತೋತ್ರಗಳಿಂದ ಆರಾಧಿತರಾದ ಮರುತ್ತುಗಳು ಋಷಿಗಳಿಗೆ ಧನ ಧಾನ್ಯ ಕೊಡಲಿ. ಇಂದ್ರನು ಹೇಳಬೇಕಾದುದೆಲ್ಲವನ್ನೂ, ಒಳ್ಳೆಯ ಮಾತುಗಳಿಂದ ಹೇಳಲಿ. ಶಕ್ತಿಪೂಜಕರು ಮರುತ್ತುಗಳ ಸ್ತೋತ್ರದಿಂದ ಅನ್ನ ಐಶ್ವರ್ಯ ಬಲ ಜಯಗಳಿಸಲಿ.

## (ಅಷ್ಟಕ - 2, ಅಧ್ಯಾಯ - 4, ಸೂಕ್ತಗಳು - 166 ರಿಂದ 183 ರವರೆಗೆ)

### ಸೂಕ್ತ - 166 (ತನ್ನುವ್ಹೋಚಾವಾ......

ಅಗಸ್ತ್ಯ ಋಷಿಗಳು ಮರುದ್ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮರುತ್ತುಗಳು, ಸ್ವತಃ ನಿಯುಕ್ತವಾಗುವ ಅಶ್ವಗಳಿಂದ ಹೂಡಿದ ರಥದಲ್ಲಿ, ವೃಷ್ಟಿಪ್ರದಾನಕ್ಕಾಗಿ ಲೋಕವೆಲ್ಲಾ ಸಂಚರಿಸುತ್ತಾರೆ. ಮಹಾಬಲಿಷ್ಠರಾದರೂ, ಯಜಮಾನನ್ನು ಹಿಂಸಿಸದೆ ಪಶ್ವಾದಿಗಳ ಅಭಿವೃದ್ಧಿ ತರುತ್ತಾರೆ. ಸುವರ್ಣಾಭರಣ ಕಾಂತಿಯುತರಾದ ಮರುತ್ತುಗಳು, ದಾನದಲ್ಲಿ ಇಂದ್ರನನ್ನು ಮೀರಿಸಿ ಭೂದೇವಿಗೆ ವೃಷ್ಟಿ ತರುತ್ತಾರೆ.

ವಿದ್ಯುದಾಯುಧದಿಂದ, ಪ್ರಾಣಿಗಳನ್ನು ಸೀಳುವ ಸಮರ್ಥ ಮರುತ್ತು ಆಗಮನದಿಂದ, ಪರ್ವತಗಳು ಪ್ರತಿಧ್ವನಿಸುತ್ತವೆ. ಪ್ರಾಸಾದಗಳು ಬೀಳುತ್ತವೆಂದು ಭಯಗೊಳ್ಳುತ್ತವೆ.

ವೃತ್ರನ ಸಾಹಸ ತಿಳಿದು ಮರುತ್ತುಗಳು, ಇಂದ್ರನ ಶಕ್ತಿವರ್ಧನೆಗಾಗಿ ಸೋಮಪಾನಕ್ಕೆ ಆಹ್ವಾನಿಸಿ, ಭೋಗಾದಿಸಾಧನ ವಸ್ತುಗಳು, ರಕ್ಷಣಾಸಾಧನಗಳನ್ನು ಸಿದ್ಧಮಾಡುತ್ತಾರೆ.

ಯಜಮಾನನು, ಖಾದ್ಯಾದಿ ವಸ್ತುಗಳನ್ನೂ ಮಧುರ ಹವಿಸ್ಸನ್ನೂ ಸಿದ್ಧಪಡಿಸಿ, ಪುರಾತನ ಮಹಾತ್ಮೆಗಳನ್ನು ಪ್ರಶಂಸಿಸುತ್ತಾ, ವಿಶ್ರಾಂತಿಗಾಗಿ ಯಾಗಭೂಮಿಗೆ ಬರಲು ಮರುತ್ತುಗಳನ್ನು ಆಹ್ವಾನಿಸುತ್ತಾರೆ.

ಮರುತ್ತುಗಳು, ಯಜಮಾನನಿಗೆ ಯಾಗಜ್ಞಾನ ಉಂಟುಮಾಡಲಿ, ಸಹಾಯಕರಾಗಿ ಕರ್ಮ ಮಾಡಿಸಿ ಕೀರ್ತಿತರಲಿ. ಸತ್ರಾದಿಯಾಗ ವೃದ್ಧಿಪಡಿಸಲಿ. ಯಜಮಾನನ ಶರೀರಕ್ಕೆ ರಕ್ಷಣೆ ಪೋಷಣೆ ಆಹಾರ ಬಲ ದೀರ್ಘಾಯಸ್ಸುಗಳನ್ನು ಅನುಗ್ರಹಿಸಲಿ.

### ಸೂಕ್ತ - 167 (ಸಹಸ್ರಂತ ಇಂದ್ರೋತಯೋ.....

ಅಗಸ್ತ್ಯ ಋಷಿಗಳು ಇಂದ್ರ ಹಾಗು ಮರುದ್ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಯಜಮಾನನ ಸಂತೋಷಕ್ಕಾಗಿ, ಶ್ರೇಷ್ಠ'ಹರಿ'ಯುಕ್ತ ಇಂದ್ರನು, ಅಸಂಖ್ಯಾತ ಮಣಿ ಮುಕ್ತಾದಿಧನ, ಸಹಸ್ರಾರು ಹಸುಗಳನ್ನು ಕೊಡಲಿ.

ಮರುದ್ದೇವತೆಗಳ ಶಕ್ತಿಯನ್ನು, ಹತ್ತಿರದಿಂದಾಗಲೀ ದೂರದಿಂದಾಗಲಿ ತಿಳಿಯಲು ಸಾಧ್ಯವಿಲ್ಲ. ಸ್ವಸಾಮರ್ಥ್ಯದಿಂದ ದ್ವೇಶಿಗಳನ್ನು ವಶಪಡಿಸಿಕೊಂಡು, ಸಮುದ್ರದ ಎದುರು ದಂಡೆಯಲ್ಲಿರುವ ಧನವನ್ನೂ ತರುವ ಸಮರ್ಥರು ಇವರು.

ಕೆದರಿದ ತಲೆಯ - ರೊದಿಸಿ - (ಅಂದರೆ ವಿದ್ಯುತ್) ಮರುತ್ತುಗಳಪತ್ನಿ, ಮರುತ್ತುಗಳೊಂದಿಗೆ ಮಿಲನಕ್ಕಾಗಿ, ಅವರ ರಥವನ್ನೇರುತ್ತಾಳೆ. ರೋದಸಿಯ ಮಹಿಮೆಯಿಂದಲೇ ಜನನಶೀಲ ಪ್ರಜೆಗಳು ಮಳೆಯಯನ್ನು ಪಡೆಯುತ್ತಿರುವುದು.

ಮರುತ್ತುಗಳನ್ನು ಅಭಿವೃದ್ಧಿಗೊಳಿಸಿದಾಗ - ಮಿತ್ರಾವರುಣ ಅರ್ಯಮರು - ಸಮಸ್ತ ದೋಷಗಳನ್ನೂ ನಾಶಮಾಡಿ, ಅಪ್ರಶಸ್ತವಾದದ್ದನ್ನೂ ನಾಶಮಾಡಿ, ಮಳೆಸುರಿಸಿದ ಮೇಘಗಳಿಂದಲೂ ಮಳೆಗರಿಸುತ್ತಾ ರಕ್ಷಿಸುತ್ತಾರೆ.

ಹೊಗಳುವಿಕೆಯಿಂದ ತೃಪ್ತರಾಗುವ, ಇಂದ್ರಪ್ರಿಯ ಮರುದ್ದೇವತೆಗಳನ್ನು ತೃಪ್ತಿಪಡಿಸೋಣ. ರೋದಸಿಯೊಡನೆ ಮರುದ್ದೇವತೆಗಳು ಯಾಗಕ್ಕೆ ಬರಲಿ. ಮಳೆಗರೆಸುತ್ತಾ ಶ್ರೇಷ್ಠ ಧನರಕ್ಷಣೆ ಅನುಕೂಲಗಳನ್ನು ಅನುಗ್ರಹಿಸಿ ಶರೀರಪೋಷಣೆ ಆಹಾರ ದೀರ್ಘಾಯಶಸ್ಸು, ಬಲಗಳನ್ನು ಋಷಿಗೆ ಅನುಗ್ರಹಿಸಲಿ.

**ಸೂಕ್ತ-168 -(ಯಜ್ಞಾಯಜ್ಞಾವ..........**

ಅಗಸ್ತ್ಯ ಋಷಿಗಳು ಮರುದ್ದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಪ್ರಶ್ನೀ ದೇವತೆಯಲ್ಲಿ, ಮರುದ್ಗಣ ಸೃಷ್ಟಿಯಾದ ನಂತರ, ಮರುದ್ದೇವತೆಗಳಿಂದ ಮೇಘವು, ಮೇಘಛೇದನದಿಂದ ಮಳೆಯೂ, ನಂತರ ಸಸ್ಯಾದಿಗಳ ಅಭಿವೃದ್ಧಿಯು ಉಂಟಾದವು.

ಅಮೂರ್ತರೂಪರಾದರೂ ಮೂರ್ತರಂತೆ ಇರುವ ಮರುತ್ತುಗಳು, ನೀರಿನ ಅಲೆಗಳಂತೆ ಅಸಂಖ್ಯಾತರು; ದೃಢಪರ್ವತವನ್ನೂ ಚಲಿಸುವಂತೆ ಮಾಡುವವರು. ಅನಾಯಾಸವಾಗಿ ದೇವಲೋಕಕ್ಕೆ ಬರುವ ಮರುತ್ತುಗಳು ಧ್ಯಾನಿಸುವವರಿಗೆ ಹರ್ಷತರುತ್ತಾರೆ. ಧನಿಕನ ದಕ್ಷಿಣೆಯಂತೆ, ಸಂವೃದ್ಧಿ ತರುತ್ತಾರೆ. ದೇವತೆಗಳಿಗೆ ಉಪಕಾರ ಆಗಲೆಂದೇ ಸಮಸ್ತ ಕಾರ್ಯವನ್ನೂ ಮಾಡುತ್ತಾರೆ.

ಯಜಮಾನನು, ಮರುದ್ದೇವತೆಗಳನ್ನು ತನ್ನ ಅನುಕೂಲಕ್ಕೋಸ್ಕರ, ತನ್ನ ಕಡೆಗೆ ತಿರುಗಿಸಿ ಕೊಳ್ಳುತ್ತಾನೆ. ಶುಭಕರ ಸ್ತುತಿಗಳಿಂದ ತೃಪ್ತಿಗೊಳಿಸುತ್ತಾನೆ.

ಮರುದ್ದೇವತೆಗಳು ಯಜ್ಞಕ್ಕೆ ಬರಲಿ; ಸ್ತುತಿ ಆನಂದಗೊಳಿಸಲಿ, ಅವರ ಶರೀರ ವೃದ್ಧಿಯಾಗಲಿ. ಯಾಜ್ಞಿಕರಿಗೆ ಅನುಗ್ರಹ ಬುದ್ಧಿಯಿಂದ ಆಹಾರ, ಬಲ, ಧೀರ್ಘಾಯಸ್ಸು ಉಂಟಾಗಲಿ, ಮರುತ್ತುಗಳು ಬೇರೊಬ್ಬರಿಂದ ಕಸಿದು, ಮಾಡುವ ದಾನ, ಯಾಜ್ಞಿಕರಿಗೆ ಲಭಿಸಲಿ.

**ಸೂಕ್ತ - 169 (ಮಹಶ್ಚಿತ್ತ್ವಮಿಂದ್ರ.....**

ಅಗಸ್ತ್ಯ ಋಷಿಗಳು ಇಂದ್ರದೇವನನ್ನು ತ್ರಿಷ್ಟುಪ್, ಚತುಷ್ಪಾದ, ವಿರಾಟ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರನು ಅತೀದೊಡ್ಡವರಾದ ಮರುದ್ದೇವತೆಗಳನ್ನು ಸೃಜಿಸಿದ, ರಕ್ಷಿಸಿದ. ವೃತ್ರರೂಪಿ ಮೋಡ ಮಳೆಗರೆಯದೇ ಇದ್ದಾಗ ಯಾಜ್ಞಿಕರ ಹವಿಸ್ಸು ಸ್ವೀಕರಿಸಿ ಯುದ್ಧಕ್ಕೆ ಇಂದ್ರನು ಹೊರಟು ವಜ್ರಾಯುಧದಿಂದ ಮೇಘ ಭೇದಿಸಿದ. ಮರುತ್ತುಗಳು ಮನುಷ್ಯರಿಗಾಗಿ ಮಳೆಗರೆಯುವಂತೆ ಆ ಮೇಘವನ್ನು ಮಾಡಿದರು.

ಯಾಗಕರ್ಮಕ್ಕಾಗಿ ಅಗ್ನಿಯು ಪ್ರಜ್ವಲಿಸುತ್ತಾನೆ. ಯಾಗದಲ್ಲಿ ಚರು - ಪುರೋಡಾಶಾದಿಗಳು ಅಗ್ನಿಯನ್ನು ಸುತ್ತುಗಟ್ಟುತ್ತವೆ. ಅನುಕೂಲಗೊಳಿಸಲು ಮರುತ್ತುಗಳು ಯಾಗಕ್ಕೆ ಮೊದಲೇ ಬರಲು ಇಚ್ಛಿಸುತ್ತಾರೆ.

ಇಂದ್ರನು ಹೋತ್ರಾದಿಗಳಿಂದ ಪೂಜೆಗೊಳ್ಳುತ್ತಾನೆ. ಇಂದ್ರನು ಪ್ರಪಂಚದ ಹಿತರಕ್ಷಣಾಕ್ಕಾಗಿ, ಶೋಕಪರಿಹಾರಕ್ಕಾಗಿ, ನೀರಿನ ಆಶ್ರಯಕ್ಕಾಗಿ, ಹಾಗೂ ಸ್ವಂತಗೌರವಕ್ಕಾಗಿ ಮಳೆತರಲಿ. ಯಾಜ್ಞಿಕರಿಗೆ ಆಹಾರ ಬಲ ಧೀರ್ಘಾಯಸ್ಸು ಸುಖ ಗವಾದಿಧನ, ಸುಖಕರಐಶ್ವರ್ಯ ಅನುಗ್ರಹಿಸಲಿ.

**ಸೂಕ್ತ - 170 (ನನೂನಮಸ್ತಿ.....**

(ಇಂದ್ರ - ಅಗಸ್ತ್ಯ ಸಂಭಾಷಣ) ಋಷಿಃ - ಇಂದ್ರಅಗಸ್ತ್ಯ ದೇವತಾ - ಇಂದ್ರ. ಛಂದ - ಬೃಹತೀ ಅನುಷ್ಟುಪ್ ತ್ರಿಷ್ಟುಪ್.

ಇಂದು ಅಥವಾ ನಾಳೆ ಏನು ಸಂಭವಿಸುವುದೆಂದು ಯಾರೂ ತಿಳಿಯರು. ಹೀಗಿರುವಾಗ ನಾನಾವಿಷಯಗಳಲ್ಲಿ ಪ್ರವರ್ತಿಸುತ್ತಿರುವ ಮನುಷ್ಯನ ಮನಸ್ಸು ಸದಾ ತಿಳಿಯಲಾಗುವುದಿಲ್ಲ. ವಿಷಯಗಳು ಕಾಲಕ್ರಮದಲ್ಲಿ ಮರೆತುಹೋಗುತ್ತವೆ.

ಇಂದ್ರನನ್ನು, ಸಖರಾದ ಅಗಸ್ತ್ಯರು ಅನಾದರ ಮಾಡುತ್ತಿರುವರೆಂದೂ, ಇಂದ್ರನಿಗೆ ಹವಿಸ್ಸನ್ನು ಅರ್ಪಿಸಲು ಅವರಿಗೆ ಇಚ್ಛೆ ಇಲ್ಲವೆಂದೂ - ಇಂದ್ರನ ಅನಿಸಿಕೆ.

ಇಂದ್ರನು ಋಷಿಯ ಜೊತೆ, ಪತ್ನಿಯಜೊತೆ, ಯಜಮಾನನ ಜೊತೆ, ಭೂಮಿಯಮೇಲೆ ಸಿದ್ಧಪಡಿಸಿದ ಹವಿರಾದಿಗಳಿಂದ ಅಗ್ನಿಯಲ್ಲಿ ಯಜ್ಞಮಾಡಲು ಇಚ್ಛಿಸುತ್ತಾನೆ.

ಇಂದ್ರನು ತಮ್ಮನ್ನು ದ್ವೇಷಿಸಬಾರದೆಂದೂ, ಮರುತ್ತುಗಳೊಡನೆ ಹವಿಸ್ಸನ್ನು ಹಂಚಿಕೊಳ್ಳಬೇಕೆಂದೂ ಅಗಸ್ತ್ಯರು ಅಪೇಕ್ಷಿಸುತ್ತಾರೆ.

ಮಿತ್ರರಿಗೆಲ್ಲಾ ಪ್ರಬಲಾಶ್ರಯನಾದ ಇಂದ್ರನು ಮರುತ್‌ಸಹಿತನಾಗಿ ಯಜ್ಞಕರ್ಮ ಪ್ರಶಂಸಿಸಿ ಹವಿರಾದಿಗಳನ್ನು ಪರಿಗ್ರಹಿಸಲು ಅಗಸ್ತ್ಯರು ಆಹ್ವಾನಿಸುತ್ತಾರೆ.

**ಸೂಕ್ತ - 171 (ಪ್ರತಿವ ಏನಾ.....**

ಅಗಸ್ತ್ಯ ಋಷಿಗಳು ಮರುದ್ದೇವತೆಗಳನ್ನು ಮತ್ತು ಇಂದ್ರನನ್ನು ತ್ರಿಷ್ಟುಪ್ ಛಂದಸ್ಸಿನ

ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಋಷಿಗಳು ಪೃತ್ಪೂರ್ವಕವಾಗಿ ಆದರದಿಂದ ನಮಸ್ಕಾರಗಳಿಂದ ಮರುತ್ತುಗಳನ್ನು ಆಹ್ವಾನಿಸುತ್ತಾರೆ. ಕ್ರೋಧಬಿಟ್ಟು ಪ್ರಸನ್ನ ಹೃದಯರಾಗಿ ಹರ್ಷದಿಂದ, ಯಜಮಾನನು ಅರ್ಪಿಸುವ ಸ್ತುತಿ ಮತ್ತು ಹವಿಸ್ಸನ್ನು ಸ್ವೀಕರಿಸಲು ಪ್ರಾರ್ಥಿಸುತ್ತಾರೆ.

ಬಲಿಷ್ಟ ಇಂದ್ರನು, ಉಷೋದಯಕಾಲದಲ್ಲಿ ಪ್ರಾಣಿಗಳನ್ನು ಸ್ವವ್ಯಾಪಾರಕ್ಕೆ ಪ್ರೇರಿಸುತ್ತಾನೆ. ಕ್ರೂರಿ ಇಂದ್ರನ ಮುಂದೆ ನಿಲ್ಲಲಾಗದೆ, ಬಲಾಢ್ಯರು ಭಯದಿಂದ ಓಡುತ್ತಾರೆ ಅಷ್ಟೆ – ಅಪರಾಧದಿಂದಲ್ಲ.

ಕೋಪ ಬಿಟ್ಟು ಇಂದ್ರಮರುತ್ತರು ಶತ್ರುಪರಾಭವ ಮಾಡಲಿ. ಸಮಸ್ತರೂ 'ಇದೇರೀತಿ ಇರಲಿ' ಎಂದು ಇಚ್ಛಿಸುವ ಸುಖ, ಉತ್ತಮ ಜೀವನ, ಅನ್ನ ಆಹಾರ ಧೀರ್ಘಾಯಸ್ಸನ್ನು ಇಂದ್ರ ಮರುತ್ತರು ಅನುಗ್ರಹಿಸಲಿ.

**ಸೂಕ್ತ - 172 (ಚಿತ್ರೋವೋಸ್ತು.....**

ಅಗಸ್ತ್ಯ ಋಷಿಗಳು ಮರುದ್ದೇವತೆಗಳನ್ನು ಗಾಯತ್ರೀ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಶುಭದಾಸಿಗಳಾದ ಮರುದ್ದೇವತೆಗಳು ಕುಂದದ ಪ್ರಕಾಶ ಉಳ್ಳವರು. ಇವರ ಆಶ್ಚರ್ಯಕರ ಆಗಮನವು ಇಷ್ಟಾರ್ಥ ರಕ್ಷಣೆ ತರುತ್ತದೆ.

ಮರುತ್ತುಗಳ, ಶಿಲಾಪ್ರಾಯ ತೇಜಃ ಪುಂಜ ಹಿಂಸಕ ಆಯುಧವು, ನಮ್ಮ ಶತ್ರುವನ್ನು ಸೋಲಿಸಲಿ. ತೃಣಪ್ರಾಯರಾದ ನಮ್ಮನ್ನು, ನಮ್ಮ ಪುತ್ರಭೃತ್ಯರನ್ನೂ, ಭಾದೆಯಿಂದ ಪರಿಹರಿಸಲಿ. ಚಿರಕಾಲ ಉತ್ಕೃಷ್ಟ ಜೀವಿಗಳಾಗಿರುವಂತೆ ಮಾಡಲಿ.

**ಸೂಕ್ತ - 173 (ಗಾಯತ್ಸಾಮ.....**

ಅಗಸ್ತ್ಯ ಋಷಿಗಳು ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ತೇಜಸ್ಸಿನಿಂದ ಮೂರು ಲೋಕಗಳನ್ನೂ ಆವರಿಸುವ ಇಂದ್ರನಿಗೆ ಸೋಮಯಾಗ ಸುಖಕರ. ಸ್ತೋತ್ರಗಳು ಜ್ಞಾನವಂತ ರಾಜನಂತರ ಸ್ತುತಿಸಿದಸ್ತೋತ್ರ ಶಸ್ತ್ರಮಂತ್ರಗಳೂ ಇಂದ್ರನನ್ನೇ ಸೇರುತ್ತವೆ. ಹವಿರೂಪದ ಅನ್ನವನ್ನು ದ್ಯಾವಾಪೃಥವಿಗಳನಡುವೆ ಸಂಚರಿಸುವ ಅಗ್ನಿಯು ಇಂದ್ರನಿಗೆ ಒಯ್ಯುತ್ತಾನೆ.

ಯಜಮಾನನು ಋತ್ವಿಜರೊಡನೆ ಸ್ತುತಿಯಿಂದ ಸಾಮಗಾನದಿಂದ ಪುರೋನುವಾಕ್ಯಗಳಿಂದ ಹಾಗೂ ತನ್ನ ಬಲದಿಂದ – ಮರುತ್ತುಗಳನ್ನೂ ಇಂದ್ರನನ್ನೂ ಪೂಜಿಸಿ ತೃಪ್ತಿಪಡಿಸುತ್ತಾನೆ.

ಇಂದ್ರನ ಮೈತ್ರಿ, ಫಲಪ್ರದ ಅಭೀಷ್ಟ ಪಡೆಯಲು ಶೀಘ್ರವಾಗಿ ಅನುಗ್ರಹ ಪಡೆಯಲು ಯಜ್ಞಯಾಗಾದಿಗಳಲ್ಲಿ ಬಲಿಷ್ಠ ಇಂದ್ರನ ಭಾಗದಿಂದ ತೃಪ್ತಿಪಡಿಸುತ್ತಾ ಇಂದ್ರನನ್ನು ಅನುಕೂಲಕರನನ್ನಾಗಿ ಮಾಡಿಕೊಳ್ಳುತ್ತಾನೆ.

ಕುಟಲಿಗಳು ಭೌತಿಕವಿಷಯಗಳ ಬಗ್ಗೆ ಯೋಚಿಸುತ್ತಾ ಇಂದ್ರನನ್ನು ಪೂಜಿಸುವುದಿಲ್ಲ. ಇಂದ್ರನು, ಪೂಜಿಸುವ ಸ್ತೋತ್ರಪಠಿಸುವ, ಯಾಗಶಾಲೆಗೆ ಆಗಮಿಸಿ ಸ್ತುತಿಸ್ವೀಕರಿಸಲಿ; ಸ್ವರ್ಗದಿಂದ ಶೀಘ್ರವಾಗಿಬಂದು ದರ್ಭಾಸೀನನಾಗಲಿ.

ಯಜಮಾನನಿಗೆ ಆಹಾರ ಬಲ ದೀರ್ಘಾಯುಗಳನ್ನು ಕರುಣಿಸಲಿ.

**ಸೂಕ್ತ** - 174 (**ತ್ವಂರಾಜೇಂದ್ರ**.....

ಅಗಸ್ತ್ಯ ಋಷಿಗಳು ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರನು ಸಮಸ್ತ ಕಾಲದಲ್ಲೂ, ಸಮಸ್ತ ವಿಷಯದಲ್ಲೂ, ಯಜ್ಞಕರ್ತರನ್ನು ವಿಶೇಷವಾಗಿ ರಕ್ಷಿಸುತ್ತಾನೆ. ದುಃಖಕರ ಹಿಂಸಕ ಅಸುರರನ್ನು ನಾಶಮಾಡಿ ಸಾಹಸದಿಂದ ಕಷ್ಟಗಳನ್ನು ಎದುರಿಸಿದ ಇಂದ್ರನನ್ನು ಋಷಿಗಳು ನೆನೆಯುತ್ತಾರೆ.

ಏಳು ಶತ್ರುಪುರಗಳನ್ನು ನಾಶಮಾಡಿ, ತರುಣನಾದ ಪುರಕುತ್ಸನಿಗಾಗಿ ವೃತ್ರನನ್ನು ನಾಶಮಾಡಿ, ಅವನ ಪ್ರಜೆಗಳನ್ನು ನಮ್ರನನ್ನಾಗಿಸಿದ. ಛಿನ್ನವಾದ ಮೇಘದಿಂದ ಮಳೆತಂದ ಇಂದ್ರನು, ರಾಜ ದುರ್ಯೋಣನಿಗಾಗಿ, ಅಸುರ ಕುಯವಾಚನನ್ನು ನಾಶಮಾಡಿದ. ಅಸುರದುಧನಿಯನ್ನು ಛೇದಿಸಿ ಜಲಪ್ರವಾಹತಂದು ತುರ್ವಶ ಮತ್ತು ಯದುರಾಯರಿಗೆ ಮಂಗಳ ಉಂಟುಮಾಡಿದ.

ಮರುತ್ತುಗಳೊಡನೆ ಧೈರ್ಯವಾಗಿ ಮುನ್ನುಗ್ಗುವ ಇಂದ್ರನು, ಶತ್ರುಗಳಿಗೆ ನಡುಕ ಉಂಟುಮಾಡುತ್ತಾನೆ. 'ಹರಿ'ಯ ಮೇಲೇರಿ, ಮೇಘವಿಜಯ ಸಾಧಿಸಿದ ಇಂದ್ರನು, ಕುತ್ಸನಿಗೆ ಹವಿರಾದಿಗಳನ್ನು ತರುತ್ತಾನೆ.

ಕರ್ಮಗಳನ್ನು ಮಾಡಲು ಅನುಕೂಲವಾಗುವಂತೆ, ಸ್ವರ್ಗದಿಂದ, ಆ 'ಶಾಂತಿಯ' ಅಗ್ನಿಯನ್ನು ತಂದು ಮನೆಗಳಲ್ಲಿ ಸ್ಥಾಪಿಸುತ್ತಾನೆ.

ರಕ್ಷಕನೆಂದು ನಂಬಿರುವ ಯಾಗಕರ್ತರಿಗೆ, ಪುತ್ರಸಂತತಿ ಆಹಾರ ದೀರ್ಘಾಯಸ್ಸು ಧನಗಳನ್ನು ಕರುಣಿಸಲಿ. ಭೃತ್ಯಾದಿಗಳನ್ನು, ಸೇನೆಗೆ ಬಲವನ್ನು, ರಕ್ಷಣೆಯನ್ನೂ ಕೊಡಲಿ.

ಹವಿಸ್ಸನ್ನು ಅರ್ಪಿಸದವರನ್ನೂ, ಯಾಗಕರ್ತರನ್ನು ಹಿಂಸಿಸುವವರನ್ನೂ ಇಂದ್ರನು ವಧಿಸಲಿ.

**ಸೂಕ್ತ** - 175 (**ಮತ್ಸ್ಯಪಾಯಿಂತೇ**..

ಅಗಸ್ತ್ಯ ಋಷಿ ಇಂದ್ರದೇವನನ್ನು ಸ್ಕಂದೋಗ್ರೀವೀಬೃಹತೀ ಅನುಷ್ಟುಪ್, ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಕರ್ಮಾಧಿಕಾರಿ ಇಂದ್ರನು, ಹಿಂಸಕರನ್ನು ಅಗ್ನಿಯ ಜ್ವಾಲೆಯಿಂದ ದಹಿಸುತ್ತಾನೆ. ಸಾಮರ್ಥ್ಯದಿಂದ ಸೂರ್ಯನ ರಥದ ಒಂದು ಚಕ್ರವನ್ನು ಅಪಹರಿಸಿದ ಇಂದ್ರನು, ತುಷ್ಣನೆಂಬ ಅಸುರನನ್ನು ವಧಿಸಿ ಅವನ ಅಶ್ವಗಳನ್ನು ಕುತ್ಸ ಋಷಿಗೆ ದಾನಮಾಡಿದ.

ಸೋಮರಸವು ಕಾಮವರ್ಷಕ, ಅಪರಿಮಿತ ಆನಂದದಾಯಿ, ತೃಪ್ತಿದಾಯಿ, ಅಪೇಕ್ಷಣೀಯ ಮದಸಾಧಕವಾದದ್ದು – ಇಂದ್ರನಿಗಾಗಿಕಾದಿದೆ.

ಇಂದ್ರನ ಹರ್ಷವು, ಧನದಾನ ಶಕ್ತಿ ಎಲ್ಲವೂ ಮನುಷ್ಯನ ಅನುಗ್ರಹಕ್ಕಾಗಿಯೇ. ಮನುಷ್ಯನಾದ ಯಜಮಾನನ ಯಜ್ಞವರ್ಧಿಸಲಿ. ಇಂದ್ರನು ಯಜಮಾನನಿಗೆ ಸುಖಪ್ರದನಾಗಲಿ, ಪುನಃ ಪುನಃ ಮಾಡುವ ಸ್ತುತಿಯಿಂದ, ಇಂದ್ರನು ಆಹಾರ ಬಲ ದೀರ್ಘಾಯಸ್ಸು ಕೊಡಲಿ.

**ಸೂಕ್ತ** - 176 **(ಮತ್ಸಿನೋವಸ್ಯ.....**

ಅಗಸ್ತ್ಯ ಋಷಿಗಳು ಇಂದ್ರನನ್ನು ಅನುಷ್ಟುಪ್ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಇಂದ್ರನು ಸಕಲ ಜ್ಞಾನಿಗಳಿಗೂ ಏಕಮಾತ್ರ ಆಶ್ರಯ. ವೃಷ್ಟಿಗಳಿಗೆ ಹಾಗೂ ಸಮಸ್ತ ಧಾನ್ಯ ಅಂಕುರಿಸಲು ಇಂದ್ರನೇ ಕಾರಣ. ಐದು ಜಾತಿಯ ಜೀವರಾಶಿಗಳಿಗೂ – ದೇವ, ಮಾನವ, ಪಿತೃ, ಪಶು, ಪಕ್ಷಿ – ಪ್ರಿಯವಾದ ಸಮಸ್ತ ಧನವನ್ನೂ ಇಂದ್ರನು ಹೊಂದಿದ್ದಾನೆ.

ಇಂದ್ರನಿಗೆ, ಸೋಮ ಸ್ತೋತ್ರ ಅರ್ಪಿಸುವ ಯಜಮಾನನನ್ನು ಸೋಮರಸವು ರಕ್ಷಿಸುತ್ತದೆ. ಯಜಮಾನನ ಉಚ್ಚರಿಸಿದ ಮಂತ್ರದೊಂದಿಗೆ ಸೇರಿಕೊಂಡು ಇಂದ್ರನನ್ನು ರಕ್ಷಿಸುತ್ತದೆ. ಬಲಿಷ್ಠ ಇಂದ್ರನಿಗೆ ತೃಪ್ತಿಯನ್ನುಪಡೆಯಲು ಸಹಾಯ ಮಾಡುತ್ತದೆ. ಇಂದ್ರನು ಯಜಮಾನನ ಧನಲಾಭಕ್ಕಾಗಿ ಶತ್ರುವನ್ನು ಚೆನ್ನಾಗಿ ಓಂಸಿಸುತ್ತಾನೆ.

ಸ್ತುತಿವಾಕ್ಯಗಳಿಂದ ಪುನಃ ಪುನಃ ಸ್ತುತಿಸುವ ಯಜಮಾನರಿಗೆ ಆಹಾರ, ಬಲ, ದೀರ್ಘಾಯಸ್ಸು, ಇವುಗಳನ್ನು ಅನುಗ್ರಹಿಸಲಿ. ಯಜಮಾನನ ದ್ವೇಷಿಗಳನ್ನು ಭಾದಿಸಿ ವಧಿಸಲಿ. ಸೋಮಾಹುತಿ ಕೊಡದವರನ್ನು ವಧಿಸಿ ಅವರ ಧನವನ್ನು ಯೋಗ್ಯ ಯಜ್ಞಯಜಮಾನನಿಗೆ ಕೊಡಲಿ.

**ಸೂಕ್ತ** - 177 **( ಆಚರ್ಷಣಿಪ್ರಾ.....**

ಅಗಸ್ತ್ಯ ಋಷಿಗಳು ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಮಾನವ ವರ್ಗಕ್ಕೆ ಸ್ವಾಮಿಯಾದ ಇಂದ್ರನಿಗಾಗಿ ಕ್ಷೀರಯುಕ್ತ ಕಾಮವರ್ಷಕ ಸೋಮರಸ, ಪಶು ಮಂತ್ರ ಧರ್ಬೆ – ಇವುಗಳೆಲ್ಲಾ ಸಿದ್ಧವಾಗಿದೆ. ಇಂದ್ರನು ಇಷ್ಟಾರ್ಥಪ್ರದ ಮಂತ್ರನಿಯುಕ್ತಿ ತರುಣ ಅಶ್ವರಥದಲ್ಲಿ ಯಜಮಾನನ ಅನುಗ್ರಹಾರ್ಥವಾಗಿ ಬರಲಿ. ಯಜಮಾನನು ಸುಖವಾಗಿ ವಾಸಮಾಡಲು ಅನ್ನ ಬಲ ಧೀರ್ಘಾಯಸ್ಸುಗಳನ್ನುಕೊಡಲಿ.

**ಸೂಕ್ತ** - 178 **(ಯಾದ್ಧಸ್ಯಾತ.....**

ಅಗಸ್ತ್ಯ ಋಷಿಗಳು ಇಂದ್ರದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ನಲ್ಲಿ ಸ್ತುತಿಸುತ್ತಾರೆ.

ಇಂದ್ರನ ಸಹಾಯದಿಂದ ಬಲಾಢ್ಯರಾದ ಅವಧ್ಯರಾದ ಶತ್ರುಗಳೂ ಸೋಲುತ್ತಾರೆ. ಸ್ತುತಿ ಕೇಳಲು ಇಚ್ಛಿಸಿದಾಗ ಇಂದ್ರನೇ ಯಜಮಾನನ ಬಳಿಗೆ ಬರುತ್ತಾನೆ. ತನಗೆ ಸಂಬಂಧಿಸಿದ ಭೋಗಗಳಲ್ಲಿ, ಮನುಷ್ಯ ಯೋಗ್ಯ ಭೋಗಗಳನ್ನು ಮನುಷ್ಯರಿಗೆ ಅನುಗ್ರಹಿಸುತ್ತಾನೆ. ಅಹೋರಾತ್ರಿಗಳು ನಡೆಸುವ ಕರ್ಮಗಳನ್ನು ಅನುಮೋದಿಸುತ್ತಾನೆ.

ಬಲಹೇತು ಹವಿಸ್ಸು ಸ್ತೋತ್ರ ಪ್ರಶಂಸೆಗಳನ್ನು ಹೆಚ್ಚಾಗಿ ಸೇವಿಸಲಿ. ಮಹತ್ವಾಕಾಂಕ್ಷಿಗಳ ಮನೋರಥ ವಿಫಲ ಮಾಡದ ಇಂದ್ರನು ಪ್ರಭೂತ ಅನ್ನಾಹಾರ ಧನಾಧಿವೃದ್ಧಿ ಬಲ ಧೀರ್ಘಾಯಸ್ಸು ಸಖ್ಯಗಳನ್ನು ಯಜಮಾನರಿಗೆ ಅನುಗ್ರಹಿಸಲಿ.

**ಸೂಕ್ತ** - 179 **(ಪೂರ್ವೀರಹಂ...**

ಋಷಿ :- ಲೋಪಾಮುದ್ರಾ ಅಗಸ್ತ್ಯ ಅಂತೇವಾಸಿ ಬ್ರಹ್ಮಚಾರಿ.

ದೇವತಾ – ರತಿ, ಛಂದ :- ತ್ರಿಷ್ಟುಪ್ ಬೃಹತೀ.

ಲೋಪಾಮುದ್ರೆ ಅಗಸ್ತ್ಯರಪತ್ನಿ, ಅನೇಕಸಂವತ್ಸರ ಕಾಲದಿಂದಲೂ ಅವಿಶ್ರಾಂತಳಾಗಿ ಹಗಲೂ ರಾತ್ರಿಯಲ್ಲೂ ಸೇವೆ ಸಲ್ಲಿಸುತ್ತಾ, ಜೀರ್ಣಳಾಗಿ, ಮುಪ್ಪಾಗಿ, ಸೌಂದರ್ಯ ಕಳೆದುಕೊಂಡಿದ್ದಾಳೆ. ಆದರೆ ಪುರುಷರಿಂದ ಪತ್ನಿಯರು ಸಂಭೋಗಾನುಗ್ರಹ ಪಡೆದಂತೆ – **ಈಕೆ** ಪಡೆದಿಲ್ಲ! ಪರಸ್ಪರ ಮಿಳಿತದಿಂದ ಅಪರಿಮಿತ ಭೋಗಸಾಧಿಸಬಹುದು.

ಅಗಸ್ತ್ಯರು ಜಪ ಧ್ಯಾನಾಸಕ್ತರು. ಬ್ರಹ್ಮಚರ್ಯನಿಷ್ಠರು. ಇವರ ಪರಿಶ್ರಮ ವ್ಯರ್ಥವಲ್ಲ. ತಪಸ್ಸಿನಿಂದ ತೃಪ್ತರಾದ ದೇವತೆಗಳು ರಕ್ಷೆಅನುಗ್ರಹ ಅಭೀಷ್ಟ ಸಿದ್ಧಿ ಉಂಟುಮಾಡುತ್ತಾರೆ.

ಯಾವಕಾರಣವೋ ಲೋಪಮುದ್ರೆಗೆ ಕಾಮ ಉತ್ಪನ್ನವಾಗಿದೆ. ಕಾಮಕ ಸ್ತ್ರೀಯು ಎಂತಹ ಬಲಶಾಲಿಯಾದ ಪುರುಷನನ್ನೂ ವಿಕಲಚಿತ್ತನನ್ನಾಗಿ ಮಾಡುತ್ತಾಳೆ. ತನ್ನನ್ನು ಸಮೀಪಿಸಲು ಅಗಸ್ತ್ಯರು ಲೋಪಮುದ್ರೆಗೆ ಆಹ್ವಾನ ಕೊಡುತ್ತಾರೆ.

ಮನುಷ್ಯರು ಬಹುಕಾಮಿಗಳು. ಸೋಮವು, ಶಿಷ್ಯನ ಗುರುಪತ್ನಿಗಮನದೋಷವನ್ನು ಸರಿಪಡಿಸಲು ಸಮರ್ಥವಾದದ್ದು. ಇಂತಹ ಸೋಮನನ್ನೂ ಪ್ರಾರ್ಥಿಸುತ್ತಾ ಮನೋಭಿಮಾನಿ ಚಂದ್ರನು ಪಾಪವನ್ನು ಪರಿಹರಿಸಲೆಂದು ಪ್ರಾರ್ಥಿಸುತ್ತಾರೆ – ಋಷಿ.

ಅಗಸ್ತ್ಯಋಷಿ ಯಜ್ಞಸ್ತುತಿಸಾಧಕರು, ಹಾಗೂ ಪುತ್ರಭೃತ್ಯ ಬಲಾದಿಕಾಮ ಅತೀಂದ್ರಿಯ ದೃಷ್ಟಿಯ ಸಂಸಾರ ಮಗ್ನರೂ ಸಹಾ.

ಕಾಮ ತಪಸ್ಸುಗಳೆರಡನ್ನೂ ಸಾಧಿಸಿ ದೇವತೆಗಳಿಂದ ಸತ್ಯಫಲ ಆಶೀರ್ವಾದಗಳ ಅನುಗ್ರಹ ಸಂಪಾದಿಸಿದ್ದಾರೆ.

**ಸೂಕ್ತ** - 180 ( **ಯುವ್ರೋರಜಾಂಸಿ.....**

ಅಗಸ್ತ್ಯಋಷಿ ಅಶ್ವಿನೀದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಉಷೋದಯ ಕಾಲದಲ್ಲಿ ಅಶ್ವಿನೀ ದೇವತೆಗಳನ್ನು ಋಷಿ ಆಹ್ವಾನಿಸುತ್ತಾರೆ. ಅಶ್ವಿನೀ ದೇವತೆಗಳು – ದ್ಯಾವಾಪೃಥವಿಗಳು ಸೇವಿಸಲು ಸಮರ್ಥರಾಗುವಂತೆ ಮಾಡುವವರು. ಪ್ರದೀಪ್ತ ಅಗ್ನಿಯನ್ನು ಉದಕದಂತೆ ತಣ್ಣಗೆ ಮಾಡುವವರು; ಗೋವು ಕಡಸುಗಳಲ್ಲಿ ಕ್ಷೀರ ಉತ್ಪನ್ನ ಮಾಡುವವರು.

ತುಗ್ರ ಪುತ್ರ ಭುಜ್ಯನು ಅಶ್ವಿನೀ ದೇವತೆಗಳಿಂದ ಉದ್ಧಾರನಾದನು.

ಇತರ ದೇವತೆಗಳೊಂದಿಗೆ ಅಶ್ವಿನೀ ದೇವತೆಗಳು ಮಧುಸದೃಶ ಸೋಮ, ಪಶುಯಾಗ, ಅಪರಿಮಿತ ಸ್ತೋತ್ರಗಳನ್ನು ಸ್ವೀಕರಿಸಲು ಯಜಮಾನನು ಪ್ರಾರ್ಥಿಸುತ್ತಾನೆ. ಸ್ತುತಿಗಳಿಂದ ಎಚ್ಚರಗೊಳಿಸುತ್ತಾನೆ. ದುಃಖನಾಶಕ ಅನುಗ್ರಹ ಪೂರ್ವಕ ವೃಷ್ಟಿಗಾಗಿ ಪ್ರಾರ್ಥಿಸುತ್ತಾರೆ.

ಜೀರ್ಣಾಂಗರಾಗಿರುವ ಋಷಿಗೆ ಅಶ್ವಿನೀ ದೇವತೆಗಳು ಜರಾವಿಮೋಚನೆ ಹಾಗೂ ಧೀರ್ಘಾಯಸ್ಸು ಕೊಡಲೆಂದು ಅಗಸ್ತ್ಯರು ಪ್ರಾರ್ಥಿಸುತ್ತಾರೆ. ಉತ್ತಮ ಅಶ್ವಾಧಿಧನ, ಧೀರ್ಘಾಯಸ್ಸು ಬಲ ಆಹಾರ ಅನುಗ್ರಹಕ್ಕಾಗಿ ಸ್ತುತಿಸುತ್ತಾರೆ.

**ಸೂಕ್ತ** - 181 (**ಕದುಪ್ರೇಷ್ಠಾವಿಷಾಂ.....**

ಅಗಸ್ತ್ಯಋಷಿ ಅಶ್ವಿನೀ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳನ್ನು ಯಜ್ಞಕ್ಕೆ ಕರೆತರುವ ರಥವು, ಭೂಮಿಯಂತೆ ವಿಸ್ತಾರವಾದ್ದು, ವಿಶಾಲ ಪುರೋಭಾರ ಉಳ್ಳದ್ದು, ಮನೋವೇಗಕ್ಕಿಂತ ವೇಗವಾದ್ದು, ಮನಸ್ವೀ ಪೂಜಾರ್ಹವಾದದ್ದು.

ಅಂತರಿಕ್ಷ ಸ್ವರ್ಗಲೋಕ ಜನ್ಯರಾದ ಅಶ್ವಿನೀ ದೇವತೆಗಳು ಇವರಲ್ಲಿ ಒಬ್ಬರು ಉತ್ತಮ ಮಧ್ಯಲೋಕಕ್ಕೆ ಪ್ರಶಸ್ತ ಅಭಿವೃದ್ಧಿಕಾರಕ ಸೂರ್ಯರಶ್ಮಿಯಂತೆಯೂ, ಮತ್ತೊಬ್ಬರು ಜಯಶೀಲ ಔಷದಾಭಿವೃದ್ಧಿ ಮಾಡುವ ಯಜ್ಞಪ್ರೇರಕ ಚಂದ್ರನಂತೆಯೂ ಇದ್ದಾರೆ. ಇಬ್ಬರೂ ಮಿಳಿತರಾಗಿ ಪುನಃ ಸ್ತುತಿತರಾಗಿ ಪ್ರಪಂಚ ರಕ್ಷಿಸುತ್ತಿದ್ದಾರೆ.

ಅಶ್ವಿನೀ ದೇವತೆಗಳಲ್ಲೊಬ್ಬ – ಮಧ್ಯಮಲೋಕ ಚಂದ್ರ – ಹವಿಸ್ಸಿಂದ ತೃಪ್ತನಾಗಿ ಅನ್ನ ಅನುಗ್ರಹಿಸುತ್ತಾ ಶತ್ರುಸಿರಸನ ಮಾಡುತ್ತಾನೆ. ಮತ್ತೊಬ್ಬನು ತೃಪ್ತನಾಗಿ ದಡಮೀರಿ ಹರಿಯುವ ನದಿಯಂತೆ ಸತ್‌ಫಲಗಳನ್ನು ಉಂಟುಮಾಡುತ್ತಾನೆ.

ಅಶ್ವಿನೀ ದೇವತೆಗಳ ಒಬ್ಬರಿಗೆ ಸೇರಿದ ಪೀತವರ್ಣರಥ ದಿಕ್ಕು ವಿದಿಕ್ಕುಗಳಲ್ಲೆಲ್ಲಾ ಸಂಚರಿಸುತ್ತದೆ. ಮತ್ತೊಬ್ಬರಿಗೆ ಸೇರಿದ ಅಶ್ವಗಳು ಅನ್ನ ಸ್ತುತಿಗಳಿಂದ ತೃಪ್ತಿಗೊಳ್ಳುತ್ತವೆ.

ಅಶ್ವಿನೀ ದೇವತೆಗಳೊಂದಿಗೆ ಅಗ್ನಿ ಉಷಾ ದೇವತೆಗಳೂ ಯಜ್ಞಕ್ಕೆ ಬರಲಿ, ಸ್ತುತಿಗಳಿಂದ ತೃಪ್ತರಾಗಿ ಯಜಮಾನನಿಗೆ ಸಂತೋಷ ಉಂಟುಮಾಡಲಿ. ಅಶ್ವಿನೀದೇವತೆಗಳು

ಸಂಚಾರ ವಿಶ್ರಾಂತಿಗಳೆರಡರಲ್ಲೂ ಆಹ್ವಾನ ಮನ್ನಿಸಲಿ. ಅವಶ್ಯವಾದಾಗ ಮಳೆ ಸುರಿಸಲಿ. ಆಹಾರ ಬುದ್ಧಿ ಧೀರ್ಘಾಯಸ್ಸು ಯಶಸ್ಸುಗಳನ್ನು ಅನುಗ್ರಹಿಸಲಿ.

**ಸೂಕ್ತ** - 182 ( **ಅಭೂದಿದಂ.....**

ಅಗಸ್ತ್ಯ ಋಷಿಗಳು ಅಶ್ವಿನೀದೇವತೆಗಳನ್ನು ಜಗತೀ ಮತ್ತು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಅಶ್ವಿನೀ ದೇವತೆಗಳು ಆದಿತ್ಯನ ಮೊಮ್ಮಕ್ಕಳು. ಭೂಮಿಯ ಮೇಲೆ ತೆರಳುವ 'ಪ್ಲವ' ಎಂಬ ರಥವನ್ನು ಸಮುದ್ರದ ಮೇಲೆ ತೆರಳುವಂತೆ ಮಾಡಿದರು. ಸ್ತುತಿಯನ್ನೇ ಆಶ್ರಯವಾಗಿ ಹೊಂದಿದ್ದ, ತಲೆಕೆಳಗಾಗಿ ಎಸೆಯಲ್ಪಟ್ಟ ನಾವೆಯಲ್ಲಿದ್ದ, ತುಗ್ರಪುತ್ರ ಭುಜ್ಯನನ್ನು, ಸ್ವತಃ ಸಮುದ್ರಕ್ಕೆ ಹಾರಿ ಭೂಮಿಗೆ ಬರುವಂತೆ ಮಾಡಿದ ಕೀರ್ತಿ ಉಳಿಸಿಕೊಂಡರು.

ಅಶ್ವಿನೀ ದೇವತೆಗಳನ್ನು ನಿಂದಿಸುವವರನ್ನು, ಯಜಮಾನನನ್ನು ಯುದ್ಧದಲ್ಲಿ ವಧಿಸಬೇಕೆನ್ನುವವರನ್ನೂ, ಲುಬ್ದನಾಗಿ ಹವಿರಾದಿರಹಿತನಾಗಿ ಯಜ್ಞನಿರ್ವಹಿಸದ ಸ್ವಯಂಪೂಜಿತವಾಗುವ ಮನುಷ್ಯನನ್ನೂ - ಪರಾಭವಗೊಳಿಸಿ ನಾಶಪಡಿಸಲಿ.

ಋತ್ವಿಜರ ಪೂಜಾದಿಗಳಿಂದ ತೃಪ್ತಿಗೊಂಡು, ಜ್ಞಾನರೂಪಸ್ತುತಿಯಿಂದ ತೃಪ್ತಿಗೊಂಡು, ಯಜಮಾನನಿಗೆ ಪ್ರೀತಿಯಿಂದ ಉತ್ತಮ ಫಲ ಅನ್ನ ಬಲ ಧೀರ್ಘಾಯಸ್ಸು ಕೊಡಲಿ.

**ಸೂಕ್ತ** - 183 ( **ತಂಯುಂಜಾಥಾಂ.....**

ಅಗಸ್ತ್ಯಋಷಿಗಳು ಅಶ್ವಿನೀ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ರಜತ ಮತ್ತು ತಾಮ್ರಗಳಿಂದಾದ ಅಶ್ವಿನೀ ದೇವತೆಗಳ ರಥವು ಯಜ್ಞಕರ್ತರಿಗೆ ಶ್ರೇಯಸ್ಕಾರಿ.

ಈ ಹಿಂದೆ ಗೌತಮ, ಪುರುಮೀಳೋ, ಅತ್ರಿ ಋಷಿಗಳು ಅರ್ಚಿಸಿದಂತೆಯೇ ಅಗಸ್ತ್ಯರೂ ಸಹಾ ಅಶ್ವಿನೀದೇವತೆಗಳನ್ನು ಮಧುಸದೃಷ ಸೋಮಪಾನದಿಂದ ಅರ್ಚಿಸುತ್ತಾರೆ. ಇವರ ಅರ್ಚನಾಸ್ತುತಿಗಳಿಂದ ಅಶ್ವಿನೀಗಳ ಶರೀರ ವೃದ್ಧಿಯಾಗಲಿ.

ಅಶ್ವಿನೀ ದೇವತೆಗಳು ಯಜಮಾನನ ಕೈ ಬಿಡದಿರಲಿ, ಯಜಮಾನನನ್ನು ವೃಕ, ವೃಕಿಯರು ಹಿಂಸಿಸದಿರಲಿ. ಶ್ರೇಯಸ್ಸಿಗೆ ಅಡ್ಡಿಯಾದ ದುಃಖಗಳು ನಾಶವಾಗಲಿ. ಯಜಮಾನನಿಗೆ ಆಹಾರ ಬಲ ಧೀರ್ಘಾಯಸ್ಸು ಉಂಟಾಗಲಿ.

(ಅಷ್ಟಕ - 2, ಅಧ್ಯಾಯ - 5, ಸೂಕ್ತ - 184 ರಿಂದ 191 ರವರೆಗೆ)

**ಸೂಕ್ತ** - 184 ( **ತಾರಾವಾಥ್ಯ.....**

ಅಗಸ್ತ್ಯ ಋಷಿ ಅಶ್ವಿನೀ ದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಿಂದ ಸ್ತುತಿಸುತ್ತಾರೆ.

ಶ್ರೇಯಸ್ಸಿಗೋಸ್ಕರ ಸೂರ್ಯ ಪುತ್ರಿಯನ್ನು ಕರೆತರಲು ಅಶ್ವಿನೀ ದೇವತೆಗಳು ಯುದ್ಧಕ್ಕೆ ಹೋದರು. ಯಾಗಶುದ್ಧಿಗಾಗಿ ಆತ್ಮಹಿತಕ್ಕಾಗಿ ದೇವಮಾರ್ಗದಲ್ಲಿ ಯಜ್ಞಕ್ಕೆಬರುತ್ತಾರೆ.

ಶ್ರೇಷ್ಠ ಹವಿಸ್ಸು ಶಸ್ತ್ರರೂಪ ಮಂತ್ರ ಸ್ತುತಿಗಳಿಂದ ಯಜಮಾನರ ಪರವಾಗಿ ಹೋತೃವು ಉಷೋದಯಕಾಲದಲ್ಲಿ ಅಶ್ವಿನೀದೇವತೆಗಳನ್ನು ಸ್ತುತಿಸುತ್ತಾನೆ. ವೇದವಾಕ್ಯನಿರ್ಮಿತ ಪಾಪನಾಶಕ ಪಾಪಪರಿಹಾರಕ ಧ್ಯಾನಾತ್ಮಕ ಸ್ತುತಿಗಳಿಂದ ತೃಪ್ತರಾಗಿ ಅಗಸ್ತ್ಯರು ಯಾಗಕ್ಕೆ ಬರಲಿ.

ಯಜಮಾನರು ಯಶಸ್ಸಿಗೆ ವಿಘ್ನತರುವ ದುಃಖವನ್ನು ಅವರ ಕೃಪೆಯಿಂದ ದಾಟಿದ್ದಾರೆ. ಇಂತಹವರಿಗೆ ಅಶ್ವಿನೀ ದೇವತೆಗಳು ಪುತ್ರಲಾಭ ಆತ್ಮಹಿತ, ಅನ್ನ ಬಲ ಧೀರ್ಘಾಯಸ್ಸು ಶ್ರೇಷ್ಠಫಲ ಕರುಣಿಸಲಿ. ಯಾಗಮಾಡದ ಲೋಭಿಗಳನ್ನು ನಾಶಮಾಡಲಿ, ನಿರ್ಮೂಲಮಾಡಲಿ.

**ಸೂಕ್ತ** - 185 ( **ಕತರಾಪೂರ್ವಾ.....**

ಋಷಿ ಅಗಸ್ತ್ಯರು ದ್ಯಾವಾಪೃಥವಿಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ದ್ಯಾವಾಪೃಥವಿಗಳು ಪರಸ್ಪರ ಪ್ರೀತಿಯ ಅಕ್ಕತಂಗಿಯರು. ದೇವತೆಗಳನ್ನೂ ಮಾನವರನ್ನೂ ಪುತ್ರರನ್ನಾಗಿ ಪಡೆದವರು, ಚಲನರಹಿತರಾದರೂ ಚಲನಯುಕ್ತ ಸಕಲ ಪ್ರಾಣಿಗಳನ್ನೂ ಧರಿಸಿರುವವರು. ಶೀತೋಷ್ಣ ಅಹೋರಾತ್ರಿಗಳಂತೆ ಉಭಯ ಲಕ್ಷಣವಂತರು. ಸಮಸ್ತಕ್ಕೂ ಆಧಾರಭೂತರಾಗಿದ್ದಾಗ್ಯೂ ಇತರರಿಂದ ಹಿಂಸಿಸಲ್ಪಡುವವರು.

ದ್ಯಾವಾಪೃಥವಿಗಳ ಉತ್ಪನ್ನರಹಸ್ಯತತ್ವಗಳೆಲ್ಲಾ, ದ್ಯಾವಾಪೃಥವಿಗಳಲ್ಲೇ ಅಡಗಿರುವ ಪದಾರ್ಥ ಸಮೂಹಗಳಲ್ಲೇ ಅಡಗಿವೆ. ಇದಕ್ಕೆ ಸಂಭಂಧಿಸಿದಂತೆ ಅಹೋರಾತ್ರಿಗಳು ಚಕ್ರದಂತೆ ಭ್ರಮಿಸುತ್ತಿವೆ.

ದ್ಯಾವಾಪೃಥವಿಗಳು ಸಸ್ಯಾದಿಗಳಿಗೆ ಸಕಲ ಜಗತ್ತಿಗೂ ಜನನಿಯಂತೆ ಇದ್ದು, ಶ್ರೇಷ್ಟಪ್ರಜ್ಞೆಯ ಪಾಲರಾಗಿ ಜಗನ್ನಿರ್ಮಾತೃಗಳಾಗಿ, ನರರಹಿತವನ್ನು ಕಾಪಾಡುತ್ತಾ ಉಭಯಾತ್ಮಕರ ಸ್ತುತಿಗೆ ಪಾತ್ರರಾಗಿದ್ದಾರೆ.

ಇಂತಹ ದ್ಯಾವಾಪೃಥವಿಗಳನ್ನು ಹಾಗೂ ಇವರುಗಳ ನಡುವೆ ಇರುವ ದೇವತೆಗಳನ್ನು ಪ್ರೀತಿ ಭಕ್ತಿಯುತ ಸ್ತುತಿನಮಸ್ಕಾರಗಳಿಂದ ಸ್ತೋತ್ರ ಹವಿಸ್ಸುಗಳಿಂದ ಯಜಮಾನರು ತೃಪ್ತಿಪಡಿಸುತ್ತಾರೆ.

ಧನವು ಅಹಿಂಸಕವಾದದ್ದು; ಅನ್ನಯುಕ್ತವಾದ್ದು ಸುಖದಾಯಿಯಾಗಿ ಅಂತರಿಕ್ಷವೃತ್ತಿಗೆ ಸಂಭಂಧಿಸಿದ್ದು. ದ್ಯಾವಾಪೃಥವಿಗಳು ಯಜಮಾನನಿಗೆ ಅಂತಹ ಧನ ಕೊಡಲಿ. ಮಹಾವಿಪತ್ತಿನಿಂದರಕ್ಷಿಸಲಿ. ಮಹಾಭಯಂಕರ ಪಾಪಗಳಿಂದ ರಕ್ಷಿಸಲಿ ಸ್ತುತಿಯಿಂದ ಸತ್ಫಲಕೊಡಲಿ.

ದೇವತೆಗಳ ವಿಷಯದಲ್ಲಿ, ದುಹಿತೃ ಜಾಮಾತೃಗಳ ವಿಷಯದಲ್ಲಿ, ಅತಿನಿಂದಿತ ಅಪರಾಧಗಳನ್ನು ಯಜ್ಞಕಾಲದಲ್ಲಿ ಸ್ತುತ್ಯರ್ಹಕರ್ಮಗಳಿಂದ ರಕ್ಷಿಸಲಿ.

ಯಜಮಾನನಿಗೆ ಅನ್ನ ಬಲ ಧೀರ್ಘಾಯುಗಳನ್ನು ದ್ಯಾವಾಪೃಥವಿಗಳು ದಯಪಾಲಿಸಲಿ.

ಸೂಕ್ತ - 186 (ಆನಇಳಾಭಿರ್ವಿದಥೇ.....

ಅಗಸ್ತ್ಯಋಷಿಗಳು ವಿಶ್ವೇದೇವತೆಗಳನ್ನು ತ್ರಿಷ್ಟುಪ್ ಛಂದಸ್ಸಿನ ಋಕ್ಗಳಲ್ಲಿ ಸ್ತುತಿಸುತ್ತಾರೆ.

ಅಗ್ನಿಯು ದೇವತೆಗಳಿಗೆ ಸಮಾನ ಪ್ರೀತಿಪಾತ್ರನಾದವನು. ಅತಿಥಿಪ್ರಾಯ. ಆತ್ಮ ಸಂತೋಷದಿಂದ ಯಜಮಾನನ ಸಂತೋಷಕ್ಕಾಗಿ ಪ್ರಶಸ್ತಿ ರತ್ನಗಳೊಡನೆ ಯಜ್ಞಕ್ಕೆಬರಲಿ.

ವರುಣನು, ಅದಾತೃಗಳನ್ನು ಪ್ರತಿಭಟಿಸುವವ, ನಾಶಮಾಡುವವ, ಕರ್ಮಪ್ರೇರಕ. ಮಿತ್ರ ಆರ್ಯಮರೊಂದಿಗೆ ಸಮಾನ ಪ್ರೀತಿಯಿಂದ ಬರಲಿ.

ಅಪ್ಪುಗಳ ಪೌತ್ರರಾದ ಅಗ್ನಿರ್ಬದ್ಧ ದೇವತೆಗಳ ಸಹಾಯದಿಂದಲೇ, ಯಜಮಾನನು ಅಗ್ನಿಯನ್ನು ಸಮೀಪಿಸುವುದು.

ಅಹೋರಾತ್ರಿ ದೇವತೆಗಳು ಚರುಪುರೋಡಾದಿಮಿಶ್ರಿತ ಹವಿಸ್ಸು ನಮಸ್ಕಾರದಿಂದ ಪ್ರಾರ್ಥಿಸಲ್ಪಟ್ಟವರು.

ತ್ವಷ್ಟನು ಪ್ರೀತಿಯಿಂದ ಮಾನವ ಇಷ್ಟಾರ್ಥ ಪೂರ್ಣಮಾಡುವವ.

ಇಂದ್ರನು ಮಾನವರಿಗೆ ಇಷ್ಟಾರ್ಥ ಪೂರ್ತಿಮಾಡಿ ಮಾನವರಿಗೆ ಬುದ್ಧಿಯನ್ನುಂಟು ಮಾಡುವವ.

ಮರುದ್ದೇವತೆಗಳು ಸಮಾನಮನಸ್ಕ ಸಮಾನ ಬಲಶಾಲಿಗಳು ಹಾಗೂ ಶತ್ರುಭಕ್ಷಕರು.

ದ್ಯಾವಾಪೃಥವಿಗಳೂ ಮಿತ್ರರೂ, ಮಳೆಗರೆದು ಯಜ್ಞವನ್ನು ಸುಗಮವಾಗಿಸುವವರು.

ಅಶ್ವಿನೀ ದೇವತೆಗಳೂ ಪೂಷದೇವನೂ ಯಜ್ಞರಕ್ಷಣೆ ಮಾಡುವವರು.

ವ್ಯಾಪಕವಾದ ವಿಷ್ಣು, ಸಂಚಾರಿ ವಾಯು, ಪ್ರಭು ಇಂದ್ರ, ಇವರುಗಳ ಸಹಿತ ಎಲ್ಲಾ ದೇವತೆಗಳನ್ನೂ ತೃಪ್ತಿಪಡಿಸಲು ಯಜಮಾನ ಆತುರದಿಂದಿದ್ದಾನೆ. ಯಜ್ಞಕ್ಕೆ ಇವರನ್ನು ಆಹ್ವಾನಿಸುತ್ತಾನೆ.

ವಿಶ್ವೇದೇವತೆಗಳು ಭೂಮಿಸ್ಥಾನಾಭಿಮಾನ ದೇವತೆಗಳು, ತರುಣರು, – ಶತ್ರುನಾಶರು, ಅನ್ನವೃದ್ಧಿಕಾರಕರು, ಲೋಕಪ್ರಸಿದ್ಧಪ್ರಭಾಯುತರು, ಚೈತನ್ಯದಾಯಕರು, ನಿವಾಸದಾಯಕರು.

ಇಂತಹ ಯಜ್ಞಾರ್ಹ ದೇವತೆಗಳು ಯಜಮಾನನಿಗೆ ಅನ್ನ ತುಂಬಿಕೊಡಲಿ, ಧೀರ್ಘಾಯಸ್ಸನ್ನು ಕೊಡಲಿ. ಶ್ರೇಷ್ಠ ಕೀರ್ತಿಕಾರಕನಾಗುವಂತೆ ಮಾಡಲಿ.

**ಸೂಕ್ತ** - 187 ( **ಪಿತಂನುಸ್ತೋಷಂ.....**

ಅಗಸ್ತ್ಯಋಷಿ ಅನ್ನಸ್ತುತಿಯನ್ನು ಗಾಯತ್ರೀ ಅನುಷ್ಟುಪ ಛಂದ ಋಕ್‌ಗಳಿಂದ ಮಾಡುತ್ತಾರೆ.

ಅನ್ನವು ಚೈತನ್ಯದಾಯಿ, ಆತ್ಮಸಂತೋಷಕಾರಕ, ಮಾಧುರ್ಯಯುಕ್ತ ಸೇವನಾರ್ಹ ಪ್ರಿಯ ರಸಸಂಯುಕ್ತ ಷಡ್ರಸೋಪೇತ ಮಂಗಳಾತ್ಮಕ ಪೂಜ್ಯ ಲೋಕವ್ಯಾಪಿ ಪಾಲಕ, ರಮ್ಯ ಚೈತನ್ಯರೂಪಿ.

ಇಂದ್ರನ ಮನಸ್ಸು ಇಂತಹ ಅನ್ನದಲ್ಲೇ ನೆಟ್ಟದ್ದರಿಂದ - ಇಂದ್ರನು ಶಕ್ತಿಯುತನಾದದ್ದು, ಪ್ರಖ್ಯಾತನಾದದ್ದು, ಬಲಾತ್ಮಕನಾದದ್ದು, ಪಾಲನಾತ್ಮಕನಾದದ್ದು, ವೃತ್ರವಧೆ ಸಾಧ್ಯವಾದದ್ದು.

ದೇವತೆಗಳಿಗೂ ಯಾಜ್ಞಿಕರಿಗೂ ತೃಪ್ತಿದಾಯಕ ಸೋಮರೂಪಿ ಅನ್ನವನ್ನು ಉದಕವು ಮಧುರ ಪುಷ್ಕಲ ಯೋಗ್ಯವಾಗಿ ಮಾಡುತ್ತದೆ.

ಔಷಧವು ಗವಾಶಿರ ಸೋಮರಸ ಅಂಶಗಳಿಂದ ಪುಷ್ಟಿದಾಯಕವಾಗುತ್ತದೆ. ಅನ್ನದೊಂದಿಗೆ ಈ ಔಷಧಗಳು ಸೇರಿ ಶರೀರವನ್ನು ಪುಷ್ಟಿಗೊಳಿಸಿ, ವ್ಯಾಧಿವರ್ಜಿತವಾಗಿಸಿ, ಆರೋಗ್ಯವರ್ಧಿಸಿ, ಇಂದ್ರಿಯ ಚೈತನ್ಯದಾಯಿಯಾಗಿ ಮಾಡುತ್ತದೆ.

ತೃಪ್ತಿದಾಯಕ ರಕ್ಷಣೆಗಳೊಂದಿಗೆ, ಯಜಮಾನನಿಗೆ ಅನ್ನವು ಸುಖ ಆನಂದ ತರಲಿಎಂದು ಯಜಮಾನರು ಅನ್ನವನ್ನು ಸ್ತುತಿಸುತ್ತಾ ಆಹ್ವಾನಿಸುತ್ತಾರೆ.

**ಸೂಕ್ತ** - 188 ( **ಸಮಿಂದ್ಧೋ ಅದ್ಯ.....**

ಅಗಸ್ತ್ಯಋಷಿ ಅಪ್ರೀ ಸೂಕ್ತವನ್ನು ಗಾಯತ್ರೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ತನೂನಪಾತ್ ಅಗ್ನಿಯು ಮಧುರ ಆಜ್ಯಾದಿ ದ್ರವ್ಯಗಳ ಹವಿಸ್ಸನ್ನು ಯಜ್ಞದಲ್ಲಿ ಸೇವಿಸುತ್ತಾನೆ, ಯಜ್ಞಗೃಹದ ದ್ವಾರಗಳು ವಿಶಾಲ ಶೋಭಿತ ಪೂಜ್ಯ ಪ್ರಕಾಶಿತವಾಗಿ, ಉದಕ ಪ್ರೋಕ್ಷಿತವಾಗಿವೆ.

ಅಗ್ನಿದೇವತೆಗಳು ಮಂತ್ರರೂಪ ಬಲದ ದರ್ಭಾಸನದಲ್ಲಿ ಕುಳಿತು ದೇವತೆಗಳಿಗೆ ಹವಿಸ್ಸನ್ನು ವಹಿಸಿ ಯಜ್ಞಾರ್ಹ ದೇವತೆಗಳನ್ನು ಯಜ್ಞಕ್ಕೆ ಕರೆತರಲಿ.

ಅಹೋರಾತ್ರಿಗಳು ಅಧಿಕ ಆಕರ್ಷಕ ಸೌಂದರ್ಯಯುತರು. ದರ್ಭಾಸೀನರಾಗಲಿ, ಪ್ರಸಿದ್ಧ ಮೇಧಾವಿ ಪ್ರಿಯವಾಕ್ಕುಳ್ಳ ದೇವತೆಗಳಿಬ್ಬರೂ ಯಜ್ಞನೆರವೇರಿಸಲಿ.

ಲೋಕತ್ರಯ ಆದಿದೇವತೆಗಳಾದ - ಭಾರತಿ ಇಳಾ ಸರಸ್ವತಿಯರು - ಯಾಜ್ಞಿಕರನ್ನು ಸಂಪತ್ತನ್ನು ಪಡೆಯಲು ಪ್ರೇರಿಸಲಿ.

ತ್ವಷ್ಟನು ಪಶ್ವಾದಿಗಳಿಗೆ ಮಾನವರಿಗೆ ಸ್ವರೂಪ ಕೊಡುವವನು. ರೇತಸ್ಸುಗಳಿಗೆ ಸ್ಪಷ್ಟರೂಪ ಕೊಟ್ಟು ಪರಿಷ್ಕರಿಸುವವನು. ಯಜಮಾನನಿಗೆ ಹೆಚ್ಚಾಗಿ ಅಶ್ವ ಸೃಷ್ಟಿಸಲಿ.

ಯೂಪಾಭಿಮಾನಿ ದೇವತೆಗಳು, ಅಗ್ನ್ಯಾದಿ ದೇವತೆಗಳಿಗೆ ಪಶುರೂಪ ಅನ್ನ ಸೃಷ್ಟಿಸಿ, ಅಗ್ನ್ಯಾದಿಗಳು ಹವಿಸ್ಸನ್ನು ಸ್ವೀಕರಿಸುವಂತೆ ಮಾಡಲಿ.

ಯುದ್ಧ ಮತ್ತು ಯಜ್ಞದಲ್ಲಿ ಅಗ್ರಗಾಮಿಯಾದ ಅಗ್ನಿಯು, ಗಾಯತ್ರ್ಯಾದಿ ಮಂತ್ರ ಹಾಗೂ ಸ್ವಾಹಾಕಾರ ರೂಪದಿಂದ ಪ್ರಕಾಶಿಸಲಿ.

**ಸೂಕ್ತ - 189 (ಅಗ್ನೇನಯ ಸುಪಥಾ.....**

ಅಗಸ್ತ್ಯಋಷಿ ಅಗ್ನಿದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಮಂಥ್ರ ಪುತ್ರನಾದ ಅಗ್ನಿಯು, ವರುಣ ಧರ್ಮರಹಿತ ದೇವತೆಗಳೊಡನೆ ಯಜ್ಞಕ್ಕೆ ಬರಲು ಅತೀಂದ್ರಿಯ ಪ್ರಕಾಶಕ ಸ್ತೋತ್ರಗಳಿಂದ ನಮಸ್ಕಾರಪೂರ್ವಕವಾಗಿ ಸ್ತುತಿಸುತ್ತಾರೆ.

ಯಜ್ಞಮಾಡದವರನ್ನು ಅಗ್ನಿಯು ಅಪೇಕ್ಷಿಸುವುದಿಲ್ಲ! ಯಜ್ಞಮಾಡದವರಿಗೆ ಯಜ್ಞದ ಬಗ್ಗೆ ಸೂಚನೆ ನೀಡುತ್ತಾ ಯಜ್ಞಕಾಲದಲ್ಲಿ ಯಜ್ಞವ್ಯಾಪಕನಾಗಿ ಇರುತ್ತಾನೆ.

ಚೋರರು, ನಿಂದಕರು, ವಂಚಕರು, ಶತ್ರುಗಳು, ಕಷ್ಟಕ್ಕ ಹಿಂಸೆಮಾಡತಕ್ಕ ಪ್ರಾಣಿಗಳು, ಹೊಟ್ಟೆಬಾಕಗಳು, ಶತ್ರುಗಳು - ಇವೆಲ್ಲವರಿಂದಲೂ ಅಗ್ನಿಯು ಪಾರುಮಾಡುತ್ತಾನೆ.

ಅಪಜಯ ಅಪಮಾನಗಳಿಂದ ಯಜಮಾನರನ್ನು ಪಾರುಮಾಡಿ, ಕುಟಿಲಮಾರ್ಗಗಳಿಂದ ದೂರಮಾಡಿ ಪಾಪನಾಶಮಾಡಿ, ಅಗ್ನಿಯು ಕಾಪಾಡುತ್ತಾನೆ.

ಅಗ್ನಿಯು, ಯಜಮಾನನನ್ನು ಹಿಂಸಿಸುವ ರೋಗ, ಶತ್ರುಗಳನ್ನು ನಾಶಮಾಡಲಿ. ಪುತ್ರ ಪೌತ್ರಾದಿಗಳೂ ರೋಗ ಭಯರಹಿತರಾಗಲಿ, ರಕ್ಷಣಾಕ್ರಮದಿಂದ ಸ್ವರ್ಗರೂಪ ಸಂಪತ್ತನ್ನು ಯಜಮಾನರು ಪಡೆಯುವಂತಾಗಲಿ.

**ಸೂಕ್ತ - 190 (ಅನರ್ವಾಣಂ ವೃಷಭಂ.....**

ಅಗಸ್ತ್ಯ ಋಷಿಗಳು ಬೃಹಸ್ಪತಿ ದೇವನನ್ನು ತ್ರಿಷ್ಟುಪ್ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಬೃಹಸ್ಪತಿಯು ಶೋಭನಾತ್ಮಕ ಕಾಂತಿಯುತ ಇಷ್ಟಾರ್ಥಪ್ರದ ಮಂತ್ರಪಾಲಕ ಹರ್ಷದಾಯಿ ಸ್ತುತ್ಯಾರ್ಹ ಕೀರ್ತಿವಂತ ದ್ಯುಲೋಕ ಪೃಥ್ವೀಲೋಕ ವ್ಯಾಪ್ತಶಾಶ್ವತ ಸಂಚಾರಿ ಪ್ರಜ್ಞಾಯುಕ್ತ ಫಲದಾತ ಅನ್ನದಾತ ಬಲಶಾಲಿ ದೇವತಾತ್ಮ

ಬೃಹಸ್ಪತಿಯು ಅಂತರಿಕ್ಷ ಸಂಚಾರಿ ವಾಯುವನ್ನು, ಉದಕಕ್ಕಾಗಿ ಸಂಪಾದಿಸಿ, ಜಲಾಭಾವ ನಿವಾರಿಸುತ್ತಾನೆ. ಬಹುಪ್ರಯೋಜನಕ್ಕಾಗಿ ಉತ್ಪನ್ನನಾದ ಬೃಹಸ್ಪತಿಯು, ಆತ್ಮೇಚ್ಛೆಯಿಂದ ಕರ್ಮ ಮಾರ್ಗಗಳನ್ನು ಸುಗಮಮಾಡುತ್ತಾನೆ.

ಬೃಹಸ್ಪತಿಯನ್ನು, ವಿರೋಧಿರಾಕ್ಷಸರು, 'ವೃದ್ಧಗೋವೆಂದು ಅಪ್ರಯೋಜಕ' ಎಂದು ಹೇಳುತ್ತಾರೆ. ಅಂತಹವರಿಗೆ ಕಾಂಕ್ಷಿತ ಫಲಕೊಡುವುದಿಲ್ಲ. ವಿರೋಧಿರಾಕ್ಷಸರನ್ನು ನಾಶಮಾಡಿ ಸೂರ್ಯನಂತೆ ಅಹಸ್ಸುಂಟುಮಾಡುತ್ತಾನೆ. ವಂಚಕರನ್ನು ಹಿಂಬಾಲಿಸಿ ನಾಶಮಾಡುತ್ತಾನೆ.

ಬೃಹಸ್ಪತಿಯು, ದುಷ್ಟನಿಗ್ರಹ ರಾಜನಿಗೆ ಸುಖಕಾರಿ ಮಂತ್ರಿಯಂತೆ, ಸನ್ಮಾರ್ಗಿಯಾಗಿರುವ ಯಜಮಾನನಿಗೆ ಸುಖಕರನಾಗಿ, ಸನ್ಮಾರ್ಗಬೋಧಕರು ಪಾಪರಹಿತರಾಗಿರುವಂತೆ, ಅಜ್ಞಾನಾವೃತರು ಜ್ಞಾನಿಗಳಾಗಿರುವಂತೆ ಮಾಡುತ್ತಾನೆ.

ನದಿಗಳು ಏಕಮುಖ ಸಂಚರಿಸಿ ಸಮುದ್ರ ಸೇರುವಂತೆ, ಸಕಲಸ್ತುತಿಗಳು ಬೃಹಸ್ಪತಿಯನ್ನು ಸೇರುತ್ತವೆ.

ಬೃಹಸ್ಪತಿಯೂ ಯಜಮಾನನಿಗೆ, ವೀರಪುತ್ರರು ಗೋವು ಅನ್ನ ಬಲ ಧೀರ್ಘಾಯುಗಳನ್ನು ಕರುಣಿಸಲಿ.

**ಸೂಕ್ತ** - 191 ( **ಕಂಕತೋನ.....**

ಅಗಸ್ತ್ಯ ಋಷಿಗಳು ಅಪ್ಪಣ ಸೂರ್‍ಯನನ್ನು ಅನುಷ್ಟುಪ್ ಮಹಾಪಂಕ್ತಿ ಮಹಾ ಬೃಹತೀ ಛಂದಸ್ಸಿನ ಋಕ್‌ಗಳಲ್ಲಿ ಸ್ತುತಿಸುತ್ತಾರೆ.

ಗೋಚರವಾಗುವ ಗೋಚರವಾಗದ ಜಲಚರಗಳೂ, ಅಲ್ಪವಿಷದ ಅಧಿಕವಿಷದ ವಿಷಧರಗಳೂ ಮನುಷ್ಯನನ್ನು ವಿಷಪೂರಿತನನ್ನಾಗಿ ಮಾಡುತ್ತವೆ.

ವಿಷಧರಗಳ ಕಣ್ಣಿಗೆ ಮನುಷ್ಯನು ಕಾಣುತ್ತಾನೆ. ಆದರೆ ಮನುಷ್ಯರ ಕಣ್ಣಿಗೆ ವಿಷಧರಗಳು ಕಾಣುವುದಿಲ್ಲ.

ಶರ, ಕುಶ, ಮಂಜ, ವೀರಣ ಇತ್ಯಾದಿ ತೃಣಗಳಲ್ಲಿ ಅಡಗಿರುವ ವಿಷಧರಗಳು, ರಾತ್ರಿವೇಳೆ ತಮ್ಮ ನಿಶ್ವಾಸದಿಂದ ತಿಳಿಯುವ ವಿಷಧರಗಳೂ, ಮಾನವಶರೀರವನ್ನು ಕಚ್ಚಿ ವಿಷಮಯ ಮಾಡುತ್ತವೆ.

ಕೆಲವು ಚೂರ್ಣರೂಪಿ ಔಷಧಗಳು ಮನುಷ್ಯರ ಬಳಿಗೆ ಬರುವಾಗಲೇ, ಕೆಲವು ಅವುಗಳ ಗಂಧದಿಂದಲೇ, ಕೆಲವು ದೇಹವನ್ನು ತೊಳೆಯುವಾಗಲೇ - ವಿಷ ನಾಶಮಾಡುತ್ತವೆ.

ಸರ್ಪಗಳಿಗೆ ದ್ಯುಲ್ಲೋಕವು ತಂದೆ, ಪೃಥವಿಯು ತಾಯಿ, ಸೋಮಾಧಾರ ಅಂತರಿಕ್ಷವು ಭ್ರಾತೃ, ಅದಿತಿಯು ಸೋದರಿ. ಇತರರು ಇವರನ್ನು ನೋಡಲಾಗದಿದ್ದರೂ ಇವರು ಇತರರನ್ನು ನೋಡಬಲ್ಲರು.

ಭುಜದಿಂದ ಹರಿಯುವ ವಿಷಧರಗಳು, ಸೂಜಿಯಂತೆ ಬಾಲಉಳ್ಳ ವೃಶ್ಚಿಕಗಳು, ಇತರ ಉಲ್ಬಣ ವಿಷಜಂತುಗಳೂ, ನಮ್ಮ ಸಮೀಪಕ್ಕೆ ಬರದೆ, ನಮಗೆ ತೊಂದರೆ ಕೊಡದೆ ಸುಖವಾಗಿರಲಿ,

ಕಣ್ಣಿಗೆ ಕಾಣದ ವಿಷಜಂತುಗಳನ್ನೂ, ಅವುಗಳ ಉತ್ಪತ್ತಿಗೆ ಕಾರಣವಾದ ಸ್ತ್ರೀಜಂತುಗಳನ್ನೂ ಸೂರ್‍ಯನು ಹಿಂಸಿಸಿ ನಾಶಮಾಡುತ್ತಾನೆ. ಪ್ರಾಣಿಗಳ ಉಪಕಾರಕ್ಕಾಗಿ ವಿಷೋದಕಗಳನ್ನು ಹೀರಿ ವಿಷವನ್ನು ಪೂರ್ಣನಾಶಮಾಡುತ್ತಾನೆ. ಸುತ್ತಲಿರುವ ವಿಷವನ್ನು ಸೂರ್‍ಯಮಂಡಲದಲ್ಲಿ ಸಂಯೋಜಿಸಿ ಆ ವಿಷದ ಶಕ್ತಿಯು ನಮ್ಮಲ್ಲಿಗೆ ಪ್ರಸರಿಸದಂತೆ ಮಾಡುತ್ತಾನೆ.

ಅಲ್ಪರೂಪದ ಪಕ್ಷಿ, ಏಕವಿಂಶತಿ ಸಂಖ್ಯೆಯ ಕೆಂಡಗಳು, ವಿಷದ ಶಕ್ತಿಯನ್ನು ನುಂಗಿ ಹಾಕುತ್ತವೆ. ಮರಣರಹಿತ ಕೆಂಡಗಳ ಪರಿಣಾಮದಿಂದ ಮಾನವ ಮರಣ ಹೊಂದುವುದಿಲ್ಲ.

ತೊಂಭತ್ತೊಂಭತ್ತು ಸಂಖ್ಯೆಯ, ಗಂಗಾದಿನದಿಗಳೂ, ಸಪ್ತಸಂಖ್ಯಾಕ ನದಿಗಳೂ, ನಮ್ಮಲ್ಲಿರುವ ವಿಷವನ್ನು ಪೂರ್ಣವಾಗಿ ಅಪಹರಿಸಲಿ.

ಸಣ್ಣ ಮುಂಗುಸಿಗಳು, ವಿಷಾವೃತವಾದ ಋಷಿಯಲ್ಲಿನ ವಿಷವನ್ನು ಪರಿಹರಿಸಲಿ; ನಂತರ ದೂರಪ್ರದೇಶಕ್ಕೆ ಹೋಗಲಿ. ಮಧುವಿದ್ಯೆಯು ವಿಷವನ್ನು ಅಮೃತವಾಗಿ ಪರಿವರ್ತಿಸಲಿ – ಎಂದು ಋಷಿ ಪ್ರಾರ್ಥಿಸುತ್ತಾರೆ.

ಅಗಸ್ತ್ಯರ ಈ ಸ್ತೋತ್ರ ಪಠಣದ ನಂತರ ಮುಂಗುಸಿಯು ಅವಸರವಾಗಿ ಬಂದು ಹೀಗೆ ಹೇಳಿತು "ವಿಷಧುರವೃಶ್ಚಿಕದ ವಿಷವು ಶಕ್ತಿರಹಿತವಾದದ್ದು ಅದು ಯಾರಿಗೂ ಕೇಡನ್ನುಂಟು ಮಾಡುವುದು ಸಾಧ್ಯವಿಲ್ಲ, ವೃಶ್ಚಿಕದ ವಿಷಕ್ಕೆ ಶಕ್ತಿ ಇಲ್ಲ".